ಭಾನುವಾರ, ಆಗಸ್ಟ್ 7, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 218 | ಪುಟ 24
• www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಬೊಂಬೆ ಮಾರುಕಟ್ಟೆ... ಪ್ರಧಾನಿ ಮಾತೂ, ಚನ್ನಪಟ್ಟಣ, ಕಿನ್ನಾಳ ಬೊಂಬೆಗಳ ಉತ್ತರವೂ

ಎಸ್‌ಬಿಐ ನಿವ್ವಳ ಲಾಭ ಶೇ 6.7ರಷ್ಟು ಇಳಿಕೆ 15
ಗಡಿದಾಟದ ಚೀನಾದ ವಿಮಾನ, ನೌಕೆಗಳು
ಭದ್ರಾ ಮೇಲ್ದಂಡೆ: ಆಂಧ್ರ ಮತ್ತೆ ತಗಾದೆ 9
ಆಕ್ರಮಣಕ್ಕೆ ತಾಲೀಮು: ತೈವಾನ್ ಆರೋಪ 14

ಜಾತಿವಾರು ನಿಗಮಗಳಲ್ಲಿ ಹೆಚ್ಚಿದ ಭ್ರಷ್ಟಾಚಾರ • ನಕಲಿ ಫಲಾನುಭವಿಗಳನ್ನು ಸೃಷ್ಟಿಸಿ ಲೂಟಿ

ಬಡವರ ಹಣ: ಬಲಾಢ್ಯರ ಕಲ್ಯಾಣ!

• ವಿ.ಎಸ್.ಸುಬ್ರಹ್ಮಣ್ಯ

ಬೆಂಗಳೂರು: ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ತಳ ಸಮುದಾಯಗಳ ಜನರಿಗೆ ನೆರವು ಕೊಟ್ಟು, ಅವರನ್ನು ಸ್ವಾವಲಂಬಿಗಳಾಗಿಸುವ ಆಶಯದಡಿ ರಾಜ್ಯ ಸರ್ಕಾರ ರಚಿಸಿರುವ ಜಾತಿವಾರು ನಿಗಮಗಳ ಅನುದಾನ–ಯೋಜನೆಗಳಿಗೆ ಬಲಾಢ್ಯರು ಕನ್ನ ಹಾಕುತ್ತಿದ್ದಾರೆ. ದುರ್ಬಲರ ಏಳ್ಗೆಗೆ ಸರ್ಕಾರ ನೀಡುವ ಹಣವನ್ನು ಲಪಟಾಯಿಸುತ್ತಿರುವ ಕೆಲವೇ 'ಧನಿಕ'ರು ಮತ್ತಷ್ಟು ದುಂಡಗಾಗುತ್ತಿದ್ದಾರೆ.

ಹೆಚ್ಚು ಅನುದಾನವಿರುವ ನಿಗಮಗಳಲ್ಲಿ ಅಧಿಕಾರಿಗಳು ಮತ್ತು ದಲ್ಲಾಳಿಗಳ ಕೂಟ ನಕಲಿ ಫಲಾನುಭವಿಗಳನ್ನು ಸೃಷ್ಟಿಸಿ ಜಮೀನು ವಿತರಣೆ, ಗಂಗಾ ಕಲ್ಯಾಣ, ಸ್ವಯಂ ಉದ್ಯೋಗ, ವಾಹನ ಖರೀದಿಗೆ ನೆರವು ನೀಡುವ ನೆಪದಲ್ಲಿ ತಿಜೋರಿಗೆ ಕನ್ನ ಹಾಕುತ್ತಿರುವ ಪ್ರಕರಣಗಳು ಸರಣಿಯೋಪಾದಿಯಲ್ಲಿ ಹೊರಬರುತ್ತಿದೆ.

ರಾಜ್ಯದಲ್ಲಿ 25ಕ್ಕೂ ಹೆಚ್ಚು ಜಾತಿವಾರು ನಿಗಮಗಳಿವೆ. ಪ್ರತಿ ವರ್ಷವೂ ₹ 2,000 ಕೋಟಿಯಿಂದ ₹ 2,500 ಕೋಟಿಯಷ್ಟು ಅನುದಾನ ಈ ನಿಗಮಗಳ ಮೂಲಕ ನೇರವಾಗಿ ಖರ್ಚಾಗುತ್ತಿದೆ. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಗಳಲ್ಲಿ ಹಿಂದೆ ಇಂತಹ ಹಗರಣಗಳು ಬಯಲಾಗಿದ್ದವು. ಈಗ ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಸರದಿ.

ಒಳನೋಟ
ಬ್ರಹ್ಮಾಂಡ ಭ್ರಷ್ಟಾಚಾರ
ಪ್ರತಿಕ್ರಿಯಿಸಿ: 9606038256
feedback@prajavani.co.in

ರಾಜ್ಯದಲ್ಲಿ 1975ರಿಂದ ಈಚೆಗೆ ಸಮುದಾಯ ಅಭಿವೃದ್ಧಿಯನ್ನು ಗುರಿಯಾಗಿಟ್ಟುಕೊಂಡು ನಿಗಮಗಳು ಅಸ್ತಿತ್ವಕ್ಕೆ ಬಂದವು. ಆರಂಭದಲ್ಲಿ ಡಾ.ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ (ಹಿಂದಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ) ಮಾತ್ರ ಇತ್ತು. 1986ರಲ್ಲಿ ರಾಜ್ಯ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಅಸ್ತಿತ್ವಕ್ಕೆ ಬಂತು. 2006ರಿಂದ ಈಚೆಗೆ ರಾಜಕೀಯ ಉದ್ದೇಶಗಳಿಗಾಗಿ ಜಾತಿವಾರು ನಿಗಮಗಳನ್ನು ರಚಿಸುವ ಪರಿಪಾಠ ಆರಂಭವಾಯಿತು.

ಅಂಬೇಡ್ಕರ್ ಅಭಿವೃದ್ಧಿ ನಿಗಮ, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಭೋವಿ ಅಭಿವೃದ್ಧಿ ನಿಗಮ, ತಾಂಡಾ ಅಭಿವೃದ್ಧಿ ನಿಗಮ, ಆದಿ ಜಾಂಬವ ಅಭಿವೃದ್ಧಿ ನಿಗಮ, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಸೇರಿದಂತೆ ಕೆಲವು ನಿಗಮಗಳ ವಾರ್ಷಿಕ ಅನುದಾನದ ಮೊತ್ತದಲ್ಲಿ ದೊಡ್ಡ ಪ್ರಮಾಣದಲ್ಲಿ ಹೆಚ್ಚಳವಾಗಿದೆ. ಕೆಲವು ನಿಗಮಗಳು ನೂರಾರು ಕೋಟಿ ರೂಪಾಯಿಯನ್ನು ವರ್ಷವೊಂದರಲ್ಲಿ ವೆಚ್ಚ ಮಾಡುತ್ತಿವೆ.

4ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 4

ತುಂಡು–ಪುಂಡ ನಾಯಕರಿಂದಲೇ ಭ್ರಷ್ಟಾಚಾರ

ಅಭಿವೃದ್ಧಿ ನಿಗಮಗಳನ್ನು ಆರಂಭಿಸಿದ್ದು ಉತ್ತಮ ಉದ್ದೇಶದಿಂದ. ಆದರೆ, ಅದನ್ನೀಗ ಪಕ್ಷಗಳು ದುರುಪಯೋಗ ಮಾಡಿ ಕೊಳ್ಳುತ್ತಿವೆ. ತಮ್ಮ ತುಂಡು–ಪುಂಡ ನಾಯಕರನ್ನು ಅಧ್ಯಕ್ಷ ಮತ್ತು ಸದಸ್ಯರನ್ನಾಗಿ ಮಾಡುತ್ತಾರೆ. ಇವರೆಲ್ಲರೂ ಸೇರಿ ಭ್ರಷ್ಟಾಚಾರ ಮಾಡಿಯೇ ತೀರುತ್ತಾರೆ. ನಾನು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಅಧ್ಯಕ್ಷನಾಗಿದ್ದ ಏಳು ತಿಂಗಳ ಅವಧಿಯಲ್ಲಿ 63 ಸಾವಿರ ಫಲಾನುಭವಿಗಳಿಗೆ ಸ್ಪಂದಿಸಿದ್ದೆ. ಇಂಥ ನಿಗಮ ಇದೆ ಎಂಬುದು ರಾಜ್ಯದ ಜನರ ಅರಿವಿಗೆ ಬಂದಿದ್ದೆ ಆಗ. ಪುಡಿ ನಾಯಕರು ತಮಗೆ ಬೇಕಾದವರ ಹೆಸರು ನೋಂದಾಯಿಸಿಕೊಂಡು ಯೋಜನೆಗಳನ್ನು ಅನುಭವಿಸುತ್ತಿದ್ದಾರೆ. ಈ ರೀತಿ ಅಕ್ರಮಕ್ಕೆ ಅವಕಾಶ ನೀಡುವ ಬಹಳಷ್ಟು ಅಧಿಕಾರಿಗಳನ್ನು ನಾನು ಅಧ್ಯಕ್ಷನಾಗಿದ್ದಾಗ ಅಮಾನತು ಮಾಡಿದ್ದೆ. ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷನಾದ ಬಳಿಕವೂ ಎಲ್ಲಾ ಇಲಾಖೆಗಳ ಭ್ರಷ್ಟಾಚಾರದ ಬಗ್ಗೆ ಸರ್ಕಾರಕ್ಕೆ ವರದಿ ಒಪ್ಪಿಸಿದ್ದೆ. ಈ ವರದಿ ಲೋಕಾಯುಕ್ತ, ವಿಧಾನ ಪರಿಷತ್ ಮತ್ತು ಹೈಕೋರ್ಟ್‌ನಲ್ಲಿ ಮೇಲುಗೈ ಸಾಧಿಸಿತ್ತು. ಸುಪ್ರೀಂ ಕೋರ್ಟ್ ಕೂಡ ಈ ವರದಿಯನ್ನು ಸದನಗಳಲ್ಲಿ ಮಂಡಿಸಬೇಕೆಂದು ಆದೇಶ ನೀಡಿತ್ತು. ಆದರೆ, ಈವರೆಗೆ ಅನುಷ್ಠಾನ ಆಗಿಲ್ಲ.

ಅನ್ವರ್ ಮಾಣಿಪ್ಪಾಡಿ, ಬಿಜೆಪಿ, ಜಂಟಿ ವಕ್ತಾರ

'ಪಾರದರ್ಶಕ ವ್ಯವಸ್ಥೆ ರೂಪಿಸಲು ಕ್ರಮ'



ಜಾತಿ, ಸಮುದಾಯ ಕೇಂದ್ರಿತ ನಿಗಮಗಳಲ್ಲಿ ಭ್ರಷ್ಟಾಚಾರ ಇರುವುದು ನಿಜ. ಆದರೆ, ಅದಕ್ಕೆ ಕಡಿವಾಣ ಹಾಕಲು ನಮ್ಮ ಸರ್ಕಾರ ಬಿಗಿಯಾದ ಕ್ರಮಗಳನ್ನು ಕೈಗೊಳ್ಳುತ್ತಿದೆ. ಎಲ್ಲ ನಿಗಮಗಳಲ್ಲೂ ವಿವಿಧ ಯೋಜನೆಗಳಿಗೆ 'ಸುವಿಧಾ' ತಂತ್ರಾಂಶದ ಮೂಲಕವೇ ಅರ್ಜಿ ಸಲ್ಲಿಸುವುದನ್ನು ಕಡ್ಡಾಯಗೊಳಿಸಲಾಗಿದೆ.

ಯಾವುದೇ ನಿಗಮಗಳಲ್ಲಿ ಭ್ರಷ್ಟಾಚಾರ ನಡೆಯುತ್ತಿರುವ ಕುರಿತು ಆಧಾರಸಹಿತ ದೂರುಗಳು ಬಂದರೆ ಮುಲಾಜಿಲ್ಲದೇ ಕ್ರಮ ಜರುಗಿಸಲಾಗುವುದು.

ಕೋಟ ಶ್ರೀನಿವಾಸ ಪೂಜಾರಿ,
ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ

ವಿನೇಶಾ 'ಹ್ಯಾಟ್ರಿಕ್';ಪ್ರಜ್ವಲಿಸಿದ ರವಿ ನವೀನ್‌ಕುಮಾರ್ ಚಿನ್ನದ ಹೊಳಪು

ಚಿನ್ನ — **ವಿನೇಶಾ ಪೋಗಟ್**
53 ಕೆಜಿ ಮಹಿಳೆಯರ ಫ್ರೀಸ್ಟೈಲ್ ಕುಸ್ತಿ
ಸತತ ಮೂರನೇ ಬಾರಿ ಸ್ವರ್ಣ ಸಾಧನೆ. ಕಾಮನ್‌ವೆಲ್ತ್ ಕೂಟದಲ್ಲಿ ಈ ಸಾಧನೆ ಮಾಡಿದ ಭಾರತದ ಏಕೈಕ ಮಹಿಳೆ.
ವಿನೇಶಾಗೆ ಕೆನಡಾದ ಸಮಂತಾ, ಶ್ರೀಲಂಕಾದ ಕೇಶನಿ, ನೈಜೀರಿಯಾದ ಮರ್ಸಿ ಬೊಲಾಫೊನೊಲುವಾ ಅದೆಕುರೊಯೆ ವಿರುದ್ಧ ಜಯ
ವಯಸ್ಸು; 27

ಚಿನ್ನ — **ರವಿ ದಹಿಯಾ**
57 ಕೆಜಿ ಪುರುಷರ ಫ್ರೀಸ್ಟೈಲ್ ಕುಸ್ತಿ, ವಯಸ್ಸು; 24
ಫೈನಲ್: ರವಿ 10–0ಯಲ್ಲಿ ನೈಜೀರಿಯಾದ ಎಬಿಕ್ವೆನಿಮೊ ವೆಲ್ಸನ್ ವಿರುದ್ಧ ಜಯಿಸಿದರು. ಕೇವಲ 2.16 ನಿಮಿಷಗಳಲ್ಲಿ ಬೌಟ್ ಮುಕ್ತಾಯ

ಚಿನ್ನ — **ನವೀನ್ ಕುಮಾರ್**
ಪುರುಷರ ಕುಸ್ತಿ ಫ್ರೀಸ್ಟೈಲ್ 74 ಕೆ.ಜಿ
ವಯಸ್ಸು: 32
ಫೈನಲ್: ನವೀನ್‌ಗೆ ಪಾಕಿಸ್ತಾನದ ತಾಹಿರ್ ಎದುರು ಗೆಲುವು

ಬೆಳ್ಳಿ — **ಅವಿನಾಶ್ ಸಬ್ಳೆ**
3000 ಮೀ. ಸ್ಟೀಪಲ್‌ಚೇಸ್
ಕಾಲ 8ನಿ 11.20ಸೆ
ವಯಸ್ಸು 27

ಬೆಳ್ಳಿ — **ಪ್ರಿಯಾಂಕಾ ಗೋಸ್ವಾಮಿ**
20 ಕಿ.ಮೀ ನಡಿಗೆ (ಮಹಿಳೆಯರು)
ಕಾಲ 43ನಿ 38.33ಸೆ
ವಯಸ್ಸು 26

ರಾಜ್ಯಪಾಲರ ಹೆಸರಿನಲ್ಲಿ ವಂಚನೆ: ಬಳ್ಳಾರಿ ವ್ಯಕ್ತಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾನಾ ಹುದ್ದೆಗಳ ಆಮಿಷವೊಡ್ಡಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರ ಹೆಸರಿನಲ್ಲಿ ವಂಚಿಸುತ್ತಿದ್ದ ಆರೋಪಿ ಸದ್ರುಲ್ಲಾ ಖಾನ್ ಎಂಬುವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಬಳ್ಳಾರಿಯ ಸದ್ರುಲ್ಲಾ ಖಾನ್, ರಾಜ್ಯಪಾಲರ ಹೆಚ್ಚುವರಿ ಕಾರ್ಯದರ್ಶಿ ಎಂದು ಸುಳ್ಳು ಹೇಳಿಕೊಂಡು ಜನರನ್ನು ವಂಚಿಸುತ್ತಿದ್ದ. ಈತನನ್ನು ಬಂಧಿಸಿ, ನಕಲಿ ಗುರುತಿನ ಚೀಟಿ, ಇತರೆ ದಾಖಲೆಗಳನ್ನು ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಮೂಲಗಳು ಹೇಳಿವೆ.

'ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಆರ್.ಪ್ರಭುಶಂಕರ್ ಅವರು ಆರೋಪಿ ವಿರುದ್ಧ ಜುಲೈ 29ರಂದು ವಿಧಾನಸೌಧ ಠಾಣೆಗೆ ದೂರು ನೀಡಿದ್ದರು. ಈ ಪ್ರಕರಣದ ತನಿಖೆಯನ್ನು ಸಿಸಿಬಿಗೆ ವಹಿಸಲಾಗಿತ್ತು' ಎಂದೂ ತಿಳಿಸಿವೆ.



ಸದ್ರುಲ್ಲಾ ಖಾನ್

'ಆರೋಪಿ ಸದ್ರುಲ್ಲಾ ಖಾನ್, ಬಳ್ಳಾರಿಯಲ್ಲಿ ಮಕ್ಕಳಿಗಾಗಿ ಟ್ಯೂಷನ್ ನಡೆಸುತ್ತಿದ್ದ. ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ಟ್ಯೂಷನ್ ಬಂದ್ ಮಾಡಿದ್ದ. ಆರ್ಥಿಕ ತೊಂದರೆ ಅನುಭವಿಸುತ್ತಿದ್ದ ಈತ, ರಾಜ್ಯಪಾಲರ ಹೆಸರಿನಲ್ಲಿ ವಂಚನೆಗೆ ಇಳಿದಿದ್ದ. ಈತನನ್ನು ಕೋರ್ಟ್‌ಗೆ ಹಾಜರುಪಡಿಸಲಿದ್ದು, ಕಸ್ಟಡಿಗೆ ಪಡೆದು ಹೆಚ್ಚಿನ ವಿಚಾರಣೆಗೆ ಒಳಪಡಿಸಲಾಗುವುದು' ಎಂದೂ ಹೇಳಿವೆ.

ನಕಲಿ ನೇಮಕಾತಿ ಆದೇಶ ಸೃಷ್ಟಿ: 'ರಾಜ್ಯಪಾಲರ ಹೆಚ್ಚುವರಿ ಕಾರ್ಯದರ್ಶಿ ಹಾಗೂ ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳ ಸೆನೆಟ್ ಸದಸ್ಯನೆಂದು ಹೇಳಿಕೊಂಡಿದ್ದ ಸದ್ರುಲ್ಲಾ ಖಾನ್, ಗೀತಾ ಶಶಿಕುಮಾರ್ ಎಂಬುವರನ್ನು ಪರಿಚಯಿಸಿಕೊಂಡು ಲಕ್ಷಾಂತರ ರೂಪಾಯಿ ಪಡೆದು ವಂಚಿಸಿದ್ದ' ಎಂದು ಸಿಸಿಬಿ ಮೂಲಗಳು ತಿಳಿಸಿವೆ.

'ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿ ಗೀತಾ ಶಶಿಕುಮಾರ್ ನೇಮಕವಾದ ರೀತಿಯಲ್ಲಿ ಆರೋಪಿ ನಕಲಿ ಆದೇಶ ಸೃಷ್ಟಿಸಿದ್ದ' ಎಂದೂ ಹೇಳಿವೆ.

'ರಾಜ್ಯಪಾಲರ ಕಚೇರಿ ಸಿಬ್ಬಂದಿಗಳಾದ ಎಸ್. ಸಂತೋಷ್ ಹಾಗೂ ಮಲ್ಲಿಕಾರ್ಜುನ ಬಾಳಿಕಾಯಿ ಅವರಿಗೂ ಆರೋಪಿ ವಂಚಿಸಿದ್ದನೆಂಬುದು ತನಿಖೆಯಿಂದ ಗೊತ್ತಾಗಿದೆ' ಎಂದೂ ಮೂಲಗಳು ತಿಳಿಸಿವೆ.

ಎಸ್‌ಡಿಎ ನೇಮಕಾತಿ: ಮೂವರು ಅಭ್ಯರ್ಥಿಗಳ ಡಿಬಾರ್

'ಬ್ಲೂ ಟೂತ್' ಬಳಸಿ ಅಕ್ರಮ!

• ರಾಜೇಶ್ ರೈ ಚಟ್ಲ

ಬೆಂಗಳೂರು: ದ್ವಿತೀಯ ದರ್ಜೆ ಸಹಾಯಕ (ಎಸ್‌ಡಿಎ) 1,323 ಹುದ್ದೆಗಳ ನೇಮಕಾತಿಗೆ 2021ರ ಸೆಪ್ಟೆಂಬರ್ 19ರಂದು ನಡೆದಿದ್ದ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಬ್ಲೂ ಟೂತ್ ಪರಿಕರ ಮತ್ತು ಮೈಕ್ರೋಫೋನ್ ಬಳಸಿ ಅಕ್ರಮ ನಡೆಸಿರುವುದು ವಿಚಾರಣೆಯಲ್ಲಿ ದೃಢಪಟ್ಟಿದೆ.

ಪರೀಕ್ಷಾ ಅಕ್ರಮದಲ್ಲಿ ಅಭ್ಯರ್ಥಿಗಳಾದ ಆನಂದ್ ಎಚ್.ಅಮಜಿಗೋಳ್, ಬಾಬಣ್ಣ ಕೆ.ವಡ್ಡರ್, ವಿಠಲ ಹುಲಗಬಾಳ ಭಾಗಿಯಾಗಿರುವುದು ಸಾಬೀತಾಗಿದೆ ಎಂದು ಕೆಪಿಎಸ್‌ಸಿ ನೇಮಿಸಿದ್ದ ವಿಚಾರಣಾಧಿಕಾರಿ ವರದಿ ನೀಡಿದ್ದಾರೆ.

ಈ ವರದಿ ಆಧರಿಸಿ ಇನ್ನು ಮುಂದೆ ಆಯೋಗ ನಡೆಸುವ ಯಾವುದೇ ಪರೀಕ್ಷೆಗೆ ಹಾಜರಾಗದಂತೆ ಈ ಮೂವರನ್ನೂ ಕೆಪಿಎಸ್‌ಸಿ ಡಿಬಾರ್ ಮಾಡಿದೆ. ಇನ್ನೂ ಹಲವು ಅಭ್ಯರ್ಥಿಗಳು ಪರೀಕ್ಷಾ ಅಕ್ರಮದಲ್ಲಿ ಭಾಗಿಯಾಗಿರುವ ಅನುಮಾನದಲ್ಲಿ ವಿಚಾರಣೆ ಮುಂದುವರಿಸಿದೆ.

'ಅಕ್ರಮ ಖಚಿತಗೊಂಡ ಬೆನ್ನಲ್ಲೇ,

ವಿಚಾರಣೆ ಮುಂದುವರಿದಿದೆ. ಪೂರ್ಣಗೊಂಡ ಬಳಿಕ ಇನ್ನಷ್ಟು ಅಭ್ಯರ್ಥಿಗಳನ್ನು ಡಿಬಾರ್ ಮಾಡುತ್ತೇವೆ. ಎಷ್ಟು ಮಂದಿ ಎಂದು ಈಗಲೇ ಹೇಳಲು ಸಾಧ್ಯವಿಲ್ಲ
ವಿಕಾಸ್ ಕಿಶೋರ್ ಸುರಳ್ಕರ್, ಕಾರ್ಯದರ್ಶಿ, ಕೆಪಿಎಸ್‌ಸಿ

ಇನ್ನಷ್ಟು ಅಭ್ಯರ್ಥಿಗಳು ಇದೇ ರೀತಿಯ ಅಕ್ರಮ ನಡೆಸಿರುವ ಅನುಮಾನವಿದೆ. ಹೆಚ್ಚಿನ ತನಿಖೆ ನಡೆಸಬೇಕು' ಎಂದು ಎಸ್‌ಡಿಎ ಉದ್ಯೋಗಾಕಾಂಕ್ಷಿಗಳು ಆಗ್ರಹಿಸಿದ್ದಾರೆ.

ಬಾಗಲಕೋಟೆ ಜಿಲ್ಲೆಯ ವಿದ್ಯಾಗಿರಿಯಲ್ಲಿರುವ ಬಿವಿವಿ ಸಂಘದ ಆಂಗ್ಲ ಮಾಧ್ಯಮ ಪ್ರೌಢಶಾಲೆಯಲ್ಲಿ ಆನಂದ್ ಎಚ್.ಅಮಜಿಗೋಳ್, ಬೆಳಗಾವಿಯ ಅಂಜುಮನ್ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯಲ್ಲಿ ಬಾಬಣ್ಣ ಕೆ. ವಡ್ಡರ್, ಬಾಗಲಕೋಟೆಯ ಶಂಕರಪ್ಪ ಸಕ್ರಿ ಪಿಯು ಕಾಲೇಜಿನಲ್ಲಿ ವಿಠಲ ಹುಲಗಬಾಳ ಪರೀಕ್ಷೆಗೆ ಹಾಜರಾಗಿದ್ದರು.

ಈ ಮೂವರೂ ಅಕ್ರಮದಲ್ಲಿ ಭಾಗಿಯಾಗಿದ್ದಾರೆಂದು ಪರೀಕ್ಷಾ ಕೇಂದ್ರದ ಮೇಲ್ವಿಚಾರಕರು, ಕೊಠಡಿ ಮೇಲ್ವಿಚಾರಕರು ಮತ್ತು ಜಿಲ್ಲಾಧಿಕಾರಿ ಅವರು ಕೆಪಿಎಸ್‌ಸಿಗೆ ವರದಿ ಸಲ್ಲಿಸಿದ್ದರು. ಅಕ್ರಮ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ, ಮೂವರಿಗೂ ಕಾರಣ ಕೇಳಿ ನೋಟಿಸ್ ನೀಡಲಾಗಿತ್ತು. ಅಲ್ಲದೆ, ಆಯಾ ಕೇಂದ್ರಗಳ ವ್ಯಾಪ್ತಿಯ ಠಾಣೆಗಳಲ್ಲಿ ದೂರು ದಾಖಲಿಸಲಾಗಿತ್ತು.

ಆದರೆ, ಆರೋಪಗಳನ್ನು ಅಭ್ಯರ್ಥಿಗಳು ನಿರಾಕರಿಸಿದ್ದರು. ಹೀಗಾಗಿ, ಸತ್ಯಾಂಶ ಪರಿಶೀಲಿಸಲು ವಿಚಾರಣಾಧಿಕಾರಿಯನ್ನು ಕೆಪಿಎಸ್‌ಸಿ ನೇಮಿಸಿತ್ತು. ಅಕ್ರಮಕ್ಕೆ ಸಂಬಂಧಿಸಿದ ದಾಖಲೆಗಳ ಸಹಿತ ಅಭ್ಯರ್ಥಿಗಳನ್ನು ವಿಚಾರಣೆ ನಡೆಸಿ ವಿಚಾರಣಾಧಿಕಾರಿ ವರದಿ ನೀಡಿದ್ದರು. ಇತ್ತೀಚೆಗೆ ಆಯೋಗದ ಸಭೆಯಲ್ಲಿ, ಈ ಮೂವರನ್ನು ಮುಂದೆ ಯಾವುದೇ ಪರೀಕ್ಷೆಗೆ ಹಾಜರಾಗದಂತೆ ಶಾಶ್ವತವಾಗಿ ಡಿಬಾರ್ ಮಾಡಿ ನಿರ್ಣಯ ಕೈಗೊಂಡಿದೆ.

'ಹಾವೇರಿಯಲ್ಲಿ ನ.11ರಿಂದ ಕನ್ನಡ ಸಾಹಿತ್ಯ ಸಮ್ಮೇಳನ'

ಹಾವೇರಿ: 'ಅಖಿಲ ಭಾರತ 86ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ನವೆಂಬರ್ 11ರಿಂದ 13 ರವರೆಗೆ ನಡೆಸಲು ನಿರ್ಧರಿಸಿದ್ದು, ಮುಖ್ಯಮಂತ್ರಿಯವರು ಈ ಬಗ್ಗೆ ಅಧಿಕೃತವಾಗಿ ಘೋಷಿಸುವರು' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಶನಿವಾರ ತಿಳಿಸಿದರು.

5

ಆರ್‌ಎಸ್‌ಎಸ್ ಮುಖಂಡನಿಗೆ ಚಾಕುವಿನಿಂದ ಹಲ್ಲೆ

ಮಾಲೂರು (ಕೋಲಾರ ಜಿಲ್ಲೆ): ನಗರದ ಮಾರಿಕಾಂಬಾ ರಸ್ತೆಯಲ್ಲಿ ಶನಿವಾರ ಗಲಾಟೆ ಬಿಡಿಸಲು ಮುಂದಾದ ಆರ್‌ಎಸ್‌ಎಸ್ ಜಿಲ್ಲಾ ಸಹ ಶಾರೀರಕ್ ಪ್ರಮುಖ್ ರವಿಕುಮಾರ್ ಎಂಬುವರಿಗೆ ಯುವಕರಿಬ್ಬರು ಚಾಕುವಿನಿಂದ ಹಲ್ಲೆ ನಡೆಸಿದ್ದಾರೆ.

39 ವರ್ಷದ ರವಿಕುಮಾರ್ ಅವರ ಬಲ ಕಿವಿ, ಕೈಗೆ ಏಟು ಬಿದ್ದಿದ್ದು, ಅಪಾಯದಿಂದ ಪಾರಾಗಿದ್ದಾರೆ. ಅವರ ಮಾಲೀಕತ್ವದ ಸ್ಟೀಲ್ ಪಾತ್ರೆ ಅಂಗಡಿ ಮುಂದೆ ಈ ಕೃತ್ಯ ನಡೆದಿದೆ. 'ಇಬ್ಬರೂ ನನ್ನನ್ನು ಕೊಲ್ಲುವ ಉದ್ದೇಶ ಹೊಂದಿದ್ದರು' ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಹಲ್ಲೆ ನಡೆಸಿದ ಆರೋಪಿ ಸೈಯದ್ ವಾಸೀಂನನ್ನು ಪಟ್ಟಣ ಪೊಲೀಸರು ಬಂಧಿಸಿದ್ದು, ಮತ್ತೊಬ್ಬ ಆರೋಪಿಗೆ ಶೋಧ ನಡೆಸಿದ್ದಾರೆ.

14ನೇ ಪುಟ ನೋಡಿ

ಧನಕರ್ ನೂತನ ಉಪರಾಷ್ಟ್ರಪತಿ

ನವದೆಹಲಿ (ಪಿಟಿಐ): ಎನ್‌ಡಿಎ ಅಭ್ಯರ್ಥಿ ಜಗದೀಪ್ ಧನಕರ್ ಅವರು ನಿರೀಕ್ಷೆಯಂತೆಯೇ ದೇಶದ 14ನೇ ಉಪರಾಷ್ಟ್ರಪತಿಯಾಗಿ ಶನಿವಾರ ಚುನಾಯಿತರಾಗಿದ್ದಾರೆ. ಧನಕರ್ ಅವರು 528 ಮತಗಳನ್ನು ಪಡೆದು ಭಾರಿ ಅಂತರದಿಂದ ಗೆದ್ದರು. ಪ್ರತಿಪಕ್ಷಗಳ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದ ಕಾಂಗ್ರೆಸ್‌ನ ಮಾರ್ಗರೆಟ್ ಆಳ್ವ ಅವರಿಗೆ 182 ಮತಗಳಷ್ಟೇ ಸಿಕ್ಕಿದವು.

ಬಿಜೆಪಿಗೆ ಲೋಕಸಭೆಯಲ್ಲಿ ಬಹುಮತ ಹಾಗೂ ರಾಜ್ಯಸಭೆಯಲ್ಲಿ 91 ಸದಸ್ಯರ ಬಲ ಇದ್ದಿದ್ದರಿಂದ ಧನಕರ್ ಅವರ ಗೆಲುವು ನಿಶ್ಚಿತವಾಗಿತ್ತು. ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಷಿ ಅವರ ನಿವಾಸದಲ್ಲಿ, ಧನಕರ್ ಅವರ ಗೆಲುವು ಘೋಷಣೆಯಾಗುವ ಮುನ್ನವೇ ಸಂಭ್ರಮಾಚರಣೆ ನಡೆದಿತ್ತು. ಇದರಲ್ಲಿ ಧನಕರ್ ಭಾಗಿಯಾಗಿದ್ದರು. ಫಲಿತಾಂಶ ಪ್ರಕಟವಾದ ಬಳಿಕ ಪ್ರಧಾನಿ ನರೇಂದ್ರ ಮೋದಿ ಅವರು ಧನಕರ್ ಅವರನ್ನು ಭೇಟಿಯಾಗಿ ಶುಭಾಶಯ ಕೋರಿದರು.

ರಾಜ್ಯಸಭೆಯ ಸಭಾಪತಿಯಾಗಿ ಹಲವು ಕಠಿಣ ಸಂದರ್ಭಗಳನ್ನು ನಿಭಾಯಿಸಿದ್ದ ಉಪರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು ಅವರ ಅಧಿಕಾರಾವಧಿ ಇದೇ 10ರಂದು ಮುಗಿಯಲಿದ್ದು, ಧನಕರ್ ಅವರು 11ರಂದು ಅಧಿಕಾರ ವಹಿಸಿಕೊಳ್ಳಲಿದ್ದಾರೆ.

ಉಪರಾಷ್ಟ್ರಪತಿ ಚುನಾವಣೆಯಲ್ಲಿ 725 ಸಂಸದರು ಮತ ಚಲಾಯಿಸಿದ್ದರು. ಈ ಪೈಕಿ 15 ಮತಗಳು ಅಸಿಂಧುಗೊಂಡಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸಂಸತ್ತಿನಲ್ಲಿ, ನಾಮನಿರ್ದೇಶಿತರೂ ಸೇರಿ 788 ಸದಸ್ಯರಿದ್ದಾರೆ. ರಾಜ್ಯಸಭೆಯ 8 ಸ್ಥಾನಗಳು ಖಾಲಿಯಿವೆ. ಮತದಾನದಿಂದ ಟಿಎಂಸಿ ದೂರವುಳಿದಿದ್ದರೂ ಇಬ್ಬರು ಸಂಸದರು ಮತ ಚಲಾಯಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಧನಕರ್ ಅವರಿಗೆ ಶುಭಾಶಯ ಕೋರಿದರು —ಪಿಟಿಐ ಚಿತ್ರ

ರಾಜಸ್ಥಾನದ ಹಳ್ಳಿಯಿಂದ ಉಪರಾಷ್ಟ್ರಪತಿ ಸ್ಥಾನಕ್ಕೆ 9

ಲಸಿಕಾಕರಣಕ್ಕೆ ಇನ್ನಷ್ಟು ವೇಗ ನೀಡಿ: ಕೇಂದ್ರ ಸೂಚನೆ

ಕರ್ನಾಟಕದಲ್ಲಿ ಕೋವಿಡ್ ಹೆಚ್ಚಳ

ಪ್ರಜಾವಾಣಿ ವಾರ್ತೆ



ನವದೆಹಲಿ: ಕರ್ನಾಟಕ ಸೇರಿದಂತೆ ಏಳು ರಾಜ್ಯಗಳಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಗಣನೀಯವಾಗಿ ಹೆಚ್ಚುತ್ತಿರುವುದಕ್ಕೆ ಕೇಂದ್ರ ಸರ್ಕಾರ ಕಳವಳ ವ್ಯಕ್ತಪಡಿಸಿದೆ.

ಕರ್ನಾಟಕ, ಕೇರಳ, ತಮಿಳುನಾಡು, ದೆಹಲಿ, ಮಹಾರಾಷ್ಟ್ರ, ಒಡಿಶಾ ಹಾಗೂ ತೆಲಂಗಾಣ ಸರ್ಕಾರಗಳಿಗೆ ಪತ್ರ ಬರೆದಿರುವ ಕೇಂದ್ರ ಆರೋಗ್ಯ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಭೂಷಣ್, ಕೋವಿಡ್ ಪ್ರಕರಣಗಳ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದಾರೆ.

ಕೋವಿಡ್ ಲಸಿಕಾಕರಣಕ್ಕೆ ಇನ್ನಷ್ಟು ವೇಗ ನೀಡಬೇಕು ಎಂದೂ ಹೇಳಿದ್ದಾರೆ.

ಮುಂಬರುವ ತಿಂಗಳುಗಳಲ್ಲಿ ಹಬ್ಬಗಳ ಕಾರಣದಿಂದ ಸಾರ್ವಜನಿಕ ಸ್ಥಳಗಳಲ್ಲಿ ಜನರ ದಟ್ಟಣೆ ಹೆಚ್ಚಾಗಲಿದೆ. ಜನರು ಹೆಚ್ಚಿನ ಸಂಖ್ಯೆಯಲ್ಲಿ ರಾಜ್ಯ ಹಾಗೂ ಅಂತರ್‌ರಾಜ್ಯ ಪ್ರವಾಸಗಳನ್ನು ಕೈಗೊಳ್ಳಲಿದ್ದಾರೆ. ಇದರಿಂದ ಸೋಂಕು ಪ್ರಸರಣ ಹೆಚ್ಚಾಗುವ ಸಾಧ್ಯತೆ ಇದೆ ಎಂದು ಅವರು ಪತ್ರದಲ್ಲಿ ಎಚ್ಚರಿಸಿದ್ದಾರೆ.

ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಟಿ.ಕೆ. ಅನಿಲ್ ಕುಮಾರ್ ಅವರಿಗೆ ಬರೆದಿರುವ ಪತ್ರದಲ್ಲಿ, 'ಕಳೆದ ಒಂದು ತಿಂಗಳಿನಿಂದ ಕರ್ನಾಟಕದಲ್ಲಿ ನಿತ್ಯ ಸರಾಸರಿ 1,355 ಪ್ರಕರಣಗಳು ದಾಖಲಾಗುತ್ತಿವೆ. ಆಗಸ್ಟ್ 5ರಂದು ಗರಿಷ್ಠ 1,992 ಪ್ರಕರಣಗಳು ಪತ್ತೆಯಾಗಿವೆ. ದೇಶದ ಒಟ್ಟು ಪ್ರಕರಣಗಳ ಪತ್ತೆ ಪ್ರಮಾಣದಲ್ಲಿ ರಾಜ್ಯದ ಪಾಲು ಶೇ 10ರಷ್ಟು ಇದೆ. ವಾರದ ಪಾಸಿಟಿವಿಟಿ ಪ್ರಮಾಣ ಶೇ 5.30ರಿಂದ ಶೇ 6.8ಕ್ಕೆ ಏರಿಕೆಯಾಗಿದೆ. ಹೀಗಾಗಿ, ಪ್ರಕರಣಗಳ ಬಗ್ಗೆ ನಿಗಾ ವಹಿಸಿ ನಿಯಂತ್ರಣಕ್ಕೆ ತುರ್ತು ಕ್ರಮ ಕೈಗೊಳ್ಳಬೇಕು' ಎಂದಿದ್ದಾರೆ.

ಚಿನಕುರಳಿ
ಪ್ರಕಾಶ್ ಶೆಟ್ಟಿ



CREATING THE RIGHT COURSE FOR YOUR BRIGHT FUTURE...

JSS ACADEMY OF HIGHER EDUCATION & RESEARCH (DEEMED TO BE UNIVERSITY) MYSURU

ADMISSIONS OPEN
FOR THE YEAR 2022-2023
APPLY NOW
www.jssuni.edu.in

Dental*
- BDS

Fellowship
- Psychosexual Medicine
- Pain Medicine
- Neonatology
- Critical Care Medicine

B.Sc. (Allied Health Sciences)
- Medical Laboratory Technology
- Medical Imaging Technology
- Anaesthesia & Operation Theatre Technology
- Renal Dialysis Technology
- Respiratory Care Technology
- Cardiac Care Technology
- Perfusion Technology
- Emergency Medicine Technology
- Optometry
- Physician Assistant (CTVS)
- Forensic Sciences
- Medical Genetics
- Bachelor of Occupational Therapy (BOT)

M.Sc. / MPH / M.Phil (Biomedical / Medical Sciences)
- Medical Biochemistry
- Medical Physiology
- Medical Anatomy
- Medical Pharmacology
- Medical Genetics & Genomics
- Echocardiography
- Forensic Odontology
- Master of Public Health (MPH)
- M. Phil Psychiatric Social Work
- M. Phil Clinical Psychology

Ph.D.
Medicine / Dentistry / Pharmacy / Management Studies / Life Sciences / Biomedical Sciences

Pharmacy
- B.Pharm
- II B.Pharm (Lateral Entry)
- D Pharm
- B Pharm Practice
- Pharm D
- Pharm D (PB)

M.Pharm
- Pharmaceutics
- Pharmaceutical Quality Assurance
- Regulatory Affairs
- Industrial Pharmacy
- Pharmacy Practice
- Pharmacology
- Pharmaceutical Chemistry
- Pharmaceutical Analysis
- Pharmacognosy
- Pharmaceutical Biotechnology

*Note : The Schedule for Entrance Test & Counselling is hosted at the Website.

M.Sc. Life Sciences
- Cognitive Neuroscience
- Environmental Science
- Geoinformatics
- Nanoscience & Technology
- Nutrition & Dietetics
- Molecular Biology
- Biochemistry
- Microbiology
- Medical Statistics
- Bioinformatics
- Cosmetic Science
- Sports Nutrition & Management
- Biotechnology
- Medical Physics

Diploma in
- Tissue Culture
- Nutraceutical Technology
- Environment, Health & Safety Management

Yoga
- B.Sc. in Yoga
- M.Sc. in Yoga
- Yoga Teachers Course (YTC)(3 months)

B.Sc. Life Sciences
General (3 Years) / Honours (4 Years)
- Biotechnology
- Microbiology
- Environmental Science
- Food, Nutrition & Dietetics
- Psychology
- Biochemistry

Dental Diploma
- Diploma in Dental Mechatronics
- DORA - Dental Operating Room Assistant

Health System Management Studies
- BBA in Hospital & Health System Management
- MBA in Hospital Administration
- MBA in Pharmacy Administration
- MBA in Information Technology

Open Distance Learning
- M.Sc in Environmental Science
- Diploma in Environment, Health & Safety Management
- Diploma in Tissue Culture
- Certificate Program in Statistical Methods & Research Methodology

Online Learning Programs
- MBA in Hospital Administration
- BBA in Hospital and Health System Management
- B.Sc in Psychology
- Certitfcate Programme in Dental
- Ethics & Jurisprudence

Diploma in
- Pharmacovigilance
- Quality Control
- Bioinformatics
- Regulatory Affairs
- Medical Devices

*NOTE : The guidance will be given for UG Dental (BDS) 2022 admissions. NEET UG 2022 eligible candidates may apply at Medical Counselling Committee (MCC) W : www.mcc.nic.in for online counselling & Seat allotment to JSS Dental College & Hospital, Mysuru. For more details please email at admissions@jssuni.edu.in

JSS ACADEMY OF HIGHER EDUCATION & RESEARCH
Sri Shivarathreeshwara Nagar, Bannimantap, Mysuru - 570 015, Karnataka, India. | T: +91 9980841859 / 0821-2548416
E: admissions@jssuni.edu.in | W: www.jssuni.edu.in | FB: www.fb.com/jssuniversity

ಕಾವೇರಿಪುರ ವಾರ್ಡ್‌ನ ಬಾಳಯ್ಯನಕೆರೆ ಉದ್ಯಾನದಲ್ಲಿ ತೆರೆದಿರುವ 500 ದಶಲಕ್ಷ ಲೀಟರ್ ಸಾಮರ್ಥ್ಯದ ಎಸ್‌ಟಿಪಿ ಘಟಕವನ್ನು ವಸತಿ ಸಚಿವ ವಿ.ಸೋಮಣ್ಣ ಉದ್ಘಾಟಿಸಿದರು. ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಧ್ಯಕ್ಷ ವಿಶ್ವನಾಥಗೌಡ, ಮುಖಂಡರಾದ ಪಲ್ಲವಿ ಚನ್ನಪ್ಪ, ವಾಗೇಶ್, ದಾಸೇಗೌಡ, ರೂಪ ಲಿಂಗೇಶ್ವರ್, ಜಲಮಂಡಳಿ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಸೌಮ್ಯರಾಣಿ ಇದ್ದರು.

ಮೆಟ್ರೊ ರೈಲು: 20 ನಿಮಿಷ ಕಾಯಬೇಕಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳಗಿನ ಜಾವ ಮತ್ತು ತಡರಾತ್ರಿ ಮೆಟ್ರೊ ರೈಲುಗಳ ಸಂಚಾರದ ಅಂತರವನ್ನು ಮತ್ತಷ್ಟು ಕಡಿಮೆ ಮಾಡಲಾಗಿದೆ.

‘ಬೆಳಿಗ್ಗೆ 5ರಿಂದ 6 ಗಂಟೆ ಮತ್ತು ರಾತ್ರಿ 10ರಿಂದ 11 ಗಂಟೆ ತನಕ ಪ್ರತಿ ರೈಲುಗಳ ಸಂಚಾರದ ನಡುವೆ ಇದ್ದ 20 ನಿಮಿಷಗಳ ಅಂತರವನ್ನು 15 ನಿಮಿಷಕ್ಕೆ ಇಳಿಸಲಾಗಿದೆ. ಸೋಮವಾರದಿಂದ ಇದು ಕಾರ್ಯರೂಪಕ್ಕೆ ಬರಲಿದೆ’ ಎಂದು ಬೆಂಗಳೂರು ಮೆಟ್ರೊ ರೈಲು ನಿಗಮ(ಬಿಎಂಆರ್‌ಸಿಎಲ್) ಪ್ರಕಟಣೆ ತಿಳಿಸಿದೆ.

‘ಬೆಳಿಗ್ಗೆ 6 ಗಂಟೆಗೆ ಮುನ್ನ ಮತ್ತು ರಾತ್ರಿ 10 ಗಂಟೆಯ ನಂತರ ಮೆಟ್ರೊ ರೈಲು ಪ್ರಯಾಣಿಕರು ನಿಲ್ದಾಣಗಳಲ್ಲಿ ಗರಿಷ್ಠ 20 ನಿಮಿಷ ಕಾಯಬೇಕಾದ ಸ್ಥಿತಿ ಇತ್ತು. ಪ್ರಯಾಣಿಕರಿಗೆ ಆಗುತ್ತಿರುವ ಅನನುಕೂಲ ತಪ್ಪಿಸಲು ಈ ಕ್ರಮ ಕೈಗೊಳ್ಳಲಾಗಿದೆ’ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ನಗರದಲ್ಲಿ ಇಂದು

ಮನೆ-ಮನಗಳಲ್ಲಿ ಶಿವಪೂಜೆ ಶಿವಾನುಭಾವ ಹಾಗೂ ಸಿದ್ಧಾಂತ ಶಿಖಾಮಣಿ-ವಚನ ಪ್ರವಚನ: ಬೆಳಿಗ್ಗೆ: ಜಗದಂಬಾ ಮತ್ತು ಬಸವರಾಜು, ನಂ.398/1 ವೀರಭದ್ರನಗರ, 1ನೇ ಹಂತ ಮಾರತ್ತಹಳ್ಳಿ, ಸಂಜೆ: ಕಲ್ಯಾಣ ಬಸವ ಬಳಗ, ಎಂ.ಬಸವರಾಜಯ್ಯ, ಪ್ರಣವ ಶಿವಲಿಂಗಯ್ಯ, ಕಲ್ಯಾಣನಗರ

ಶಿವಬಾಲಯೋಗಿ ಮಹಾರಾಜರ 12 ವರ್ಷಗಳ ತಪಸ್ ಸಿದ್ಧಿಯ 61ನೇ ವಾರ್ಷಿಕ ದಿನಾಚರಣೆ: ಬೆಳಿಗ್ಗೆ 9ಕ್ಕೆ ಪೂಜೆ, ಮಧ್ಯಾಹ್ನ 12ಕ್ಕೆ ಶಿವರುದ್ರ ಬಾಲಯೋಗಿ ಸ್ವಾಮೀಜಿ ಅವರಿಂದ ಪೂರ್ಣಾಹುತಿ ಆಶೀರ್ವಚನ, ಆಯೋಜನೆ: ಶಿವಬಾಲಯೋಗಿ ಮಹಾರಾಜ್ ಟ್ರಸ್ಟ್, ಸ್ಥಳ: ಭಾರತೀಯ ಅಂತರರಾಷ್ಟ್ರೀಯ ಸಾಂಸ್ಕೃತಿಕ ಕೇಂದ್ರ, ಶಿವಬಾಲಯೋಗಿ ಮಹಾರಾಜ್ ಆಶ್ರಮ, ಜೆ.ಪಿ. ನಗರ

ಅರವಿಂದ ಅವರ 150 ಜನ್ಮದಿನಾಚರಣೆ ಸ್ಮರಣಾರ್ಥ ‘ಅರವಿಂದರ ಬೆಳಕಿನಲ್ಲಿ ಭಾರತದ ಪುನರುತ್ಥಾನ ಮತ್ತು ಭಾರತೀಯ ರಾಷ್ಟ್ರೀಯತೆ’ ವಿಚಾರಸಂಕಿರಣ : ಅತಿಥಿಗಳು: ತೇಜಸ್ವಿ ಸೂರ್ಯ, ವಿಕ್ರಮ್ ಸಂಪತ್, ಆಯೋಜನೆ: ಅರವಿಂದ ಸೊಸೈಟಿ ಸ್ಟೇಟ್ ಕಮಿಟಿ, ಸ್ಥಳ: ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್, ಬೆಳಿಗ್ಗೆ 9

ಸಿ.ಕೆ. ಗುಂಡಣ್ಣ 70ರ ಸಂಭ್ರಮ: ಉದ್ಘಾಟನೆ: ಎಂ.ಎಸ್. ಸತ್ಯು, ಅಧ್ಯಕ್ಷತೆ: ಕೆ. ಮರುಳಸಿದ್ಧಪ್ಪ, ಅತಿಥಿಗಳು: ಮೋಹನ್ ಕೊಂಡಜ್ಜಿ, ಬಿ.ವಿ. ರಾಜಾರಾಂ, ಆರ್. ಭೀಮಸೇನ್, ಆಯೋಜನೆ: ರಂಗಮಂಡಲ-ಸಿವಗಂಗ ಟ್ರಸ್ಟ್, ಸ್ಥಳ: ಸಿವಗಂಗ ರಂಗಮಂದಿರ, ಸರ್.ಎಂ ಬಡಾವಣೆ, ಕೆಂಗೇರಿ ಉಪನಗರ, ಬೆಳಿಗ್ಗೆ 9.30

ಕುಂಬಾರರ ಸಂಘದ ನೂತನ ಆಡಳಿತ ಮಂಡಳಿ, ನೂತನ ಗ್ರಂಥಾಲಯ ಉದ್ಘಾಟನೆ ಸಮಾರಂಭ: ಉದ್ಘಾಟನೆ: ವಿ.ಸೋಮಣ್ಣ, ತೇಜಸ್ವಿ ಸೂರ್ಯ, ಉದಯ್.ಬಿ. ಗರುಡಾಚಾರ್, ಅತಿಥಿಗಳು: ವಿವೇಕ್ ಸುಬ್ಬಾರೆಡ್ಡಿ, ಅರುಣ್ ಸೋಮಣ್ಣ, ಅಧ್ಯಕ್ಷತೆ: ಆರ್. ಶ್ರೀನಿವಾಸ್, ಆಯೋಜನೆ: ಕುಂಬಾರರ ಸಂಘ, ಸ್ಥಳ: ಬಿ.ವಿ. ರಾಮಚಂದ್ರಪ್ಪ ಸಭಾಂಗಣ, ಕುಂಬಾರರ ಸಂಘದ ಕಟ್ಟಡ, ಕಲಾಸಿಪಾಳ್ಯ, ಬೆಳಿಗ್ಗೆ 10

ಪ್ರತಿಭಾ ಪುರಸ್ಕಾರ: ಸಾನ್ನಿಧ್ಯ: ಸ್ವಾಮಿ ಯೋಗೇಶ್ವರಾನಂದ, ಅತಿಥಿಗಳು: ಕೆ.ಎ. ದಯಾನಂದ್, ಭೀಮಾಶಂಕರ್ ಎಸ್. ಗುಳೇದ್, ಮಲ್ಲಿಕಾರ್ಜುನ ಬಾಲದಂಡಿ, ಧರ್ಮಣ್ಣ ದೊಡ್ಡಮನಿ ಗಂವ್ಹಾರ, ಅಧ್ಯಕ್ಷತೆ: ಟಿ.ಬಿ. ಬಳಗಾವಿ, ಆಯೋಜನೆ: ಕನಕಶ್ರೀ ಚಾರಿಟಬಲ್ ಟ್ರಸ್ಟ್, ಸ್ಥಳ: ಕನಕ ಭವನ, ಸೊಣ್ಣೇನಹಳ್ಳಿ ಬಸ್ ನಿಲ್ದಾಣ, ವಿಶ್ವೇಶ್ವರಯ್ಯ ಬಡಾವಣೆ, ಬೆಳಿಗ್ಗೆ 10.30

75ನೇ ಸ್ವಾತಂತ್ರ್ಯೋತ್ಸವ ಕವಿಗೋಷ್ಠಿ ಗೀತ ಗಾಯನ ಕಾರ್ಯಕ್ರಮ: ಉಪನ್ಯಾಸ: ಗಿರಜಾ ಹೆಗ್ಗಡೆ, ಉಪಸ್ಥಿತಿ: ಎಚ್.ಎಸ್. ಮಂಡ್ಯ ಬಾಲಸುಬ್ರಹ್ಮಣ್ಯಂ, ಕೆ.ವಿ. ಲಕ್ಷ್ಮಣಮೂರ್ತಿ, ಆಯೋಜನೆ: ರವಿಕಿರಣ ಸಾಹಿತ್ಯ ಪ್ರತಿಷ್ಠಾನ, ಸ್ಥಳ: ಕೆನ್ ಕಲಾ ಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

ರಾಷ್ಟ್ರೀಯ ಕೈಮಗ್ಗ ದಿನಾಚರಣೆ: ಉದ್ಘಾಟನೆ: ಕೆ.ಸಿ. ಕೊಂಡಯ್ಯ, ಅತಿಥಿಗಳು: ಕೆ.ಗೋಪಾಲಯ್ಯ, ಪಿ.ಸಿ. ಮೋಹನ್, ಅಧ್ಯಕ್ಷತೆ: ಕರ್ನಾಟಕ ರಾಜ್ಯ ನೇಕಾರ ಸಮುದಾಯಗಳ ಒಕ್ಕೂಟ, ಸ್ಥಳ: ತೊಗಟವೀರ ಕ್ಷತ್ರಿಯ ಸಂಘದ ಸಮುದಾಯ ಭವನ, ಸಂಪಗಿರಾಮನಗರ, ಬೆಳಿಗ್ಗೆ 11

ವಚನ ಶ್ರಾವಣ ಬಳಗ: ಗಾಯನ: ದೇವೇಂದ್ರಕುಮಾರ್ ಪತ್ತಾರ್, ಉಪನ್ಯಾಸ: ಕೆ.ಆರ್. ಸೌಮ್ಯ, ಅಧ್ಯಕ್ಷತೆ: ಎಸ್. ಪಿನಾಕಪಾಣಿ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ವನಜ ರಾಜಾ ಗುರುಪ್ರಸಾದ ಅವರ ಮನೆ, ಎಸ್.ವಿ.ಕೆ, ಕಲ್ಯಾಣಮಂಟಪ ಹಿಂಭಾಗ, ಜ್ಞಾನಜ್ಯೋತಿನಗರ ಬೆಳಿಗ್ಗೆ 11

ಶಿವದಾಸ್ ಘೋಷ್ ಜನ್ಮ ಶತಮಾನೋತ್ಸವ: ಭಾಷಣಕಾರರು: ಕೆ. ರಾಧಾಕೃಷ್ಣ, ಕೆ. ಉಮಾ, ಅಧ್ಯಕ್ಷತೆ: ರಾಮಾಂಜನಪ್ಪ ಆಲ್ದಳ್ಳಿ, ಆಯೋಜನೆ: ಸೋಷಲಿಸ್ಟ್ ಯುನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್), ಸ್ಥಳ: ಗುಂಡೂರಾವ್ ಸಭಾಂಗಣ, ಶಿರೂರ್ ಪಾರ್ಕ್ ರಸ್ತೆ, ಶೇಷಾದ್ರಿಪುರ, ಬೆಳಿಗ್ಗೆ 11

ರಹಿಮತ್ ಖಾನ್ ಸಾಹೇಬ್ ಅವರಿಂದ ‘ಸುರ್ ಹೀ ಈಶ್ವರ’ ಭಕ್ತಿಗೀತೆಗಳು: ಉಸ್ತಾದ್ ಹಫೀಜ್ ಬಾಲೇಖಾನ್, ತಬಲಾ: ದತ್ತಾತ್ರೇಯ ಜೋಶಿ, ಹಾರ್ಮೋನಿಯಂ: ಶಿವಕುಮಾರ್ ಮಹಾಂತ್, ವಯೋಲಿನ್ ಮತ್ತು ಸಿತಾರ್ ಜುಗಲ್‌ಬಂದಿ: ವಯೋಲಿನ್: ಸಂತೋಷ್ ನಹರ್, ಸಿತಾರ್: ಉಸ್ತಾದ್ ರಫೀಕ್ ಖಾನ್, ತಬಲಾ: ಪಂಡಿತ್ ರವೀಂದ್ರ ಯಾವಗಲ್, ಆಯೋಜನೆ: ಸಿತಾರ್ ನವಾಝ್ ಉಸ್ತಾದ್ ಬಾಲೇಖಾನ್ ಫೌಂಡೇಷನ್ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿಕ ಇಲಾಖೆ, ಸ್ಥಳ:

ಸುಶುಮ್ನಾ ಎಸ್. ಪ್ರದೀಪ್

ಭರತನಾಟ್ಯ ರಂಗಪ್ರವೇಶ: ಸುಶುಮ್ನಾ ಎಸ್. ಪ್ರದೀಪ್, ಅತಿಥಿಗಳು: ದೊಡ್ಡರಂಗೇಗೌಡ, ಸವಿತಾ ಅರುಣ್, ರೂಪಶ್ರೀ ಮಧುಸೂದನ್, ಆಯೋಜನೆ: ಪೃಥ್ವಿ ನೃತ್ಯ ವಿಹಂಗಮ, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಬೆಳಿಗ್ಗೆ 10

ಅನನ್ಯ, 4ನೇ ಮುಖ್ಯ ರಸ್ತೆ, ಮಲ್ಲೇಶ್ವರ, ಸಂಜೆ 5.30

ರಾಘವೇಂದ್ರ ಗುರುಸಾರ್ವಭೌಮರ ಆರಾಧನಾಂಗ 47ನೇ ವಾರ್ಷಿಕೋತ್ಸವ, ಡಾ.ಎಸ್. ಜಯಸಿಂಹ ಅವರ ‘ಕನಕದಾಸ ದರ್ಶನ’ ಪುಸ್ತಕ ಬಿಡುಗಡೆ: ಸಾನ್ನಿಧ್ಯ: ವಿದ್ಯಾಧೀಶತೀರ್ಥ ಸ್ವಾಮೀಜಿ, ಸುವಿದ್ಯೇಂದ್ರತೀರ್ಥ ಸ್ವಾಮೀಜಿ, ಎಂ.ಎನ್. ವೆಂಕಟಾಚಲಯ್ಯ, ಎನ್.ಸಂತೋಷ್ ಹೆಗ್ಡೆ, ಆಯೋಜನೆ: ಪರಿಮಳ ಗೆಳೆಯರ ಬಳಗ, ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ ಸಂಜೆ 5.45

ದ್ವಿಶತಮಾನೋತ್ಸವ ಸಮಾರಂಭ, ಸ್ಮರಣ ಸಂಚಿಕೆ ಲೋಕಾರ್ಪಣೆ ಮತ್ತು ಸಪ್ತಸ್ವರ ಸಂಗೀತೋತ್ಸವ ಸರಣಿ-12: ಉದ್ಘಾಟನೆಳ ಆನೂರು ಅನಂತಕೃಷ್ಣಶರ್ಮಾ, ಬಿಡುಗಡೆ: ಎಚ್.ಎಸ್. ವೆಂಕಟೇಶಮೂರ್ತಿ, ಡಾ.ಎನ್. ರಘು, ಡಾ.ಬಿ.ಡಿ. ಪಟೇಲ್, ಆಯೋಜನೆ: ಸಪ್ತಸ್ವರ ಸಂಗೀತ ವಿದ್ಯಾಲಯ, ಸ್ಥಳ: ಜೆ.ಎಸ್. ಎಸ್. ಪಬ್ಲಿಕ್ ಶಾಲೆ ಸಭಾಂಗಣ, ಬನಶಂಕರಿ 2ನೇ ಹಂತ, ಸಂಜೆ 6

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಆಧ್ಯಾ ಗೌತಮ್, ಅತಿಥಿಗಳು: ವೀಣಾಮೂರ್ತಿ ವಿಜಯ್, ಸತ್ಯನಾರಯಣರಾಜು, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ವಯಾಲಿಕಾವಲ್, ಸಂಜೆ 6.30

ರಾಘವೇಂದ್ರ ಸಾರ್ವಭೌಮರ 351ನೇ ಆರಾಧನೆ ಹಾಗೂ ಶ್ರೀಕೃಷ್ಣ ಜಯಂತಿ ಉತ್ಸವ: ದಾಸವಾಣಿ ಪ್ರಸ್ತುತಿ: ಪುತ್ತೂರು ನರಸಿಂಹನಾಯಕ್ ಮತ್ತು ಸಂಗಡಿಗರಿಂದ, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, ಸುಧೀಂದ್ರನಗರ, ಮಲ್ಲೇಶ್ವರ, ಸಂಜೆ 6.30

ವಚನಗಳಲ್ಲಿ ಹಸ್ತ, ಹೃದಯ ಹಾಗೂ ಶೂನ್ಯ ಸಂಪಾದನೆಯ ಪಥಗಳು‘ ಶೀರ್ಷಿಕೆಯ ಉಪನ್ಯಾಸ ಸರಣಿ: ಉಪನ್ಯಾಸ: ಎಚ್.ಎಸ್. ಶಿವಪ್ರಕಾಶ್, ವಿಷಯ: ವಚನಕಾರರಲ್ಲಿನ ತತ್ವಶಾಸ್ತ್ರ ಹಾಗೂ ಕಾವ್ಯದ ವಿಷಯದಲ್ಲಿ ಸಿದ್ಧ ಮತ್ತು ನಿರ್ಗುಣ ಕವಿಗಳನ್ನು ತೌಲನಿಕ ಚರ್ಚೆ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ, ಸಂಜೆ 6.30

ಕಮಲಮಣಿ ಕಾಮಿಡಿ ಕಲ್ಯಾಣ ನಾಟಕ ಪ್ರದರ್ಶನ: ರಚನೆ: ಎಸ್. ರಾಮನಾಥ, ಸಂಗೀತ: ಗಜಾನನ.ಟಿ. ನಾಯ್ಕ, ರಂಗವಿನ್ಯಾಸ: ಅರವಿಂದ ಕುಪ್ಲೀಕರ್, ನಿರ್ದೇಶನ: ಮಂಗಳಾ. ಎನ್., ಆಯೋಜನೆ: ಸಂಚಾರಿ ಥಿಯೇಟರ್, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 7

‘ಡಾ.ವಿಜಯ ರಾಘವೇಂದ್ರ ಪ್ರತಿಷ್ಠಾನ’ದ ಉದ್ಘಾಟನೆ, ವಿಜಯಶ್ರೀ, ವಿಜಯ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ಕುಂ. ವೀರಭದ್ರಪ್ಪ, ಅಧ್ಯಕ್ಷತೆ: ಡಾ.ಎಂ. ಅಣ್ಣಯ್ಯ ಕುಲಾಲ್, ದಿರೆನ್ ರಾಮ್ ಕುಮಾರ್, ಮನು ಬಳಿಗಾರ್, ಡಾ. ಆರ್.ಕೆ. ಸರೋಜ, ನಾ.ದಯಾನಂದ, ಆಯೋಜನೆ: ರಾಧಾ ಟಿ. ವಿಜಯ ರಾಘವೇಂದ್ರ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 9

ಕುಂ.ವೀರಭದ್ರಪ್ಪ

ಪಿಒಪಿ ಗಣೇಶ ನಿಯಂತ್ರಣಕ್ಕೆ ಕ್ರಮ

ಬೆಂಗಳೂರು: ‘ವಾರ್ಡ್‌ಗೊಂದು ಗಣೇಶ ವಿಷಯಕ್ಕೆ ಸಂಬಂಧಿಸಿದ ಈಗಲೇ ಏನೂ ನಿರ್ಧಾರ ತೆಗೆದುಕೊಂಡಿಲ್ಲ. ಸರ್ಕಾರ ನೀಡುವ ಆದೇಶವನ್ನು ಪಾಲಿಸಲಾಗುತ್ತದೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

‘ಪಾಲಿಕೆ ವ್ಯಾಪ್ತಿಯಲ್ಲಿ ಕಳೆದ ವರ್ಷ ರೂಪಿಸಿರುವ ನಿಯಮಗಳನ್ನು ಪರಿಶೀಲಿಸುತ್ತೇವೆ. ರಾಜ್ಯಮಟ್ಟದಲ್ಲಿ ನಡೆಯುವ ಸಭೆಯಲ್ಲಿ ಸರ್ಕಾರ ನೀಡುವ ನಿರ್ದೇಶನಗಳೇ ಅಂತಿಮ. ಅದರ ಅನುಸಾರ ಪಾಲಿಕೆ ಯೋಜನೆಗಳನ್ನು ರೂಪಿಸಿಕೊಂಡು ಕ್ರಮ ತೆಗೆದುಕೊಳ್ಳಲಾಗುತ್ತದೆ. ಈಗ ಯಾವುದೇ ತೀರ್ಮಾನ ತೆಗೆದುಕೊಳ್ಳಲು ಆಗುವುದಿಲ್ಲ’ ಎಂದು ಸುದ್ದಿಗಾರರಿಗೆ ಶನಿವಾರ ವಿವರ ನೀಡಿದರು.

ಪಿಒಪಿ ಮೂರ್ತಿಗಳನ್ನು ತಯಾರಿಸಬಾರದು, ಮಾರಾಟ ಮಾಡಬಾರದು ಎಂಬ ನಿಯಮ ಇದೆ. ಅದನ್ನು ಹೇಗೆ ನಿಯಂತ್ರಿಸಬೇಕು ಹಾಗೂ ಕ್ರಮ ಕೈಗೊಳ್ಳಬೇಕು ಎಂಬುದನ್ನು ಪ್ರತಿವರ್ಷದಲ್ಲಿ ಕಾರ್ಯಾಚರಣೆ ನಡೆಸಲಾಗುತ್ತದೆ. ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯೊಂದಿಗೆ ಜೊತೆಯಾಗಿ ಕಾರ್ಯ-ನಿರ್ವಹಿಸಲಾಗುತ್ತದೆ ಎಂದು ಹೇಳಿದರು.

ಮಾಲಿನ್ಯ ಮಂಡಳಿಯೂ ಪಿಒಪಿ ಮೂರ್ತಿಗಳನ್ನು ಪೂಜಿಸದಂತೆ ಜನರಿಗೆ ಅರಿವು ಮೂಡಿಸುತ್ತದೆ. ಅದರಿಂದಾಗುವ ಹಾನಿಯ ಬಗ್ಗೆ ಪ್ರಚಾರವನ್ನೂ ಮಾಡುತ್ತದೆ. ಅಲ್ಲದೆ, ಸ್ಥಳೀಯವಾಗಿ ಹೇಗೆ ವಿಸರ್ಜನೆ ಮಾಡಬೇಕು ಎಂಬುದರ ಬಗ್ಗೆ ಅರಿವು ಮೂಡಿಸುತ್ತದೆ. ಜನರು ಪಿಒಪಿ ಮೂರ್ತಿ ಹಾಗೂ ಹಾನಿಕಾರಕ ಬಣ್ಣಗಳ ಮೂರ್ತಿಗಳನ್ನು ಖರೀದಿಸಬಾರದು ಎಂದು ಮನವಿ ಮಾಡಿದರು.

‘ಕೆ.ಆರ್. ಮಾರುಕಟ್ಟೆಯಲ್ಲಿ ಬಯೊಗ್ಯಾಸ್ ಘಟಕ, ಶೌಚಾಲಯ ಇದೆ. ಅಲ್ಲಿ ಸಾಕಷ್ಟು ಸಮಸ್ಯೆ ಇದ್ದು, ಅದನ್ನು ಸರಿಪಡಿಸಲಾಗುತ್ತದೆ. ಘನತ್ಯಾಜ್ಯ ನಿರ್ವಹಣೆ ಬಗ್ಗೆ ಅಲ್ಲಿ ಸೂಕ್ತ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಲಾಗಿದೆ’ ಎಂದರು.

‘ಮಾರುಕಟ್ಟೆ ಕಟ್ಟಡದಲ್ಲಿ ಬಿರುಕು ಇಲ್ಲ. ಸ್ಮಾರ್ಟ್ ಸಿಟಿಯಿಂದ ದುರಸ್ತಿ ಮಾಡಲಾಗುತ್ತಿದೆ. ಕೆಲವು ಕಡೆ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ. ಸ್ಥಳೀಯರ ವಿರೋಧ ಇದೆ. ಈ ಬಗ್ಗೆ ಮಾತುಕತೆ ನಡೆಸಿ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ’ ಎಂದು ತಿಳಿಸಿದರು.

ಎಸಿಬಿ ಎಸ್ಪಿ ಉಮಾ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಪೊಲೀಸ್ ವರಿಷ್ಠಾಧಿಕಾರಿ-(ಎಸ್ಪಿ) ಉಮಾ ಪ್ರಶಾಂತ್ ಅವರನ್ನು ಚಿಕ್ಕಮಗಳೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ವರ್ಗಾವಣೆ ಮಾಡಲಾಗಿದೆ.

ಗುಪ್ತಚರ ಘಟಕದ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಲ್ದಂಡಿ ಅವರನ್ನು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ವರ್ಗಾವಣೆ ಮಾಡಲಾಗಿದೆ.

ಬೆಂಗಳೂರು ನಗರದ ಇನ್ನಷ್ಟು ಸುದ್ದಿಗಳು 9A,9B, 9C, 9D

ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ ಹೇಳಿಕೆ

‘ವಚನ ಸಾಹಿತ್ಯ ಯಾವುದಕ್ಕೂ ಕಮ್ಮಿ ಇಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ 12ನೇ ಶತಮಾನದ ಶರಣರ ವಚನ ಸಾಹಿತ್ಯ ಯಾವ ಪಾಶ್ಚಿಮಾತ್ಯ ಸಾಹಿತ್ಯಕ್ಕೂ ಕಡಿಮೆ ಇಲ್ಲ. ಈ ಕುರಿತು ಇನ್ನಷ್ಟು ತೌಲನಿಕ ಅಧ್ಯಯನದ ಅಗತ್ಯವಿದೆ ಎಂದು ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ ಎಂದು ಹೇಳಿದರು.

ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಜಾಗತಿಕ ಭಾಷೆಗಳ ಕೇಂದ್ರದ ಸಂಸ್ಥಾಪಕ ಅಧ್ಯಕ್ಷೆ ಸುಮನ್ ವೆಂಕಟೇಶ್ ಅವರ ‘ವಿಕ್ಟರ್ ಹ್ಯೂಗೋ ಮತ್ತು ಹಿಂದು ಫಿಲಾಸಫಿ’ ಕೃತಿ ಬಿಡುಗಡೆ ಮಾಡಿ ಜತ್ತಿ ಅವರು ಮಾತನಾಡಿದರು.

ಬಸವಣ್ಣನವರ 400 ವಚನಗಳು ಅಧ್ಯಾತ್ಮದ, ಅನುಭವದ ಕಣಜಗಳಾಗಿವೆ. ಅಲ್ಲಮ ಪ್ರಭುಗಳು ಬಯಲನ್ನೇ ಮುಕ್ತಿಯ ಮಾರ್ಗ ಎಂದು ಪ್ರತಿಪಾದಿಸಿದ್ದಾರೆ. ಪರಮಾತ್ಮನನ್ನು ಜಗದಗಲ, ಮುಗಿಲಗಲ ಎನ್ನುವ ಮೂಲಕ ದೇವರ ಆಳ, ಅಗಲ ಅಳೆಯಲು ಸಾಧ್ಯವಿಲ್ಲ. ಬದುಕೇ ಬಯಲು ಎಂದು ಪ್ರತಿಪಾದಿಸಿದ್ದಾರೆ. ನುಡಿದಂತೆ ನಡೆಯುವುದಕ್ಕೆ ನಡೆದಂತೆ ನುಡಿಯುವುದಕ್ಕೆ ಒತ್ತು ನೀಡಿದ್ದಾರೆ. ಆಡಂಬರವಿಲ್ಲದ ದೈವ ನಂಬಿದ ಅಕ್ಕಮಹಾದೇವಿಯಂತಹವರನ್ನು ವಿಶ್ವದ ಎಲ್ಲೂ ಕಾಣಲು ಸಾಧ್ಯವಿಲ್ಲ. ಈ ಕುರಿತು ಹೆಚ್ಚಿನ ಸಂಶೋಧನೆ ನಡೆಯಬೇಕಿದೆ ಎಂದು ಹೇಳಿದರು.

ಕುಲಪತಿ ಲಿಂಗರಾಜ ಗಾಂಧಿ ಅಧ್ಯಕ್ಷತೆ ವಹಿಸಿದ್ದರು. ಅಲಯನ್ಸ್ ಫ್ರಾಂಚೈಸ್ ನಿರ್ದೇಶಕ ಜೆ.ರಾ. ಕ್ರಿಶ್ಚಿಯನ್, ಶಾಸ್ತ್ರೀಯ ನೃತ್ಯಗಾರ್ತಿ ಲಕ್ಷ್ಮಿ ಗೋಪಾಲಸ್ವಾಮಿ, ಲೇಖಕಿ ಸುಮನ್ ವೆಂಕಟೇಶ್, ಜಾಗತಿಕ ಭಾಷೆಗಳ ಕೇಂದ್ರದ ಅಧ್ಯಕ್ಷೆ ಜ್ಯೋತಿ ವೆಂಕಟೇಶ್ ಉಪಸ್ಥಿತರಿದ್ದರು.

ಬೆಂಗಳೂರಿನಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ ಅವರು ಸುಮನ್ ವೆಂಕಟೇಶ್ ಅವರ 'ವಿಕ್ಟರ್ ಹ್ಯೂಗೋ ಮತ್ತು ಹಿಂದು ಫಿಲಾಸಪಿ' ಕೃತಿ ಬಿಡುಗಡೆ ಮಾಡಿದರು. ಶಾಸ್ತ್ರೀಯ ನೃತ್ಯಗಾರ್ತಿ ಲಕ್ಷ್ಮಿ ಗೋಪಾಲಸ್ವಾಮಿ, ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಲಿಂಗರಾಜ ಗಾಂಧಿ ಇದ್ದರು. – ಪ್ರಜಾವಾಣಿ ಚಿತ್ರ

ಅರಮನೆ ರಸ್ತೆಯಲ್ಲಿ ಕಾಮಗಾರಿ: ಮಾರ್ಗ ಬದಲು

ಬೆಂಗಳೂರು: ಅರಮನೆ ರಸ್ತೆಯಲ್ಲಿ ನೀರಿನ ಕೊಳವೆ ಜೋಡಣೆಗಾಗಿ ಟೆಂಡರ್ ಶ್ಯೂರ್ ಕಾಮಗಾರಿ ಆರಂಭವಾಗುತ್ತಿದ್ದು, ಈ ರಸ್ತೆಯಲ್ಲಿ ವಾಹನಗಳ ಸಂಚಾರಕ್ಕೆ ತಾತ್ಕಾಲಿಕ ನಿರ್ಬಂಧ ವಿಧಿಸಲಾಗಿದೆ.

ಅರಮನೆ ರಸ್ತೆಯಲ್ಲಿ ಸಂಚರಿಸಬೇಕಿದ್ದ ವಾಹನಗಳ ಓಡಾಟಕ್ಕೆ ಬದಲಿ ಮಾರ್ಗದ ವ್ಯವಸ್ಥೆ ಮಾಡಲಾಗಿದೆ.

‘ಬಸವೇಶ್ವರ ವೃತ್ತದಿಂದ (ಚಾಲುಕ್ಯ ವೃತ್ತ) ಮೈಸೂರು ಬ್ಯಾಂಕ್ ವೃತ್ತದ ಕಡೆಗೆ ಹೋಗುವ ವಾಹನಗಳು, ಶೇಷಾದ್ರಿ ರಸ್ತೆಯ ಮಹಾರಾಣಿ ಕಾಲೇಜು ಮೇಲ್ಸೇತುವೆಯ ಎಡಕ್ಕೆ ತಿರುವು ಪಡೆದು, ಕೆ.ಆರ್. ವೃತ್ತ ಹಾಗೂ ಪೋಸ್ಟ್ ಆಫೀಸ್ ರಸ್ತೆ ಮೂಲಕ ಸಾಗಬಹುದು’ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

‘ಮೈಸೂರು ಬ್ಯಾಂಕ್ ವೃತ್ತದಿಂದ ಬಸವೇಶ್ವರ ವೃತ್ತದ ಕಡೆಗೆ ಸಂಚರಿಸುವ ವಾಹನಗಳು, ಸೆಂಟ್ರಲ್ ಕಾಲೇಜು ಬಳಿಯಿಂದ ಶೇಷಾದ್ರಿ ರಸ್ತೆಯ ಕೆಳ ಸೇತುವೆ ಮೂಲಕ ಹಾದು ಹೋಗಬಹುದು’ ಎಂದೂ ಹೇಳಿದ್ದಾರೆ.

ಅಂಧ ಬಾಲಕನಿಗೆ ಮರಳಿದ ದೃಷ್ಟಿ

ಬೆಂಗಳೂರು: ಅಂಧ ಪ್ರಮಾಣಪತ್ರ ಹೊಂದಿದ್ದ ಕಲಬುರಗಿಯ 16 ವರ್ಷದ ಬಾಲಕನಿಗೆ ಇಲ್ಲಿನ ಶಂಕರ ಕಣ್ಣಿನ ಆಸ್ಪತ್ರೆಯ ವೈದ್ಯರು ಅತ್ಯಾಧುನಿಕ ತಂತ್ರಜ್ಞಾನದ ನೆರವಿನಿಂದ ದೃಷ್ಟಿ ಮರಳಿಸಿದ್ದಾರೆ.

‘ಬಾಲಕನಿಗೆ ಮೂರನೇ ವರ್ಷ ದಿಂದಲೇ ದೃಷ್ಟಿ ಸಮಸ್ಯೆ ಕಾಣಿಸಿಕೊಂಡಿತ್ತು. ಕುಟುಂಬವು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದ ರಿಂದ ಸಕಾಲಕ್ಕೆ ಚಿಕಿತ್ಸೆ ಸಾಧ್ಯವಾಗಿರಲಿಲ್ಲ. ವರ್ಷ ಕಳೆದಂತೆ ಸಮಸ್ಯೆ ಗಂಭೀರ ಸ್ವರೂಪ ಪಡೆದುಕೊಂಡಿತ್ತು. ತಪಾಸಣೆಯ ಬಳಿಕ ‘ವಾನ್-ಹಿಪ್ಪೆಲ್–ಲಿಂಡೌ’ ಎಂಬ ಆನುವಂಶಿಕ ರೋಗ ದೃಢಪಟ್ಟಿತು. ಬಾಲಕನ ಪಾಲಕರು, ಇಬ್ಬರು ಸಹೋದರರು ಇದೇ ರೋಗಕ್ಕೆ ಕೆಲ ವರ್ಷಗಳ ಹಿಂದೆ ಮೃತಪಟ್ಟಿದ್ದರು. ಬಾಲಕನಿಗೆ ಲೇಸರ್ ಥೆರಪಿಯೊಂದಿಗೆ ಸಂಕೀರ್ಣ ಶಸ್ತ್ರಚಿಕಿತ್ಸೆಯನ್ನು ಉಚಿತವಾಗಿ ನಡೆಸಲಾಯಿತು’ ಎಂದು ಆಸ್ಪತ್ರೆ ತಿಳಿಸಿದೆ.

‘ಶಸ್ತ್ರಚಿಕಿತ್ಸೆಯ ನಂತರ 2 ವಾರಗಳಲ್ಲಿ ಬಾಲಕನಿಗೆ ದೃಷ್ಟಿ ಮರಳಿದೆ. ಈಗ ಎಲ್ಲರಂತೆ ಜೀವನ ನಡೆಸುತ್ತಿದ್ದಾನೆ. ನವಜಾತ ಶಿಶುಗಳು ಮತ್ತು ಮುಂಬರುವ ಸಂತತಿಯಲ್ಲಿ ರೋಗದ ಆರಂಭಿಕ ಪತ್ತೆಗೆ ಆನುವಂಶಿಕ ವಿಶ್ಲೇಷಣೆ ಹಾಗೂ ಪ್ರಸವಪೂರ್ವ ರೋಗನಿರ್ಣಯ ಪರೀಕ್ಷೆಗಳು ಮುಖ್ಯ’ ಎಂದು ಶಸ್ತ್ರಚಿಕಿತ್ಸೆ ನಡೆಸಿದ ಡಾ. ಮಹೇಶ್ ಷಣ್ಮುಗಂ ಪ್ರಕಟಣೆಯಲ್ಲಿ ಹೇಳಿದ್ದಾರೆ.

ಪಾಕ್‌ಗೆ ಸೇರಿದ ಮೀನುಗಾರಿಕೆ ದೋಣಿ ಜಪ್ತಿ

ಅಹಮದಾಬಾದ್ (ಪಿಟಿಐ): ಗಡಿ ಭದ್ರತಾ ಪಡೆಯು (ಬಿಎಸ್‌ಎಫ್) ಗುಜರಾತ್‌ನ ಕಚ್ ಜಿಲ್ಲೆಯಲ್ಲಿನ ಭಾರತ–ಪಾಕಿಸ್ತಾನ ಗಡಿ ಹತ್ತಿರದಲ್ಲಿರುವ ಹರಾಮಿ ನಾಲೆ ಬಳಿ ಪಾಕಿಸ್ತಾನಕ್ಕೆ ಸೇರಿದ ಎರಡು ಮೀನುಗಾರಿಕೆ ದೋಣಿಗಳನ್ನು ಶನಿವಾರ ಜಪ್ತಿ ಮಾಡಿದೆ.

‘ಬಿಎಸ್‌ಎಫ್ ತಂಡವು ಮೂರು ದಿನಗಳಲ್ಲಿ ಪಾಕಿಸ್ತಾನಕ್ಕೆ ಸೇರಿದ ಒಟ್ಟು ಒಂಬತ್ತು ದೋಣಿಗಳನ್ನು ಜಪ್ತಿ ಮಾಡಿದೆ. ಒಬ್ಬ ಮೀನುಗಾರನನ್ನೂ ಬಂಧಿಸಿದೆ’ ಎಂದು ಪ್ರಕಟಣೆ ತಿಳಿಸಿದೆ.

‘ಗಂಗಾ ಕಲ್ಯಾಣ’ದಲ್ಲಿ ಅಕ್ರಮದ್ದೇ ಪಾರಮ್ಯ!

● ರಾಜೇಶ್ ರೈ ಚಟ್ಲ

ಬೆಂಗಳೂರು: ವಿವಿಧ ಅಭಿವೃದ್ಧಿ ನಿಗಮಗಳ ಸಹಾಯಧನದಲ್ಲಿ ಬಡ ಹಾಗೂ ಮಧ್ಯಮ ವರ್ಗದ ರೈತರ ಜಮೀನಿಗೆ ಉಚಿತವಾಗಿ ಕೊಳವೆಬಾವಿ ಕೊರೆಸಿಕೊಡುವ ಸರ್ಕಾರದ ‘ಗಂಗಾ ಕಲ್ಯಾಣ’ ಯೋಜನೆಯಲ್ಲಿ ಅಕ್ರಮದ್ದೇ ಪಾರಮ್ಯ. ಕೊಳವೆಬಾವಿ ಕೊರೆಯುವ ಹೆಸರಿನಲ್ಲಿ ಫಲಾನುಭವಿಯ ಪಾಲಿನ ‘ಅನುದಾನ’ಕ್ಕೆ ಶೇ 30ರಿಂದ 40ರಷ್ಟು ಕನ್ನ ಕೊರೆದಿರುವ ನೂರಾರು ಪ್ರಕರಣಗಳು ಬಹಿರಂಗವಾಗಿವೆ.

ಯೋಜನೆಯಡಿ ಟೆಂಡರ್ ಕರೆಯದೆ ಕಾಮಗಾರಿಗೆ ಪರವಾನಗಿ, ಬೋಗಸ್ ಬಿಲ್ ನೀಡಿ ಹಣ ಲೂಟಿ ರಾಜಾರೋಷವಾಗಿ ನಡೆದಿದೆ. ಅನುದಾನ ಡ್ರಿಲ್ಲರ್ಸ್, ಪಂಪ್ ಸೆಟ್ ಪೂರೈಕೆದಾರರು, ಪಟ್ಟಭದ್ರ ಹಿತಾಸಕ್ತಿಗಳು, ಅಧಿಕಾರಿಗಳು, ಜನಪ್ರತಿನಿಧಿಗಳು, ಮಧ್ಯವರ್ತಿಗಳ ಪಾಲಾಗಿದೆ. ಕೊಳವೆಬಾವಿ ಕೊರೆಯುವ ಡ್ರಿಲ್ಲರ್‌ಗಳೇ ಇಲ್ಲಿ ವಸೂಲಿಗಾರರಾಗಿದ್ದಾರೆ. ಕೊಳವೆಬಾವಿ ಕೊರೆಸುವ ಕುರಿತು ಅವರೇ ಪ್ರಮಾಣಪತ್ರ ಕೊಡುವುದರಿಂದ, ತೋಟಕ್ಕೆ ಕಳ್ಳರನ್ನೇ ಕಾವಲಿಟ್ಟಂತಾಗಿದೆ!

ರೈತರಿಗೆ ಕಳಪೆ ಗುಣಮಟ್ಟದ ಸಾಮಗ್ರಿ ನೀಡಿ ಹೆಚ್ಚು ಬಿಲ್ ಮಾಡಿಕೊಂಡಿರುವುದು, ಕೊಳವೆಬಾವಿಗಳನ್ನು ಕಡಿಮೆ ಆಳಕ್ಕೆ ಕೊರೆಸಿದ್ದರೂ, ಹೆಚ್ಚು ಆಳಕ್ಕೆ ಕೊರೆಸಿರುವುದಾಗಿ ದಾಖಲೆ ಸೃಷ್ಟಿಸಿ ಬಿಲ್ ಮಾಡಿಕೊಂಡಿರುವುದು, ಕೊಳವೆಬಾವಿಯನ್ನೇ ಕೊರೆಸದೆ ಬಿಲ್ ಮಾಡಿಕೊಂಡಿರುವುದು ಸೇರಿದಂತೆ ಹಲವು ರೀತಿಯ ಅಕ್ರಮ ಎಸಗಿ ಕೋಟಿ ಕೋಟಿ ಭ್ರಷ್ಟಾಚಾರ ನಡೆಸಿರುವುದು ಈಗಾಗಲೇ ಪತ್ತೆಯಾಗಿದೆ. ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ನಗರ, ಗ್ರಾಮಾಂತರ, ರಾಮನಗರದಲ್ಲಿ ಎರಡು ಸಾವಿರ ಅಡಿ ಕೊರೆದರೂ ನೀರು ಸಿಗಲ್ಲ. ಆದರೆ, ನೀರು ಬಂದಿದೆ ಎಂದು ದಾಖಲೆ ನೀಡಿ ಹಣ ಗುಳುಂ ಮಾಡಲಾಗಿದೆ. ಕೊಳವೆಬಾವಿ ಕೊರೆಯುವ ಕಂಪನಿಗಳ ಹಿತಾಸಕ್ತಿ ಇದರ ಹಿಂದಿದೆ ಎಂದು ಶಾಸಕರೇ ಪಕ್ಷಾತೀತವಾಗಿ ವಿಧಾನಮಂಡಲದಲ್ಲಿ ಧ್ವನಿ ಎತ್ತಿದ್ದಾರೆ.

‘2015 ರಿಂದ 2019ರವರೆಗೆ ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ 2,381, ವಾಲ್ಮೀಕಿ ಅಭಿವೃದ್ಧಿ ನಿಗಮದಡಿ 2,344, ಹಿಂದುಳಿದ ಅಭಿವೃದ್ಧಿ ನಿಗಮದಡಿ 863, ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಡಿ 325 ಸೇರಿ ಒಟ್ಟು 5,913 ಕೊಳವೆಬಾವಿ ಕೊರೆಯಿಸಲಾಗಿದೆ. ಈ ಎಲ್ಲ ಕೊಳವೆಬಾವಿಗಳು ಕಾರ್ಯರೂಪಕ್ಕೆ ಬಂದಿದ್ದರೆ, 20 ಸಾವಿರ ಎಕರೆಗೆ ನೀರುಣಿಸಬಹುದಾಗಿತ್ತು. ಆದರೆ, ಬೇಜವಾಬ್ದಾರಿ ಹಾಗೂ ಅಕ್ರಮಗಳಿಂದ 2 ಸಾವಿರ ಕೊಳವೆಬಾವಿಗಳು ನೀರನ್ನೇ ಕಂಡಿಲ್ಲ’ ಎನ್ನುತ್ತಾರೆ ನಿಗಮವೊಂದರ ಹಿರಿಯ ಅಧಿಕಾರಿ.

‘ಯೋಜನೆಯಡಿ 2019-20, 2020-21ರ ಸಾಲಿನಲ್ಲಿ 14,577 ಕೊಳವೆಬಾವಿ ಕೊರೆಸಲು ₹ 431 ಕೋಟಿ ಮೊತ್ತದ ಟೆಂಡರ್ ಕರೆಯಲಾಗಿದೆ. ಈ ಟೆಂಡರ್ ಪ್ರಕ್ರಿಯೆಯಲ್ಲಿ ನಿಯಮಗಳನ್ನು ಗಾಳಿಗೆ ತೂರಿ ಗುತ್ತಿಗೆದಾರರಿಗೆ ಅನುಕೂಲವಾಗುವಂತೆ ಅಕ್ರಮ ನಡೆದಿದೆ. ಅರ್ಹರಿಲ್ಲದ ಗುತ್ತಿಗೆದಾರರಿಗೆ ಕೊಳವೆಬಾವಿ ಕೊರೆಸುವ ಗುತ್ತಿಗೆ ನೀಡಲಾಗಿದೆ’ ಎಂದು ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ಆರೋಪಿಸಿದ್ದಾರೆ. ಅಷ್ಟೇ ಅಲ್ಲ, ಯೋಜನೆಯ ಹೆಸರಿನಲ್ಲಿ ಶೋಷಿತ ವರ್ಗಗಳ ಹಣದ ಲೂಟಿಯ ಬಗ್ಗೆ ಚರ್ಚೆ ನಡೆಸಿ ಕ್ರಮ ಕೈಗೊಳ್ಳಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಮಿತಿ ಹಿಂದೇಟು ಹಾಕುತ್ತಿದೆ ಎಂದು ಸಮಿತಿಯ ಸಭೆಗೆ ಹಾಜರಾಗದೆ ಪ್ರತಿಭಟಿಸಿದ್ದಾರೆ.

ಯೋಜನೆಯಲ್ಲಿ ನಡೆಯುತ್ತಿರುವ ಬ್ರಹ್ಮಾಂಡ ಭ್ರಷ್ಟಾಚಾರದ ವಿಷಯ ವಿಧಾನಪರಿಷತ್ತಿನಲ್ಲಿ ಪ್ರತಿಧ್ವನಿಸಿದ ಬಳಿಕ, ಅಕ್ರಮ, ಲೋಪದೋಷಗಳನ್ನು ಕಂಡುಹಿಡಿಯಲು ಬಿಜೆಪಿಯ ವೈ.ಎ. ನಾರಾಯಣಸ್ವಾಮಿ ನೇತೃತ್ವದಲ್ಲಿ ವಿಧಾನ ಪರಿಷತ್ತಿನ ವಿಶೇಷ ಸದನ ಸಮಿತಿ ರಚಿಸಲಾಗಿದೆ. ಹಲವು ಜಿಲ್ಲೆಗಳಿಗೆ ತೆರಳಿ ಯೋಜನೆಯ ಅನುಷ್ಠಾನದ ಬಿಲದೊಳಗೆ ನುಸುಳಿರುವ ಈ ಸಮಿತಿ, ಹಣ ನುಂಗಿರುವ ಹಲವು ಪ್ರಕರಣಗಳನ್ನು ಈ ಪತ್ತೆ ಮಾಡಿದೆ. 2015ನೇ ಸಾಲಿನಿಂದ ಇಲ್ಲಿಯವರೆಗೆ 1,630 ಕೊಳವೆ ಬಾವಿಗಳಿಗೆ ಪಂಪ್‌ಸೆಟ್ ಪೂರೈಸುವ ಕೆಲಸವೇ ಆಗಿಲ್ಲ. 474 ಕೊಳವೆಬಾವಿಗಳು ವಿದ್ಯುದ್ದೀಕರಣವನ್ನೇ ಕಂಡಿಲ್ಲ. ಒಟ್ಟು ಯೋಜನೆಯಲ್ಲಿ ಶೇ 35ರಷ್ಟು ಕೆಲಸವೂ ಪೂರ್ಣವಾಗಿಲ್ಲ. ಅರೆಬರೆ ಕೆಲಸವಾಗಿದ್ದು, ಗುಣಮಟ್ಟದ ಸಲಕರಣೆಯಿಂದ ಫಲಾನುಭವಿಗಳು ವಂಚಿತರಾಗಿರುವುದನ್ನು ಸಮಿತಿ ಗುರುತಿಸಿದೆ.

ಅಕ್ರಮ ತಡೆಗೆ ‘ಟರ್ನ್ ಕೀ’ ಪದ್ಧತಿ

ಯೋಜನೆಯಲ್ಲಿನ ಅಕ್ರಮ ತಡೆಗೆ ಸರ್ಕಾರ 'ಟರ್ನ್ ಕೀ' ಜಾರಿಗೆ ತಂದಿದೆ. ಹಿಂದೆ ಇದ್ದ ‘ಕನ್ಸೋರ್ಟಿಯಂ‘ ಪದ್ಧತಿಯಡಿ ಕೊಳವೆ ಬಾವಿ ಕೊರೆಯಲು, ಪಂಪ್‌ಸೆಟ್ ಪೂರೈಸಲು ಹಾಗೂ ವಿದ್ಯುದ್ದೀಕರಣಕ್ಕೆ ಪ್ರತ್ಯೇಕ ಟೆಂಡರ್‌ಗಳನ್ನು ಕರೆಯಬೇಕಿತ್ತು. ಇದರಿಂದ ಸಾಮರ್ಥ್ಯ ಇಲ್ಲದ ಏಜೆನ್ಸಿಗಳು ಟೆಂಡರ್ ಪಡೆದು ಕೊಳವೆಬಾವಿ ಕೊರೆಯದೆ ನಕಲಿ ಬಿಲ್ ಮೂಲಕ ಹಣ ಗುಳುಂ ಮಾಡುತ್ತಿದ್ದವು. ಹೊಸ ಪದ್ಧತಿಯಡಿ ಕೆಟಿಟಿಪಿ ಕಾಯ್ದೆಯಡಿ ಟೆಂಡರ್ ನಡೆಸಿ ಕೊಳವೆಬಾವಿ, ಪಂಪ್‌ಸೆಟ್ ಅಳವಡಿಕೆ ಹಾಗೂ ವಿದ್ಯುದ್ದೀಕರಣ ಕೆಲಸಗಳನ್ನು ಒಟ್ಟಿಗೆ ನಿರ್ವಹಿಸಲು ಟೆಂಡರ್ ಕರೆಯಲಾಗುತ್ತದೆ. ಇದರಿಂದ ಸಾಮರ್ಥ್ಯ ಹೊಂದಿರುವ 15-20 ಅರ್ಹ ಗುತ್ತಿಗೆದಾರರು ಟೆಂಡರ್‌ನಲ್ಲಿ ಪಾಲ್ಗೊಳ್ಳುತ್ತಿದ್ದಾರೆ’ ಎನ್ನುತ್ತಾರೆ ಸಮಾಜ ಕಲ್ಯಾಣ ಇಲಾಖೆಯ ಹಿರಿಯ ಅಧಿಕಾರಿ.

‘ಹಿಂದಿನ ವ್ಯವಸ್ಥೆಯಲ್ಲಿ ಅಂದಾಜು 70 ಗುತ್ತಿಗೆದಾರರಿಗೆ ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶವಾಗುತ್ತಿತ್ತು. ಹೀಗಾಗಿ, ಸರ್ಕಾರದ ಈ ಆದೇಶವನ್ನು ವಿರೋಧಿಸಿ ಕೆಲವರು ಹೈಕೋರ್ಟ್ ಮೊರೆ ಹೋಗಿದ್ದರು. ಆದರೆ, ಸರ್ಕಾರದ ಆದೇಶವನ್ನು ಹೈಕೋರ್ಟ್ ಎತ್ತಿಹಿಡಿದಿದೆ. ಕನ್ಸೋರ್ಟಿಯಂ ಪದ್ಧತಿಯಡಿ ಕೆಲವು ಗುತ್ತಿಗೆದಾರರು ಒಂದು ಜಿಲ್ಲೆಯಲ್ಲಿ 2-3 ತಾಲ್ಲೂಕುಗಳನ್ನಾಗಿ ವಿಂಗಡಿಸಿ ಪ್ರತ್ಯೇಕ ಪ್ಯಾಕೇಜ್ ಮಾಡಿಕೊಂಡು ಕೊಳವೆಬಾವಿ ಕೊರೆಯುತ್ತಿದ್ದರು. ಹೊಸ ಪದ್ಧತಿಯಡಿ ಪ್ರತಿ ಜಿಲ್ಲೆಗೆ ಒಂದು ಪ್ಯಾಕೇಜ್‌ನಂತೆ 30 ಪ್ಯಾಕೇಜ್ ಮಾಡಿ ಟೆಂಡರ್ ಪ್ರಕ್ರಿಯೆ ನಡೆಸಲಾಗುತ್ತಿದೆ. ಇದರಿಂದ ಅಕ್ರಮಕ್ಕೆ ತಡೆಬಿದ್ದಿದೆ’ ಎನ್ನುವುದು ಅವರ ಸಮರ್ಥನೆ.

ಅಧಿಕಾರಿಗಳ ದರ್ಬಾರ್: ನಿಗಮಗಳು ಬರ್ಬಾದ್

● ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ರಾಜ್ಯದಲ್ಲಿರುವ ಜಾತಿವಾರು ನಿಗಮಗಳ ಪೈಕಿ ಹೆಚ್ಚಿನ ಸಂಸ್ಥೆಗಳಿಗೆ ಸಿಗುತ್ತಿರುವ ಅನುದಾನ ತೀರಾ ಕಡಿಮೆ. ಬೆರಳೆಣಿಕೆಯ ನಿಗಮಗಳಿಗೆ ಮಾತ್ರ ನೂರಾರು ಕೋಟಿ ರೂಪಾಯಿ ಲಭಿಸುತ್ತಿದೆ. ದೊಡ್ಡ ನಿಗಮಗಳ ಪೈಕಿ ಹೆಚ್ಚಿನವು ಅಧಿಕಾರಿಗಳ ದರ್ಬಾರಿನ ಭಾರಕ್ಕೆ ನಲುಗುತ್ತಿವೆ.

ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಭೋವಿ ಅಭಿವೃದ್ಧಿ ನಿಗಮ, ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಸೇರಿದಂತೆ ಕೆಲವು ನಿಗಮಗಳಲ್ಲಿ ಆಯಕಟ್ಟಿನ ಹುದ್ದೆಗಳಲ್ಲಿ ಕುಳಿತ ಅಧಿಕಾರಿಗಳ ಕೈವಾಡದಿಂದಲೇ ಹಗರಣಗಳು ನಡೆದ ಉದಾಹರಣೆಗಳಿವೆ. ಕೆಲವು ಸಂಸ್ಥೆಗಳಲ್ಲಿ ನಿರಂತರವಾಗಿ ಅಕ್ರಮಗಳು ನಡೆಯುತ್ತಿದ್ದರೂ ಆಡಳಿತವನ್ನು ಸರಿದಾರಿಗೆ ತರುವ ಪ್ರಯತ್ನಗಳೇ ನಡೆದಿಲ್ಲ.

ಜಿಲ್ಲಾ ಮಟ್ಟದ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುವಾಗ ಭ್ರಷ್ಟಾಚಾರದ ಆರೋಪ ಹೊತ್ತವರು, ಲಂಚ ಪ್ರಕರಣ, ಅಕ್ರಮ ಆಸ್ತಿ ಸಂಪಾದನೆ ಆರೋಪದಡಿ ಭ್ರಷ್ಟಾಚಾರ ನಿಗ್ರಹ ದಳದಿಂದ (ಎಸಿಬಿ) ಬಂಧಿತರಾದ ಅಧಿಕಾರಿಗಳೇ ವರ್ಷ ಕಳೆಯುವುದರೊಳಗೆ ಇಂತಹ ನಿಗಮಗಳ ವ್ಯವಸ್ಥಾಪಕ ನಿರ್ದೇಶಕ, ಪ್ರಧಾನ ವ್ಯವಸ್ಥಾಪಕ ಹುದ್ದೆಗೇರುತ್ತಾರೆ. ಆಡಳಿತ ಪಕ್ಷದ ಪ್ರಭಾವಿಗಳು ಮತ್ತು ‘ಥೈಲಿ’ಯ ನೆರವಿನಲ್ಲಿ ಹೀಗೆ ಆಯಕಟ್ಟಿನ ಹುದ್ದೆಗಳಿಗೆ ಬಂದು ಕೂರುವ ಅಧಿಕಾರಿಗಳು, ಕೆಲವೇ ದಿನಗಳೊಳಗೆ ನಿಗಮಗಳ ಖಜಾನೆಯನ್ನೇ ಬರಿದು ಮಾಡುತ್ತಿದ್ದಾರೆ.

ಕೆಲವು ನಿಗಮಗಳಲ್ಲಿ ಒಬ್ಬರೇ ಅಧಿಕಾರಿಗೆ ಒಂದಕ್ಕಿಂತ ಹೆಚ್ಚು ಹುದ್ದೆಗಳ ಜವಾಬ್ದಾರಿ ನೀಡಲಾಗುತ್ತಿದೆ. ಫಲಾನುಭವಿಗಳ ಆಯ್ಕೆಪಟ್ಟಿ, ಅನುದಾನ ಬಿಡುಗಡೆ, ಮಂಜೂರಾತಿ ಎಲ್ಲ ಕಡತಗಳಿಗೂ ಒಬ್ಬ ಅಧಿಕಾರಿಯೇ ಸಹಿ ಮಾಡುವಂತಹ ಪರಿಸ್ಥಿತಿಯೇ ಭೋವಿ ನಿಗಮದಲ್ಲಿ ಹತ್ತಾರು ಕೋಟಿ ರೂಪಾಯಿಗಳ ಅಕ್ರಮ ನಡೆಯಲು ಕಾರಣ ಎಂಬುದನ್ನು ಎಸಿಬಿ ತನಿಖೆ ಹೊರಗೆಡವಿದೆ. ಇತರ ಕೆಲವು ನಿಗಮಗಳಲ್ಲೂ ಪರಿಸ್ಥಿತಿ ಭಿನ್ನವಾಗಿಲ್ಲ.

ನಿಗಮಗಳ ಆಡಳಿತ ನಿರ್ವಹಣೆಗೆ ಅಧ್ಯಕ್ಷರು, ನಿರ್ದೇಶಕರನ್ನು ನೇಮಕ ಮಾಡಲಾಗುತ್ತದೆ. ಆದರೆ, ರಾಜಕೀಯ ಪಕ್ಷಗಳಿಂದ ನೇಮಕಗೊಂಡವರನ್ನು ಮನವೊಲಿಸಿ ತಮ್ಮ ಹಿಡಿತಕ್ಕೆ ತೆಗೆದುಕೊಳ್ಳುತ್ತಾರೆ. ನಂತರದ ದಿನಗಳಲ್ಲಿ ಅವರೂ ನಿಗಮಗಳಲ್ಲಿ ನಡೆಯುವ ಹಗರಣ, ಅಕ್ರಮಗಳ ಜತೆ ಕೈಜೋಡಿಸಿದ ಉದಾಹರಣೆಗಳೇ ಹೆಚ್ಚು ಎಂಬ ಆರೋಪಗಳಿವೆ.

ಹೊರಗುತ್ತಿಗೆ ಆಟ: ಬಹುತೇಕ ನಿಗಮಗಳಲ್ಲಿ ಅಗತ್ಯ ಸಂಖ್ಯೆಯ ಕಾಯಂ ಸಿಬ್ಬಂದಿ ಇಲ್ಲ. ಜಿಲ್ಲಾ ವ್ಯವಸ್ಥಾಪಕರ ಕಚೇರಿ, ನಿಗಮಗಳ ಕೇಂದ್ರ ಕಚೇರಿಯಲ್ಲಿ ಹೊರಗುತ್ತಿಗೆ ನೌಕರರೇ ಅಧಿಕ ಸಂಖ್ಯೆಯಲ್ಲಿದ್ದಾರೆ. ನೆರವು ಕೇಳಿ ನಿಗಮದ ಕಚೇರಿಗೆ ಬರುವ ಜನರನ್ನು ಹೊರ ಗುತ್ತಿಗೆ ನೌಕರರು ಶೋಷಿಸುತ್ತಿರುವ ದೂರುಗಳೂ ಹೆಚ್ಚುತ್ತಿವೆ.

ದಲ್ಲಾಳಿಗಳ ಕೂಟದ್ದೇ ಆಟ

ರಾಜ್ಯದಲ್ಲಿ ಜಾತಿವಾರು ನಿಗಮಗಳಲ್ಲಿ ಹೆಚ್ಚಿನವು ದಲ್ಲಾಳಿಗಳ ಕೂಟದ ಕಪಿಮುಷ್ಟಿಯಲ್ಲಿ ಸಿಲುಕಿವೆ. ಕೆಲವು ಕಡೆ ಅಧಿಕಾರಿಗಳೇ ದಲ್ಲಾಳಿಗಳ ಕೂಟವನ್ನು ಕಟ್ಟಿಕೊಂಡಿದ್ದರೆ, ಇನ್ನು ಕೆಲವು ನಿಗಮಗಳಲ್ಲಿ ದಲ್ಲಾಳಿಗಳೇ ಅಧಿಕಾರಿಗಳ ನಿಯೋಜನೆಯನ್ನೂ ನಿರ್ಧರಿಸುವಷ್ಟರ ಮಟ್ಟಿಗೆ ಬೆಳೆದು ನಿಂತಿದ್ದಾರೆ.

ಭೂ ಒಡೆತನ, ಗಂಗಾ ಕಲ್ಯಾಣ, ಸ್ವಯಂ ಉದ್ಯೋಗಕ್ಕೆ ನೆರವು ನೀಡುವಂತಹ ದೊಡ್ಡ ಮೊತ್ತದ ಸಹಾಯಧನ ಇರುವ ಯೋಜನೆಗಳಲ್ಲಿ ದಲ್ಲಾಳಿಗಳ ಹಸ್ತಕ್ಷೇಪ ವ್ಯಾಪಕವಾಗಿದೆ. ಕೆಲವು ನಿಗಮಗಳಲ್ಲಿ ಕಚೇರಿಗಳ ಪ್ರವೇಶಕ್ಕೂ ದಲ್ಲಾಳಿಗಳ ಶಿಫಾರಸು ಬೇಕು ಎಂಬ ವಾತಾವರಣ ಇದೆ. ನಿಗಮಗಳ ಆಯಕಟ್ಟಿನ ಹುದ್ದೆಗೆ ಬರುವ ಅಧಿಕಾರಿಗಳು ಪ್ರತಿ ಜಿಲ್ಲೆಗೂ ತಮ್ಮದೇ ಏಜೆಂಟರನ್ನು ನಿಯೋಜಿಸಿಕೊಂಡು, ಅವರ ಮೂಲಕವೇ ಫಲಾನುಭವಿಗಳಿಗೆ ‘ಗಾಳ’ ಹಾಕುತ್ತಿದ್ದಾರೆ.

‘ಕೆಲವು ನಿಗಮಗಳಲ್ಲಿ ಹೆಚ್ಚಿನ ದಲ್ಲಾಳಿಗಳು ಅದೇ ಸಮುದಾಯಕ್ಕೆ ಸೇರಿದವರಾಗಿರುತ್ತಾರೆ. ಸಮುದಾಯದ ಸ್ಥಳೀಯ ನಾಯಕರನ್ನೂ ಅಧಿಕಾರಿಗಳು ಪಳಗಿಸಿ, ದಲ್ಲಾಳಿಗಳ ಕೆಲಸಕ್ಕೆ ನಿಯೋಜಿಸಿಕೊಂಡಿರುವ ಉದಾಹರಣೆಗಳಿವೆ. ಅಕ್ರಮ ಪ್ರಶ್ನಿಸಲು ಬಂದವರೇ ಮುಂದೆ ಮಧ್ಯವರ್ತಿಗಳಾಗಿರುವುದೂ ಗಮನಕ್ಕೆ ಬಂದಿದೆ’ ಎನ್ನುತ್ತಾರೆ ಎಸಿಬಿ ಅಧಿಕಾರಿಗಳು.

ಯಾರೋ ಫಲಾನುಭವಿ, ಇನ್ಯಾರಿಗೋ ಸೌಕರ್ಯ

ಬೆಳಗಾವಿ: ’2018ರಲ್ಲಿ ಗಂಗಾ ಕಲ್ಯಾಣ ಯೋಜನೆಗೆ ನನ್ನನ್ನು ಆಯ್ಕೆ ಮಾಡಲಾಗಿತ್ತು. ಕಾರ್ಯಾದೇಶ ಪತ್ರವನ್ನೂ ನೀಡಲಾಗಿತ್ತು. ಆದರೆ, ಮುಂದೊಂದು ದಿನ ನನಗೆ ಬಂದ ಬೋರ್‌ವೆಲ್ ರದ್ದಾಗಿ, ಬೇರೊಬ್ಬರಿಗೆ ಹೋಗಿದೆ ಎಂದು ತಿಳಿಸಿದರು. ಇದಕ್ಕೆ ಯಾರು ಕಾರಣ, ಯಾರನ್ನು ಕೇಳಬೇಕು, ಎಲ್ಲಿಗೆ ಹೋಗಬೇಕು ಎಂದು ನನಗೆ ಗೊತ್ತಿಲ್ಲ. ಹಾಗಾಗಿ, ಕೈಚೆಲ್ಲಿ ಸುಮ್ಮನಿದ್ದೇನೆ...’- ಚನ್ನಮ್ಮನ ಕಿತ್ತೂರು ತಾಲ್ಲೂಕಿನ ನಿಂಗಪ್ಪ ಆದಪ್ಪ ಮಕ್ಕಣ್ಣವರ ನೋವಿದು.

ಭೂ ಒಡೆತನ, ಗಂಗಾ ಕಲ್ಯಾಣ, ಐರಾವತ ಹಾಗೂ ವಿವಿಧ ಸ್ವಯಂ ಉದ್ಯೋಗ ಯೋಜನೆಗಳ ಫಲಾನುಭವಿಗಳ ಆಯ್ಕೆಯಲ್ಲಿ ಹಲವು ಕಡೆ ಇಂಥ ಉದಾಹರಣೆಗಳಿವೆ. ಆರಂಭದ ಫಲಾನುಭವಿ ಒಬ್ಬರಾದರೆ ಸೌಲಭ್ಯ ಮುಟ್ಟುವುದು ಇನ್ನೊಬ್ಬರಿಗೆ.

‘ಗಂಗಾ ಕಲ್ಯಾಣ ಯೋಜನೆಯಡಿ ಆಯ್ಕೆಯಾದ ಫಲಾನುಭವಿಯೊಬ್ಬರು 2019ರಲ್ಲಿ ಕೊಳವೆಬಾವಿ ಕೊರೆಯಿಸಿದ್ದರು. ಅವರಿಗೆ ವಿದ್ಯುತ್ ಸಂಪರ್ಕ ಹಾಗೂ ಪರಿಕರಗಳು 2022ರಲ್ಲಿ ಬಂದಿವೆ. ಹೀಗೆ ತಡವಾಗುವುದರಿಂದ ಕೆಲವರು ಯೋಜನೆಗೆ ಆಯ್ಕೆಯಾಗಿದ್ದನ್ನೇ ಮರೆತಿದ್ದಾರೆ. ರೈತರು ಇಂಥ ಸಮಸ್ಯೆಗಳೊಂದಿಗೆ ಬರುತ್ತಾರೆ. ಆದರೆ, ಫಲಾನುಭವಿಗಳನ್ನು ಶಾಸಕರೇ ಆಯ್ಕೆ ಮಾಡುವುದರಿಂದ ನಾವೂ ಅಸಹಾಯಕರಾಗಿದ್ದೇವೆ’ ಎಂದು ರಾಜ್ಯ ರೈತ ಸಂಘ ಹಾಗೂ ಹಸಿರುಸೇನೆ ಜಿಲ್ಲಾ ಘಟಕದ ಕಾರ್ಯಾಧ್ಯಕ್ಷ ರವಿ ಸಿದ್ದಮ್ಮನವರ ಹೇಳುತ್ತಾರೆ.

ರೈತರು ಪೂರಕ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಿದರೂ, ಯೋಜನೆ ಮಂಜೂರು ಮಾಡುತ್ತಿಲ್ಲ. ಶಾಸಕರು ಯಾರ ಹೆಸರು ಹೇಳುತ್ತಾರೆ ಎಂಬುದು ಮುಖ್ಯವೇ ಹೊರತು; ನಿಜವಾದ ಫಲಾನುಭವಿ ಅಲ್ಲ.

‘ಪರಿಶಿಷ್ಟ ಜಾತಿಯವರ ಅಭಿವೃದ್ಧಿಗೆ ನಿಗಮಗಳಿದ್ದರೂ, ಆ ಸಮುದಾಯದವರು ಅಂಬೇಡ್ಕರ್ ನಿಗಮದ ಸೌಲಭ್ಯಗಳನ್ನು ಪಡೆಯುವುದು ನಡೆದಿದೆ. ಬಹುಪಾಲು ಎಲ್ಲ ಅಭಿವೃದ್ಧಿ ನಿಗಮಗಳೂ ‘ಕೆಲವರ ಸ್ವತ್ತು’ ಎಂಬಂತಾಗಿವೆ’ ಎನ್ನುವುದು ಹುಬ್ಬಳ್ಳಿಯ ಪ್ರೇಮನಾಥ ಚಿಕ್ಕತುಂಬಳ ಮತ್ತು ಗುರುನಾಥ ಉಳ್ಳಿಕಾಶಿ ಬೇಸರ ವ್ಯಕ್ತಪಡಿಸುತ್ತಾರೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಿದ ಅಂಬೇಡ್ಕರ್ ಅಭಿವೃದ್ಧಿ ನಿಗಮದ ಧಾರವಾಡ ಜಿಲ್ಲಾ ವ್ಯವಸ್ಥಾಪಕಿ ಪ್ರಿಯದರ್ಶಿನಿ ಹಿರೇಮಠ, ‘ಕೆಲವೊಮ್ಮೆ ಫಲಾನುಭವಿ ಈ ಹಿಂದೆ ಯಾವುದಾದರೂ ಯೋಜನೆಯ ಲಾಭ ಪಡೆದಿದ್ದರೆ ಅವರನ್ನು ಮರಳಿ ಆಯ್ಕೆ ಮಾಡಲು ಆಗುವುದಿಲ್ಲ. ಅಂಥ ಸಂದರ್ಭದಲ್ಲಿ ಯೋಜನೆ ಅನ್ಯರ ಪಾಲಾಯಿತು ಎಂದು ಭಾವಿಸುತ್ತಾರೆ’ ಎಂದು ಹೇಳುತ್ತಾರೆ.

ಬಡವರ ಹಣ: ಬಲಾಢ್ಯರ ಕಲ್ಯಾಣ!

ಒಂದನೇ ಪುಟದಿಂದ...

ಅನುದಾನ ಹೆಚ್ಚಿದಂತೆ ಈ ನಿಗಮಗಳಲ್ಲಿ ಭ್ರಷ್ಟಾಚಾರ, ದಲ್ಲಾಳಿಗಳ ಕಾಟವೂ ಹೆಚ್ಚಿದೆ. ಈ ನಿಗಮಗಳ ವಿವಿಧ ಯೋಜನೆಗಳ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ನಡೆಯುವ ತಾಲ್ಲೂಕು ಮಟ್ಟದಿಂದ ಹಿಡಿದು ಕೇಂದ್ರ ಕಚೇರಿಯವರೆಗೂ ಭ್ರಷ್ಟಾಚಾರ ವ್ಯಾಪಿಸಿಕೊಂಡಿದೆ. ಹಿಂದಿನ ವರ್ಷಗಳಲ್ಲಿ ಯೋಜನೆಗಳ ಲಾಭ ಪಡೆಯಲು ‘ಕೈ ಬಿಸಿ’ ಮಾಡುವುದು ಕಡ್ಡಾಯ ಎಂಬ ವಾತಾವರಣ ಇತ್ತು. ಈಗ ಜಾತಿವಾರು ನಿಗಮಗಳಲ್ಲಿ ವಿವಿಧ ಯೋಜನೆಗಳ ಅನುಷ್ಠಾನಕ್ಕೆ ಒದಗಿಸಿದ ಅನುದಾನ ಯಾರ ಕಣ್ಣಿಗೂ ಬೀಳದಂತೆ ಖಾಲಿಯಾಗುತ್ತಿದೆ. ಆಯಕಟ್ಟಿನ ಹುದ್ದೆಗಳಲ್ಲಿರುವ ಅಧಿಕಾರಿಗಳು ಸೃಷ್ಟಿಸುವ ನಕಲಿ ಫಲಾನುಭವಿಗಳ ಪಟ್ಟಿಯ ಹೆಸರಿನಲ್ಲಿ ನಿಗಮಗಳ ತಿಜೋರಿಗಳು ಬರಿದಾಗುತ್ತಿವೆ.

ಸಾಲು ಸಾಲು ಹಗರಣ: ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ 2016 ಮತ್ತು 2017ರ ಅವಧಿಯಲ್ಲಿ ಸ್ವಯಂ ಉದ್ಯೋಗಕ್ಕೆ ನೆರವು ನೀಡುವ ಯೋಜನೆಯಲ್ಲಿ ನಕಲಿ ಫಲಾನುಭವಿಗಳನ್ನು ಸೃಷ್ಟಿಸಿ ಹತ್ತಾರು ಕೋಟಿ ರೂಪಾಯಿ ಲೂಟಿ ಮಾಡಲಾಗಿತ್ತು. ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಭೂ ಒಡೆತನ ಯೋಜನೆಯಲ್ಲಿ 2018 ಮತ್ತು 2019ರ ಅವಧಿಯಲ್ಲಿ ₹ 50 ಕೋಟಿಗೂ ಹೆಚ್ಚು ಭ್ರಷ್ಟಾಚಾರ ನಡೆದಿರುವುದನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಬಯಲಿಗೆಳೆದಿತ್ತು.

ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ದಶಕಗಳ ಹಿಂದೆ ಆಟೊ ರಿಕ್ಷಾ ಖರೀದಿಗೆ ಸಾಲ ಮತ್ತು ಸಹಾಯಧನ ನೀಡುವ ಯೋಜನೆಯ ದುರ್ಬಳಕೆಗೆ ಕುಖ್ಯಾತಿ ಪಡೆದಿತ್ತು. ಈಗ ವಿವಿಧ ನಿಗಮಗಳಲ್ಲಿರುವ ಭೂ ಒಡೆತನ, ಸ್ವಯಂ ಉದ್ಯೋಗ, ಐರಾವತ ಯೋಜನೆಗಳಲ್ಲಿ ಬೃಹತ್ ಪ್ರಮಾಣದ ಭ್ರಷ್ಟಾಚಾರ ನಡೆಯುತ್ತಿರುವುದನ್ನು ಎಸಿಬಿ, ಲೋಕಾಯುಕ್ತದಲ್ಲಿ ದಾಖಲಾಗುತ್ತಿರುವ ದೂರುಗಳೇ ಜಾಹೀರು ಮಾಡುತ್ತಿವೆ.

‘ಕೆಲವು ನಿಗಮಗಳಲ್ಲಿ ನಿರಂತರವಾಗಿ ಭ್ರಷ್ಟಾಚಾರ ನಡೆಯುತ್ತಿದೆ. ಭೂ ಒಡೆತನ, ಗಂಗಾ ಕಲ್ಯಾಣ, ಸ್ವಯಂ ಉದ್ಯೋಗ ಯೋಜನೆಯಡಿ ಅರ್ಜಿ ಸಲ್ಲಿಕೆಯಿಂದ ಅನುದಾನ ಬಿಡುಗಡೆಯವರೆಗಿನ ಕೆಲಸಗಳನ್ನು ಮಾಡುವುದಕ್ಕಾಗಿಯೇ ಏಜೆಂಟರುಗಳಿದ್ದಾರೆ. ವ್ಯವಸ್ಥಿತವಾಗಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ಈ ನಿಗಮಗಳ ಅನುದಾನವನ್ನು ಲೂಟಿ ಮಾಡುತ್ತಿದ್ದಾರೆ’ ಎನ್ನುತ್ತಾರೆ ಇಂತಹ ಕೆಲವು ಪ್ರಕರಣಗಳ ತನಿಖೆ ನಡೆಸಿರುವ ಎಸಿಬಿಯ ಹಿರಿಯ ಅಧಿಕಾರಿಗಳು.

2022-23ರಲ್ಲಿ ವಿವಿಧ ನಿಗಮಗಳಿಗೆ ಹಂಚಿಕೆಯಾಗಿರುವ ಅನುದಾನ (₹ ಕೋಟಿಗಳಲ್ಲಿ)

ಡಾ.ಬಿ.ಆರ್. ಅಂಬೇಡ್ಕರ್ ಪರಿಶಿಷ್ಟ ಜಾತಿಗಳ ಅಭಿವೃದ್ಧಿ ನಿಗಮ	118.50
ಭೋವಿ ಅಭಿವೃದ್ಧಿ ನಿಗಮ	107
ತಾಂಡಾ ಅಭಿವೃದ್ಧಿ ನಿಗಮ	50
ಆದಿಜಾಂಬವ ಅಭಿವೃದ್ಧಿ ನಿಗಮ	148.69
ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ	70
ಎಸ್‌ಸಿ, ಎಸ್‌ಟಿ ಅಲೆಮಾರಿ ಅರೆ ಅಲೆಮಾರಿ ಅಭಿವೃದ್ಧಿ ಕೋಶ	50
ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ	100
ವಿಶ್ವಕರ್ಮ ಅಭಿವೃದ್ಧಿ ನಿಗಮ	10
ಸವಿತಾ ಸಮಾಜ ಅಭಿವೃದ್ಧಿ ನಿಗಮ	5
ಮಡಿವಾಳ ಅಭಿವೃದ್ಧಿ ನಿಗಮ	6
ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ	11
ಉಪ್ಪಾರ ಅಭಿವೃದ್ಧಿ ನಿಗಮ	7.5
ಕಾಡುಗೊಲ್ಲ ಅಭಿವೃದ್ಧಿ ನಿಗಮ	3
ಹಿಂದುಳಿದ ವರ್ಗಗಳ ಅಲೆಮಾರಿ, ಅರೆ ಅಲೆಮಾರಿ ಅಭಿವೃದ್ಧಿ ನಿಗಮ	6
ಒಕ್ಕಲಿಗ ಅಭಿವೃದ್ಧಿ ನಿಗಮ	100
ವೀರಶೈವ ಅಭಿವೃದ್ಧಿ ನಿಗಮ	100
ಮರಾಠಾ ಸಮುದಾಯ ಅಭಿವೃದ್ಧಿ ನಿಗಮ	170
ಆರ್ಯವೈಶ್ಯ ಅಭಿವೃದ್ಧಿ ನಿಗಮ	5
ಬ್ರಾಹ್ಮಣ ಅಭಿವೃದ್ಧಿ ಮಂಡಳಿ	3.89

ಲೆಕ್ಕಪರಿಶೀಲನೆ, ಪಾರದರ್ಶಕತೆಯ ಕೊರತೆ

‘ರಾಜ್ಯದಲ್ಲಿರುವ ಜಾತಿ, ಸಮುದಾಯ ಕೇಂದ್ರಿತ ನಿಗಮಗಳಲ್ಲಿ ಅನುದಾನದ ಬಳಕೆ, ಯೋಜನೆಗಳ ಅನುಷ್ಠಾನದ ಕುರಿತು ನಿಯಮಿತವಾಗಿ ಲೆಕ್ಕಪರಿಶೀಲನೆಯೇ ನಡೆಯುತ್ತಿಲ್ಲ. ಹೀಗಾಗಿ ಯಾವ ನಿಗಮದಲ್ಲಿ ಏನಾಗುತ್ತಿದೆ ಎಂಬುದು ಸರ್ಕಾರಕ್ಕೂ ತಿಳಿಯುತ್ತಿಲ್ಲ’ ಎನ್ನುತ್ತಾರೆ ಇಂತಹ ಕೆಲವು ಪ್ರಕರಣಗಳ ತನಿಖೆ ನಡೆಸಿರುವ ಎಸಿಬಿಯ ಹಿರಿಯ ಅಧಿಕಾರಿಗಳು.

ಬಹುತೇಕ ನಿಗಮಗಳ ಆಡಳಿತದಲ್ಲಿ ಪಾರದರ್ಶಕತೆಯೇ ಇಲ್ಲ. ಯೋಜನೆಗಳ ಫಲಾನುಭವಿಗಳ ಆಯ್ಕೆಯಿಂದ ಅನುದಾನ ಬಿಡುಗಡೆಯವರೆಗೆ ಎಲ್ಲವನ್ನೂ ಗೋಪ್ಯವಾಗಿ ನಡೆಸಲಾಗುತ್ತಿದೆ. ಕೆಲವು ನಿಗಮಗಳ ಕಚೇರಿಗಳಿಗೆ ಸಾರ್ವಜನಿಕರಿಗೆ ಪ್ರವೇಶವನ್ನೂ ನಿರ್ಬಂಧಿಸಿರುವುದು ತನಿಖೆ ವೇಳೆ ಕಂಡುಬಂದಿದೆ.

ಗುಂಡಣ್ಣ

25 ವರ್ಷಗಳ ಹಿಂದೆ

ಗುರುವಾರ, 7-8-1997

● ಸಂಸತ್ತಿನಲ್ಲಿ ವಿಮಾ ಮಸೂದೆ ವಾಪಸು

ನವದೆಹಲಿ, ಆಗಸ್ಟ್ 6 (ಪಿಟಿಐ, ಯುಎನ್‌ಐ)– ವಿಮಾ ಕ್ಷೇತ್ರದಲ್ಲಿ ವಿದೇಶಿ ಕಂಪೆನಿಗಳಿಗೆ ಅವಕಾಶ ನೀಡುವುದಕ್ಕೆ ಭಾರತೀಯ ಜನತಾ ಪಕ್ಷ ಮತ್ತು ಎಡಪಕ್ಷಗಳು ತೀವ್ರ ವಿರೋಧ ವ್ಯಕ್ತಪಡಿಸಿದ್ದರಿಂದ ಲೋಕಸಭೆಯಲ್ಲಿ ಇಂದು ಸಂಯುಕ್ತ ರಂಗ ಸರ್ಕಾರಕ್ಕೆ ಇರುಸುಮುರುಸು ಉಂಟಾಯಿತಲ್ಲದೇ ವಿಮೆ ನಿಯಂತ್ರಣ ಪ್ರಾಧಿಕಾರವನ್ನು ವಾಪಸು ಪಡೆಯಬೇಕಾಯಿತು.

ಹಣಕಾಸು ಸಚಿವ ಪಿ. ಚಿದಂಬರಂ ಅವರು ಸೋಮವಾರ ಮಂಡಿಸಿದ ಈ ಮಸೂದೆಯನ್ನು ಇಂದು ಮತಕ್ಕೆ ಹಾಕಬೇಕಾಗಿತ್ತು. ಆದರೆ ಈ ವಿಷಯದಲ್ಲಿ ಒಮ್ಮತ ಮೂಡಿಸಲು ಸರ್ಕಾರ ಯತ್ನಿಸುವುದಾಗಿ ಪ್ರಕಟಿಸಿದ ಐ.ಕೆ. ಗುಜ್ರಾಲ್ ಅವರು ಮಸೂದೆ ವಾಪಸು ಪಡೆಯುವುದಾಗಿ ಹೇಳಿದರು.

50 ವರ್ಷಗಳ ಹಿಂದೆ

ಸೋಮವಾರ, 7-8-1972

● 150 ಲಕ್ಷ ಟನ್ ರಾಬಿ ಬೆಳೆ ಹೆಚ್ಚಿಸಲು ಬೃಹತ್ ಯೋಜನೆ

ಮುಂಬೈ, ಆಗಸ್ಟ್ 6– ರಾಷ್ಟ್ರದಲ್ಲಿ ಈಗ ಉಂಟಾಗಿರುವ ಅಭಾವ ಪರಿಸ್ಥಿತಿಯಿಂದ ಸಂಭವಿಸಬಹು-ದಾದ ಬಿಕ್ಕಟ್ಟನ್ನು ನಿವಾರಿಸಲು 140 ರಿಂದ 150 ಟನ್ನುಗಳಷ್ಟು ರಾಬಿ ಬೆಳೆ ಹೆಚ್ಚಿಸಲು ಹಿಂದೆಂದೂ ಕೈಗೊಳ್ಳದಂಥ ಭಾರಿ ಆಹಾರೋತ್ಪಾದನೆ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರ ಕೈಗೊಳ್ಳಲಿದೆ.

ಮಹಾರಾಷ್ಟ್ರ ಮುಖ್ಯಮಂತ್ರಿ ವಿ.ಪಿ. ನಾಯಕ್ ಅವರ ಜತೆ ಎರಡು ಗಂಟೆಗಳ ಮಾತುಕತೆ ನಡೆಸಿದ ಬಳಿಕ ಈ ವಿಷಯವನ್ನು ಕೇಂದ್ರ ಆಹಾರ ಮತ್ತು ಕೃಷಿ ಖಾತೆ ರಾಜ್ಯ ಸಚಿವ ಎ.ಪಿ. ಶಿಂಧೆ ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ಆಗಸ್ಟ್ 7, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯಣ- ವರ್ಷ ಋತು ತಿಥಿ: (ಶ್ರಾವಣ ಶುಕ್ಲ) ದಶಮಿ ಗಂ. 23-51 ನಕ್ಷತ್ರ: ಅನುರಾಧ ಗಂ. 16-30 ಯೋಗ: ಬ್ರಹ್ಮ ಗಂ. 10-02, ಕರಣ: ತೈತಿಲ ಗಂ. 13-05 ಕರ್ಕಾಟಕ ಮಾಸದ 21 ನೇ ದಿನ.
ರಾಹುಕಾಲ: ಸಾಯಂಕಾಲ 04:30 – 06:00 ಸೂರ್ಯೋದಯ: 06-20 ಸೂರ್ಯಾಸ್ತ : 06-52 ಮುಸ್ಲಿಂ ದಿನಾಂಕ : 08 ಮೊಹರಮ್
ದಿನ ವಿಶೇಷ : ತೀಶಾಬೀಬ್ (ಜ್ಯೂಯಿಷ್)
ಅದೃಷ್ಟ ಸಂಖ್ಯೆ: 1, 6

ಮೇಷ: ನಿಮ್ಮ ಕೌಶಲ್ಯವನ್ನು ತೋರಲು ಹೆಚ್ಚಿನ ಅವಕಾಶಗಳು ಈ ದಿನ ನಿಮಗೆ-ದುರಾಗಲಿದೆ. ಅಂದುಕೊಂಡಿರುವ ಕೆಲಸಗಳನ್ನು ಉತ್ತಮವಾಗಿ ನೆರವೇರಿವು-ದರಿಂದ ನೆಮ್ಮದಿ ಇರುವುದು. ವಿಪರೀತ ಖರ್ಚು ಸಂಭವಿಸಬಹುದು.

ವೃಷಭ: ಅಧಿಕಾರಿಗಳಿಗೆ ವಿಧೇಯತೆಯಿಂದ ಇರುವ ನಿಮ್ಮ ಗುಣ ಇಷ್ಟವಾಗುವುದು. ಶೀತ ಸಂಬಂಧಿತ ಅನಾರೋಗ್ಯ ಎದುರಾಗಬಹುದು. ವ್ಯಾವಹಾರಿಕ ಜೀವನದಲ್ಲಿ ಅನಗತ್ಯ ಚಿಂತೆಗಳನ್ನು ಮೈಮೇಲೆ ಎಳೆದುಕೊಳ್ಳಬೇಡಿ.

ಮಿಥುನ: ಕಟ್ಟಡಗಳ ಬಾಡಿಗೆಯಿಂದಾಗಿ ಆರ್ಥಿಕವಾಗಿ ಅಭಿವೃದ್ಧಿ ಕಂಡುಬರುವುದು. ಯಾವ ಕೆಲಸದಲ್ಲೂ ಅಡೆ ತಡೆಗಳೇನೂ ಇರದು. ಗೃಹ ಸಾಮಾಗ್ರಿ ಖರೀದಿಯಿಂದ ಖರ್ಚು ಬರಲಿದೆ. ದಿನಸಿ ವ್ಯಾಪಾರಸ್ಥರಿಗೆ ಲಾಭ.

ಕರ್ಕಾಟಕ: ಹೊಸ ಬದುಕನ್ನು ಆರಂಭಿಸಲು ಅವಕಾಶದ ಬಾಗಿಲು ನಿಮಗಾಗಿ ತೆರೆದಂತಾಗುವುದು. ಕಬ್ಬಿಣ ಅಥವಾ ಗ್ಲಾಸ್ ಗಳಿಂದ ಗಾಯಗಳಾಗುವ ಲಕ್ಷಣಗಳಿವೆ. ಸಂದಿಗ್ಧ ಪರಿಸ್ಥಿತಿಗಳನ್ನು ಧೈರ್ಯದಿಂದ ಎದುರಿಸಿ.

ಸಿಂಹ: ಸೃಜನಶೀಲ ಕೆಲಸದ ಯೋಜನೆಯನ್ನು ಮುಂದುವರಿಸಲು ಇದು ಶುಭದಿನ. ನಿಮ್ಮ ಸಮಯದ ಹೊಂದಾಣಿಕೆ ಮತ್ತು ಅನುಕೂಲತೆಯ ಮೇಲೆ ಹೊಸ ಕೆಲಸಗಳನ್ನು ಒಪ್ಪಿಕೊಳ್ಳುವ ತೀರ್ಮಾನವನ್ನು ಮಾಡಿ.

ಕನ್ಯಾ: ವೃತ್ತಿಯಲ್ಲಿ ನಿಮ್ಮ ಅನುಭವ ಹಾಗು ಪರಿಶ್ರಮ ಸೂಕ್ತ ಸಮಯದಲ್ಲಿ ಬೆಳಕಿಗೆ ಬರಲಿದೆ. ಅದರಿಂದಾಗಿ ವಿದೇಶಯಾನ ಮಾಡುವ ಯೋಗ ಬರಬಹುದು. ಅವಿವಾಹಿತರ ಮನೋಕಾಮನೆಗಳು ಪೂರ್ಣಗೊಳ್ಳುವ ದಿನ.

ತುಲಾ: ಯಾವುದೇ ಬದಲಾವಣೆಗೆ ಇಂದು ಸಮಂಜಸ ದಿನವಾಗಿರುವುದಿಲ್ಲ. ಕೊಡು ಕೊಳ್ಳುವ ವ್ಯವಹಾರಗಳಲ್ಲಿ ಲಾಭ-ನಷ್ಟದ ಎರಡೂ ಪರಿಚಯವು ಆಗುವುದು. ವೃತ್ತಿಯಲ್ಲಿ ಉನ್ನತಿ ತೋರಿಬಂದರೂ ವಿಘ್ನ ಭೀತಿ ಇರುತ್ತದೆ.

ವೃಶ್ಚಿಕ: ವೈಜ್ಞಾನಿಕ ಹಾಗೂ ತಾಂತ್ರಿಕ ಕ್ಷೇತ್ರದಲ್ಲಿರುವವರು ಸೋಲನ್ನು ಒಪ್ಪಿಕೊಳ್ಳುವ ಮನಸ್ಥಿತಿಯನ್ನು ರೂಢಿಸಿಕೊಳ್ಳಿ. ವಿದೇಶ ವ್ಯವಹಾರಗಳಿಂದ ಹೆಚ್ಚಿನ ಲಾಭವನ್ನು ಅಪೇಕ್ಷಿಸಬಹುದು. ಹಳದಿ ಬಣ್ಣವು ಅದೃಷ್ಟವನ್ನು ತರಲಿದೆ.

ಧನು: ದೈನಂದಿನ ಕೆಲಸಗಳೆಲ್ಲ ನಿರಾತಂಕವಾಗಿ ಸಾಗಲಿದೆ. ವ್ಯವಹಾರದಲ್ಲಿ ನುರಿತವರ ಸಲಹೆಗಳನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ಕೌಟುಂಬಿಕ ಅಭಿವೃದ್ಧಿಯ ವಿಚಾರದಲ್ಲಿ ನಿಮ್ಮ ಆಸೆ ಈಡೇರುವುದು.

ಮಕರ: ನೀವಿಂದು ಸ್ನೇಹಿತರಿಂದ ಅಪೇಕ್ಷಿಸುವ ಸಹಕಾರವು ಸಿಗಲಿದೆ. ಬಂಧುಗಳ ಮನೆಯ ಸತ್ಕಾರ ಕೂಟಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಿರಿ. ಆಟಿಕೆಗಳ ಮಾರಾಟದವರಿಗೆ ಉತ್ತಮ ಮಾರಾಟ ಹಾಗೂ ಲಾಭ.

ಕುಂಭ: ಅಧಿಕಾರದ ದುರ್ಬಳಕೆಯಂತಹ ತಪ್ಪುಗಳು ನಿಮ್ಮಿಂದ ಈ ದಿನ ನಡೆಯಬಹುದು. ಮನೆ ಕಟ್ಟುವ ವಿಚಾರದಲ್ಲಿ ಅಥವಾ ನವೀಕರಿಸುವ ವಿಚಾರದಲ್ಲಿ ಮನೆಯ ಹಿರಿಯರೊಂದಿಗೆ ಗಂಭೀರವಾದ ಚರ್ಚೆಯನ್ನು ನಡೆಸಿ.

ಮೀನ: ದಿನದಿಂದ ದಿನಕ್ಕೆ ವಿಚಾರವನ್ನು ಬದಲಿಸುವುದು ಸರಿಯಲ್ಲ. ಒಂದೇ ವಿಷಯದಲ್ಲಿ ಸರ್ವ ಪ್ರಯತ್ನವಿರಲಿ. ಅದರ ಫಲವಾಗಿ ಕೆಲಸದ ಒತ್ತಡವನ್ನು ಸಮರ್ಥವಾಗಿ ನಿಭಾಯಿಸುವ ಧೈರ್ಯ ಮತ್ತು ಸಾಮರ್ಥ್ಯ ಬರಲಿದೆ.

ಪದಬಂಧ 5042

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಯೋಗವಿದ್ದರೆ ಮಾತ್ರ ಅಗಲುವಿಕೆ! (3)
3.ಪಂಜನ್ನು ಹಚ್ಚಿದಾಗ ಕಾಣಿಸಿದ ಹಕ್ಕಿಗೂಡು (3)
6.ರೀತಿಯೊಡನೆ ಬರುವ ಜೋಡುನುಡಿ (3)
7.ಇಬ್ಬಂದಿಯೇನಿಲ್ಲ! ಕಚೇರಿಯ ನೌಕರ ವರ್ಗ! (3)
8.ವಿರಳವಾಗಿರುವ ನಲ್ಮೆ (3)
9.ಚಿತೆಯೊಳಗೆ ಶೂನ್ಯವಿದ್ದಾಗ ಈ ಯೋಚನೆ! (2)
10.ಬದಿಯಲ್ಲಿರುವ ಜೈನ ದೇವಾಲಯ (3)
12.ತೀರಾ ದೂರವಿರುವ ದಡ! (2)
13.ಬಿನ್ನಹ ಹೀಗೆ ಬಂದಿದೆ (3)
14.ರಾಜನ ದರ್ಬಾರು (3)
15.ನಗ ಧರಿಸಿಕೊಂಡು ನೋಡಿರುವ ಪಟ್ಟಣ (3)
17.ಕುಂಬಾರನ ಚಕ್ರವಿದು (3)
18.ಸಿದ್ಧತೆಯನ್ನು ಹೀಗೆನ್ನಿ (3)

ಮೇಲಿಂದ ಕೆಳಕ್ಕೆ

1.ಕೆಂಗಲ್ ಹನುಮಂತಯ್ಯ ನಿರ್ಮಿಸಿದ ಭವ್ಯ ಕಟ್ಟಡ (5)
2.ಗರಿ ಹಿಡಿದವನ ಹಿರಿಮೆ! (3)
3.ದೀವಟಿಗೆ ಇಲ್ಲಿ ಕಾಣುತ್ತಿದೆ (2)
4.ವಿಲಾಸಪ್ರಿಯತೆಯಿದು (4)
5.ಮಂದಿ ಹತ್ತಿರವಿರುವ ಸೂಕರ (2)
9.ಹರುಕು ಬಟ್ಟೆ ಇಲ್ಲಿದೆ (2)
10.ಬಡವರ ನಾಡಿನಲ್ಲಿ ಆವರಿಸಿದ ಕ್ಷಾಮ (2)
11.ವಿರಮಿಸಿಕೊಳ್ಳುವ ಮನೆಯಿದು (5)
12.ಚುರುಕಾದ ಗಮನ (4)
13.ಸರಸದ ವಿರುದ್ಧ ಪದ (3)
14.ಮೋಸಗಾರನೆಂದು ಹೆಸರು ಪಡೆದ ಪ್ರಾಣಿ (2)
15.ಓದಲೆಂದು ಬರೆದ ಪತ್ರ! (2)



5041ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸೂಕ್ಷ್ಮದರ್ಶಕ 3.ಕುಲಾವಿ
5.ರಸಕವಳ 7.ಸಫಲ
8.ನಿರಪರಾಧಿ 10.ಉಪೇಕ್ಷೆ
11.ಹೊಸಜೀವನ 14.ಮಜೂರಿ
15.ಹೆರಿಗೆಮನೆ

ಮೇಲಿಂದ ಕೆಳಕ್ಕೆ:
1.ಸೂಕರ 2.ದಶಕ
4.ವಿಪುಲ 6.ವಕ್ತಾರ
7.ಸಮಾಧಿ 8.ನಿರೀಕ್ಷೆ
9.ರಾಯಸ 10.ಉಗಮ
12.ಜೇರಿಗೆ 13.ನಮೂನೆ

ಸುಡೊಕು 5428

	4				7			
8			1			2		7
		3		8	4		5	
3		6						
	8			1				5
1		4	3		8		6	
	7			6				
2		8	4		3			1
				2		8		6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5427 ಸುಡೊಕು

3	6	7	8	2	9	5	4	1
5	9	4	1	6	7	8	2	3
1	2	8	5	4	3	6	9	7
8	4	1	6	3	2	7	5	9
6	3	5	9	7	8	2	1	4
9	7	2	4	5	1	3	8	6
7	5	3	2	9	4	1	6	8
4	8	6	7	1	5	9	3	2
2	1	9	3	8	6	4	7	5

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಭರ್ತಿಯತ್ತ ಲಿಂಗನಮಕ್ಕಿ ಜಲಾಶಯ ● ಭಾಗಮಂಡಲದ ತ್ರಿವೇಣಿ ಸಂಗಮದಲ್ಲಿ ನೀರಿನ ಪ್ರಮಾಣ ಹೆಚ್ಚಳ

ನಿಲ್ಲದ ಮಳೆ ಅಬ್ಬರ: ಜನಜೀವನ ಅಸ್ತವ್ಯಸ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ, ಕೊಡಗು, ಹಾಸನ ಜಿಲ್ಲೆಯಲ್ಲಿ ಶನಿವಾರವೂ ಮಳೆ ಅಬ್ಬರಿಸಿದ್ದರೆ, ಉತ್ತರ ಕನ್ನಡದಾದ್ಯಂತ ಆರ್ಭಟ ಕೊಂಚ ತಗ್ಗಿದೆ. ಮೈಸೂರು ಭಾಗ ಮತ್ತು ಕಲ್ಯಾಣ ಕರ್ನಾಟಕದಲ್ಲಿ ಮಳೆ ಕಡಿಮೆ ಆಗಿದೆ.

ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ದಿನವಿಡೀ ಧಾರಾಕಾರ ಮಳೆಯಾಯಿತು. ಸೇತುವೆಗಳಿಗೆ ಹಾನಿ ಆಗಿರುವುದರಿಂದ ಸುಳ್ಯ ತಾಲ್ಲೂಕಿನ ಕೆಲ ಪ್ರದೇಶಗಳು ಸಂಪರ್ಕ ಕಡಿತಗೊಂಡಿದ್ದು, ಜನಜೀವನ ಇನ್ನೂ ಸಹಜ ಸ್ಥಿತಿಗೆ ಮರಳಿಲ್ಲ. 47 ಮಂದಿಯನ್ನು ಕಾಳಜಿ ಕೇಂದ್ರಗಳಿಗೆ ಸ್ಥಳಾಂತರಿಸಲಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಹೊರನಾಡು ಸಮೀಪ ಹೊಸನೆಲ ಸಂಪರ್ಕ ರಸ್ತೆ ಹಾಳಾಗಿದೆ. ಶೃಂಗೇರಿ ತಾಲ್ಲೂಕಿನ ನೆಮ್ಮಾರಿನ ಎಸ್ಟೇಟ್‌ನಲ್ಲಿ ಧರೆ ಕುಸಿದಿದೆ.

ಕಡಲು ಪ್ರಕ್ಷುಬ್ಧಗೊಂಡಿದ್ದು ಮೀನುಗಾರರು ಸಮುದ್ರಕ್ಕಿಳಿಯಬಾರದು ಮತ್ತು ಕರಾವಳಿ ಜಿಲ್ಲೆಗಳಲ್ಲಿ ಆ.7ರಂದು ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ.

ಕೊಡಗು ಜಿಲ್ಲೆಯಲ್ಲಿ ಇನ್ನೂ 5 ದಿನ ಭಾರಿ ಮಳೆಯಾಗುವ ಮುನ್ಸೂಚನೆ ನೀಡಿದೆ. ಗಾಳಿಯಬ್ಬರವೂ ಹೆಚ್ಚಾಗಿದ್ದು, ಹಲವೆಡೆ ಮರಗಳು, ವಿದ್ಯುತ್ ಕಂಬಗಳು ಧರೆಗುರುಳಿವೆ. ಬಹುಭಾಗದಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಿದೆ. ನಾಪೋಕ್ಲು– ಬೆಟ್ಟಗೆರೆ ರಸ್ತೆಯ ಕೊಟ್ಟಮುಡಿ ಎಂಬಲ್ಲಿ ಮಣ್ಣು ಬಿದ್ದು, ರಸ್ತೆಯ ಒಂದು ಭಾಗ ಕುಸಿದು, ಭಾರಿ ವಾಹನಗಳ ಸಂಚಾರ ನಿಷೇಧಿಸಲಾಗಿದೆ.

ಸೋಮವಾರಪೇಟೆ ತಾಲ್ಲೂಕಿನ ಹಾನಗಲ್ಲು (ಚಂದನಮಕ್ಕಿ) ಗ್ರಾಮದಲ್ಲಿ ಮನೆಯೊಂದು ಕುಸಿದಿರುವುದು

ಕೊಚ್ಚಿ ಹೋಗಿದ್ದ ಇಬ್ಬರ ಮೃತದೇಹ ಪತ್ತೆ

ತುಮಕೂರು: ಕಳೆದ ಬುಧವಾರ ಧಾರಾಕಾರ ಮಳೆಯಿಂದ ಹಳ್ಳದಲ್ಲಿ ಹರಿಯುತ್ತಿದ್ದ ನೀರಿನಲ್ಲಿ ಕೊಚ್ಚಿ ಹೋಗಿದ್ದ ಇಬ್ಬರ ಮೃತದೇಹಗಳು ಶನಿವಾರ ಪತ್ತೆಯಾಗಿವೆ.

ಮಧುಗಿರಿ ತಾಲ್ಲೂಕಿನ ಹನುಮಂತಪುರ ಗ್ರಾಮದ ದ್ವಾರಪ್ಪ (60) ನಾಗಲಾಪುರ ಸಮೀಪದಲ್ಲಿ ಹಳ್ಳ ದಾಟುತ್ತಿದ್ದಾಗ ನೀರಿನಲ್ಲಿ ಕೊಚ್ಚಿ ಹೋಗಿದ್ದರು. ತುರುವೇಕೆರೆ ತಾಲ್ಲೂಕಿನ ಕೊಂಡಜ್ಜಿ-ಸೊಪ್ಪನಹಳ್ಳಿ ಮಧ್ಯದ ಹಳ್ಳದಲ್ಲಿ ತಿಪಟೂರು ತಾಲ್ಲೂಕಿನ ಗಡಬನಹಳ್ಳಿಯ ಪಟೇಲ್ ಕುಮಾರಸ್ವಾಮಿ ಕಾರಿನ ಸಮೇತ ಕೊಚ್ಚಿ ಹೋಗಿದ್ದರು. ಇಬ್ಬರ ಶವವೂ ಪತ್ತೆಯಾಗಿದೆ.

ನಾಪೋಕ್ಲು– ಮೂರ್ನಾಡು ರಸ್ತೆಯಲ್ಲಿ ಬೊಳಿಬಾಣೆ ಎಂಬಲ್ಲಿ ನೀರು ರಸ್ತೆ ಮೇಲೆ ಹರಿಯುತ್ತಿದ್ದು, ಸಂಚಾರ ಸ್ಥಗಿತಗೊಂಡಿದೆ.

ಭಾಗಮಂಡಲದ ತ್ರಿವೇಣಿ ಸಂಗಮದಲ್ಲೂ ನೀರಿನ ಪ್ರಮಾಣ ಹೆಚ್ಚಾಗುತ್ತಿದೆ. ಸೇತುವೆಗಳು ಹಾನಿಗೀಡಾಗಿ ಸಂಪರ್ಕ ಕಳೆದುಕೊಂಡಿರುವ ದಬ್ಬಡ್ಕ, ಊರುಬೈಲು ಗ್ರಾಮಗಳಲ್ಲಿ ಮೊಬೈಲ್ ನೆಟ್‌ವರ್ಕ್ ಸಹ ಕೈಕೊಟ್ಟಿದೆ.

ಭಾಗಮಂಡಲ–ನಾಪೋಕ್ಲು ರಸ್ತೆಯಲ್ಲಿ ಸತತ 2ನೇ ದಿನವೂ ಸಂಚಾರ ಸಾಧ್ಯವಾಗಿಲ್ಲ. ಭಾಗಮಂಡಲ–ಕರಿಕೆ ರಸ್ತೆಯಲ್ಲಿ ಕುಸಿದಿದ್ದ ಮಣ್ಣನ್ನು ಹರಸಾಹಸಪಟ್ಟು ರಕ್ಷಣಾ ಸಿಬ್ಬಂದಿ ತೆಗೆದಿದ್ದರೂ ಬೆಟ್ಟ, ಗುಡ್ಡಗಳಿಂದ ನಿರಂತರವಾಗಿ ನೀರು ಹರಿದಿದೆ. ಕೆಸರು ಮಿಶ್ರಿತ ನೀರಿನ ಕಾರಣಕ್ಕೆ ಸಂಚಾರವೂ ಅಪಾಯಕಾರಿಯಾಗಿ ಪರಿಣಮಿಸಿದೆ. ಭಾಗಮಂಡಲದ ತ್ರಿವೇಣಿ ಸಂಗಮದಲ್ಲೂ ನೀರಿನ ಪ್ರಮಾಣ ಹೆಚ್ಚಾಗುತ್ತಿದೆ.

ಹಾಸನ ಜಿಲ್ಲೆಯ ಸಕಲೇಶಪುರ ಪಟ್ಟಣ, ಹೆತ್ತೂರು, ಹಾನಬಾಳು, ಯಳಸೂರು ಹೋಬಳಿಯಲ್ಲಿ ಮಳೆ ಹೆಚ್ಚಾಗಿದೆ. ಸುಮಾರು 18ಕ್ಕೂ ಹೆಚ್ಚು ಮನೆಗಳಿಗೆ ಹಾನಿಯಾಗಿದೆ.

ಉತ್ತರ ಕನ್ನಡದಾದ್ಯಂತ ಶುಕ್ರವಾರ ತಡರಾತ್ರಿಯಿಂದ ಬಿಟ್ಟು ಬಿಟ್ಟು ಮಳೆಯಾಗಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಮಳೆ ಬಿರುಸುಗೊಂಡಿದೆ. ಲಿಂಗನಮಕ್ಕಿ ಜಲಾಶಯಕ್ಕೆ ಭಾರಿ ಪ್ರಮಾಣದಲ್ಲಿ ನೀರು ಹರಿದು ಬರುತ್ತಿದೆ. ಅಣೆಕಟ್ಟೆಯ ಸುರಕ್ಷತಾ ದೃಷ್ಟಿಯಿಂದ ಹೆಚ್ಚುವರಿ ನೀರನ್ನು ಯಾವುದೇ ಸಮಯದಲ್ಲಿ ಹೊರ ಬಿಡಲಾಗುವುದು ಎಂದು ಕರ್ನಾಟಕ ವಿದ್ಯುತ್ ನಿಗಮ ತಿಳಿಸಿದೆ.

ಭದ್ರಾ ಜಲಾಶಯದಿಂದ ಶನಿವಾರ ಬೆಳಿಗ್ಗೆ 3,3175 ಕ್ಯುಸೆಕ್ ನೀರು ನದಿಗೆ ಹರಿಬಿಡಲಾಗಿದೆ.

ಮಳೆ ವಿವರ ಸೆಂ.ಮೀ

ಚಿಕ್ಕಮಗಳೂರು ಜಿಲ್ಲೆ	
ಕೆರೆಕಟ್ಟೆ	28.2
ಹೊಸಕೆರೆ	21.3
ಕೊಟ್ಟಿಗೆಹಾರ	20.8
ಶಿವಮೊಗ್ಗ	
ಆಗುಂಬೆ	22.6
ಹುಲಿಕಲ್	18.6
ಮಾಸ್ತಿಕಟ್ಟೆ	18.3
ಉಡುಪಿ	
ಶಿವಪುರ	20.5
ದಕ್ಷಿಣ ಕನ್ನಡ	
ಮೂಡುಬಿದಿರೆ	12.54
ಉತ್ತರ ಕನ್ನಡ	
ಅಂಕೋಲಾ	16
ಗೋಕರ್ಣ	16
ಕಾರವಾರ	15
ಮಡಿಕೇರಿ	
ಮದೆ	12
ಗಾಳಿಬೀಡು	12

ಮುಳುಗಿದ ಸೇತುವೆ: ಚಾಲಕನ ದುಸ್ಸಾಹಸ

ದೇವರಹಿಪ್ಪರಗಿ (ವಿಜಯಪುರ): ಡೋಣಿ ನದಿ ಪ್ರವಾಹಕ್ಕೆ ಸಿಲುಕಿದ ಸಾರಿಗೆ ಬಸ್ ಸುರಕ್ಷಿತವಾಗಿ ದಡ ಸೇರಿ, ಪ್ರಯಾಣಿಕರೆಲ್ಲರೂ ಅಪಾಯದಿಂದ ಪಾರಾದ ಘಟನೆ ಶುಕ್ರವಾರ ಸಂಜೆ ನಡೆದಿದೆ. ಸಂಜೆ 5ಕ್ಕೆ ದೇವರಹಿಪ್ಪರಗಿಯಿಂದ ಬಸವನಬಾಗೇವಾಡಿ ಮಾರ್ಗವಾಗಿ ಬಾಗಲಕೋಟೆಗೆ ತೆರಳುವ ಸಾರಿಗೆ ಸಂಸ್ಥೆಗೆ ಸೇರಿದ ಬಸ್ ಸಾತಿಹಾಳ ಸೇತುವೆ ತಲುಪುವ ಸಮಯದಲ್ಲಿ ಡೋಣಿ ನದಿ ತುಂಬಿ ಹರಿಯುತ್ತಿತ್ತು. ಚಾಲಕ ಬಸ್ ಅನ್ನು ನೀರಿಗೆ ಇಳಿಸಿದ್ದಾನೆ.

50ಕ್ಕಿಂತಲೂ ಹೆಚ್ಚು ಪ್ರಯಾಣಿಕರಿಂದ ತುಂಬಿದ್ದ ಬಸ್ ನೀರಿನ ರಭಸಕ್ಕೆ ಅತ್ತಿತ್ತ ಅಲುಗಾಡಿದಾಗ ಪ್ರಯಾಣಿಕರು ಚೀರಾಡಿದರು. ಇನ್ನೂ ದೂರದಲ್ಲಿ ನಿಂತು ನೋಡುತ್ತಿದ್ದವರು 'ಬಸ್ ಬಿತ್ತು, ಬಿತ್ತು' ಎಂದು ಜೋರಾಗಿ ಕೂಗಿದರು. ಚಾಲಕನ ಜಾಗರೂಕತೆಯಿಂದ ಬಸ್ ನಿಯಂತ್ರಣಕ್ಕೆ ಬಂದು, ಕೊನೆಗೆ ಸುರಕ್ಷಿತವಾಗಿ ದಡ ಸೇರಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	123.80	74,068	67,899
ಹಾರಂಗಿ	2,859	2,855.02	12,960	14,740
ಕಬಿನಿ	2284.00	2,283.14	23,045	25,000
ಹೇಮಾವತಿ	2,922	2,921.45	21,504	24,800
ಲಿಂಗನಮಕ್ಕಿ	1,819	1801.15	30,397	4,598
ಸೂಪಾ (ಮೀ)	564	542.35	5,611	-
ಮಾಣಿ	594	585.14	6,102	-
ತುಂಗಭದ್ರಾ	1,633	1,632.09	56,640	78,587
ಮಲಪ್ರಭಾ	2079.5	2,070.60	294	294
ಘಟಪ್ರಭಾ	2175	2,160.05	3,282	106
ಭದ್ರಾ	186	184.2	31,069	33,175
ಆಲಮಟ್ಟಿ (ಮೀ)	519.6	519	30,138	-
ನಾರಾಯಣಪುರ (ಮೀ)	492.25	491.68	4,000	4,000

* ನೆಲಮಟ್ಟದಿಂದ

ರಕ್ಷಣಾ ಕಾರ್ಯ: ಇನ್ನೂ 2 ಎಸ್‌ಡಿಆರ್‌ಎಫ್ ತಂಡ

ಬೆಂಗಳೂರು: ಅತಿವೃಷ್ಟಿ, ಪ್ರವಾಹ ಸೇರಿದಂತೆ ಪ್ರಕೃತಿ ವಿಕೋಪ ಸಂದರ್ಭಗಳಲ್ಲಿ ರಕ್ಷಣಾ ಕಾರ್ಯಾಚರಣೆಯನ್ನು ಮತ್ತಷ್ಟು ಬಲಪಡಿಸಲು ರಾಜ್ಯ ವಿಕೋಪ ನಿರ್ವಹಣಾ ಪಡೆಯ (ಎಸ್‌ಡಿಆರ್‌ಎಫ್) ಇನ್ನೂ ಎರಡು ತಂಡಗಳನ್ನು ರಚಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕೋವಿಡ್ ದೃಢಪಟ್ಟಿದ್ದರಿಂದ ಮನೆಯಲ್ಲೇ ಪ್ರತ್ಯೇಕ ವಾಸ ಇರುವ ಅವರು, ಪ್ರವಾಹಪೀಡಿತ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಸಚಿವರು, ಸರ್ಕಾರದ ಹಿರಿಯ ಅಧಿಕಾರಿಗಳ ಜತೆ ಶನಿವಾರ ವಿಡಿಯೊ ಕಾನ್ಫರೆನ್ಸ್ ನಡೆಸಿದರು.

'ಎನ್‌ಡಿಆರ್‌ಎಫ್ ಹಾಗೂ ಎಸ್‌ಡಿಆರ್‌ಎಫ್ ತಂಡಗಳು ರಾಜ್ಯ ದಲ್ಲಿ ಪ್ರವಾಹ, ಭೂಕುಸಿತದಿಂದ ತೊಂದರೆಯಾಗಿರುವ ಸ್ಥಳಗಳಲ್ಲಿ ಕಾರ್ಯಾಚರಣೆ ನಡೆಸುತ್ತಿವೆ. ಇನ್ನೂ ಎರಡು ತಂಡವನ್ನು ಕಾರ್ಯಾಚರಣೆಗೆ ನಿಯೋಜಿಸಬೇಕು' ಎಂದರು.

ಹಾನಿಯಾದ ರಸ್ತೆ, ಸೇತುವೆಗಳನ್ನು ತುರ್ತು ದುರಸ್ತಿ ಮಾಡಬೇಕು. ವಿದ್ಯುತ್ ಕಂಬ, ವಿದ್ಯುತ್ ಪರಿವರ್ತಕಗಳ ಬದಲಾವಣೆಯನ್ನೂ ಮಾಡಬೇಕು ಎಂದು ನಿರ್ದೇಶನ ನೀಡಿದರು.

₹200 ಕೋಟಿ ಬಿಡುಗಡೆ

ಅತಿವೃಷ್ಟಿ, ಪ್ರವಾಹ, ಭೂಕುಸಿತದಿಂದ ಆಗಿರುವ ಹಾನಿಗೆ ಪರಿಹಾರ ನೀಡಲು ಮತ್ತು ರಕ್ಷಣಾ ಕಾರ್ಯಾಚರಣೆಗೆ ರಾಜ್ಯ ವಿಕೋಪ ಪರಿಹಾರ ನಿಧಿಯಿಂದ 21 ಜಿಲ್ಲೆಗಳಿಗೆ ₹ 200 ಕೋಟಿ ಅನುದಾನವನ್ನು ಬಿಡುಗಡೆ ಮಾಡಿ ಕಂದಾಯ ಇಲಾಖೆ ಶನಿವಾರ ಆದೇಶ ಹೊರಡಿಸಿದೆ.

ಜೂನ್ 1ರಿಂದ ಈವರೆಗೆ ಆಗಿರುವ ಹಾನಿ

ಮಾನವ ಜೀವ ಹಾನಿ	70
ಜಾನುವಾರು ಜೀವಹಾನಿ	507
ಸಂಪೂರ್ಣ ಹಾನಿಯಾಗಿರುವ ಮನೆಗಳು	3,559
ಭಾಗಶಃ ಹಾನಿಯಾಗಿರುವ ಮನೆಗಳು	17,212
ಕೃಷಿ ಬೆಳೆ ಹಾನಿ	1,29,087 ಹೆಕ್ಟೇರ್
ತೋಟಗಾರಿಕಾ ಬೆಳೆ ಹಾನಿ	7,942 ಹೆಕ್ಟೇರ್
ಮುಖ್ಯ ರಸ್ತೆ ಹಾನಿ	3,162 ಕಿ.ಮೀ
ಗ್ರಾಮೀಣ ರಸ್ತೆ	8445 ಕಿ.ಮೀ
ಸೇತುವೆ ಮತ್ತು ಕಿರು ಸೇತುವೆ	1,068
ಶಾಲಾ ಕಟ್ಟಡಗಳು	4,531
ಅಂಗನವಾಡಿ ಕಟ್ಟಡಗಳು	222
ಹಾಳಾಗಿರುವ ವಿದ್ಯುತ್ ಕಂಬಗಳು	16,760
ಹಾಳಾಗಿರುವ ವಿದ್ಯುತ್ ಪರಿವರ್ತಕಗಳು	1,469
ಹಾನಿಯಾಗಿರುವ ಸಣ್ಣ ನೀರಾವರಿ ಕೆರೆಗಳು	93

ಏಳು ಜಿಲ್ಲೆಗಳಲ್ಲಿ 'ಆರೆಂಜ್ ಅಲರ್ಟ್'

ಬೆಂಗಳೂರು: ರಾಜ್ಯದ ಮಲೆನಾಡು, ಕರಾವಳಿ ವ್ಯಾಪ್ತಿಯ ಜಿಲ್ಲೆಗಳಲ್ಲಿ ಆಗಸ್ಟ್ 7ರಿಂದ ನಾಲ್ಕು ದಿನಗಳ ಕಾಲ ಗುಡುಗು ಸಹಿತ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಸೂಚನೆ ನೀಡಿದೆ.

ಕೊಡಗು, ಶಿವಮೊಗ್ಗ, ಚಿಕ್ಕಮಗಳೂರು, ಉತ್ತರ ಕನ್ನಡ, ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುಂದಿನ ನಾಲ್ಕು ದಿನಗಳ ಕಾಲ 'ಆರೆಂಜ್ ಅಲರ್ಟ್' ಘೋಷಿಸಲಾಗಿದೆ.

ದಾವಣಗೆರೆ, ಮೈಸೂರು, ಚಾಮರಾಜನಗರ, ಯಾದಗಿರಿ, ರಾಯಚೂರು, ಕೊಪ್ಪಳ ಜಿಲ್ಲೆಗಳಲ್ಲಿ ಭಾನುವಾರ 'ಯೆಲ್ಲೋ ಅಲರ್ಟ್' ಘೋಷಿಸಲಾಗಿದೆ.

ಕಲಬುರಗಿಯಲ್ಲಿ ಆಗಸ್ಟ್ 8ರಂದು, ಹಾಸನದಲ್ಲಿ 9ರಂದು, 10ರಂದು ಹಾಸನ, ಕಲಬುರಗಿಯಲ್ಲಿ 'ಯೆಲ್ಲೋ ಅಲರ್ಟ್' ಘೋಷಿಸಲಾಗಿದೆ.

ಹಾವೇರಿಯಲ್ಲಿ ನ.11ರಿಂದ 86ನೇ ಕನ್ನಡ ಸಾಹಿತ್ಯ ಸಮ್ಮೇಳನ

ಹಾವೇರಿ: 'ಅಖಿಲ ಭಾರತ 86ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ನವೆಂಬರ್ 11ರಿಂದ 13 ರವರೆಗೆ ನಡೆಸಲು ನಿರ್ಧರಿಸಿದ್ದು, ಮುಖ್ಯಮಂತ್ರಿಯವರು ಈ ಬಗ್ಗೆ ಅಧಿಕೃತವಾಗಿ ಘೋಷಿಸುವರು' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಶನಿವಾರ ತಿಳಿಸಿದರು.

'ಕನ್ನಡದ ಮೊದಲ ನಿಘಂಟು ತಜ್ಞ ಫರ್ಡಿನೆಂಡ್ ಕಿಟೆಲ್ ಅವರ ಮೊಮ್ಮಗಳು ಮತ್ತು ಕರ್ನಾಟಕ ಮೂಲದ ಕೆನಡಾ ಸಂಸದ ಚಂದ್ರ ಆರ್ಯ ಸಮ್ಮೇಳನದಲ್ಲಿ ಪಾಲ್ಗೊಳ್ಳಲು ಆಸಕ್ತಿ ತೋರಿದ್ದಾರೆ' ಎಂದು ಹೇಳಿದರು.

'ಕನ್ನಡ ಭಾಷೆ ಸಮಗ್ರ ಅಭಿವೃದ್ಧಿ ವಿಧೇಯಕ' ಕಾನೂನಾಗಿ ಜಾರಿಗೊಳ್ಳುವ ಅಗತ್ಯವಿದೆ. ಶಿಕ್ಷಣ, ಆಡಳಿತ, ಉದ್ಯೋಗ, ನಾಮಫಲಕದಲ್ಲಿ ಕನ್ನಡ ಎಂಬ ನಿಯಮಗಳು ಸಮರ್ಪಕವಾಗಿ ಅನುಷ್ಠಾನ ವಾಗಬೇಕಿದೆ' ಎಂದರು.

ಕೆಪಿಎಸ್‌ಸಿ: ತಾತ್ಕಾಲಿಕ ವೇಳಾಪಟ್ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಹುದ್ದೆಗಳಿಗೆ ತಾತ್ಕಾಲಿಕ ಅರ್ಹರಾದವರ ಪಟ್ಟಿಯನ್ನು ಬಿಡುಗಡೆ ಮಾಡುವ ಕುರಿತಂತೆ ತಾತ್ಕಾಲಿಕ ವೇಳಾಪಟ್ಟಿಯನ್ನು ಕೆಪಿಎಸ್‌ಸಿ ಬಿಡುಗಡೆ ಮಾಡಿದೆ.

1,323 ಎಸ್‌ಡಿಎ ಹುದ್ದೆಗಳಿಗೆ ಆಯ್ಕೆಯಾದವರ ಪಟ್ಟಿಯನ್ನು ಇದೇ 25ರಂದು, ಲೋಕೋಪಯೋಗಿ ಇಲಾಖೆಯಲ್ಲಿನ ಕಿರಿಯ ಎಂಜಿನಿಯರ್ (ಸಿವಿಲ್) 330 ಮತ್ತು ಸಹಾಯಕ ಎಂಜಿನಿಯರ್ 600 ಹುದ್ದೆಗಳಿಗೆ ಆಯ್ಕೆಯಾದವರ ಅರ್ಹತಾ ಪಟ್ಟಿಯನ್ನು ಕ್ರಮವಾಗಿ ಸೆ. 15 ಮತ್ತು 23 ರಂದು ಪ್ರಕಟಿಸಲಾಗುವುದು ಎಂದು ಕೆಪಿಎಸ್‌ಸಿ ತಿಳಿಸಿದೆ.

ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯದಲ್ಲಿನ ವಿದ್ಯಾರ್ಥಿ ನಿಲಯ ಮೇಲ್ವಿಚಾರಕರು, ಲೆಕ್ಕಪರಿಶೋಧನೆ ಇಲಾಖೆಯ ಕಿರಿಯ ಲೆಕ್ಕ ಸಹಾಯಕರು, ಪೌರಾಡಳಿತ ನಿರ್ದೇಶನಾಲಯದಲ್ಲಿನ ಕರ ವಸೂಲಿಗಾರರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಲ್ಲಿನ ಗಣತೀದಾರರು ಕಂಡಾಟಾ ಎಂಟ್ರಿ ಆಪರೇಟರ್, ಸಮಾಜ ಕಲ್ಯಾಣ ಇಲಾಖೆಯಲ್ಲಿನ ವಿದ್ಯಾರ್ಥಿ ನಿಲಯದ ವಾರ್ಡನ್, ಸರ್ಕಾರದ ಸಚಿವಾಲಯ ಗ್ರಂಥಾಲಯದಲ್ಲಿನ ಗ್ರಂಥಾಲಯ ಸಹಾಯಕರು, ಸಹಾಯಕ ಅರಣ್ಯ ಸಂರಕ್ಷಣಾ ಅಧಿಕಾರಿಗಳ ಅರ್ಹತಾ ಪಟ್ಟಿಯನ್ನು ನ. 30ರಂದು ಪ್ರಕಟಿಸಲಾಗುವುದು.

ಸಂಸದೀಯ ವ್ಯವಹಾರಗಳ ಇಲಾಖೆಯಲ್ಲಿನ ಪ್ರಾರೂಪಣಾ ಸಹಾಯಕರು, ಕಾರ್ಮಿಕ ಇಲಾಖೆಯಲ್ಲಿನ ಕಾರ್ಮಿಕ ನಿರೀಕ್ಷಕರು, ಪೌರಾಡಳಿತ ನಿರ್ದೇಶನಾಲಯದಲ್ಲಿನ ಅಕೌಂಟೆಂಟ್, ಸಾಂಖ್ಯಿಕ ನಿರೀಕ್ಷಕರು, ಲೆಕ್ಕ ಪರಿಶೋಧನೆ ಇಲಾಖೆಯ ಲೆಕ್ಕ ಸಹಾಯಕರು, ಸಹಕಾರ ಸಂಘಗಳ ಲೆಕ್ಕ ಪರಿಶೋಧಕರು, ಪೌರಾಡಳಿತ ನಿರ್ದೇಶನಾಲಯದಲ್ಲಿನ ಪ್ರಥಮ ದರ್ಜೆ ಕಂದಾಯ ನಿರೀಕ್ಷಕರು, ಕೃಷಿ ಮಾರಾಟ ಇಲಾಖೆಯಲ್ಲಿನ ಮಾರುಕಟ್ಟೆ ಮೇಲ್ವಿಚಾರಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಲ್ಲಿನ ಗಣತಿದಾರರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿನ ನಿಲಯ ಮೇಲ್ವಿಚಾರಕರು ಹುದ್ದೆಗಳ ಅರ್ಹತಾ ಪಟ್ಟಿಯನ್ನೂ ಅ. 31ರಂದು ಬಿಡುಗಡೆ ಮಾಡುವುದಾಗಿ ಕೆಪಿಎಸ್‌ಸಿ ಪ್ರಕಟಿಸಿದೆ.

ಸಂಕ್ಷಿಪ್ತ ಸುದ್ದಿ

ಪರೀಕ್ಷೆ ಹಾಲ್ ಟಿಕೆಟ್ ರವಾನೆ

ಬೆಂಗಳೂರು: ಇದೇ ತಿಂಗಳು ನಡೆಯುವ ದ್ವಿತೀಯ ಪಿಯು ಪೂರಕ ಪರೀಕ್ಷೆಯ ಹಾಲ್ ಟಿಕೆಟ್‌ಗಳನ್ನು ಪದವಿಪೂರ್ವ ಶಿಕ್ಷಣ ಇಲಾಖೆ ರವಾನಿಸಿದೆ.

ಆಯಾ ಕಾಲೇಜುಗಳ ಪ್ರಾಂಶುಪಾಲರು ಸ್ಯಾಟ್ಸ್ ಪೋರ್ಟಲ್‌ಗೆ ಲಾಗಿನ್ ಆಗಿ ಹಾಲ್ ಟಿಕೆಟ್ ಡೌನ್‌ಲೋಡ್ ಮಾಡಿಕೊಂಡು ವಿದ್ಯಾರ್ಥಿಗಳಿಗೆ ವಿತರಿಸಲು ಸೂಚಿಸಲಾಗಿದೆ. 1,85,270 ವಿದ್ಯಾರ್ಥಿಗಳು ಪೂರಕ ಪರೀಕ್ಷೆ ತೆಗೆದುಕೊಂಡಿದ್ದಾರೆ.

ಮುಖ್ಯಮಂತ್ರಿಗೆ ಕೋವಿಡ್

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಕೋವಿಡ್ ದೃಢಪಟ್ಟಿದ್ದು, ಶನಿವಾರದಿಂದ ಅವರು ಮನೆಯಲ್ಲೇ ಪ್ರತ್ಯೇಕವಾಸದಲ್ಲಿದ್ದಾರೆ.

ಕೋವಿಡ್ ಲಕ್ಷಣಗಳು ಕಂಡುಬಂದ ಕಾರಣ ಅವರು ಗಂಟಲು ಮತ್ತು ಮೂಗಿನ ದ್ರವದ ಮಾದರಿಯನ್ನು ಪರೀಕ್ಷೆಗೆ ನೀಡಿದ್ದರು. ಬಳಿಕ ಸೋಂಕು ತಗುಲಿರುವುದು ದೃಢಪಟ್ಟಿದೆ' ಎಂದು ಮುಖ್ಯಮಂತ್ರಿಯವರ ಸಚಿವಾಲಯ ತಿಳಿಸಿದೆ.

ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಣೆಗೆ ಸಂಬಂಧಿಸಿದ ಉನ್ನತಮಟ್ಟದ ಸಮಿತಿ ಹಾಗೂ ನೀತಿ ಆಯೋಗದ ಸಭೆಗಳಲ್ಲಿ ಭಾಗವಹಿಸಲು ಶನಿವಾರ ದೆಹಲಿಗೆ ತೆರಳಬೇಕಿತ್ತು. ಈಗ ಆ ಪ್ರವಾಸ ರದ್ದುಪಡಿಸಿದ್ದಾರೆ.

'ಮಹಿಳೆಯರಿಗೆ ವಿಶೇಷ ಕ್ಲಿನಿಕ್'

ಚಿಕ್ಕಬಳ್ಳಾಪುರ: 'ಮಹಿಳೆಯರಿಗಾಗಿಯೇ ರಾಜ್ಯದಾದ್ಯಂತ ವಿಶೇಷ ಕ್ಲಿನಿಕ್ ಆರಂಭಿಸುವ ಚಿಂತನೆ ಇದೆ' ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ತಿಳಿಸಿದರು.

ತಾಲ್ಲೂಕಿನ ಜಡಬಂಡಹಳ್ಳಿ ಗ್ರಾಮದಲ್ಲಿ ಸ್ತ್ರೀಶಕ್ತಿ ಸಂಘಗಳ ಸದಸ್ಯೆಯರಿಗೆ ಸಾಲದ ಚೆಕ್ ವಿತರಿಸಿದ ಅವರು, 'ವಿಶೇಷ ಕ್ಲಿನಿಕ್ ತೆರೆಯುವ ಬಗ್ಗೆ ಮುಖ್ಯಮಂತ್ರಿ ಅವರ ಜತೆ ಚರ್ಚೆ ನಡೆಸಲಾಗಿದೆ. ಶೀಘ್ರದಲ್ಲಿಯೇ ಕ್ಲಿನಿಕ್ ಆರಂಭಿಸಲಾಗುವುದು' ಎಂದು ತಿಳಿಸಿದರು.

ಬಿಟಿಎಂ ವಿಧಾನಸಭಾ ಕ್ಷೇತ್ರ

ಸರ್ಕಾರಿ ಶಾಲೆಗಳಿಗೆ 'ಡಿಮ್ಯಾಂಡ್'

ಜ್ಞಾನ ಜ್ಯೋತಿಯ ಕೇಂದ್ರಗಳಿವು. ಆಧುನಿಕ ಸ್ಪರ್ಶ ಪಡೆದಿರುವ ಈ ಶಾಲೆಗಳು ವಿದ್ಯಾರ್ಥಿಗಳಿಗೂ ಮತ್ತು ಶಿಕ್ಷಕರಿಗೂ ಅಚ್ಚುಮೆಚ್ಚು. ಒಂದೊಮ್ಮೆ ಹಾಳುಕೊಂಪೆಯ ಪರಿಸ್ಥಿತಿಗೆ ತಲುಪಿದ್ದ ಶಾಲೆಗಳಿಗೆ ಕಾಯಕಲ್ಪ ನೀಡಿ ಸಂಪೂರ್ಣ ಚಿತ್ರಣವನ್ನು ಬದಲಾಯಿಸಿದವರು ಜನಪರ ಮತ್ತು ಜನಪ್ರಿಯ ಶಾಸಕ ರಾಮಲಿಂಗಾರೆಡ್ಡಿ ಅವರು.

ಶಿಥಿಲವಾಗಿದ್ದ ಕಟ್ಟಡ, ಶೌಚಾಲಯ ಸಮಸ್ಯೆ, ಕೊಠಡಿಗಳ ಕೊರತೆ, ಶಿಕ್ಷಕರ ಕೊರತೆ... ಇತ್ಯಾದಿ 'ಇಲ್ಲ'ಗಳಿಂದ ನಲುಗಿದ್ದ ಶಾಲೆಗಳಿಗೆ ನವಸ್ಪರ್ಶ ನೀಡುವ ಮೂಲಕ ವಿದ್ಯಾರ್ಥಿಗಳ ಬಾಳಿಗೆ ಬೆಳಕಾಗಿದ್ದಾರೆ. ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿ ಹಗಲಿರುಳು ಶ್ರಮಿಸುತ್ತಿರುವ ಶಾಸಕ ರಾಮಲಿಂಗಾರೆಡ್ಡಿ ಅವರು ವಿದ್ಯಾರ್ಥಿಗಳ ಪಾಲಿಗೆ ಮಾರ್ಗದರ್ಶಿಯಾಗಿದ್ದಾರೆ.

ಬಿಟಿಎಂ ಲೇಔಟ್ ಕ್ಷೇತ್ರದಲ್ಲಿ ದತ್ತು ಪಡೆದಿರುವ 23 ಶಾಲೆಗಳಲ್ಲಿ ಈಜಿಪುರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯೂ ಒಂದು. ಬಡ ಮಕ್ಕಳೇ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಓದುತ್ತಿರುವ ಈ ಶಾಲೆಯಲ್ಲಿ ಸೌಲಭ್ಯಗಳನ್ನು ಕಲ್ಪಿಸುವ ಮೂಲಕ ಉತ್ತಮ ಶೈಕ್ಷಣಿಕ ಪರಿಸರ ಸೃಷ್ಟಿಸಲಾಗಿದೆ. ಒಟ್ಟಾರೆಯಾಗಿ ಶಾಲೆಯ ಸಂಪೂರ್ಣ ಚಿತ್ರಣವೇ ಬದಲಾಗಿದೆ.

ಶಾಲೆಯಲ್ಲಿ ಈಗ ಸಿಸಿಟಿವಿ ಕ್ಯಾಮೆರಾ ಸೌಲಭ್ಯ ಕಲ್ಪಿಸಲಾಗಿದೆ. ಇದರಿಂದ, ಮುಖ್ಯ ಶಿಕ್ಷಕರು ವಿದ್ಯಾರ್ಥಿಗಳ ಚಟುವಟಿಕೆಗಳ ಬಗ್ಗೆ ನಿರಂತರವಾಗಿ ಗಮನಿಸಹಬಹುದಾಗಿದೆ. ಮೊದಲು ಶೌಚಾಲಯಕ್ಕೂ ಪರದಾಡಬೇಕಾಗಿತ್ತು. ಈಗ ಬಾಲಕ ಮತ್ತು ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯ ಕಟ್ಟಡವನ್ನು ನಿರ್ಮಿಸಿಕೊಡಲಾಗಿದೆ. ವಿದ್ಯಾರ್ಥಿಗಳಿಗೆ ಸಮವಸ್ತ್ರ, ಸ್ವೆಟರ್‌ಗಳನ್ನು ಸಹ ಒದಗಿಸಲಾಗಿದೆ. ಎಲ್ಲ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಡೆಸ್ಕ್ ಮತ್ತು ಕುರ್ಚಿಗಳನ್ನು ಒದಗಿಸಲಾಗಿದೆ ಮತ್ತು ಈಜೀಪುರ ಶಾಲೆಯ ಮಾದರಿಯಲ್ಲಿ ಎಲ್ಲ ಶಾಲೆಗಳನ್ನು ಅಭಿವೃದ್ಧಿಪಡಿಸಲಾಗಿದೆ.

ಈಗ 360 ವಿದ್ಯಾರ್ಥಿಗಳು ಈ ಶಾಲೆಯಲ್ಲಿ ಓದುತ್ತಿದ್ದಾರೆ. ಮೊದಲು ವಿದ್ಯಾರ್ಥಿಗಳು ಗೈರುಹಾಜರಾಗುವುದು ಸಾಮಾನ್ಯ ವಿಷಯವಾಗಿತ್ತು. ಆದರೆ, ಈಗ ಪರಿಸ್ಥಿತಿ ಸಂಪೂರ್ಣ ಬದಲಾಗಿದೆ. ಎಲ್ಲ ವಿದ್ಯಾರ್ಥಿಗಳು ಪ್ರತಿನಿತ್ಯ ಶಾಲೆಗೆ ಬರುತ್ತಾರೆ. ಜತೆಗೆ, ಶಾಲೆಗೆ ಪ್ರವೇಶಾತಿ ಪಡೆಯುವವರ ಸಂಖ್ಯೆಯೂ ಹೆಚ್ಚಾಗಿದೆ. ಇನ್ನೂ ಪ್ರವೇಶ ಪಡೆಯಲು ವಿದ್ಯಾರ್ಥಿಗಳು ಬರುತ್ತಿದ್ದಾರೆ. ಈಗ ನಮ್ಮ ಶಾಲೆಗೆ ಡಿಮ್ಯಾಂಡ್ ಎಂದು ಶಿಕ್ಷಕರು ಹೇಳುತ್ತಾರೆ.

ಈಜಿಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ

ಶಾಲೆ ಈಗ ಉತ್ತಮ ಪರಿಸರ ಹೊಂದಿದೆ. ಇಲ್ಲಿನ ಪರಿಸ್ಥಿತಿ ಸಂಪೂರ್ಣ ಬದಲಾಗಿದೆ. ನಮಗೆ ಎಲ್ಲ ಸೌಲಭ್ಯಗಳಿವೆ. ಕಂಪ್ಯೂಟರ್ ಸೌಲಭ್ಯವನ್ನು ಸಹ ಕಲ್ಪಿಸಲಾಗಿದೆ

ಸ್ಟೀಫನ್ ರಾಜ್
ನಾಲ್ಕನೇ ತರಗತಿ ವಿದ್ಯಾರ್ಥಿ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಈಜಿಪುರ

ಕಂಪ್ಯೂಟರ್ ಸೌಲಭ್ಯ ಇದೆ. ನಮಗೆ ಈಗಿನಿಂದಲೇ ಕಂಪ್ಯೂಟರ್ ಜ್ಞಾನ ಪಡೆಯಲು ಅನುಕೂಲವಾಗಿದೆ. ಹೊಸ ಡೆಸ್ಕ್ ಮತ್ತು ಕುರ್ಚಿಗಳಿವೆ. ಬ್ಯಾಗ್ ಮತ್ತು ಪುಸ್ತಕಗಳನ್ನು ನೀಡಲಾಗಿದೆ.

ಸಹನಾ, ನಾಲ್ಕನೇ ತರಗತಿ ವಿದ್ಯಾರ್ಥಿ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಈಜಿಪುರ

ಮೊದಲು ಶಾಲೆಯಲ್ಲಿ ಕೊಠಡಿಗಳ ಕೊರತೆ ಇತ್ತು. ನೀರು ಮತ್ತು ಶೌಚಾಲಯ ಸಮಸ್ಯೆ ಇತ್ತು. ಕಟ್ಟಡವೂ ಶಿಥಿಲವಾಗಿತ್ತು. ಈಗ ಯಾವುದೇ ಕೊರತೆಗಳೇ ಇಲ್ಲ. ಶಾಸಕ ರಾಮಲಿಂಗಾರೆಡ್ಡಿ ಅವರು ಶಾಲೆಯನ್ನು ದತ್ತು ಪಡೆದು ಇಲ್ಲಿನ ಶೈಕ್ಷಣಿಕ ವಾತಾವರಣಕ್ಕೆ ಬದಲಾಯಿಸಿ ಚೈತನ್ಯ ತುಂಬಿದ್ದಾರೆ. ರಾಮಲಿಂಗಾರೆಡ್ಡಿ ಅವರೇ ಈ ಎಲ್ಲ ಬದಲಾವಣೆಯ ಶಕ್ತಿ.

ಮೇರಿ ಸುನಿತ್, ಶಿಕ್ಷಕಿ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಈಜಿಪುರ

ಶಾಲೆಗೆ ಕಾಯಕಲ್ಪ ನೀಡಿರುವ ಶಾಸಕ ರಾಮಲಿಂಗಾರೆಡ್ಡಿ ಅವರು, ಇಲ್ಲಿನ ವಾತಾವರಣವೇ ಬದಲಾಯಿಸಿದ್ದಾರೆ. ಮೊದಲು ಈ ಶಾಲೆಯ ಬಗ್ಗೆ ಒಂದು ರೀತಿಯ ತಾತ್ಸಾರ ಮನೋಭಾವವೇ ಮೂಡಿತ್ತು. ಈಗ ಇದು ಆಕರ್ಷಣೆಯ ಕೇಂದ್ರವಾಗಿದೆ. ಶಾಲೆಯಲ್ಲಿ ಪ್ರವೇಶ ಪಡೆಯುವವರ ಸಂಖ್ಯೆಯೂ ಹೆಚ್ಚಾಗಿದೆ. ಇದು ಖಾಸಗಿ ಶಾಲೆಗಳಿಗೆ ಯಾವುದೇ ರೀತಿಯಲ್ಲೂ ಕಡಿಮೆ ಇಲ್ಲ. ಮೊದಲು ಹಳೆಯ ಕಟ್ಟಡ ಇತ್ತು. ಶಾಲೆಯನ್ನು ಸಂಪೂರ್ಣವಾಗಿ ನವೀಕರಣಗೊಳಿಸಲಾಗಿದೆ. ಕೊಠಡಿಗಳಲ್ಲಿ ಫ್ಯಾನ್ ಮತ್ತು ವಿದ್ಯುತ್ ದೀಪಗಳನ್ನು ಸಹ ಅಳವಡಿಸಲಾಗಿದೆ. ಎಲ್ಲ ಶಿಕ್ಷಕರಿಗೆ ಟೇಬಲ್ ಮತ್ತು ಕುರ್ಚಿ ಒದಗಿಸಲಾಗಿದೆ. ಸಿಬ್ಬಂದಿಗೆ ಪ್ರತ್ಯೇಕ ಕೊಠಡಿ ಇದೆ. ವಿದ್ಯಾರ್ಥಿಗಳಿಗಾಗಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ. ವಿದ್ಯಾರ್ಥಿಗಳಿಗೆ ಸ್ವೆಟರ್, ಸಮವಸ್ತ್ರ, ಶೂ ಮತ್ತು ಸಾಕ್ಸ್‌ಗಳು, ನೋಟ್‌ಬುಕ್‌ಗಳನ್ನು ವಿತರಿಸಲಾಗಿದೆ. ಜತೆಗೆ, ಶಾಲೆಯಲ್ಲಿ ಇಬ್ಬರನ್ನು ಹೌಸ್‌ಕಿಪಿಂಗ್‌ಗಾಗಿ ನಿಯೋಜಿಸಲಾಗಿದೆ.

ಹೆಲೆನ್‌ಗ್ಲೋರಿ ಡಬ್ಲ್ಯೂ.
ಪ್ರಭಾರ ಮುಖ್ಯ ಶಿಕ್ಷಕಿ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಈಜಿಪುರ

ಒಂದರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಬೋಧನೆ ಮಾಡಲಾಗುತ್ತಿದೆ. ಶಾಸಕರು ಕಂಪ್ಯೂಟರ್ ಮತ್ತು ಪ್ರಯೋಗಾಲಯದ ಸೌಲಭ್ಯ ಕಲ್ಪಿಸಿದ್ದಾರೆ. ಈ ಶಾಲೆಯಲ್ಲಿ 12 ಕಂಪ್ಯೂಟರ್‌ಗಳಿವೆ. ಪ್ರಾಥಮಿಕ ಹಂತದಲ್ಲೇ ವಿದ್ಯಾರ್ಥಿಗಳು ಕಂಪ್ಯೂಟರ್ ಜ್ಞಾನ ಪಡೆಯಲು ಅನುಕೂಲ ಕಲ್ಪಿಸಿರುವು ನಿಜಕ್ಕೂ ಶ್ಲಾಘನೀಯ ಕಾರ್ಯ.

ಕೆ.ಎಂ. ನಿತ್ಯಾ
ಕಂಪ್ಯೂಟರ್ ಶಿಕ್ಷಕಿ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಈಜಿಪುರ

'ಮೊದಲು ನಾನು ಖಾಸಗಿ ಶಾಲೆಯಲ್ಲಿದ್ದೆ. ಇಲ್ಲಿನ ಸೌಲಭ್ಯಗಳನ್ನು ನೋಡಿ ಈ ಶಾಲೆಗೆ ದಾಖಲಾಗಿದ್ದೇನೆ. ಎಲ್ಲ ಸೌಲಭ್ಯಗಳಿವೆ. ಖಾಸಗಿ ಶಾಲೆಗಿಂತಲೂ ಚೆನ್ನಾಗಿದೆ. ಬೋಧನೆ ಜತೆಗೆ ವಿವಿಧ ಕಲಿಕಾ ಚಟುವಟಿಕೆಗಳನ್ನು ಶಿಕ್ಷಕರು ಮಾಡಿಸುತ್ತಾರೆ.

ಎಚ್.ಆರ್. ಹೇಮಂತ, ನಾಲ್ಕನೇ ತರಗತಿ ವಿದ್ಯಾರ್ಥಿ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಈಜಿಪುರ

ಶಾಲಾ–ಕಾಲೇಜಿನ ಅಗತ್ಯ ಸಲಕರಣೆಗಳನ್ನು ನೀಡಿರುವವರ ವಿವರ

ಕಂಪ್ಯೂಟರ್ಸ್
- ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ–ಈಜೀಪುರ; ಶ್ರೀ ಕೆ.ಕೆ. ಪ್ರಕಾಶ್, ಮಾಲೀಕರು, ಕೆ.ಪಿ.ಆರ್‌ಎಸ್ & ಅಸೋಸಿಯೇಟ್ಸ್
- ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ–ಸಿಎಆರ್ ಕ್ವಾಟರ್ಸ್, ಆಡುಗೋಡಿ;ಎಸ್‌ಆರ್‌ಎಫ್ ಫೌಂಡೇಷನ್ಸ್
- ಸರ್ಕಾರಿ ಪ್ರಾಥಮಿಕ ಶಾಲೆ, ಆಡುಗೋಡಿ; ಬಾಷ್ ಇಂಡಿಯಾ ಪ್ರೈ.ಲಿ. ಆಡುಗೋಡಿ, ಬೆಂಗಳೂರು
- ಸರ್ಕಾರಿ ಪ್ರೌಢಶಾಲೆ, ಆಡುಗೋಡಿ
- ಸರ್ಕಾರಿ ಪದವಿ ಪೂರ್ವ ಕಾಲೇಜು, ಆಡುಗೋಡಿ
- ಸರ್ಕಾರಿ ಪ್ರೌಢಶಾಲೆ, ಮಡಿವಾಳ
- ಸರ್ಕಾರಿ ಪದವಿಪೂರ್ವ ಕಾಲೇಜು, ಮಡಿವಾಳ
- ಇತರೆ ಶಾಲೆಗಳಿಗೆ ಡೆಲ್ ಕಂಪ್ಯೂಟರ್ಸ್, ಒಟ್ಟು 100; ಶ್ರೀ ರಂಜೀತ್ ಜೆ.ಶಾ, ಮಾಲೀಕರು, ಆರ್‌ಆರ್‌ಬಿಸಿ ಸಂಸ್ಥೆ
- **ಡೆಸ್ಕ್‌ಗಳು;** 1) ಬಾಷ್ ಇಂಡಿಯಾ ಪ್ರೈ.ಲಿ. ಆಡುಗೋಡಿ, ಬೆಂಗಳೂರು
- 2) ಶ್ರೀ ನಾಗರಾಜರೆಡ್ಡಿ, ಬೊಮ್ಮಸಂದ್ರ, ಬೆಂಗಳೂರು
- **ಸ್ಮಾರ್ಟ್ ಬೋರ್ಡ್ ಮತ್ತು ಕಾಲೇಜು ಬ್ಯಾಗ್ಸ್;** m/s KIOCL Ltd
- **ಶಾಲಾ ಬ್ಯಾಗ್ಸ್ ಮತ್ತು ಪುಸ್ತಕ,** ಪೆನ್, ಪೆನ್ಸಿಲ್, ಜಾಮೆಟ್ರಿ ಬಾಕ್ಸ್
- 1) ಶ್ರೀ ಸುಹಾಸ್ ನಾಯ್ಡು, ಜೆ.ಪಿ. ನಗರ, ಬೆಂಗಳೂರು
- 2) ಶ್ರೀ ಮನ್ಸೂರ್ ಅಲಿ ಖಾನ್, ಅಧ್ಯಕ್ಷರು, ಡಿಪಿಎಸ್ ವಿದ್ಯಾಸಂಸ್ಥೆಗಳು
- 3) ಗಣಪತಿ ಸೇವಾ ಸಮಿತಿ ಕೆಎಚ್‌ಬಿ ಕಾಲೋನಿ, 5ನೇ ಬ್ಲಾಕ್, ಕೋರಮಂಗಲ
- 4) M/S Texxs Tyles International
- 5) M/S Kolour Koncepis International
- 6) M/S Keskan Indian Pvt Ltd
- **ಸ್ವೆಟರ್ಸ್;** ಬಾಷ್ ಇಂಡಿಯಾ ಪ್ರೈ.ಲಿ. ಆಡುಗೋಡಿ, ಬೆಂಗಳೂರು
- **ಮೆರಿಟ್ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಮತ್ತು ಹೌಸ್ ಕೀಪಿಂಗ್;** ಪಿ. ಗೋಪಿನಾಥ್ ರೆಡ್ಡಿ ಫೌಂಡೇಷನ್, ಬಿಟಿಎಂ ಬಡಾವಣೆ, ಬೆಂಗಳೂರು.
- ಹೌಸ್‌ಕೀಪಿಂಗ್–ನಿರ್ವಹಣೆ
- **ಸಿಸಿಟಿವಿ ಕ್ಯಾಮೆರಾಗಳು;** ಶ್ರೀ ರಾಜಪ್ಪ, ಶ್ರೀ ಚಂದ್ರಪ್ಪ ಮತ್ತು ಟೀಮ್
- **ಟ್ಯಾಬ್‌ಗಳು;** ಯುವ ಸ್ವಯಂ ಸೇವಾ ಸಂಸ್ಥೆ
- **ಚೇರ್ಸ್;** ಶ್ರೀ ದೇವರಾಜ, ವೆಂಕಟಾಪುರ
- ಶ್ರೀ ಅಶೋಕ್, ಟೀಚರ್ಸ್ ಕಾಲೋನಿ
- ಶ್ರೀದೀರಜ್ ಡಾಗ, ಕೋರಮಂಗಲ
- **ಬೋರ್ಡ್;** ಶ್ರೀ ಗಣೇಶ್, ವೆಂಕಟಾಪುರ
- **ಸಭಾಂಗಣಗಳನ್ನು ಹೊಂದಿರುವ ಶಾಲೆಗಳ ವಿವರ**
- 1) ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ–ವೆಂಕಟಾಪುರ
- 2) ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ–ಜಕ್ಕಸಂದ್ರ
- 3) ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ–ಕೋರಮಂಗಲ ಗ್ರಾಮ
- 4) ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ–ಈಜೀಪುರ
- 5) ಸರ್ಕಾರಿ ಪ್ರೌಢಶಾಲೆ–ಈಜೀಪುರ
- 6) ಸರ್ಕಾರಿ ಕನ್ನಡ ಮಾದರಿ ಪ್ರಾಥಮಿಕ ಶಾಲೆ–ರಾಜೇಂದ್ರ ನಗರ
- 7) ಸರ್ಕಾರಿ ಪ್ರೌಢಶಾಲೆ–ಮಡಿವಾಳ
- 8) ಸರ್ಕಾರಿ ಪದವಿಪೂರ್ವ ಕಾಲೇಜು–ಮಡಿವಾಳ
- 9) ಸರ್ಕಾರಿ ಪದವಿಪೂರ್ವ ಕಾಲೇಜು–ಆಡುಗೋಡಿ
- ಶಾಲೆಗಳಲ್ಲಿ ಮಕ್ಕಳ ಉಪಯೋಗಕ್ಕಾಗಿ ಗ್ರಂಥಾಲಯ ಸೌಲಭ್ಯ
- **ಈಜುಕೊಳ**
- **ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ಸಿಎಆರ್ ಕ್ವಾಟರ್ಸ್, ಆಡುಗೋಡಿ;ಶ್ರೀ ರವಿರೆಡ್ಡಿ, ಮಾಲೀಕರು, Urbanizes Developers, Koramangala** (ಕಾಮಗಾರಿ ಪ್ರಗತಿಯಲ್ಲಿದೆ)
- **ಪ್ರಯೋಗಾಲಯ**
- **ಸರ್ಕಾರಿ ಪ್ರೌಢಶಾಲೆ, ಮಡಿವಾಳ, ಭೌತವಿಜ್ಞಾನ ಮತ್ತು ರಸಾಯನವಿಜ್ಞಾನ;ರೋಟರಿ ಕ್ಲಬ್**
- **ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ಕಂಪ್ಯೂಟರ್ ವಿಜ್ಞಾನ; ಶ್ರೀ ಮಹಿಂದ್ರನ್ ಬಾಲಚಂದ್ರನ್, M/S Accele Parters**
- **ಎಲ್ಲ ತರಗತಿಗಳಲ್ಲಿ ಫ್ಯಾನ್‌ಗಳ ಅಳವಡಿಕೆ, 24 ಗಂಟೆಗಳ ವಿದ್ಯುತ್ ಮತ್ತು ನೀರಿನ ಸೌಕರ್ಯ ಕಲ್ಪಿಸಲಾಗಿದೆ.**

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಈಜಿಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿನ ಕಂಪ್ಯೂಟರ್ ಪ್ರಯೋಗಾಲಯ

ಸರ್ಕಾರಿ ಶಾಲೆಗಳಲ್ಲಿ ಕಲ್ಪಿಸಿರುವ ಸೌಲಭ್ಯಗಳು
- ಸಿಸಿಟಿವಿ ಕ್ಯಾಮೆರಾ
- ಡೆಸ್ಕ್ ಮತ್ತು ಕುರ್ಚಿಗಳು
- ಹೌಸ್‌ಕಿಪಿಂಗ್ ಸಿಬ್ಬಂದಿ ನಿಯೋಜನೆ
- ಸಮವಸ್ತ್ರ, ಸ್ವೆಟರ್, ನೋಟ್‌ಬುಕ್, ಪೆನ್‌ಗಳ ವಿತರಣೆ
- ಕಂಪ್ಯೂಟರ್, ಇಂಟರ್‌ನೆಟ್ ಸೌಲಭ್ಯ.
- ಶಿಕ್ಷಕರ ಕೊರತೆ ಇದ್ದಲ್ಲಿ ಅತಿಥಿ ಶಿಕ್ಷಕರ ನೇಮಕ

ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ಸಿಎಆರ್ ಕ್ವಾಟರ್ಸ್, ಆಡುಗೋಡಿ.

ಕಳೆದ ಎರಡು ವರ್ಷಗಳಿಂದ ಶಾಲೆಯ ಚಿತ್ರಣ ಸಂಪೂರ್ಣ ಬದಲಾಗಿದೆ. ಭೌತ ವಿಜ್ಞಾನ ಮತ್ತು ರಸಾಯನವಿಜ್ಞಾನ ಹಾಗೂ ಜೀವವಿಜ್ಞಾನದ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗಿದೆ. ಈ ಎಲ್ಲ ಬದಲಾವಣೆಗಳಿಗೆ ಶಾಸಕ ರಾಮಲಿಂಗಾರೆಡ್ಡಿ ಅವರೇ ಕಾರಣೀಕರ್ತರಾಗಿದ್ದಾರೆ. ವಿದ್ಯಾರ್ಥಿಗಳ ಬಾಳಿಗೆ ಬೆಳಕಾಗಿರುವ ಶಾಸಕರು, ಶೈಕ್ಷಣಿಕವಾಗಿ ಅಭಿವೃದ್ಧಿ ಸಾಧಿಸಲು ಎಲ್ಲ ರೀತಿ ಸೌಲಭ್ಯಗಳನ್ನು ಕಲ್ಪಿಸಿದ್ದಾರೆ. ಈ ಮೂಲಕ ವಿದ್ಯಾರ್ಥಿಗಳ ಬದುಕಿಗೆ ದಾರಿದೀಪವಾಗಿದ್ದಾರೆ.

ದಿವ್ಯಾ, ಪ್ರಾಂಶುಪಾಲ, ಮಡಿವಾಳ ಪದವಿಪೂರ್ವ ಕಾಲೇಜು

ಶಾಲೆಗೆ ನವ ಸ್ಪರ್ಶ: ವಿದ್ಯಾರ್ಥಿಗಳ ಸಂಖ್ಯೆ ಈಗ ದುಪ್ಪಟ್ಟು

ಮಡಿವಾಳದಲ್ಲಿರುವ ಸರ್ಕಾರಿ ಪ್ರಾಥಮಿಕ ಮತ್ತು ಪದವಿಪೂರ್ವ ಕಾಲೇಜಿಗೆ ಹೊಸ ಹೊಳಪು ಬಂದಿದೆ. ಈಗ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಅಪಾರ ಹೆಚ್ಚಳವಾಗಿದೆ.

ಪದವಿಪೂರ್ವ ಕಾಲೇಜಿನಲ್ಲಿ ಎರಡು ವರ್ಷಗಳ ಹಿಂದೆ 302 ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿದ್ದರು. ನಂತರ, ಕಳೆದ ವರ್ಷ 530 ವಿದ್ಯಾರ್ಥಿಗಳು ಪ್ರವೇಶ ಪಡೆದರು. ಈ ಬಾರಿ 616 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ. ಈಗಲೂ ಪ್ರವೇಶಾತಿಗೆ ಬೇಡಿಕೆ ಇದೆ. ವಿದ್ಯಾರ್ಥಿಗಳು ಪ್ರವೇಶ ಕಲ್ಪಿಸುವಂತೆ ಕೋರುತ್ತಿದ್ದಾರೆ.

ಈ ಕಾಲೇಜಿನಲ್ಲಿ ಕಲಾ, ವಿಜ್ಞಾನ ಮತ್ತು ವಾಣಿಜ್ಯ ವಿಭಾಗಗಳಿವೆ. ಶೈಕ್ಷಣಿಕ ಸುಧಾರಣೆಯಿಂದಾಗಿ ಉತ್ತಮ ಫಲಿತಾಂಶವೂ ದೊರೆಯುತ್ತಿದೆ.

ಈ ಕಾಲೇಜಿನ ಶೇ 80ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ಎಲ್ಲ ವಿದ್ಯಾರ್ಥಿಗಳಿಗೆ ₹10 ಸಾವಿರ ನಗದು, ಪುಸ್ತಕಗಳು, ಅತ್ಯುತ್ತಮ ಗುಣಮಟ್ಟದ ಶಾಲಾ ಬ್ಯಾಗ್‌ಗಳನ್ನು ನೀಡಲಾಗಿದೆ. ಈ ಮೂಲಕ ವಿದ್ಯಾರ್ಥಿಗಳನ್ನು ಹುರಿದುಂಬಿಸುವ ಪ್ರಯತ್ನ ಮಾಡಲಾಗಿದೆ.

ಆಡುಗೋಡಿ ಪದವಿಪೂರ್ವ ಕಾಲೇಜಿನಲ್ಲೂ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದೆ. 2021ರಲ್ಲಿ 389 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದರೆ, 2022ರಲ್ಲಿ 436 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ.

ತಾವರಕೆರೆ, ಆಡುಗೋಡಿ ಶಾಲೆಗಳನ್ನು ಮೇಲ್ದರ್ಜೆಗೇರಿಸಲಾಗಿದೆ. 2021ರಲ್ಲಿ ಇದ್ದ ವಿದ್ಯಾರ್ಥಿಗಳ ಸಂಖ್ಯೆ **4230**, 2022ರಲ್ಲಿ **5070**ಕ್ಕೆ ಏರಿಕೆಯಾಗಿದೆ.

ಕೋರಮಂಗಲ ಸರ್ಕಾರಿ ಪ್ರಾಥಮಿಕ ಶಾಲೆ

'ಮೊದಲು ಈ ಶಾಲೆ ನೋಡಲು ಆಗುತ್ತಿರಲಿಲ್ಲ. ಈಗ ಶಾಲೆಗೆ ಕಳೆ ಬಂದಿದೆ. ಖಾಸಗಿ ಶಾಲೆಗಳ ಮಕ್ಕಳು ಸಹ ಇಲ್ಲಿ ಪ್ರವೇಶ ಪಡೆಯುತ್ತಿದ್ದಾರೆ. ಕಂಪ್ಯೂಟರ್, ಸಿಸಿಟಿವಿ ಕ್ಯಾಮೆರಾ ಸೇರಿದಂತೆ ಸಕಲ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಈಗ ಅದ್ಭುತ ಶೈಕ್ಷಣಿಕ ಪರಿಸರವೇ ಸೃಷ್ಟಿಯಾಗಿದೆ. ಶಾಸಕ ರಾಮಲಿಂಗಾರೆಡ್ಡಿ ಅವರು ಎಲ್ಲ ಸೌಲಭ್ಯಗಳನ್ನು ಕಲ್ಪಿಸಿದ್ದಾರೆ'.

ಎಂ. ಚಂದ್ರಪ್ಪ, ಬಿಬಿಎಂಪಿ ಮಾಜಿ ಸದಸ್ಯ

ಕೋರಮಂಗಲದ ಸರ್ಕಾರಿ ಮಾದರಿ ಪ್ರಾಥಮಿಕ ಪಾಠಶಾಲೆಯ ಕಟ್ಟಡವನ್ನು ನವೀಕರಣಗೊಳಿಸಲಾಗಿದೆ. ಈ ಶಾಲೆಯಲ್ಲಿ 1ರಿಂದ 8ನೇ ತರಗತಿಯ 415 ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ.

1ರಿಂದ 3ನೇ ತರಗತಿಯ ನಲಿ–ಕಲಿಗಾಗಿಯೇ ಪ್ರತ್ಯೇಕ ಕೊಠಡಿಗಳನ್ನು ನಿರ್ಮಿಸಲಾಗಿದೆ ಮತ್ತು ಚಿಣ್ಣರಿಗೆ ಕುರ್ಚಿಗಳು ಮತ್ತು ಟೇಬಲ್‌ಗಳನ್ನು ಒದಗಿಸಲಾಗಿದೆ.

ಕೋರಮಂಗಲ ಪ್ರದೇಶದಲ್ಲಿ ಈ ಶಾಲೆ ಅತ್ಯುತ್ತಮ ಶಾಲೆಗಳಲ್ಲಿ ಒಂದಾಗಿ ರೂಪುಗೊಳ್ಳುತ್ತಿದೆ. ಮೂಲಸೌಕರ್ಯಗಳನ್ನು ಕಲ್ಪಿಸುವ ಜತೆಗೆ ಕಲಿಕೆಗೂ ಆದ್ಯತೆ ನೀಡಲಾಗಿದೆ.

ಪ್ರಾರ್ಥನೆಗೆ ಸಭಾಂಗಣದ ವ್ಯವಸ್ಥೆ ಸೇರಿದಂತೆ ಸಮಗ್ರ ಸೌಲಭ್ಯಗಳು ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿವೆ.

ಈಜಿಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕೊಠಡಿಗಳಲ್ಲಿನ ನೋಟ

ಮಡಿವಾಳ ಸರ್ಕಾರಿ ಪ್ರಾಥಮಿಕ ಶಾಲೆಯ ಗ್ರಂಥಾಲಯ

ಪ್ರಗತಿಯ ಹೊಸ ಪರ್ವ

ಮಡಿವಾಳ ಸರ್ಕಾರಿ ಮಾದರಿ ಪ್ರಾಥಮಿಕ ಪಾಠಶಾಲೆ –ಪ್ರಜಾವಾಣಿ ಚಿತ್ರ

ಅಂಗನವಾಡಿಗಳಿಗೂ ಹೆಚ್ಚು ಆದ್ಯತೆ

ಬಿಟಿಎಂ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಅಂಗನವಾಡಿ ಕೇಂದ್ರಗಳಿಗೆ ಕಾಯಕಲ್ಪ ನೀಡಲು ಶಾಸಕ ರಾಮಲಿಂಗಾರೆಡ್ಡಿ ಅವರು ಮುಂದಾಗಿದ್ದಾರೆ.

ಕ್ಷೇತ್ರ ವ್ಯಾಪ್ತಿಯಲ್ಲಿರುವ ರಾಜ್ಯ ಯೋಜನೆಯ 28 ಹಾಗೂ ಬೆಂಗಳೂರು ಪೂರ್ವ ಯೋಜನೆಯ 19 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಒಟ್ಟು 47 ಅಂಗನವಾಡಿ ಕೇಂದ್ರಗಳಿಗೆ ಮೂಲಸೌಕರ್ಯ ಹಾಗೂ ಇತರ ಸೌಲಭ್ಯಗಳನ್ನು ಕಲ್ಪಿಸುವ ಮೂಲಕ ಸರ್ವಾಂಗೀಣ ಅಭಿವೃದ್ಧಿ ಕೈಗೊಳ್ಳಲು ಶಾಸಕರು ಯೋಜನೆ ರೂಪಿಸಿದ್ದಾರೆ.

ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೂ (ಪಿಎಚ್‌ಸಿ) ಕಾಯಕಲ

ಬಿಟಿಎಂ ವಿಧಾನಸಭಾ ಕ್ಷೇತ್ರದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೂ (ಪಿಎಚ್‌ಸಿ) ಕಾಯಕಲ್ಪ ನೀಡಲಾಗಿದೆ. ಜನಸಾಮಾನ್ಯರ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಹಲವು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ.

ಮಡಿವಾಳದಲ್ಲಿ ಡಯಾಲಿಸ್ ಕೇಂದ್ರ ಕಾರ್ಯನಿರ್ವಹಿಸುತ್ತಿದೆ. ಕೋರಮಂಗಲ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೂ ಕಾಯಕಲ್ಪ ನೀಡಲಾಗಿದೆ. ಮಡಿವಾಳ, ಜಕ್ಕಸಂದ್ರ, ಈಜೀಪುರದ ಹೊಸ ಕಟ್ಟಡಗಳು ಮುಕ್ತಾಯದ ಹಂತದಲ್ಲಿವೆ. ತಾವರಕೆರೆ, ಎನ್.ಎಸ್. ಪಾಳ್ಯ, ಆಡುಗೋಡಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ಅಡಿಯಲ್ಲಿ 2022–23ನೇ ಸಾಲಿನಲ್ಲಿ ಮೇಲ್ದರ್ಜೆಗೇರಿಸಲಾಗುವುದು.

ವಿದ್ಯಾರ್ಥಿಗಳ ಬಾಳಿಗೆ ಬೆಳಕಾದ ಜನನಾಯಕ ರಾಮಲಿಂಗಾರೆಡ್ಡಿ

ಜನರ ಮಧ್ಯೆ ಇದ್ದು, ಜನಸೇವಕರಾಗಿ ಕ್ಷೇತ್ರದ ಅಭಿವೃದ್ಧಿಗೆ ಹಗಲಿರುಳು ಶ್ರಮಿಸುತ್ತಿರುವವರು ಸರಳ, ಸಜ್ಜನ ವ್ಯಕ್ತಿತ್ವದ ಶಾಸಕ ರಾಮಲಿಂಗಾರೆಡ್ಡಿ ಅವರು.

ಜಾತ್ಯತೀತವಾಗಿ, ಪಕ್ಷಾತೀತವಾಗಿ ಎಲ್ಲ ವರ್ಗದ ಪ್ರೀತಿ, ವಿಶ್ವಾಸ ಗಳಿಸಿರುವ ಶಾಸಕರು, ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಬದ್ಧರಾಗಿ ದುಡಿಯುತ್ತಿದ್ದಾರೆ. ಶೈಕ್ಷಣಿಕ ಕ್ಷೇತ್ರದಲ್ಲೂ ಅಪಾರ ಬದಲಾವಣೆ ತರುವ ಪಣ ತೊಟ್ಟು ಕಾರ್ಯರೂಪಕ್ಕೆ ತಂದಿದ್ದಾರೆ. ಇದರ ಫಲವಾಗಿ ಈಗ ಕ್ಷೇತ್ರದಲ್ಲಿ ನಳನಳಿಸುತ್ತಿರುವ ಶಾಲೆಗಳು ಎಲ್ಲೆಡೆ ಕಾಣಿಸುತ್ತಿವೆ.

ಸದಾ ಜನರ ಸಂಕಷ್ಟಗಳಿಗೆ ಸ್ಪಂದಿಸುವ ಶಾಸಕರು, ಬಿಟಿಎಂ ವಿಧಾನಸಭಾ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಮೂಲಕ ಹೊಸ ಸ್ಪರ್ಶ ನೀಡಿದ್ದಾರೆ. ಯಾವುದೇ ಸಮಯ, ಸಂದರ್ಭದಲ್ಲಿ ಜನಸಾಮಾನ್ಯರು ರಾಮಲಿಂಗಾ ರೆಡ್ಡಿ ಅವರನ್ನು ಭೇಟಿಯಾಗಿ ಅಹವಾಲುಗಳನ್ನು ಸಲ್ಲಿಸಬಹುದಾಗಿದೆ.

2020ರಲ್ಲಿ ಶ್ರೀ ಸುರೇಶ್ ಕುಮಾರ್ ಅವರು ಶಿಕ್ಷಣ ಸಚಿವರಾಗಿದ್ದಾಗ ಮತ್ತು ಪ್ರೊ.ಎಂ.ಆರ್. ದೊರೆಸ್ವಾಮಿ ಅವರು ಶಿಕ್ಷಣ ಸುಧಾರಣಾ ಸಲಹೆಗಾರರಾಗಿದ್ದ ಸಂದರ್ಭದಲ್ಲಿ 'ಸರ್ಕಾರಿ ಶಾಲೆಗಳ ದತ್ತು ಸ್ವೀಕಾರ' ಯೋಜನೆ ಜಾರಿಗೊಳಿಸಲಾಯಿತು. ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಪ್ರತಿಯೊಬ್ಬ ಶಾಸಕರು ಮೂರು ಸರ್ಕಾರಿ ಶಾಲೆಗಳನ್ನು ದತ್ತು ಸ್ವೀಕರಿಸಬೇಕು ಎಂದು ಸುತ್ತೋಲೆ ಹೊರಡಿಸಲಾಗಿತ್ತು. ಸರ್ಕಾರದ ಸೂಚನೆಯ ಮೇರೆಗೆ ಶಿಕ್ಷಣ ಇಲಾಖೆ ಅಧಿಕಾರಿಗಳ ಜತೆ ಚರ್ಚಿಸಿ ರಾಮಲಿಂಗಾರೆಡ್ಡಿ ಅವರು ತಮ್ಮ ಬಿಟಿಎಂ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ 23 ಸರ್ಕಾರಿ ಶಾಲೆಗಳನ್ನು ದತ್ತು ಪಡೆದರು. ಇವುಗಳಲ್ಲಿ 20 ಶಾಲೆಗಳನ್ನು ಅಭಿವೃದ್ಧಿಪಡಿಸಲಾಗಿದ್ದು, ಮೂರು ಶಾಲೆಗಳ ಅಭಿವೃದ್ಧಿ ಕಾರ್ಯ ಪ್ರಗತಿಯಲ್ಲಿದೆ.

23 ಶಾಲೆಗಳನ್ನು ದತ್ತು ಪಡೆದಿರುವ ಶಾಸಕ ರಾಮಲಿಂಗಾರೆಡ್ಡಿ ಅವರು, ದಾನಿಗಳ ಸಹಭಾಗಿತ್ವದಲ್ಲಿ ಬಿಟಿಎಂ ವಿಧಾನಸಭಾ ಕ್ಷೇತ್ರದಲ್ಲಿನ ಸರ್ಕಾರಿ ಶಾಲೆಗಳಿಗೆ ಹೊಸ ಸ್ಪರ್ಶ ನೀಡುವ ಮೂಲಕ ಶೈಕ್ಷಣಿಕ ವಾತಾವರಣಕ್ಕೆ ಚೈತನ್ಯ ತುಂಬಿದ್ದಾರೆ.

ಸತತ ಏಳು ಬಾರಿ ಬಿಟಿಎಂ ವಿಧಾನಸಭಾ ಕ್ಷೇತ್ರದಿಂದ ಜಯ ಸಾಧಿಸಿರುವ ಅವರು ಪ್ರಸ್ತುತ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಕಾರ್ಯಾಧ್ಯಕ್ಷರು. 2017ರ ಸೆಪ್ಟೆಂಬರ್ 2ರಿಂದ 2018ರ ಮೇ 17ರವರೆಗೆ ಗೃಹ ಖಾತೆ ಸಚಿವರಾಗಿ ಅವರು ಕಾರ್ಯನಿರ್ವಹಿಸಿದ್ದಾರೆ. ಇದಕ್ಕೂ ಮುನ್ನ 2013ರ ಮೇ 18ರಿಂದ 2017ರ ಸೆಪ್ಟೆಂಬರ್ 2ರವರೆಗೆ ಸಾರಿಗೆ ಸಚಿವರಾಗಿದ್ದಾಗ 200ಕ್ಕೂ ಹೆಚ್ಚು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಪ್ರಶಸ್ತಿಗಳು ಲಭ್ಯವಾಗಿವೆ.

ಸಚಿವರಾಗಿದ್ದಾಗ ಈ ಇಲಾಖೆಗಳಿಗೆ ನವಸ್ಪರ್ಶ ನೀಡಿ ಸುಧಾರಣೆಯತ್ತ ಕೊಂಡೊಯ್ದಿದ್ದು ಜನಮೆಚ್ಚುಗೆಗೆ ಪಾತ್ರವಾಗಿತ್ತು. 2018ರ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಿ ಬಿಟಿಎಂ ವಿಧಾನಸಭಾ ಕ್ಷೇತ್ರದಿಂದ ಮರು ಆಯ್ಕೆಯಾದರು.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಕ್ಷೇತ್ರದ ಅಭಿವೃದ್ಧಿಗೆ ತಾವು ಕಂಡ ಕನಸುಗಳನ್ನು ನನಸು ಮಾಡುವುದರಲ್ಲಿ ಸದಾ ಮುಂದಿರುವ ಶಾಸಕ ರಾಮಲಿಂಗಾರೆಡ್ಡಿ ಅವರು, ಸರ್ಕಾರದ ಯೋಜನೆಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ಶ್ರಮಿಸುತ್ತಿದ್ದಾರೆ. ಕ್ಷೇತ್ರವು ಸರ್ವಾಂಗೀಣ ಅಭಿವೃದ್ಧಿ ಸಾಧಿಸಬೇಕು ಎನ್ನುವ ದೃಷ್ಟಿಯಿಂದ ಮತ್ತು ಶೈಕ್ಷಣಿಕ ಮಹತ್ವದ ಕಾರಣಕ್ಕೆ ಸರ್ಕಾರಿ ಶಾಲೆಗಳಿಗೆ ಶಾಸಕ ರಾಮಲಿಂಗಾರೆಡ್ಡಿ ಅವರು ಕಾಯಕಲ್ಪ ನೀಡಿದ್ದಾರೆ.

ಬದಲಾವಣೆಯ ಫಲದಿಂದಾಗಿ ಈಗ ಖಾಸಗಿ ಶಾಲೆಗಳ ವಿದ್ಯಾರ್ಥಿಗಳು ಸಹ ಈಗ ಸರ್ಕಾರಿ ಶಾಲೆಗಳತ್ತ ಮುಖಮಾಡಿದ್ದಾರೆ. ಇಲ್ಲಿನ ಸೌಲಭ್ಯಗಳನ್ನು ಕಂಡು ಅಚ್ಚರಿಪಟ್ಟಿದ್ದಾರೆ. ಆಧುನಿಕ ತಂತ್ರಜ್ಞಾನವನ್ನು ಪ್ರಾಥಮಿಕ ಹಂತದಿಂದಲೇ ವಿದ್ಯಾರ್ಥಿಗಳಿಗೆ ಶಾಸಕರು ಪರಿಚಯಿಸುವ ಪ್ರಯತ್ನ ಮಾಡಿದ್ದಾರೆ. ಉತ್ತಮ ಶಿಕ್ಷಣ, ಉತ್ತಮ ಸೌಲಭ್ಯಗಳು ಮತ್ತು ಉತ್ತಮ ಶಿಕ್ಷಕರಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯಕ್ಕೆ ಭದ್ರ ಬುನಾದಿ ಹಾಕಬಹುದು ಎನ್ನುವ ಆಶಯದೊಂದಿಗೆ ಶಾಸಕರು, ಶಾಲೆಗಳಲ್ಲಿ ಬೋಧನೆ ಮತ್ತು ಮೂಲಸೌಕರ್ಯಗಳಿಗೆ ಒತ್ತು ನೀಡಿದ್ದಾರೆ.

ಸರ್ಕಾರಿ ಶಾಲೆಗಳಿಗೆ ಕಾಯಕಲ್ಪ ನೀಡುವ ತಮ್ಮ ಅನುಭವ ಮತ್ತು ಪ್ರೇರಣೆಯನ್ನು ಶಾಸಕ ರಾಮಲಿಂಗಾರೆಡ್ಡಿ ಅವರು ಹಂಚಿಕೊಂಡಿದ್ದು ಹೀಗೆ:

'ದೆಹಲಿಯಲ್ಲಿ ಸರ್ಕಾರಿ ಶಾಲೆಗಳ ಅಭಿವೃದ್ಧಿ ಬಗ್ಗೆ ಹೆಚ್ಚು ಸುದ್ದಿಯಾಗಿತ್ತು. ಅಲ್ಲಿನ ಶಾಲೆಗಳ ವಿಡಿಯೊ ಸಹ ನೋಡಿದ್ದೆ. ಇದೇ ಮಾದರಿಯಲ್ಲಿ ನನ್ನ ಕಲ್ಪನೆಯಲ್ಲಿ ಬಿಟಿಎಂ ವಿಧಾನಸಭಾ ಕ್ಷೇತ್ರದ ಶಾಲೆಗಳನ್ನು ದತ್ತು ಪಡೆದು



ಅಭಿವೃದ್ಧಿಪಡಿಸಲು ನಿರ್ಧರಿಸಿದೆ. ಆರಂಭದಲ್ಲಿ ಕೇವಲ ಮೂರು ಶಾಲೆಗಳನ್ನು ತೆಗೆದುಕೊಳ್ಳಬೇಕು ಎಂದು ನಿರ್ಧರಿಸಲಾಗಿತ್ತು. ನಂತರ, ಕ್ಷೇತ್ರದಲ್ಲಿನ ಎಲ್ಲ 23 ಶಾಲೆಗಳನ್ನು ದತ್ತು ಪಡೆದು ಅಭಿವೃದ್ಧಿಪಡಿಸಲಾಯಿತು' ಎಂದು ವಿವರಿಸುತ್ತಾರೆ.

'ದತ್ತು ಪಡೆದ ನಂತರ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನ ಮತ್ತು ದಾನಿಗಳ ದೇಣಿಗೆಯಿಂದ ಶಾಲೆಗಳಿಗೆ ಹೊಸ ಸ್ಪರ್ಶ ನೀಡಲಾಯಿತು. ದಾನಿಗಳ ಕಾರ್ಯ ಶ್ಲಾಘನೀಯ' ಎಂದು ಮೆಚ್ಚುಗೆ ವ್ಯಕ್ತಪಡಿಸುತ್ತಾರೆ.

'ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಸಿದ್ದರಿಂದ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದೆ. ಸಿಸಿಟಿವಿ ಕ್ಯಾಮೆರಾ, ಕಂಪ್ಯೂಟರ್ ಸೌಲಭ್ಯ ಹಾಗೂ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲಾಗಿದೆ. ಸರ್ಕಾರಿ ಶಾಲೆಗಳಲ್ಲಿ ಹೌಸ್‌ಕಿಪಿಂಗ್ ವ್ಯವಸ್ಥೆಯನ್ನು ಸಹ ಕಲ್ಪಿಸಲಾಗಿದೆ. ಇದರಿಂದಾಗಿ ಶಾಲೆಯ ವಾತಾವರಣದಲ್ಲಿ ನೈರ್ಮಲ್ಯ ಕಾಪಾಡಲು ಸಾಧ್ಯವಾಗಿದೆ. ಸಂಪೂರ್ಣವಾಗಿ ಸ್ವಚ್ಛತೆ ಕಾಪಾಡುವ ಮೂಲಕ ಉತ್ತಮ ಪರಿಸರ ಸೃಷ್ಟಿಸುವ ಪ್ರಯತ್ನ ಮಾಡಲಾಗಿದೆ. ಹೌಸ್‌ಕಿಪಿಂಗ್ ಸಹ ವ್ಯವಸ್ಥೆ ಮಾಡಲಾಗಿದೆ' ಎಂದು ವಿವರಿಸುತ್ತಾರೆ.

'ವಿದ್ಯಾರ್ಥಿಗಳ ಶುಲ್ಕವನ್ನು ಸಹ ಭರಿಸಲಾಗಿದೆ. ಪ್ರೌಢಶಾಲೆಯ ಮತ್ತು ಪದವಿಪೂರ್ವ ಕಾಲೇಜಿನ ಎಲ್ಲಾ ಶುಲ್ಕವನ್ನು ಸಹ ಪಾವತಿಸಲಾಗಿದೆ. ಗುಣಮಟ್ಟದ ಕಲಿಕೆಗೂ ಆದ್ಯತೆ ನೀಡಲಾಗಿದೆ. ಹೀಗಾಗಿ, ಯಾವುದೇ ಶಾಲೆಯಲ್ಲಿ ಶಿಕ್ಷಕರ ಕೊರತೆಯಾಗದಂತೆ ಕ್ರಮವಹಿಸಲಾಗಿದೆ. ಸರ್ಕಾರ ಹೊಸದಾಗಿ ಶಿಕ್ಷಕರನ್ನು ನೇಮಿಸುವವರೆಗೆ ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳಲಾಗಿದೆ.

ಅಭಿವೃದ್ಧಿ ಕಾರ್ಯಗಳಿಗೆ ಸಹಕರಿಸಿದ ಎಲ್ಲ ದಾನಿಗಳಿಗೆ ಮತ್ತು ಅನುಮತಿ ನೀಡಿದವರಿಗೂ ಕೃತಜ್ಞತೆಗಳು

- ಸುರೇಶ್ ಕುಮಾರ್, ಮಾಜಿ ಶಿಕ್ಷಣ ಸಚಿವರು.
- ಪ್ರೊ.ಎಂ.ಆರ್. ದೊರೆಸ್ವಾಮಿ
- ಡಿಡಿಪಿಐ– ಆಂಜಿನಪ್ಪ.
- ಬಿಇಒ –ಪಂಕಜ
- ಮಂಜುನಾಥರೆಡ್ಡಿ, ಮಾಜಿ ಮೇಯರ್
- ಮಂಜುನಾಥ್
- ಮಂಜುಳಾ ಸಂಪತ್
- ರಾಮಚಂದ್ರ
- ಎಂ. ಚಂದ್ರಪ್ಪ
- ಬ್ಲಾಕ್ ಅಧ್ಯಕ್ಷರಾದ ಗೋವರ್ಧನ್ ರೆಡ್ಡಿ ಮತ್ತು ಆನಂದ್
- ಮಾಜಿ ಕಾರ್ಪೋರೇಟರ್‌ಗಳು, ಶಾಲಾ ಅಭಿವೃದ್ಧಿ ಸಮಿತಿ ಪದಾಧಿಕಾರಿಗಳು, ಪ್ರಾಂಶುಪಾಲರು, ಮುಖ್ಯ ಶಿಕ್ಷಕರು ಮತ್ತು ಶಿಕ್ಷಕ ಸಿಬ್ಬಂದಿ.

ಆಡುಗೋಡಿಯ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ನಿರ್ಮಿಸಲಾಗುತ್ತಿರುವ ಈಜುಕೊಳವನ್ನು ಶಾಸಕ ರಾಮಲಿಂಗರೆಡ್ಡಿ ಪರಿಶೀಲಿಸಿದರು



ಶ್ರೀ ರಾಮಲಿಂಗಾರೆಡ್ಡಿ, ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದಲ್ಲಿ ಅಭಿವೃದ್ಧಿಪಡಿಸಿರುವ ಶಾಲೆಗಳು

- ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ– ಮಡಿವಾಳ
- ಸರ್ಕಾರಿ ಪ್ರೌಢಶಾಲೆ– ಮಡಿವಾಳ
- ಸರ್ಕಾರಿ ಪದವಿಪೂರ್ವ ಶಿಕ್ಷಣ ಕಾಲೇಜು–ಮಡಿವಾಳ
- ಸರ್ಕಾರಿ ಉರ್ದು ಪ್ರಾಥಮಿಕ ಶಾಲೆ– ರಾಜೇಂದ್ರ ನಗರ
- ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ– ಡೈರಿ ಕ್ವಾರ್ಟರ್ಸ್
- ಸರ್ಕಾರಿ ಪ್ರಾಥಮಿಕ ಶಾಲೆ, ಮದ್ದೂರಮ್ಮ ಕಾಲೋನಿ, ನ್ಯೂ ತಾವರಕೆರೆ
- ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ– ಕೋರಮಂಗಲ ಗ್ರಾಮ
- ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ– ಈಜೀಪುರ– ಕಟ್ಟಡ–1
- ಸರ್ಕಾರಿ ಪ್ರಾಥಮಿಕ ಶಾಲೆ, ಮೇಸ್ತ್ರೀಪಾಳ್ಯ, ಕೋರಮಂಗಲ.

(ಕಾಮಗಾರಿ ಪ್ರಗತಿಯಲ್ಲಿದೆ.)



ಶಾಲಾ ಕಟ್ಟಡಗಳನ್ನು ಅಭಿವೃದ್ಧಿಪಡಿಸಿದ ದಾನಿಗಳ ವಿವರ

- ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ವೆಂಕಟಾಪುರ, ಶ್ರೀ ವಿ.ಎಸ್. ಪ್ಯಾಟ್ರಿಕ್ ರಾಜು, ಅಧ್ಯಕ್ಷರು, ಕರ್ನಾಟಕ ಕೇಬಲ್ ಆಪರೇಟರ್ಸ್, ಬೆಂಗಳೂರು
- ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ– ಜಕ್ಕಸಂದ್ರ, ಶ್ರೀ ರಾಮೋಜಿಗೌಡ, ಮಾಲೀಕರು, ನೆಕ್ಸ್‌ಪ್ಲೇಸ್ ಇನ್ಫೋ ಪ್ರೈವೇಟ್ ಲಿಮಿಟೆಡ್ ಹಾಗೂ ಸಮಾಜ ಸೇವಕರು
- ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ಈಜೀಪುರ– ಕಟ್ಟಡ–2, ಶ್ರೀ ರವಿಚಂದ್ರನ್, ಮಾಲೀಕರು, ನಂದನ ಹೋಟೆಲ್ಸ್
- ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ– ಶ್ರೀನಿವಾಗಲು; ಶ್ರೀ ಎಂ. ಚಂದ್ರಾರೆಡ್ಡಿ, ಖಜಾಂಚಿ, ಕರ್ನಾಟಕ ರೆಡ್ಡಿ ಜನಸಂಘ
- ಸರ್ಕಾರಿ ಮಾದರಿ ಪ್ರೌಢಶಾಲೆ–ಈಜೀಪು, ಶ್ರೀ ರವಿಂದ್ರ ಕೆ.ಜೆ. ಮಾಲೀಕರು, KMJ Spazes
- ಸರ್ಕಾರಿ ಕನ್ನಡ ಪ್ರಾಥಮಿಕ ಶಾಲೆ– ರಾಜೇಂದ್ರ ನಗರ; 1) ಶ್ರೀ ಯು.ಬಿ. ವೆಂಕಟೇಶ್, ಮಾನ್ಯ ವಿಧಾನಪರಿಷತ್ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನ ಮತ್ತು 2) ಶ್ರೀ ಹರೀಶ್ ಬಾಬು, ಕೋರಮಂಗಲ, ಕಾಂಗ್ರೆಸ್ ಮುಖಂಡರು.
- ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ಎಂಎಆರ್‌ಪಿ, ಸಿಎಆರ್ ಕ್ವಾರ್ಟರ್ಸ್, ಆಡುಗೋಡಿ; ಶ್ರೀ ಮೋಹನ್, ಮಾಜಿ ಸದಸ್ಯರು, ಬೆಂಗಳೂರು ಮಹಾನಗರ ಪಾಲಿಕೆ
- ಸರ್ಕಾರಿ ಪ್ರಾಥಮಿಕ ಶಾಲೆ, ಆಡುಗೋಡಿ; ಬಾಷ್ ಇಂಡಿಯಾ ಪ್ರೈ.ಲಿ. ಆಡುಗೋಡಿ, ಬೆಂಗಳೂರು
- ಸರ್ಕಾರಿ ಪ್ರೌಢಶಾಲೆ, ಆಡುಗೋಡಿ– ಬಾಷ್
- ಸರ್ಕಾರಿ ಪ್ರೌಢಶಾಲೆ, ಆಡುಗೋಡಿ – ಬಾಷ್

ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ತಾವರೆಕೆರೆ
2 ಕಟ್ಟಡಗಳನ್ನು ಕರ್ನಾಟಕ ರಾಜ್ಯ ರೆಡ್ಡಿ ಜನಸಂಘದ ವತಿಯಿಂದ ಹಾಗೂ 1 ಕಟ್ಟಡವನ್ನು ಶ್ರೀ ಜಯರಾಮ ರೆಡ್ಡಿ, ಅಧ್ಯಕ್ಷರು, ಕರ್ನಾಟಕ ರೆಡ್ಡಿ ಜನಸಂಘ ಅವರಿಂದ

- ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸುದ್ದಗುಂಟೆಪಳ್ಯ; ಶ್ರೀ ಜಿ.ಸಿ. ಚಂದ್ರಶೇಖರ್, ಮಾನ್ಯ ರಾಜ್ಯಸಭಾ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನ

ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ಮಡಿವಾಳ

- ಶ್ರೀಮತಿ ವಿನಿಶಾ ನಿರೋ, ಮಾನ್ಯ, ನಾಮನಿರ್ದೇಶಿತ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನ

ಕರ್ನಾಟಕ ಸರ್ಕಾರ
ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ
ನಿರ್ದೇಶಕರ ಕಚೇರಿ, ವಿದ್ಯಾನಗರ, ಹುಬ್ಬಳ್ಳಿ–580 021
ಸಂ: ಕಿಮ್ಸ್/ಎಸ್.ಯು.ಪಿ(5)/EQP/Re-/Tender/PSV-580/2022-23 ದಿನಾಂಕ: 04-08-2022

ಅಲ್ಪಾವಧಿ ಮರು–ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ನಿರ್ದೇಶಕರು, ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ ಇಲ್ಲಿಗೆ ಇವರ ಅರ್ಹ ಟೆಂಡರ್‌ದಾರರಿಂದ ಕಿಮ್ಸ್ ಆಸ್ಪತ್ರೆಯ ಮಾನಸಿಕ ರೋಗ ವಿಭಾಗಕ್ಕೆ ವೈದ್ಯಕೀಯ ಉಪಕರಣಗಳನ್ನು ಹಾಗೂ ಪಿಠೋಪಕರಣಗಳನ್ನು ಪೂರೈಸುವುದಕ್ಕಾಗಿ ಇ–ಟೆಂಡರ್ ಮೂಲಕ ಮರು ಟೆಂಡರ್ ಪ್ರಕಟಣೆ ಹೊರಡಿಸಲಾಗಿದೆ.

1	Tenders may be uploaded from	08-08-2022
2	Last date for uploading the tenders	15-08-2022 before 5:00 PM

ಈ ದಾಖಲೆಗಳನ್ನು ಟೆಂಡರ್ ಪ್ರೊಸೆಸ್ಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ https://eproc.karnataka.gov.in ಮೂಲಕ ಮಾಹಿತಿ ಪಡೆಯಬಹುದು.

ಸಹಿ/– ನಿರ್ದೇಶಕರು
ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ, ಜಿಲ್ಲಾ ಪಂಚಾಯಿತಿ ಭವನ ಎದುರು, ಬಿ ಎಂ ರಸ್ತೆ, ರಾಮನಗರ
(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ)
e-mail:- cdporamanagara1@gmail.com ದೂರವಾಣಿ ಸಂಖ್ಯೆ: 080-27273912
ಸಂಖ್ಯೆ: cdpo/ram/egg/2022-23 ದಿನಾಂಕ: 06/08/2022

ತಿದ್ದುಪಡಿ ಪ್ರಕಟಣೆ

ರಾಮನಗರ ತಾಲ್ಲೂಕಿನ ಶಿಶು ಅಭಿವೃದ್ಧಿಯೋಜನೆ ಅಡಿಯಲ್ಲಿ ಅಂಗನವಾಡಿ ಕೇಂದ್ರಗಳಿಗೆ ಮೊಟ್ಟೆ ಸರಬರಾಜು ಮಾಡಲು ಇ.ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಹೊರಡಿಸಲಾಗಿದ್ದು ಪ್ರಕಟಣೆಯ ಸಂಖ್ಯೆ: ಶಿಅಯೋ/ರಾಮನಗರ/ಕೋಮೊ/2022-23 ದಿನಾಂಕ: 25/07/2022 ರಲ್ಲಿ ಹೊರಡಿಸಲಾಗಿತ್ತು. ಹೊರಡಿಸಲಾಗಿದ್ದ ಪ್ರಕಟಣೆಯಲ್ಲಿ ಪರತ್ತುಗಳಲ್ಲಿ Section-V-Qualification criteria (ಅರ್ಹತಾ ಮಾನದಂಡ)ಗಳಲ್ಲಿ Section –V- Qualification criteria (ಅರ್ಹತಾ ಮಾನದಂಡ) ಕ್ರ.ಸಂ.03 ರಲ್ಲಿ Tenderer should be a NECC registered poultry farmer with out third party involvement ಎಂಬುದನ್ನು Tenderer should be a NECC or karnataka co-operative poultry federation, registered poultry farmer without third party involvement ಎಂದು ಮಾರ್ಪಾಡು ಮಾಡಿಕೊಂಡು ಓದಿಕೊಳ್ಳುವುದು.

ಸಹಿ/–
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ರಾಮನಗರ ತಾಲ್ಲೂಕ್, ರಾಮನಗರ
ಡಿಐಪಿಆರ್/ರಾಮನಗರ/167/ಮಣಿಪಾಲ್/2022–23

ಉಪ ನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ, ಸಮಗ್ರ ಶಿಕ್ಷಣ ಕರ್ನಾಟಕ, ಸಾರ್ವಜನಿಕ ಶಿಕ್ಷಣ ಇಲಾಖೆ, ತುಮಕೂರು (ದ) ಜಿಲ್ಲೆ, ತುಮಕೂರು
ಸಂ.ಸ.ಶಿ.ಕ./ಸಿ2/ಕೆ.ಕೆ.ಜಿ.ಬಿ.ವಿ/ಅನು–12/2021–22 ದಿನಾಂಕ: 04.08.2022

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಸಮಗ್ರ ಶಿಕ್ಷಣ ಕರ್ನಾಟಕ ತುಮಕೂರು(ದ) ಯೋಜನೆಯಡಿ 2021–22 ಹಾಗೂ 2022–23 ನೇ ಶೈಕ್ಷಣಿಕ ಸಾಲಿಗೆ ಕೆ.ಕೆ.ಜಿ.ಬಿ.ವಿ ವಸತಿ ನಿಲಯ. ದೊಡ್ಡಮದುರೆ, ಕುಣಿಗಲ್ ತಾ// ನಲ್ಲಿ ವ್ಯಾಸಂಗ ಮಾಡುತ್ತಿರುವ ಗರಿಷ್ಠ 100 ವಿದ್ಯಾರ್ಥಿನಿಯರಿಗೆ ಊಟೋಪಹಾರ ಒದಗಿಸುವ ಸಂಬಂಧ ಅರ್ಹ ಸ್ವ–ಸಹಾಯ ಗುಂಪು, ಸ್ತ್ರೀಶಕ್ತಿ ಸಂಘ ಹಾಗೂ ಸರ್ಕಾರೇತರ ಸ್ವಯಂ ಸೇವಾ ಸಂಘ/ಏಜೆನ್ಸಿಗಳ ಮೂಲಕ ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಒದಗಿಸಲು ಅಲ್ಪಾವಧಿ ಟೆಂಡರ್ ಮೂಲಕ ಅರ್ಹ ಸಂಸ್ಥೆ/ಏಜೆನ್ಸಿಗಳಿಂದ ಅರ್ಜಿಗಳನ್ನು ಒಂದು ಬಾರಿ ಅಲ್ಪಾವದಿ ಇ–ಟೆಂಡರ್ ಕರೆಯಲಾಗಿದ್ದು ಬಿಡ್ ಸಲ್ಲಿಕೆಯಾಗದೆ ನಿಮಿತ್ತ ಪ್ರಸ್ತುತ 2022–23 ಸಾಲಿಗೆ ಮಾತ್ರ 03 ನೇ ಬಾರಿಗೆ ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಅಂತರ್ಜಾಲ www.eproc.karnataka.gov.in ನಲ್ಲಿ ಅರ್ಜಿಗಳನ್ನು ದ್ವಿ–ಲಕೋಟೆ ಪದ್ದತಿಯಲ್ಲಿ ಆಹ್ವಾನಿಸಲಾಗಿದೆ. ಅರ್ಜಿ ಶುಲ್ಕವನ್ನು e-Procurement ನಲ್ಲಿ ತಿಳಿಸಿರುವಂತೆ ಪಾವತಿಸಿ ಅಂತರ್ಜಾಲದಲ್ಲಿ ಅರ್ಜಿ ಸಲ್ಲಿಸುವುದು.

ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: **05.08.2022.** ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **12.08.2022** ಸಂಜೆ 5.00 ಗಂಟೆವರೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **16.08.2022** ಬೆಳಿಗ್ಗೆ 10.00 ಗಂಟೆಗೆ.

ದೊಡ್ಡಮದುರೆ ಕುಣಿಗಲ್ ತಾ// ತುಮಕೂರು (ದ) ಜಿಲ್ಲೆ: ಬಿಡ್ ಮೊತ್ತ ರೂ.12.50 ಲಕ್ಷ. ಇ ಎಂ ಡಿ ಮೊತ್ತ ರೂ.31,250/–. ಹೆಚ್ಚಿನ ಮಾಹಿತಿಗಾಗಿ 94489 99407 ದೂರವಾಣಿ ಮುಖಾಂತರ ಸಂಪರ್ಕಿಸಬಹುದು.

ಸಹಿ/–(ಸಿ.ನಂಜಯ್ಯ) ಉಪನಿರ್ದೇಶಕರು (ಆಡಳಿತ) ಹಾಗೂ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು
ಸಮಗ್ರ ಶಿಕ್ಷಣ, ಸಾರ್ವಜನಿಕ ಶಿಕ್ಷಣ ಇಲಾಖೆ, ತುಮಕೂರು(ದ) ಜಿಲ್ಲೆ.
DIPR/TUM/396/MCA/2022-23

ನಗರಸಭಾ ಕಾರ್ಯಾಲಯ, ಚಿತ್ರದುರ್ಗ–577501
ಸಂ:ನಸಚಿ:ತಾಂತ್ರಿಕ(1)/ಟೆಂಡರ್:ಕಿ.ಅ./ಸಿಆರ್:09:2022–23, ದಿ: 05.08.2022

ಇ–ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಹಾಗೂ ಮರು ಟೆಂಡರ್ ಪ್ರಕಟಣೆ
(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–1 &2ರ ನಿಬಂಧನೆಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.)

ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ 2022–23ನೇ ಸಾಲಿನ 15ನೇ ಹಣಕಾಸು ಮೂಲ ಅನುದಾನ ಮತ್ತು ಎಸ್‌ಎಫ್‌ಸಿ, ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ ಅನುದಾನದಲ್ಲಿ ಅನುಮೋದನೆಯಾಗಿರುವ ರೂ. 107.46 ಲಕ್ಷಗಳ 06 ಕಾಮಗಾರಿಗಳನ್ನು ಚಿತ್ರದುರ್ಗ ನಗರಸಭಾ ವ್ಯಾಪ್ತಿಯಲ್ಲಿ ಕೈಗೊಳ್ಳಲು ಇ–ಪ್ರಕ್ಯೂರ್‌ಮೆಂಟ್ ಏಕ/ದ್ವಿ–ಲಕೋಟೆ ಪದ್ದತಿಯಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಲ್ಪಟ್ಟ ಅರ್ಹ ದರ್ಜೆ ಗುತ್ತಿಗೆದಾರರು ಐಟಂವಾರು ಟೆಂಡರ್ ಕರೆಯಲಾಗಿದೆ. ಇ–ಪ್ರಕ್ಯೂರ್‌ಮೆಂಟ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ **htt:/eproc.Karanataka.gov.in** ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು, ಟೆಂಡರ್ ಫಾರಂಗಳನ್ನು ಪಡೆಯುವುದು, ಭರ್ತಿ ಮಾಡುವುದು ಮತ್ತು ಸಲ್ಲಿಸುವುದು ವೆಬ್‌ಸೈಟ್ ಮುಖಾಂತರ ಮಾತ್ರ ಈ ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವಿಕರಿಸಲಾಗುವುದಿಲ್ಲ. **"ಟೆಂಡರ್‌ದಾರರು ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ದಾಖಲಾತಿಗಳನ್ನು ಅಪ್‌ಲೋಡ್ ಮಾಡುವಾಗ ಅನವಶ್ಯಕವಾದ ದಾಖಲಾತಿಗಳನ್ನು ಅಪ್‌ಲೋಡ್ ಮಾಡದೇ ಸಂಬಂಧಿಸಿದ ದಾಖಲಾತಿಯನ್ನು ಸಂಬಂಧಪಟ್ಟ ಕೋಷ್ಟಕದಲ್ಲಿ ಸ್ಪಷ್ಟವಾಗಿ ಕಾಣುವಂತೆ ಅಪಲೋಡ್ ಮಾಡತಕ್ಕದ್ದು"** ವಿವರ ಈ ಕೆಳಕಂಡಂತೆ ಇರುತ್ತವೆ. ಒಂದು ವೇಳೆ ಮೇಲೆ ಸೂಚಿಸಲಾಗಿರುವ ದಿನಾಂಕಗಳು ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ, ಮುಂದಿನ ದಿನಗಳನ್ನು ಪರಿಗಣಿಸಲಾಗುವುದು, ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ಕಾಮಗಾರಿ ವಿಭಾಗದಲ್ಲಿ ಅಭಿಯಂತರರನ್ನು ವಿಚಾರಿಸಬಹುದು ಅಥವಾ ನಗರಸಭೆಯ ಅಂತರ್ಜಾಲ **www.chitradurgacity. mrc.gov.in** ನಲ್ಲಿಪಡೆಯಬಹುದಾಗಿದೆ. ಜಿ.ಎಸ್.ಟಿ ಮೊತ್ತ ಪ್ರತ್ಯೇಕವಾಗಿ ಪಾವತಿಸಲಾಗುವುದು. (1) ಖಾಲಿ ಟೆಂಡರ್ ಫಾರಂಗಳಿಗೆ ಇ–ಪ್ರಕ್ಯೂರ್‌ಮೆಂಟ್ ಪ್ರಕಾರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿಗಳನ್ನು ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ: 18.08.2022 ರ 5.30 ಸಂಜೆ ಗಂಟೆವರೆಗೆ (2) ಟೆಂಡರ್‌ನ್ನು ತೆರೆಯುವ ದಿನಾಂಕ (ಆರ್ಥಿಕ) 19.08.2022ರ ಸಂಜೆ 5.30 ಗಂಟೆಗೆ (4) ಅರ್ಜಿ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ) E-procurement ನಿಯಮಾನುಸಾರ.

DIPR/CTA/MCA/435/2022-23
ಸಹಿ/–ಪೌರಾಯುಕ್ತರು, ನಗರಸಭೆ, ಚಿತ್ರದುರ್ಗ

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ, ಎ ಎಲ್ ಬಿ ಸಿ ವಿಭಾಗ, ಆಲಮಟ್ಟಿ – 586201
ತಾ: ಬ.ಬಾಗೇವಾಡಿ, ಜಿ:ವಿಜಯಪುರ.
ಸಂ:ಕೃ.ಭಾ.ಜ.ನಿ.ನಿ/ಎಎಲ್‌ಬಿಸಿ ವಿಭಾಗ/ಡಿಎಮ್/ಟೆಂಡರ/ಫೆನ್ನಿಂಗ್/2022–23/1214 ದಿನಾಂಕ:04.08.2022

ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ–ಪ್ರಾಕ್ಯೂರ್‌ಮೆಂಟ್ ಮುಖಾಂತರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ.ಎ ಎಲ್ ಬಿ ಸಿ ವಿಭಾಗ ಆಲಮಟ್ಟಿ. ತಾ: ಬ.ಬಾಗೇವಾಡಿ ಇವರು **ಶೇಕಡಾವಾರು ಟೆಂಡರನ್ನು** ಅಹ್ವಾನಿಸಿರುತ್ತಾರೆ. ಕೆಟಿಟಿಪಿ ಕಾಯ್ದೆ ನಿಯಮ–28 ರನ್ವಯ ಗುತ್ತಿಗೆದಾರರು ದ್ವಿ–ಲಕೋಟೆಯಲ್ಲಿ ಟೆಂಡರನ್ನು ಸಂದಾಯ ಮಾಡುವಂತೆ ಕೋರಲಾಗಿದೆ. ಟೆಂಡರನ್ನು **ಕೆಪಿಡಬ್ಲೂಡಿ ನೋಂದಾಯಿತ ಪ್ರಥಮ ದರ್ಜೆ& ಮೇಲ್ಪಟ್ಟ ಅರ್ಹ ಗುತ್ತಿಗೆದಾರರಿಂದ** ಅಹ್ವಾನಿಸಲಾಗಿರುತ್ತದೆ. ಇಂಡೆಂಟ್ **ಸಂಖ್ಯೆ: 23018.** ಟೆಂಡರಗಿಟ್ಟ ಅಂದಾಜು ಮೊತ್ತ **ರೂ. 762.32 ಲಕ್ಷಗಳು.**

ಟೆಂಡರನ ವಿವಿಧ ಹಂತಗಳನ್ನು 1) ಟೆಂಡರ ಡಾಕುಮೆಂಟ್‌ನ್ನು ಇ–ಪೋರ್ಟಲ್‌ನಲ್ಲಿ ವೀಕ್ಷಿಸುವ & ಭರ್ತಿ ಮಾಡಿದ ಬಿಡ್‌ನ್ನು ಸಲ್ಲಿಸುವ ಕಾಲಾವಧಿ ದಿನಾಂಕ: **10.08.2022** ರಿಂದ **20.08.2022** ರ **ಸಾಯಂಕಾಲ 5.00 ಘಂಟೆಯವರೆಗೆ.** 2) ಟೆಂಡರ್‌ನ ಪೂರ್ವಭಾವಿ ಸಭೆಯನ್ನು ದಿನಾಂಕ: **16.08.2022** ರಂದು ಬೆಳಿಗ್ಗೆ 11.00 ಘಂಟೆಗೆ, ಮುಖ್ಯಅಭಿಯಂತರರು, ಕೃಭಾಜನಿನಿ, ಆಣೆಕಟ್ಟು ವಲಯ ಆಲಮಟ್ಟಿ ಕಚೇರಿಯಲ್ಲಿ ಜರುಗಿಸಲಾಗುವುದು. 3) ಲಕೋಟೆ–1 (ತಾಂತ್ರಿಕ ಬಿಡ್)ನ್ನು ತೆರೆಯುವ **ದಿನಾಂಕ; 22.08.2022ರ ಬೆಳಿಗ್ಗೆ 11.00 ಘಂಟೆಗೆ** 4) ಲಕೋಟೆ–2 (ಆರ್ಥಿಕ ಬಿಡ್)ನ್ನು ತೆರೆಯುವ **ದಿನಾಂಕ; 26.08.2022 ರ ಬೆಳಿಗ್ಗೆ 11.00 ಘಂಟೆಗೆ.**

ಟೆಂಡರಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಕಛೇರಿಯ ಅವಧಿಯಲ್ಲಿ ಅಥವಾ http://eproc.karnataka.gov.in/eportal/ines.seam and www.kbjnl.karnataka.gov.in ವೆಬ್‌ಸೈಟನಲ್ಲಿ ಪಡೆದುಕೊಳ್ಳಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಎ ಎಲ್ ಬಿ ಸಿ ವಿಭಾಗ, ಆಲಮಟ್ಟಿ
ವಾಸಾಸಂಇ/ವಿಜಯಪುರ/347/ಎಂಸಿಎ/2022–23

ಯೋಜನಾ ಆಯೋಗದ ಹೆಸರು ಬದಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಸ್ವರೂಪವನ್ನು ಬದಲಿಸಿರುವ ರಾಜ್ಯ ಸರ್ಕಾರ, ಅದನ್ನು ಕೇಂದ್ರದ ನೀತಿ ಆಯೋಗದ ಮಾದರಿಯಲ್ಲಿ 'ಕರ್ನಾಟಕ ರಾಜ್ಯ ಪರಿವರ್ತನಾ ಸಂಸ್ಥೆ' (ಎಸ್‌ಐಟಿಕೆ) ಎಂದು ಬದಲಿಸಿ ಆದೇಶ ಹೊರಡಿಸಿದೆ. ಸಂಸ್ಥೆಯ ಕಾರ್ಯ ಚಟುವಟಿಕೆಗೆ ವಾರ್ಷಿಕ ₹ 150 ಕೋಟಿ ಹಂಚಿಕೆ ಮಾಡಲು ಕೂಡಾ ತೀರ್ಮಾನಿಸಲಾಗಿದೆ.

ಈ ಸಂಸ್ಥೆಗೆ ಮುಖ್ಯಮಂತ್ರಿ ಅಧ್ಯಕ್ಷರಾಗಿರುತ್ತಾರೆ. ಉಪಾಧ್ಯಕ್ಷರನ್ನು ಸರ್ಕಾರ ನಾಮನಿರ್ದೇಶನ ಮಾಡಲಿದೆ. ಯೋಜನೆ, ಆರ್ಥಿಕ, ಸಮಾಜ ಕಲ್ಯಾಣ, ಶಿಕ್ಷಣ, ಆರೋಗ್ಯ, ಕೃಷಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ನಗರಾಭಿವೃದ್ಧಿ ಮತ್ತು ಮಾಹಿತಿ ತಂತ್ರಜ್ಞಾನ ಸಚಿವರು ವಿಶೇಷ ಆಹ್ವಾನಿತರಾಗಿರುತ್ತಾರೆ.

ನೀತಿ ಆಯೋಗದ ಮಾದರಿಯಲ್ಲಿ, ಸುಸ್ಥಿರ ಅಭಿವೃದ್ಧಿ ಗುರಿಗಳು ಮತ್ತು 2047ರ(ಮುಂದಿನ 25 ವರ್ಷ) ಗುರಿಯನ್ನು ಕೇಂದ್ರೀಕರಿಸಲು ಶಿಕ್ಷಣ, ಆರೋಗ್ಯ ಮತ್ತು ಪೋಷಣೆ, ಕೃಷಿ ಮತ್ತು ಕೈಗಾರಿಕೆ, ಗ್ರಾಮೀಣ ಮತ್ತು ನಗರಾಭಿವೃದ್ಧಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ ಅಭಿವೃದ್ಧಿ ಮತ್ತು ಉದ್ಯೋಗ, ಶುದ್ಧ ಮತ್ತು ಹಸಿರು ಇಂಧನ, ಆರ್ಥಿಕತೆ ಮತ್ತು ಹಣಕಾಸು ಹೀಗೆ ಎಂಟು ವಲಯಗಳಿಂದ ಪರಿಣತರನ್ನು ಸಲಹೆಗಾರನ್ನಾಗಿ ನೇಮಿಸಲಾಗುವುದು. ಅಲ್ಲದೆ, 10 ತಾಂತ್ರಿಕ ವಿಭಾಗಗಳನ್ನು ರಚಿಸಲು ಕೂಡಾ ಉದ್ದೇಶಿಸಲಾಗಿದೆ.

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಈ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಲಿದ್ದಾರೆ. ಅಲ್ಲದೆ, ಬಡತನ ನಿರ್ಮೂಲನೆ, ಆದಾಯ, ಆಹಾರ ಮತ್ತು ಪೌಷ್ಠಿಕಾಂಶದ ಭದ್ರತೆ, ಸೇವೆಗಳ ಸರಳೀಕರಣ, ಸ್ವಚ್ಛ ಮತ್ತು ಹಸಿರು ಇಂಧನ, ಸಂಪನ್ಮೂಲಗಳ ನಿರ್ವಹಣೆ, ಲಿಂಗ ಸಮಾನತೆ, ಕೈಗಾರಿಕೆ ಮತ್ತು ಮೂಲಸೌಕರ್ಯ ನಾವೀನ್ಯತೆ ಮತ್ತು ಕೌಶಲಾಭಿವೃದ್ಧಿಯಂಥ ಎಂಟು ವಿಷಯಗಳಿಗೆ ಸಂಬಂಧಿಸಿದಂತೆ ಅವರಿಗೆ ಸಲಹೆಗಾರನ್ನು ತಜ್ಞರನ್ನು ನೇಮಿಸಲಾಗುವುದು.

ಕರ್ನಾಟಕ ಆವಿಷ್ಕಾರ ಪ್ರಾಧಿಕಾರ, ಜ್ಞಾನ ಆಯೋಗ, ಐಐಎಸ್‌ಸಿ, ಐಐಎಂಬಿ, ಎನ್‌ಎಲ್‌ಎಸ್‌ಐಯು, ಐಸೆಕ್ ಸೇರಿದಂತೆ ಸುಮಾರು 14 ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳನ್ನು 'ಪಾಲುದಾರ ಸಂಸ್ಥೆ'ಗಳಾಗಿ ಮಾಡಲು ತೀರ್ಮಾನಿಸಲಾಗಿದೆ.

ಲಲಿತಕಲಾ ಅಕಾಡೆಮಿ ಫೆಲೋಶಿಪ್ ಪ್ರದಾನ

ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ದಾವಣಗೆರೆಯಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಕಲಾವಿದರಾದ ಮೈಸೂರಿನ ಶ್ರೀಹರಿ, ಕಲಬುರಗಿಯ ಪ್ರೊ.ವಿ.ಜಿ. ಅಂದಾನಿ, ಧಾರವಾಡದ ಎನ್.ಆರ್.ನಾಯ್ಕರ್, ಕಾಸರಗೋಡಿನ ಪಿ.ಎಸ್.ಪುಂಚಿತ್ತಾಯ, ತುಮಕೂರಿನ ಪ್ರಭು ಹರಸೂರು ಹಾಗೂ ರಾಯಚೂರಿನ ಎಚ್.ಆರ್.ಮ್ಯಾದಾರ್ ಅವರಿಗೆ ಫೆಲೋಶಿಪ್ ಪ್ರದಾನ ಮಾಡಲಾಯಿತು. (ನಿಂತವರು) ಡಯಟ್ ಉಪನಿರ್ದೇಶಕ ಎಚ್.ಕೆ.ಲಿಂಗರಾಜ್, ನಟ ಸುಚೇಂದ್ರ ಪ್ರಸಾದ್, ದಾವಣಗೆರೆ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಬಿ.ಡಿ. ಕುಂಬಾರ್, ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷ ಡಿ.ಮಹೇಂದ್ರ, ಹಿರಿಯ ಕಲಾವಿದ ವಿಜಯಸಿಂಧೂರ ಇದ್ದಾರೆ. ಫೆಲೋಶಿಪ್ ₹ 2 ಲಕ್ಷ ನಗದು ಒಳಗೊಂಡಿದೆ. ಈ ಹಣದಲ್ಲಿ ಕಲಾವಿದರು ಯಾವುದಾದರೂ ವಿಷಯದ ಮೇಲೆ ಚಿತ್ರ ರಚಿಸಿ ಅಕಾಡೆಮಿಗೆ ನೀಡಬೇಕು.

ಕಂದಾಯ ಇಲಾಖೆ
ಭೂಮಿ ಉಸ್ತುವಾರಿ ಕೋಶ
ಮೊದಲನೆ ಮಹಡಿ, ಎಸ್.ಎಸ್.ಎಲ್.ಆರ್ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–560001. ದೂರವಾಣಿ ಸಂಖ್ಯೆ: 080–22113255
ಸಂಖ್ಯೆ: BMC/OS/VHC/01/2022-23 ದಿನಾಂಕ: 06.08.2022

ಇ–ಟೆಂಡರ್ ಅಧಿಸೂಚನೆ

ಭೂಮಿ ಉಸ್ತುವಾರಿ ಕೋಶಕ್ಕೆ ಅವಶ್ಯವಿರುವ 07 ವಾಹನಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಇ–ಟೆಂಡರ್ ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ದಿನಾಂಕ: **20.08.2022 ರ ಸಂಜೆ 5.00 ಗಂಟೆಯೊಳಗೆ** ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರ್ ಷರತ್ತು ಮತ್ತಿತರ ವಿವರಗಳನ್ನು **https://eproc.karnataka.gov.in** ರಲ್ಲಿ ಪಡೆಯಬಹುದಾಗಿದೆ.

ಸಹಿ/– ಸಹಾಯಕ ಆಯುಕ್ತರು, ಭೂಮಿ ಉಸ್ತುವಾರಿ ಕೋಶ, ಕಂದಾಯ ಇಲಾಖೆ
ವಾಸಾಸಂಇ/ವಾಪ್ರ/ಅಡ್ವಿಟ್/1707/2022–23

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜನೀಯರವರ ಕಛೇರಿ ಕರ್ನಾಟಕ ನೀರಾವರಿ ನಿಗಮ ನಿಯಮಿತ, ದಂಡಾವತಿ ಜಲಾಶಯ ಯೋಜನಾ ವಿಭಾಗ, ಶಿಕಾರಿಪುರ

ಅಲ್ಪಾವಧಿ ಟೆಂಡರ್ ನೋಟಿಫಿಕೇಶನ್: 11/2022-23 ದಿನಾಂಕ:04.08.2022.
(ಏಕ ಟೆಂಡರ್ ದಾಖಲೆ & ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನೀಯರರು, ಕನೀನಿನಿ, ದಂಡಾವತಿ ಜಲಾಶಯ ಯೋಜನಾ ವಿಭಾಗ ಶಿಕಾರಿಪುರ ಇವರಿಂದ ಕೆ.ಪಿಡಬ್ಲ್ಯೂ.ಡಿ ಕ್ಲಾಸ್–III ಮತ್ತು ಮೇಲ್ಪಟ್ಟ ದರ್ಜೆಯ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಮೂಲಕ ಏಕ ಟೆಂಡರ್ ದಾಖಲೆ ಪದ್ದತಿಯಡಿ ಟೆಂಡರ್ ಆಹ್ವಾನಿಸಲಾಗಿದೆ.

ಸೊರಬ ತಾಲ್ಲೂಕು ವ್ಯಾಪ್ತಿಯಲ್ಲಿನ ರಸ್ತೆ ಅಭಿವೃದ್ಧಿಯ ಕಾಮಗಾರಿಯ ಟೆಂಡರಿಗಿಟ್ಟ ಮೊತ್ತ ರೂ. 49.91 ಲಕ್ಷಗಳು & ಇ.ಎಂ.ಡಿ ಮೊತ್ತ ರೂ. 0.50 ಲಕ್ಷಗಳು.

(1) ಟೆಂಡರ್‌ನಲ್ಲಿ ಭಾಗವಹಿಸಬಹುದಾದ ದಿನಾಂಕ : **05.08.2022** ರಿಂದ **16.08.2022 ಸಂಜೆ 4.30** ರವರೆಗೆ. (2) ಟೆಂಡರ್ ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ : **12.08.2022 ಸಂಜೆ 5.00** ಗಂಟೆಗೆ. (3) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ : **17.08.2022 ಸಂಜೆ 5.00** ಗಂಟೆಗೆ.

ಹೆಚ್ಚಿನ ಮಾಹಿತಿಗಾಗಿ (**www.eproc.karnataka.gov.in**) ಅಥವಾ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಇಂಜಿನೀಯರರು, ಕನೀನಿನಿ, ದಂಡಾವತಿ ಜಲಾಶಯ ಯೋಜನಾ ವಿಭಾಗ, ಶಿಕಾರಿಪುರ.
ವಾ.ಸಾ.ಸಂ.ಇ./ಶಿ/ನಂ.33-08 ಝೇಂಕಾರ್/2022-23

ಕರ್ನಾಟಕ ಸರ್ಕಾರ
ವಾಣಿಜ್ಯ ತೆರಿಗೆಗಳ ಇಲಾಖೆ
ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಛೇರಿ, 3ನೇ ಮಹಡಿ, ವಿಟಿಕೆ–2 'ಎ' ಬ್ಲಾಕ್, ಕೋರಮಂಗಲ, ಬೆಂಗಳೂರು – 560047 ರವರ ಕಛೇರಿ
ದೂರವಾಣಿ: 080–25704962, E-mail: cto-vig-11bng@ka.gov.in
ಸಂಖ್ಯೆ: ವಾತೆಜಂಆ/ವಾತೆಅ/ಜಾ–11/ಜಿಸಿಹಿ–03/2022–23. ದಿನಾಂಕ: 02–08–2022

:: ಹರಾಜು ಪ್ರಕಟಣೆ ::

ವಾಣಿಜ್ಯ ತೆರಿಗೆ ಅಧಿಕಾರಿ (ಜಾಗೃತಿ)–11, ಬೆಂಗಳೂರು, ಇವರು ದಿನಾಂಕ: 09–05–2022 ರಂದು ಅನುಕರಣೆ ಅಭರಣಗಳ ಸರಕನ್ನು, ಸರಕು ಮತ್ತು ಸೇವಾ ತೆರಿಗೆ ಕಾಯ್ದೆ, 2017ರ ಕಲಂ 129ರ ಅಡಿಯಲ್ಲಿ ಮುಟ್ಟುಗೋಲು ಹಾಕಿಕೊಂಡಿದ್ದು, ಸದರಿ ಆದೇಶದಲ್ಲಿ ಸೃಷ್ಟಿಯಾದ ತಗಾದೆ ಮೊತ್ತವನ್ನು ವಸೂಲಿ ಮಾಡುವ ಸಂಬಂಧವಾಗಿ ಸದರಿ ಸರಕನ್ನು "ಹೇಗೆ ಇದೆಯೋ ಹಾಗೆಯೇ" ಇರುವ ಸ್ಥಿತಿಯಲ್ಲಿ ಸಾರ್ವಜನಿಕ ಹರಾಜು ಮೂಲಕ ವಿಲೇವಾರಿ ಮಾಡಲು ಇಲಾಖೆಯು ಉದ್ದೇಶಿಸಿದ್ದು, ಈ ಸಂಬಂಧ ಆಸಕ್ತಿಯುಳ್ಳ ಖರೀದಿದಾರರಿಂದ ಪಡೆದ ಸೀಲು ಮಾಡಿದ ಬಿಡ್ಡು ಲಕೋಟೆಯನ್ನು ದಿನಾಂಕ: 24–08–2022 ರಂದು ಬೆಳಿಗ್ಗೆ 11.00 ಗಂಟೆಗೆ ಮೇಲ್ಕಂಡ ಕಛೇರಿಯಲ್ಲಿ ತೆರೆಯಲಾಗುವುದು. ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಂತೆ ಆಸಕ್ತಿಯುಳ್ಳ ಖರೀದಿದಾರರು ಮುಚ್ಚಿದ ಲಕೋಟೆಯಲ್ಲಿ ಬಿಡ್ ಅನ್ನು ಸಲ್ಲಿಸಿ ಸಾರ್ವಜನಿಕ ಹರಾಜಿನಲ್ಲಿ ಭಾಗವಹಿಸಬಹುದಾಗಿದೆ.

–:: ಷರತ್ತುಗಳು ::–

(1) ಮುಟ್ಟುಗೋಲು ಹಾಕಿಕೊಂಡಿರುವ ಸರಕನ್ನು ಮೇಲ್ಕಂಡ ಕಛೇರಿಯ ಗೋದಾಮಿನಲ್ಲಿ ದಾಸ್ತಾನು ಮಾಡಲಾಗಿದ್ದು, ಆಸಕ್ತಿಯುಳ್ಳ ಖರೀದಿದಾರರು ದಿನಾಂಕ: 08–08–2022 ರಿಂದ ದಿನಾಂಕ: 22–08–2022 ರ ಬೆಳಿಗ್ಗೆ 11.00 ಗಂಟೆಯಿಂದ 3.00 ಗಂಟೆಯವರೆಗೆ ಕಛೇರಿಯ ವೇಳೆಯಲ್ಲಿ ಸದರಿ ಸರಕನ್ನು ಸ್ವಂತ ಖರ್ಚಿನಲ್ಲಿ ಪರಿಶೀಲಿಸಬಹುದಾಗಿದೆ. (2) ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ಖರೀದಿದಾರರು ರೂ.5,51,000–00 ಮೌಲ್ಯದ ಮೊತ್ತವನ್ನು ವಾಣಿಜ್ಯ ತೆರಿಗೆ ಅಧಿಕಾರಿ (ಜಾಗೃತಿ)–11, ಬೆಂಗಳೂರು / Commercial Tax Officer (Vigilance)-11, Bangalore, ಇವರ ಹೆಸರಿನಲ್ಲಿ ಡಿ.ಡಿ.ಯನ್ನು ಪಡೆದು ಈ ಕಚೇರಿಗೆ ಮೊಹರಾದ ಬಿಡ್ ಲಕೋಟೆಯೊಂದಿಗೆ ದಿನಾಂಕ 23.08.2022ರ ಅಪರಾಹ್ನ 3.30 ಗಂಟೆಯೊಳಗಾಗಿ ಸಲ್ಲಿಸತಕ್ಕದ್ದು. (3) ಕಾರಣಾಂತರಗಳಿಂದ ಬಿಡ್ ಅನ್ನು ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕನ್ನು ವಾಣಿಜ್ಯ ತೆರಿಗೆ ಅಧಿಕಾರಿ (ಜಾಗೃತಿ)–11, ಬೆಂಗಳೂರು, ಇವರು ಹೊಂದಿರುತ್ತಾರೆ. (4) ಹೆಚ್ಚಿನ ಮಾಹಿತಿ, ಷರತ್ತು ಮತ್ತು ನಿಬಂಧನೆಗಳನ್ನು ಮೇಲ್ಕಂಡ ಕಛೇರಿಯ ಜಾಹೀರಾತು ಫಲಕ ಮತ್ತು ಇಲಾಖೆಯ ಜಾಲತಾಣ http://ctax.kar.nic.in/publicauction.asp/https://gst.kar.nic.in/TenderAuction2021.aspxರಲ್ಲಿ ಪ್ರಕಟಿಸಲಾಗಿದೆ.

ಸಹಿ/– ವಾಣಿಜ್ಯ ತೆರಿಗೆ ಅಧಿಕಾರಿ (ಜಾಗೃತಿ)–11, ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/1711/ಅಕಾರ್/22–23

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
"ವಾರ್ತಾ ಸೌಧ", # 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು–560001. ದೂರವಾಣಿ: 080–22028078
ಇ–ಮೇಲ್: dipr.films@gmail.com

2019 ನೇ ಕ್ಯಾಲೆಂಡರ್ (ದಿನದರ್ಶಿ) ವರ್ಷದಲ್ಲಿ ಕರ್ನಾಟಕದಲ್ಲೇ ನಿರ್ಮಾಣಗೊಂಡ ಗುಣಾತ್ಮಕ ಕನ್ನಡ ಮತ್ತು ರಾಜ್ಯದ ಇತರೆ ಪ್ರಾದೇಶಿಕ ಭಾಷಾ ಚಲನಚಿತ್ರಗಳ ಸಹಾಯಧನ ಕೋರಿಕೆಯ ಆನ್‌ಲೈನ್ ಅರ್ಜಿ ಆಹ್ವಾನ ಅವಧಿ ವಿಸ್ತರಣೆ

ಕರ್ನಾಟಕದಲ್ಲಿ ನಿರ್ಮಾಣಗೊಂಡಿರುವ ಕನ್ನಡ ಮತ್ತು ರಾಜ್ಯದ ಇತರೆ ಪ್ರಾದೇಶಿಕ ಭಾಷಾ ಚಲನಚಿತ್ರಗಳು 2019 ರ ಕ್ಯಾಲೆಂಡರ್ ವರ್ಷದ ಸಹಾಯಧನಕ್ಕಾಗಿ sevasindhuservices.karnataka.gov.in ನಲ್ಲಿ ದಿ. 06.08.2022ರ ವರೆಗೆ ಆನ್‌ಲೈನ್ ಅರ್ಜಿ ಸಲ್ಲಿಸಲು ವಾಸಾಸಂಇ/ಛಾಚಚಿವಿ/2019ಸ.ಅ.ಆ/2022–23, ದಿ. 06.07.2022ರ ಆದೇಶದಲ್ಲಿ ಅವಕಾಶ ಕಲ್ಪಿಸಿತ್ತು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಅವಧಿಯನ್ನು ದಿ. 17.08.2022, ಬುಧವಾರ, ಸಂಜೆ 5 ಗಂಟೆಯವರೆಗೆ ವಿಸ್ತರಿಸಿದೆ.

ಆನ್‌ಲೈನ್‌ನಲ್ಲಿ ಭರ್ತಿಮಾಡಿದ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಂಡು, ಅದರೊಂದಿಗೆ ಸೆನ್ಸಾರ್ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ಅವಧಿಗೆ ಅನುಗುಣವಾಗಿ ಎರಡು ಬ್ಲೂರೇ ಡಿಸ್ಕ್ ಮತ್ತು ನಿರ್ಮಾಪಕರು ದೃಢೀಕರಿಸಿರುವ ಎಲ್ಲಾ ದಾಖಲಾತಿ/ಪ್ರಮಾಣ ಪತ್ರಗಳ ಒಟ್ಟು 10 ಸೆಟ್ (ಹತ್ತು) ಅನ್ನು ಉಪನಿರ್ದೇಶಕರು, ಚಲನಚಿತ್ರ ಶಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ವಾರ್ತಾ ಸೌಧ, #17, ಮೊದಲನೇ ಮಹಡಿ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು–560001 ಇಲ್ಲಿ ಖುದ್ದಾಗಿ ಸಲ್ಲಿಸಲು ಇದ್ದ ಅವಧಿಯನ್ನು ದಿ. 26.08.2022, ಶುಕ್ರವಾರ, ಸಂಜೆ 5.00ರ ವರೆಗೆ ವಿಸ್ತರಿಸಿದೆ.

ಇನ್ನುಳಿದಂತೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಇರುವ ಅರ್ಹತೆ ಮತ್ತು ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

2019 ನೇ ಕ್ಯಾಲೆಂಡರ್ (ದಿನದರ್ಶಿ) ವರ್ಷದ ಸಹಾಯಧನಕ್ಕಾಗಿ ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸುವ ಅವಧಿಯನ್ನು ದಿನಾಂಕ: 17.08.2022, ಬುಧವಾರ, ಸಂಜೆ 5 ಗಂಟೆಯವರೆಗೆ ವಿಸ್ತರಿಸಿದೆ.

ಸಹಿ/– ಜಂಟಿ ನಿರ್ದೇಶಕರು
ವಾ.ಸಾ.ಸಂ.ಇ/ವಾಪ್ರ/1697/ಅಕಾರ್/22–23

ಸವಾಲಾದ ವಾರ್ಷಿಕ ಚಟುವಟಿಕೆಗಳ ನಿರ್ವಹಣೆ • ತಲಾ ₹ 20 ಲಕ್ಷ ಹಂಚಿಕೆ

ರಂಗಾಯಣ: ಅನುದಾನ ಕಡಿತಕ್ಕೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ರಂಗಾಯಣಗಳಿಗೆ ನೀಡುವ ವಾರ್ಷಿಕ ಸಾಮಾನ್ಯ ಅನುದಾನವನ್ನು ಕಡಿತ ಮಾಡಿದ್ದು, ಗರಿಷ್ಠ ₹ 20 ಲಕ್ಷ ಹಂಚಿಕೆ ಮಾಡಿದೆ. ಈ ಕ್ರಮಕ್ಕೆ ರಂಗಾಯಣಗಳ ಮುಖ್ಯಸ್ಥರಿಂದಲೇ ಆಕ್ಷೇಪ ವ್ಯಕ್ತವಾಗಿದೆ.

ಎರಡು ವರ್ಷಗಳಿಂದ ಕೋವಿಡ್ ನಿಂದಾಗಿ ಸಾಂಸ್ಕೃತಿಕ ಲೋಕ ನಿಷ್ಕ್ರಿಯವಾಗಿತ್ತು. ಕೋವಿಡ್ ಕಾರಣ ನೀಡಿ ಅಕಾಡೆಮಿಗಳು, ಸಂಘ–ಸಂಸ್ಥೆಗಳು, ರಂಗಾಯಣಗಳ ಅನುದಾನಕ್ಕೆ ಕತ್ತರಿ ಹಾಕಲಾಗಿತ್ತು. ಈಗ ಸಹಜ ಸ್ಥಿತಿ ಮರಳಿದ್ದು, ಕಲಾ ಚಟುವಟಿಕೆಗಳೂ ಗರಿಗೆದರಿವೆ. ಆದರೆ, ಸಂಸ್ಕೃತಿ ಇಲಾಖೆಯು 2022–23ನೇ ಸಾಲಿನ ಸಹಾಯಾನುದಾನದಲ್ಲಿ ಭಾರಿ ಕಡಿತ ಮಾಡಿದೆ.

ಮೈಸೂರು, ಧಾರವಾಡ, ಶಿವಮೊಗ್ಗ ಹಾಗೂ ಕಲಬುರ್ಗಿ ರಂಗಾಯಣಕ್ಕೆ ತಲಾ ₹ 20 ಲಕ್ಷ ಅನುದಾನ ಹಂಚಿಕೆ ಮಾಡಲಾಗಿದೆ. ದಾವಣಗೆರೆಯ ರಂಗಾಯಣ ಕೇಂದ್ರ ಹಾಗೂ ಕಾರ್ಕಳದ ಯಕ್ಷ ರಂಗಾಯಣಕ್ಕೆ ತಲಾ ₹ 10 ಲಕ್ಷ ಹಂಚಿಕೆ ಮಾಡಲಾಗಿದೆ.

'ಇಷ್ಟು ಹಣದಲ್ಲಿ ಕಲಾವಿದರು, ಸಿಬ್ಬಂದಿಗೆ ವೇತನ ನೀಡಲು ಸಾಧ್ಯವಿಲ್ಲ' ಎಂದು ರಂಗಾಯಣಗಳ ಮುಖ್ಯಸ್ಥರು ಅಳಲು ತೋಡಿಕೊಂಡಿದ್ದಾರೆ.

ಹಂತ ಹಂತವಾಗಿ ಕಡಿತ: ಕೋವಿಡ್ ಪೂರ್ವದಲ್ಲಿ (2018–19ನೇ ಸಾಲಿನಲ್ಲಿ) ಮೈಸೂರು ರಂಗಾಯಣ ಒಂದಕ್ಕೇ ಸಿಬ್ಬಂದಿ ವೇತನ ಒಳಗೊಂಡಂತೆ ಸಾಮಾನ್ಯ ಕಾರ್ಯಚಟುವಟಿಕೆಗೆ ₹ 2.28 ಕೋಟಿ ಹಂಚಿಕೆ ಮಾಡಲಾಗಿತ್ತು.

ಧಾರವಾಡ ರಂಗಾಯಣಕ್ಕೆ ₹ 42 ಲಕ್ಷ, ಕಲಬುರಗಿ, ಶಿವಮೊಗ್ಗ ರಂಗಾಯಣಕ್ಕೆ ತಲಾ ₹ 40 ಲಕ್ಷ ನೀಡಲಾಗಿತ್ತು. 2019–20ನೇ ಸಾಲಿನಲ್ಲಿ ಮೈಸೂರು ರಂಗಾಯಣಕ್ಕೆ ಕಲಾವಿದರು, ಸಿಬ್ಬಂದಿ ವೇತನಕ್ಕೆ ₹ 2.15 ಕೋಟಿ ಮತ್ತು ₹ 97.86 ಲಕ್ಷ ಸಹಾಯಾನುದಾನ ನೀಡಲಾಗಿತ್ತು.

2020–21ನೇ ಸಾಲಿನಲ್ಲಿ ಮೈಸೂರು ರಂಗಾಯಣಕ್ಕೆ ಕಲಾವಿದರು ಮತ್ತು ಸಿಬ್ಬಂದಿ ವೇತನಕ್ಕೆ ₹ 2.37 ಕೋಟಿ, ಸಾಮಾನ್ಯ ಅನುದಾನ ₹ 98 ಲಕ್ಷ ಹಂಚಿಕೆ ಮಾಡಲಾಗಿತ್ತು. ಧಾರವಾಡ ಹಾಗೂ ಶಿವಮೊಗ್ಗದ ರಂಗಾಯಣಕ್ಕೆ ತಲಾ ₹ 75 ಲಕ್ಷ ನೀಡಲಾಗಿತ್ತು. ಕಳೆದ ಸಾಲಿನಲ್ಲಿ ₹ 60 ಲಕ್ಷಗಳಿಗೆ ಇಳಿಕೆ ಮಾಡಲಾಗಿತ್ತು. ಈ ಬಾರಿ ಮೈಸೂರು ರಂಗಾಯಣಕ್ಕೆ ಕಲಾವಿದರು ಹಾಗೂ ಸಿಬ್ಬಂದಿ ವೇತನಕ್ಕೆ ₹ 1.85 ಕೋಟಿ ಹಂಚಿಕೆ ಮಾಡಲಾಗಿದೆ.

'4 ಇದ್ದ ರಂಗಾಯಣವನ್ನು 6 ಮಾಡಿಕೊಂಡಿದ್ದಾರೆ. ಆದರೆ, ಬಜೆಟ್ ಹೆಚ್ಚಳ ಮಾಡಿಲ್ಲ. ಅಧಿಕಾರಿಗಳು ಮಾಡಿದ ತಪ್ಪಿನ ಪರಿಣಾಮವನ್ನು ನಾವು ಅನುಭವಿಸುತ್ತಿದ್ದೇವೆ. 15 ಜನ ಕಲಾವಿದರು ಸೇರಿ 28 ಜನರಿಗೆ ಸಂಬಳ ನೀಡಬೇಕು. ವರ್ಷಕ್ಕೆ ₹ 55 ಲಕ್ಷದಿಂದ ₹ 60 ಲಕ್ಷ ಬೇಕು' ಎಂದು ಶಿವಮೊಗ್ಗ ರಂಗಾಯಣದ ನಿರ್ದೇಶಕ ಸಂದೇಶ ಜವಳಿ ಬೇಸರ ವ್ಯಕ್ತಪಡಿಸಿದರು.

ಮೈಸೂರು ರಂಗಾಯಣಕ್ಕೆ ಈ ಬಾರಿ ವರ್ಷಕ್ಕೆ ₹ 20 ಲಕ್ಷ ಅನುದಾನ ಕೊಡಲಾಗಿದೆ. ಹಿಂದಿನ ವರ್ಷ ₹ 60 ಲಕ್ಷ ಇತ್ತು. ಅದಕ್ಕೂ ಹಿಂದೆ ₹ 98 ಲಕ್ಷ ನೀಡಿದ್ದರು. ₹ 20 ಲಕ್ಷವು ನಮ್ಮಲ್ಲಿನ ಸಿಬ್ಬಂದಿಯ ಮೂರು ತಿಂಗಳ ವೇತನಕ್ಕಷ್ಟೆ ಸಾಕಾಗುತ್ತದ.
ಅಡ್ಡಂಡ ಕಾರ್ಯಪ್ಪ, ನಿರ್ದೇಶಕ, ರಂಗಾಯಣ, ಮೈಸೂರು

ಸೆಪ್ಟೆಂಬರ್ ಅಂತ್ಯಕ್ಕೆ ಅನುದಾನ ಖಾಲಿಯಾಗಲಿದೆ. ಅಷ್ಟರೊಳಗೆ ಅನುದಾನ ಬಿಡುಗಡೆ ಆಗದಿದ್ದರೆ ಅಕ್ಟೋಬರ್‌ನಲ್ಲಿ ಕಲಾವಿದರನ್ನು ಮನೆಗೆ ಕಳುಹಿಸಿ, ನಾನೂ ರಾಜೀನಾಮೆ ಕೊಟ್ಟು ಮನೆಗೆ ಹೋಗಬೇಕು.
ಸಂದೇಶ ಜವಳಿ, ನಿರ್ದೇಶಕ, ರಂಗಾಯಣ, ಶಿವಮೊಗ್ಗ

ಧಾರವಾಡ ರಂಗಾಯಣದ ವಾರ್ಷಿಕ ಚಟುವಟಿಕೆಗಳಿಗೆ ಕ್ರಿಯಾಯೋಜನೆ ಸಿದ್ಧಪಡಿಸಿ ₹3 ಕೋಟಿ ಅನುದಾನ ಕೇಳಲಾಗಿತ್ತು. ಇದರಲ್ಲಿ ಸಿಬ್ಬಂದಿ, ಕಲಾವಿದರ ವೇತನ ₹60 ಲಕ್ಷವೂ ಸೇರಿದೆ. ಆದರೆ ಈ ವರ್ಷ ಕೇವಲ ₹20ಲಕ್ಷ ಅನುದಾನ ಮಾತ್ರ ನೀಡಲಾಗಿದೆ.
ರಮೇಶ ಪರವಿನಾಯ್ಕರ, ನಿರ್ದೇಶಕ, ರಂಗಾಯಣ, ಧಾರವಾಡ

ಕಲಬುರಗಿ ರಂಗಾಯಣಕ್ಕೆ ಮೊದಲು ಇದ್ದ ₹ 1 ಕೋಟಿ ವಾರ್ಷಿಕ ಅನು ದಾನವನ್ನು ಕೊರೊನಾ ವೇಳೆ ₹ 60 ಲಕ್ಷಕ್ಕೆ ಇಳಿಸಲಾಯಿತು. ಅದನ್ನು ಮತ್ತೆ ₹ 20 ಲಕ್ಷ ಇಳಿಸುವುದರಿಂದ ಬಹುತೇಕ ರಂಗ ಚಟುವಟಿಕೆ ಸ್ಥಗಿತಗೊಳ್ಳಲಿವೆ
ಪ್ರಭಾಕರ ಜೋಶಿ, ನಿರ್ದೇಶಕ, ರಂಗಾಯಣ, ಕಲಬುರಗಿ

ಕರಾವಳಿಯ ಯಕ್ಷ ರಂಗಾಯಣವೂ ಅನುದಾನ ಕೊರತೆ ಎದುರಿಸುತ್ತಿದ್ದು, ಸರ್ಕಾರದಿಂದ ಹಣ ಬಿಡುಗಡೆಯಾಗದಿದ್ದರೆ ಕಾರ್ಯಕ್ರಮಗಳ ಆಯೋಜನೆಗೆ ಸಮಸ್ಯೆಯಾಗಲಿದೆ
ಜೀವನರಾಂ ಸುಳ್ಯ, ನಿರ್ದೇಶಕ, ಯಕ್ಷ ರಂಗಾಯಣ, ಉಡುಪಿ

ಸದ್ಯ ಇರುವ ಅನುದಾನವನ್ನು ರಂಗಾಯಣಗಳಿಗೆ ಹಂಚಿಕೆ ಮಾಡಲಾಗಿದೆ. ಹೆಚ್ಚಿನ ಅನುದಾನ ಬಿಡುಗಡೆ ಬಗ್ಗೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಅನುಮೋದನೆ ಸಿಕ್ಕ ಬಳಿಕ ಬಿಡುಗಡೆ ಮಾಡಲಾಗುವುದು.
ಪ್ರಕಾಶ್ ಜಿ.ನಿಟ್ಟಾಲಿ, ನಿರ್ದೇಶಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

MYSORE PAINTS & VARNISH LTD.,
(A Govt., of Karnataka Undertaking)
New Bannimantap Extension, MYSURU-570 015
Phone: 0821-2493831-2497469/2499340,
website:www.mysorepaints.karnataka.gov.in e-mail:materials-mpvl@karnataka.gov.in
Ref. MPVL/022-23/Outward Transport/Call-2 Dtd:-05.08.2022

SHORT TERM RE-TENDER NOTIFICATION (TRANSPORTATION OF GOODS)

Transhipment tender are invited from Bank approved Transporters for Annual Rate Contract for the transshipment of Paints & Allied products and Indelible Ink by road from MPVL Mysuru to the various places in Karnataka and within India on door pick up & door delivery basis of different weight & packing size through e-Procurement Portal (https://eproc.karnataka.gov.in) Last Date & Time for submission of Tender/ **Bids.13.08.2022 17:00 Hrs** and Date & Time of Technical Bid Opening **16.08.2022 11:00 Hrs.** Interested parties may visit www.mysorepaints.karnataka.gov.in for details and can contact the undersigned for any further clarifications/information.

Sd/-TIA / General Manager(Admin)

ಸಮಾಜ ಕಲ್ಯಾಣ ಇಲಾಖೆ
ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ
ನಂ.1/14, ದಕ್ಷಿಣ ವಿಂಗ್ ನೆಲಮಹಡಿ, ಸಿಲ್ವರ್ ಜೂಬ್ಲಿ ಬ್ಲಾಕ್ ಪಾರ್ಟ್ ಆಫ್ ಯೂನಿಟಿ ಬಿಲ್ಡಿಂಗ್ ಕಾಂಪ್ಲೆಕ್ಸ್, ಮಿಷನ್ ರೋಡ್, ಬೆಂಗಳೂರು–560027. ದೂರವಾಣಿ: 080–22240445/6, Email: ksskcb@gmail.com

ಅರ್ಜಿ ಆಹ್ವಾನ ಪ್ರಕಟಣೆ

ರಾಜ್ಯದಲ್ಲಿನ ಪೌರಕಾರ್ಮಿಕರು/ಸ್ವಚ್ಛತಾ ಕೆಲಸಗಾರರಿಗೆ ಏಕ ರೂಪದ ಸುರಕ್ಷತಾ ಪರಿಕರಗಳನ್ನು ನಿಗದಿಪಡಿಸುವ ಸಂಬಂಧ ಪ್ರತಿಷ್ಠಿತ ಉತ್ಪಾದನಾ ಸಂಸ್ಥೆಗಳಿಂದ ಉತ್ತಮ ಗುಣಮಟ್ಟದ ಮಹಿಳೆ ಮತ್ತು ಪುರುಷರಿಗೆ ಪ್ರತ್ಯೇಕವಾಗಿ ಒಂದು ಜೊತೆ ಉಚಿತವಾಗಿ ಮಾದರಿ ವಸ್ತುಗಳನ್ನು /ಪರಿಕರಗಳೊಂದಿಗೆ ಅರ್ಜಿಯನ್ನು ದಿನಾಂಕ: 26.08.2022 ರ ಸಾಯಂಕಾಲ 4.00 ಗಂಟೆಯೊಳಗೆ ಮೇಲ್ಕಂಡ ವಿಳಾಸಕ್ಕೆ ತಲುಪುವಂತೆ ಸಲ್ಲಿಸುವುದು.

1) ಪ್ರತಿನಿತ್ಯ ಕಸವನ್ನು ಸ್ವಚ್ಛಗೊಳಿಸುವ ಕಾರ್ಮಿಕರಿಗೆ ಬೇಕಾಗುವಂತಹ ಪರಿಕರಗಳು :
ವಾಟರ್ ಪ್ರೂಫಿಂಗ್ ಜಾಕೆಟ್ ಮತ್ತು ಸಮವಸ್ತ್ರ (ಜರ್ಕಿನ್) ಪುರುಷರಿಗೆ ಗುಣಮಟ್ಟದ ಶರ್ಟ್ ಮತ್ತು ಪ್ಯಾಂಟ್ಸ್. ಮಹಿಳೆಯರಿಗೆ ಬ್ಲೌಸ್, ಸ್ಯಾರಿ, ಏಪ್ರಾನ್, ಹ್ಯಾಂಡ್‌ಗ್ಲೌಸ್, ಮಾಸ್ಕ್, ಟೋಪಿ, ಬೂಟ್, ಹ್ಯಾಂಡ್ ಬ್ರೂಮ್ ಸ್ಟಿಕ್. ಸುರಕ್ಷತಾ ಕನ್ನಡಕ.
2) ಮನೆ–ಮನೆ ಕಸ ಸಂಗ್ರಹಣೆ ಮಾಡುವ ಕಾರ್ಮಿಕರಿಗೆ ಬೇಕಾದ ಪರಿಕರಗಳು :
ವಾಟರ್ ಪ್ರೂಫಿಂಗ್‌ಜಾಕೆಟ್ ಮತ್ತು ಸಮವಸ್ತ್ರ (ಜರ್ಕಿನ್) ಪುರುಷರಿಗೆ ಗುಣಮಟ್ಟದ ಶರ್ಟ್ ಮತ್ತು ಪ್ಯಾಂಟ್. ಮಹಿಳೆಯರಿಗೆ ಬ್ಲೌಸ್, ಸ್ಯಾರಿ, ಏಪ್ರಾನ್, ಹ್ಯಾಂಡ್‌ಗ್ಲೌಸ್, ಮಾಸ್ಕ್, ಸುರಕ್ಷತಾ ಹೆಲ್ಮೆಟ್, ಬೂಟ್, ಸುರಕ್ಷತಾ ಕನ್ನಡಕ.
3) ಕಸವನ್ನು ಲೋಡಿಂಗ್ ಮತ್ತು ಕ್ಲೀನಿಂಗ್ ಮಾಡುವ ಕಾರ್ಮಿಕರಿಗೆ ಬೇಕಾದ ಪರಿಕರಗಳು :
ವಾಟರ್ ಪ್ರೂಫಿಂಗ್ ಶರ್ಟ್ ಮತ್ತು ಪ್ಯಾಂಟ್, ಮತ್ತು ಸೇಫ್ಟಿ ಜಾಕೇಟ್ (ಜರ್ಕಿನ್), ಹ್ಯಾಂಡ್‌ಗ್ಲೌಸ್, ಮಾಸ್ಕ್, ಸುರಕ್ಷತಾ ಹೆಲ್ಮೆಟ್, ಗಮ್ ಬೂಟ್ಸ್ H_2S, CH_4, NO_x, ಸಾಮರ್ಥ್ಯವಿರುವ ಮಾಸ್ಕ್, ಸುರಕ್ಷತಾ ಹೆಲ್ಮೆಟ್, ಪೂರ್ತಿ ಕೈ ಮುಚ್ಚುವ ಗ್ಲೌಸ್, ಸುರಕ್ಷತಾ ಕನ್ನಡಕ.
4) ಶೌಚಾಲಯಗಳಲ್ಲಿ ಸ್ವಚ್ಛಗೊಳಿಸುವ ಕಾರ್ಮಿಕರಿಗೆ ಬೇಕಾದ ಪರಿಕರಗಳು :
ವಾಟರ್ ಫೂಫಿಂಗ್ ಶರ್ಟ್ ಮತ್ತು ಪ್ಯಾಂಟ್ ಮತ್ತು ಸೇಫ್ಟಿ ಜಾಕೇಟ್ (ಜರ್ಕಿನ್), ಫುಲ್ ಹ್ಯಾಂಡ್‌ಗ್ಲೌಸ್, ಏರ್ ಮಾಸ್ಕ್, ಸುರಕ್ಷತಾ ಟೋಪಿ, ಗಮ್ ಬೂಟ್, ಮಹಿಳೆಯರಿಗೆ ಸ್ಯಾರಿ, ಏಪ್ರಾನ್, ಸುರಕ್ಷತಾ ಕನ್ನಡಕ, ಏರ್‌ಕ್ಯಾಪ್
5) ಯು.ಜಿ.ಡಿ. ವ್ಯವಸ್ಥೆಯಲ್ಲಿ ಯಂತ್ರಗಳಿಂದ ಕಾರ್ಯನಿರ್ವಹಿಸುವಂತಹ ಕಾರ್ಮಿಕರಿಗೆ ಬೇಕಾದ ಪರಿಕರಗಳು :
ವಾಟರ್ ಪ್ರೂಫಿಂಗ್ ಶರ್ಟ್ ಮತ್ತು ಪ್ಯಾಂಟ್ ಮತ್ತು ಸೇಫ್ಟಿ ಜಾಕೇಟ್ (ಜರ್ಕಿನ್), ಹ್ಯಾಂಡ್‌ಗ್ಲೌಸ್, ಮಾಸ್ಕ್, ಸುರಕ್ಷತಾ ಹೆಲ್ಮೆಟ್, ಗಮ್ ಬೂಟ್ (ಪುರುಷರಿಗೆ ಪ್ರತ್ಯೇಕ) H_2S, CH_4, NO_x, ಸಾಮರ್ಥ್ಯವಿರುವ ಮಾಸ್ಕ್
ಗ್ಯಾಸ್ ಡಿಟಕ್ಟರ್, ಏರ್‌ಲೈನ್ ಉಸಿರಾಟದ ಉಪಕರಣ, ಏರ್ ಪ್ಯೂರಿಫೈಯರ್ ಗ್ಯಾಸ್ ಮಾಸ್ಕ್/ ಚಿನ್ ಕಾರ್ಟೆಜ್, ಕೃತಕ ಉಸಿರಾಟದ ಉಪಕರಣ, ಉಸಿರಾಟದ ಮುಖವಾಡ, ತುರ್ತು ವೈದ್ಯಕೀಯ ಆಮ್ಲಜನಕ ಪುನರಾವರ್ತಕ ಕಿಟ್ ಪೂರ್ಣದೇಹ ಮುಚ್ಚುವ ವೇಡರ್ ಸೂಟ್, ಲೈಫ್‌ಗಾರ್ಡ್ ಪ್ಯಾಡ್, ರೈನ್‌ಕೋಟ್
ಸುರಕ್ಷತಾ ಹೆಲ್ಮೆಟ್‌ಟಾರ್ಚ್, ಪೂರ್ತಿ ಕೈ ಮುಚ್ಚುವ ಗ್ಲೌಸ್, ಸುರಕ್ಷತಾ ಕನ್ನಡಕಗಳು, ಬ್ಯಾರಿಕೇಡ್

ಅರ್ಜಿ ನಮೂನೆ: (1) ಉತ್ಪಾದನ ಸಂಸ್ಥೆಯ ಹೆಸರು ಮತ್ತು ಸ್ಥಳ, (2) ಸಂಸ್ಥೆಯು ಉತ್ಪಾದಿಸುವ ಪರಿಕರಗಳ ವಿವರ ಮತ್ತು ಪ್ರಮಾಣ (3) ಕಳೆದ 3 ವರ್ಷಗಳ ಆದಾಯ ತೆರಿಗೆ ರಿಟರ್ನ್ ಪ್ರಮಾಣ ಪತ್ರ, (4) ಸರ್ಕಾರದದಿಂದ ಮಾನ್ಯತೆ ಪಡೆದ ಪ್ರಮಾಣಪತ್ರ. (5) ISO ಸಂಸ್ಥೆಯಿಂದ ಸಾಮ್ಯತೆ ಪಡೆದ ಪ್ರಮಾಣಪತ್ರ (6) ತಮ್ಮ ಸಂಸ್ಥೆಯಿಂದ ಉತ್ಪಾದನಾ ವಸ್ತು/ ಪರಿಕರಗಳನ್ನು ಖರೀದಿ/ ಮಾರಾಟ ಸಂಸ್ಥೆಗಳಿಂದ ತೃಪ್ತಿಕರ ಪ್ರಮಾಣ ಪತ್ರ ಇತ್ಯಾದಿ ಅರ್ಜಿಯೊಂದಿಗೆ ದಾಖಲೆಗಳನ್ನು ಮತ್ತು ಮೇಲ್ಕಂಡಂತೆ ಒಂದು ಜೊತೆ ಪರಿಕರಗಳ ಗುಣಮಟ್ಟವನ್ನು ಪರೀಕ್ಷಿಸಲು ಮಾದರಿಯಾಗಿ ಒಂದು ಜೊತೆ ಉಚಿತವಾಗಿ ಸಲ್ಲಿಸತಕ್ಕದ್ದು.

ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ವಿಳಾಸದ ಆಯೋಗದ ಕಛೇರಿಯಲ್ಲಿ ಖುದ್ದಾಗಿ ಅಥವಾ ದೂರವಾಣಿ: 080–22240445, 080– 22240446 ಸಂಪರ್ಕಿಸುವುದು.

ಸಹಿ/– ಕಾರ್ಯದರ್ಶಿ, ಕ.ರಾ.ಸ.ಕ.ಆ. ಬೆಂಗಳೂರು.
DIPR/CP/1700/Zenkar/2022-23

ಕನ್ನಡ ಕಡೆಗಣನೆ ಕೈಗಾರಿಕಾ ಒಕ್ಕೂಟ: ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಇತ್ತೀಚೆಗೆ ನಗರದಲ್ಲಿ ಭಾಗವಹಿಸಿದ್ದ 'ಸಂಕಲ್ಪ ದಿಂದ ಸಿದ್ಧಿ' ಕಾರ್ಯಕ್ರಮದ ಬ್ಯಾನರ್ ಸಂಪೂರ್ಣ ಹಿಂದಿಮಯ ಆಗಿರುವುದಕ್ಕೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಆಕ್ಷೇಪ ವ್ಯಕ್ತಪಡಿಸಿದ್ದು, ಕನ್ನಡ ಕಡೆಗಣಿಸಿದ ಅಧಿಕಾರಿಗಳ ಮೇಲೆ ಕ್ರಮಕ್ಕೆ ಸೂಚಿಸಿದೆ.

ಈ ಬಗ್ಗೆ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಅವರು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ. 'ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ. ಆಡಳಿತದ ಎಲ್ಲ ಹಂತಗಳಲ್ಲಿಯೂ ಕನ್ನಡ ಬಳಸಬೇಕು. ಭಾರತೀಯ ಕೈಗಾರಿಕಾ ಒಕ್ಕೂಟ ನಗರದಲ್ಲಿ ನಡೆಸಿದ ಕಾರ್ಯಕ್ರಮದಲ್ಲಿ ಕನ್ನಡ ಕಡೆಗಣಿಸಿದೆ. ಈ ಬಗ್ಗೆ ಸಾರ್ವಜನಿಕರೂ ಪ್ರಾಧಿಕಾರಕ್ಕೆ ದೂರು ನೀಡಿದ್ದಾರೆ' ಎಂದು ಹೇಳಿದ್ದಾರೆ.

'ರಾಜ್ಯ ಸರ್ಕಾರ ಆಡಳಿತದಲ್ಲಿ ಕನ್ನಡವನ್ನು ಪೂರ್ಣಪ್ರಮಾಣ ದಲ್ಲಿ ಜಾರಿಗೊಳಿಸಲು ಕಾಲಕಾಲಕ್ಕೆ ಆದೇಶಗಳನ್ನು ಹೊರಡಿಸಿದೆ. ಅದಾಗಿಯೂ ಕೈಗಾರಿಕಾ ಒಕ್ಕೂಟ ಕಾರ್ಯಕ್ರಮದಲ್ಲಿ ಕನ್ನಡ ಕಡೆಗಣಿಸಿದೆ. ಇದು ರಾಜ್ಯ ಸರ್ಕಾರದ ಕನ್ನಡ ಪರ ಆದೇಶಗಳ ಸ್ಪಷ್ಟ ಉಲ್ಲಂಘನೆ. ಸಂಬಂಧಪಟ್ಟ ಅಧಿಕಾರಿ, ನೌಕರರ ಮೇಲೆ ಶಿಸ್ತು ಕ್ರಮ ಜಾರಿಗೊಳಿಸಬೇಕು' ಎಂದು ಪತ್ರದಲ್ಲಿ ಸೂಚಿಸಿದ್ದಾರೆ.

ಪಿವಿ ಬ್ರ್ಯಾಂಡ್ ಸ್ಪಾಟ್
ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ 'ಪಿವಿ ಬ್ರ್ಯಾಂಡ್ ಸ್ಪಾಟ್'ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಸಿಐಎಸ್‌ಎಫ್ ಯೋಧನಿಂದ ಹಿರಿಯ ಅಧಿಕಾರಿ ಹತ್ಯೆ

ಕೋಲ್ಕತ್ತ (ಪಿಟಿಐ): ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆಯ (ಸಿಐಎಸ್‌ಎಫ್) ಹೆಡ್ ಕಾನ್‌ಸ್ಟೆಬಲ್ ಒಬ್ಬರು ಇಲ್ಲಿನ ಭಾರತೀಯ ವಸ್ತು ಸಂಗ್ರಹಾಲಯದೊಳಗಿನ ಬ್ಯಾರಕ್‌ನಲ್ಲಿ ಮನಸೋಇಚ್ಛೆ ಗುಂಡಿನ ದಾಳಿ ನಡೆಸಿ ಸಹಾಯಕ ಸಬ್ ಇನ್‌ಸ್ಪೆಕ್ಟರ್ ರಂಜಿತ್ ಸಾರಂಗಿ ಎಂಬುವರನ್ನು ಹತ್ಯೆ ಮಾಡಿದ್ದಾರೆ. ಸಹಾಯಕ ಕಮಾಂಡೆಂಟ್ ಸುವೀರ್ ಘೋಷ್ ಗಾಯಗೊಂಡಿದ್ದಾರೆ.

'ಹೆಡ್ ಕಾನ್‌ಸ್ಟೆಬಲ್ ಎ.ಕೆ. ಮಿಶ್ರಾ ಎಂಬುವರು ತಮ್ಮ ಬಳಿ ಇದ್ದ ಎಕೆ–47 ರೈಫಲ್‌ನಿಂದ ಗುಂಡಿನ ದಾಳಿ ನಡೆಸಿದ್ದಾರೆ. ಸಿಐಎಸ್‌ಎಫ್ ಇನ್‌ಸ್ಪೆಕ್ಟರ್ ಜನರಲ್ ಸುಧೀರ್ ಕುಮಾರ್ ಅವರು ಸ್ಥಳಕ್ಕೆ ಬಂದು ಮನವಿ ಮಾಡಿದ ಬಳಿಕ ಪೊಲೀಸರಿಗೆ ಶರಣಾಗಿದ್ದಾರೆ. ಶನಿವಾರ ಸಂಜೆ 6.45ರ ಸುಮಾರಿಗೆ ಘಟನೆ ನಡೆದಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನೂಪುರ್ ಬೆಂಬಲಿಸಿ ಪೋಸ್ಟ್: ಹಲ್ಲೆ

ಮುಂಬೈ: 'ಬಿಜೆಪಿ ವಕ್ತಾರೆಯಾಗಿದ್ದ ನೂಪುರ್ ಶರ್ಮಾ ಅವರನ್ನು ಬೆಂಬಲಿಸುವ ರೀತಿಯ ಪೋಸ್ಟ್‌ಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಕ್ಕಾಗಿ ಅಹ್ಮದ್‌ನಗರ ಜಿಲ್ಲೆಯಲ್ಲಿ ಯುವಕನೊಬ್ಬನ ಮೇಲೆ ಮುಸ್ಲಿಂ ಯುವಕರು ಹಲ್ಲೆ ನಡೆಸಿದ್ದಾರೆ' ಎಂದು ಬಿಜೆಪಿ ಶಾಸಕ ನಿತೇಶ್ ರಾಣೆ ಆರೋಪಿಸಿದ್ದಾರೆ.

ನ್ಯಾಯಮಂಡಳಿ ತೀರ್ಪನ್ನು ಕರ್ನಾಟಕ ಉಲ್ಲಂಘಿಸಿದ ಆರೋಪ

ಭದ್ರಾ ಮೇಲ್ದಂಡೆ: ಆಂಧ್ರ ಮತ್ತೆ ತಗಾದೆ

● ಮಂಜುನಾಥ ಹೆಬ್ಬಾರ್

ನವದೆಹಲಿ: ಹನಿ ನೀರಾವರಿ ಮೂಲಕ ಮಧ್ಯ ಕರ್ನಾಟಕ ಜಿಲ್ಲೆಗಳಿಗೆ ನೀರುಣಿಸುವ ಭದ್ರಾ ಮೇಲ್ದಂಡೆ ಯೋಜನೆಗೆ ಆಂಧ್ರ ಪ್ರದೇಶ ಸರ್ಕಾರ ಮತ್ತೆ ತಗಾದೆ ತೆಗೆದಿದೆ.

ಕೃಷ್ಣಾ ನದಿ ನೀರು ಹಂಚಿಕೆ ನ್ಯಾಯಮಂಡಳಿ ತೀರ್ಪನ್ನು ಉಲ್ಲಂಘಿಸಿ ಕರ್ನಾಟಕ ಸರ್ಕಾರ ಈ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಇದು ಸಂಪೂರ್ಣವಾಗಿ ಅನುಷ್ಠಾನಗೊಂಡರೆ ತುಂಗಭದ್ರಾ ಜಲಾಶಯದ ಒಳಹರಿವಿನ ಪ್ರಮಾಣ ಕಡಿಮೆಯಾಗಲಿದೆ. ಇದರಿಂದ ಆಂಧ್ರ ಪ್ರದೇಶದ ಮೂರು ನೀರಾವರಿ ಯೋಜನೆಗಳ ಮೇಲೆ ಪರಿಣಾಮ ಬೀರಲಿದೆ ಎಂಬುದು ಆಂಧ್ರ ಪ್ರದೇಶ ಸರ್ಕಾರದ ತಕರಾರು.

ತಿರುವನಂತಪುರ ಇತ್ತೀಚೆಗೆ ನಡೆದ ಕೇಂದ್ರ ಗೃಹ ಸಚಿವಾಲಯದ ಅಂತರ್ ರಾಜ್ಯ (ದಕ್ಷಿಣ ವಲಯ) ಪರಿಷತ್ತಿನ ಸ್ಥಾಯಿ ಸಮಿತಿ ಸಭೆಯಲ್ಲಿ ಆಂಧ್ರ ಪ್ರದೇಶ ಸರ್ಕಾರವು ಯೋಜನೆಯ ಬಗ್ಗೆ ತಕರಾರು ಎತ್ತಿದೆ. ಈ ಯೋಜನೆಯಲ್ಲಿನ ಇತ್ತೀಚಿನ ಬೆಳವಣಿಗೆಗಳ ಬಗ್ಗೆ ವಿವರ ನೀಡುವಂತೆ ಸೂಚಿಸಿ ಗೃಹ ಸಚಿವಾಲಯದ ಅಂತರ್ ರಾಜ್ಯ ಪರಿಷತ್ತಿನ ಕಾರ್ಯದರ್ಶಿ ಅನುರಾಧ ಚೌಧರಿ ಅವರು ಕರ್ನಾಟಕ ಸರ್ಕಾರಕ್ಕೆ ಆಗಸ್ಟ್ 4ರಂದು ಪತ್ರ ಬರೆದಿದ್ದಾರೆ. ಸಭೆಯ ನಡಾವಳಿಯ ಪ್ರತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

ಮುಖ್ಯಾಂಶಗಳು

- ಗೃಹ ಸಚಿವಾಲಯದ ಅಂತರ್ ರಾಜ್ಯ ಪರಿಷತ್ತಿನ ಸಭೆಯಲ್ಲಿ ಪ್ರಸ್ತಾಪ
- ಕರ್ನಾಟಕ ಸರ್ಕಾರಕ್ಕೆ ಪತ್ರ ಬರೆದ ಕೇಂದ್ರ ಸರ್ಕಾರ
- ಮುಂದಿನ ಸ್ಥಾಯಿ ಸಮಿತಿ ಸಭೆಯಲ್ಲಿ ಚರ್ಚೆ

ಸಭೆಯ ನಡಾವಳಿಯ ಸಾರ: ಸ್ಥಾಯಿ ಸಮಿತಿ ಸಭೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ್ದ ಪರಿಷತ್ತಿನ ಕಾರ್ಯದರ್ಶಿ, ಈ ಯೋಜನೆಯ ಬಗ್ಗೆ ಆಂಧ್ರ ಪ್ರದೇಶ ಸರ್ಕಾರ ಆಕ್ಷೇಪ ವ್ಯಕ್ತಪಡಿಸಿದೆ ಎಂದು ಗಮನ ಸೆಳೆದಿದ್ದರು.

ಇದಕ್ಕೆ ಪ್ರತಿಕ್ರಿಯಿಸಿದ್ದ ಜಲಶಕ್ತಿ ಸಚಿವಾಲಯದ ಪ್ರತಿನಿಧಿ, 'ಈ ಯೋಜನೆಗೆ ಸಚಿವಾಲಯದ ತಾಂತ್ರಿಕ ಸಲಹಾ ಸಮಿತಿ 2020ರಲ್ಲಿ ಒಪ್ಪಿಗೆ ನೀಡಿದೆ. ಒಪ್ಪಿಗೆ ನೀಡುವ ವೇಳೆ ಅಂತರ್ ರಾಜ್ಯಗಳ ವಾದಗಳನ್ನು ಪರಿಗಣಿಸಲಾಗಿದೆ. ಕೃಷ್ಣಾ ನದಿ ನೀರು ನ್ಯಾಯಮಂಡಳಿ ತೀರ್ಪಿನ ಅನ್ವಯವೇ ಕರ್ನಾಟಕ ಸರ್ಕಾರ ಯೋಜನೆ ಕೈಗೆತ್ತಿಕೊಂಡಿದೆ. ಆಂಧ್ರ ಪ್ರದೇಶದ ಆಕ್ಷೇಪಗಳನ್ನು ವಿವರವಾಗಿ ಚರ್ಚಿಸಲಾಗಿದೆ. ಕೇಂದ್ರ ಜಲ ಆಯೋಗವು ಈ ಯೋಜನೆಗೆ ಒಪ್ಪಿಗೆ ನೀಡಿದ್ದು, ಈ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಘೋಷಿಸಲು 2022ರ ಮಾರ್ಚ್‌ನಲ್ಲಿ ಅನುಮೋದನೆ ನೀಡಲಾಗಿದೆ. ಈ ಸಂಬಂಧ ಆಂಧ್ರ ಸರ್ಕಾರಕ್ಕೆ ವಿಸ್ತೃತ ಪ್ರತಿಕ್ರಿಯೆ ನೀಡಲಾಗಿದೆ' ಎಂದು ಉತ್ತರ ನೀಡಿದ್ದರು.

ಆಂಧ್ರ ಪ್ರದೇಶ ಸರ್ಕಾರದ ಪ್ರತಿನಿಧಿ, 'ಕೇಂದ್ರದ ಪ್ರತಿಕ್ರಿಯೆ ನಮಗೆ ಲಭ್ಯ ಆಗಿಲ್ಲ. ನೀರಿನ ಹಂಚಿಕೆಯಲ್ಲಿ ಯಾವುದೇ ಮಾರ್ಪಾಡು ಇದ್ದಲ್ಲಿ ಆ ಕುರಿತು ಹೊಸ ಡಿಪಿಆರ್ ತಯಾರಿಸಬೇಕು ಮತ್ತು ಅದಕ್ಕೆ ಅನುಮೋದನೆ ಪಡೆಯಬೇಕು. ಆದರೆ, ಈವರೆಗೆ ಹೊಸ ಡಿಪಿಆರ್ ಸಲ್ಲಿಕೆ ಆಗಿಲ್ಲ. ಮುಂದಿನ ಸ್ಥಾಯಿ ಸಮಿತಿ ಸಭೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಬೇಕು' ಎಂದು ಮನವಿ ಮಾಡಿದ್ದರು.

ಇದಕ್ಕೆ ಉತ್ತರಿಸಿದ್ದ ಕರ್ನಾಟಕ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, 'ಕೇಂದ್ರ ಜಲ ಆಯೋಗವು ಅಂತರ್ ರಾಜ್ಯ ಆಯಾಮಗಳನ್ನು ಪರಿಶೀಲಿಸಿದೆ. ಆಂಧ್ರ ಸರ್ಕಾರದ ಆಕ್ಷೇಪ ಸೇರಿ ಎಲ್ಲ ಅಂಶಗಳನ್ನು ಪರಿಶೀಲಿಸಿ ಯೋಜನೆಗೆ ಒಪ್ಪಿಗೆ ನೀಡಿದೆ' ಎಂದು ಉತ್ತರಿಸಿದ್ದರು.

ಈ ವಿಚಾರ ಇತ್ತೀಚೆಗೆಯಷ್ಟೇ ಅಂತರ್ ರಾಜ್ಯ ಪರಿಷತ್ತಿನ ಮುಂದೆ ಬಂದಿದ್ದು, ಮುಂದಿನ ಸ್ಥಾಯಿ ಸಮಿತಿ ಸಭೆಯಲ್ಲಿ ಚರ್ಚಿಸಲು ಸಭೆಯಲ್ಲಿ ತೀರ್ಮಾನಿಸಲಾಗಿತ್ತು.

ಕೇಂದ್ರ ಸಂಪುಟದ ಒಪ್ಪಿಗೆ ಬಾಕಿ: ಭದ್ರಾ ಮೇಲ್ದಂಡೆ ಯೋಜನೆಯಲ್ಲಿ 29.90 ಟಿಎಂಸಿ ಅಡಿ ನೀರು (ತುಂಗಾ ನದಿಯಿಂದ 17.40 ಟಿಎಂಸಿ ಅಡಿ ಹಾಗೂ ಭದ್ರಾ ಜಲಾಶಯದಿಂದ 12.50 ಟಿಎಂಸಿ ಅಡಿ) ಬಳಕೆ ಮಾಡಲಾಗುತ್ತದೆ. ಚಿಕ್ಕಮಗಳೂರು, ಚಿತ್ರದುರ್ಗ, ತುಮಕೂರು ಹಾಗೂ ದಾವಣಗೆರೆ ಜಿಲ್ಲೆಗಳಿಗೆ ಸೂಕ್ಷ್ಮ ನೀರಾವರಿ ಮೂಲಕ ನೀರಾವರಿ ಸೌಲಭ್ಯ ಕಲ್ಪಿಸಲಾಗುತ್ತದೆ. ಈ ಜಿಲ್ಲೆಗಳ 367 ಕೆರೆಗಳನ್ನು ಅವುಗಳ ಸಾಮರ್ಥ್ಯದ ಶೇಕಡಾ 50 ರಷ್ಟನ್ನು ತುಂಬಿಸುವ ಯೋಜನೆ ಇದಾಗಿದೆ. ಇದನ್ನು ರಾಷ್ಟ್ರೀಯ ಯೋಜನೆ ಎಂದು ಪರಿಗಣಿಸಲು ಕೇಂದ್ರ ಹಣಕಾಸು ಸಚಿವಾಲಯ ಒಪ್ಪಿಗೆ ನೀಡಿದೆ. ಈ ಯೋಜನೆಗೆ ರಾಷ್ಟ್ರೀಯ ಯೋಜನೆಯ ಮಾನ್ಯತೆ ಸಿಗಲು ಕೇಂದ್ರ ಸರ್ಕಾರದ ಸಚಿವ ಸಂಪುಟದ ಅನುಮೋದನೆ ಬಾಕಿ ಇದೆ. ಈ ಯೋಜನೆಗೆ ತಗಲುವ ಒಟ್ಟಾರೆ ವೆಚ್ಚ ₹21,473 ಕೋಟಿ. ರಾಷ್ಟ್ರೀಯ ಯೋಜನೆಯಾಗಿ ಪರಿಗಣಿತವಾದ ನಂತರ ಕೇಂದ್ರ ಸರ್ಕಾರ ಈ ಯೋಜನೆಗೆ ₹9,675 ಕೋಟಿ ನೀಡಲಿದೆ.

ಚಿಕ್ಕಮಗಳೂರು ಜಿಲ್ಲೆಯ ಅಜ್ಜಂಪುರ ಸಮೀಪದ ಸುರಂಗದ ಹೊರಗೆ ನಿರ್ಮಾಣವಾಗಿರುವ ಭದ್ರಾ ಮೇಲ್ದಂಡೆ ನಾಲೆ (ಸಂಗ್ರಹ ಚಿತ್ರ)

ಯಾವ ಜಿಲ್ಲೆಗಳಿಗೆ ನೀರಾವರಿ ಸೌಲಭ್ಯ

ಜಿಲ್ಲೆ	ನೀರಾವರಿ (ಹೆಕ್ಟೇರ್‌ಗಳಲ್ಲಿ)
ಚಿಕ್ಕಮಗಳೂರು	44,555
ಚಿತ್ರದುರ್ಗ	1,54,245
ತುಮಕೂರು	19,215
ದಾವಣಗೆರೆ	7,500
ಒಟ್ಟು	2,25,515

ಪ್ರಜಾವಾಣಿ DH DECCAN HERALD

ಡಿಎಚ್–ಪಿವಿ ಬಡ ವಿದ್ಯಾರ್ಥಿಗಳ ಶೈಕ್ಷಣಿಕ ನಿಧಿ

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1	ರತ್ನಾ ನಾಗರಾಜ್, ಬೆಂಗಳೂರು	1,00,000
2	ಸ್ವಯಂಪ್ರಭಾ ಎಂ.ಆರ್. ದೊಮ್ಮಲೂರು, ಬೆಂಗಳೂರು	20,000
3	ಪ್ರೊ. ಎಫ್.ಟಿ. ಹಳ್ಳಿಕೇರಿ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ	10,001
4	ಜಯರಾಮ್ ಕೆ. ಎಸ್. ಬಿ.ಎಂ ಕಾಲೊನಿ, ಬೆಂಗಳೂರು	10,000
5	ಎಂ.ಕೆ. ಸುಬ್ಬಯ್ಯ, ಬೆಂಗಳೂರು	10,000
6	ಮಧುಸೂದನ್ ಕೆ.ಪಿ. ದಾವಣಗೆರೆ	10,000
7	ಜಯದೇವ ಎಲ್.ವಿ. ಸಪ್ತಗಿರಿ ಬಡಾವಣೆ, ತುಮಕೂರು	10,000
8	ಶ್ರೀಮತಿ ಎಚ್.ಎಸ್. ಜಯನಗರ, ಬೆಂಗಳೂರು	10,000
9	ದಶರಥಿ ಎಚ್.ಆರ್, ಬೆಂಗಳೂರು	8,000
10	ಎಂ.ಕೆ. ಗಣಪತಿ, ಬನಶಂಕರಿ ಮೂರನೇ ಹಂತ, ಬೆಂಗಳೂರು	5,001
11	ನಾಗರಾಜ ಚಿಕ್ಕಣ್ಣ, ಬಸವೇಶ್ವರನಗರ, ಬೆಂಗಳೂರು	5,000
12	ಕೆ.ವಿ. ಶಿವಂಗೌಡ, ಇಸ್ರೊ ಬಡಾವಣೆ, ಬೆಂಗಳೂರು	5,000
13	ಉಮೇಶ್ ಅಡಿಗ, ಇಸ್ರೊ ಬಡಾವಣೆ, ಬೆಂಗಳೂರು	5,000
14	ಎಂ. ನಿಂಗಯ್ಯ, ಮಲ್ಲತಹಳ್ಳಿ, ಬೆಂಗಳೂರು	5,000
15	ಎನ್.ಸಿ. ಮಂಜುನಾಥ, ಅಶೋಕ ನಗರ, ಹುಬ್ಬಳ್ಳಿ	5,000
16	ಶಶಿಕಾಂತ ಎಂ. ನಾಗರಬಾವಿ, ಬೆಂಗಳೂರು	5,000
17	ಸಂಜೀವ್ ಎಚ್. ಪ್ಯಾಟಿ, ನಾರಾಯಣಪುರ, ಧಾರವಾಡ	5,000
18	ಶೈಲಜಾ ಕೆ.ಆರ್. ಸುಂಕದಕಟ್ಟೆ, ಬೆಂಗಳೂರು	5,000
19	ರೇವಣಸಿದ್ದಪ್ಪ ಜಿ. ಕುಚನೂರ್, ಬನಶಂಕರಿ ಹಂತ 3, ಬೆಂಗಳೂರು	4,000
20	ರಂಗನಾಥ್ ಕೆ.ಜಿ. ಜಯನಗರ, ಬೆಂಗಳೂರು	3,000
21	ಪುಟ್ಟಣ್ಣ ವಿ. ತಿಪ್ಪಸಂದ್ರ, ಬೆಂಗಳೂರು	2,500
22	ಎನ್.ಸಿ. ಸುಬ್ರಮಣ್ಯಂ, ವಿದ್ಯಾರಣ್ಯಪುರ, ಬೆಂಗಳೂರು	2,001
23	ಸುಶೀಲಾ, ರಾಜರಾಜೇಶ್ವರಿನಗರ, ಬೆಂಗಳೂರು	2,000
24	ಮುರಿಗೆಪ್ಪ ಚನ್ನಪ್ಪ, ಧಾರವಾಡ	1,010
25	ರಾಮಕೃಷ್ಣ ಎಲ್. ಬೆಂಗಳೂರು	1,001
26	ಕೆ.ಎಲ್. ಪ್ರಕಾಶ್, ವೇದನಗರ, ಕಡೂರು	1,001
	ಒಟ್ಟು ದೇಣಿಗೆ:	2,49,515
	ಇದುವರೆಗೆ ಸಂಗ್ರಹವಾಗಿರುವ ದೇಣಿಗೆ ಮೊತ್ತ:	13,40,000

ನಿರ್ಮಾಪಕರಿಗೆ ಸೇರಿದ ಸ್ಥಳಗಳಲ್ಲಿ ಶೋಧ

₹200 ಕೋಟಿಗೂ ಅಧಿಕ ಅಘೋಷಿತ ಆದಾಯ ಪತ್ತೆ

ನವದೆಹಲಿ (ಪಿಟಿಐ): 'ತಮಿಳುನಾಡಿನ ಕೆಲವು ಚಿತ್ರನಿರ್ಮಾಪಕರು, ವಿತರಕರು ಮತ್ತು ಹೂಡಿಕೆದಾರರಿಗೆ ಸೇರಿದ 40 ಸ್ಥಳಗಳಲ್ಲಿ ಶೋಧಕಾರ್ಯ ನಡೆಸಿದ ವೇಳೆ ಒಟ್ಟು ₹200 ಕೋಟಿಗೂ ಅಧಿಕ ಅಘೋಷಿತ ಆದಾಯಕ್ಕೆ ಸಂಬಂಧಿಸಿದ ದಾಖಲೆಗಳು, ನಗದು, ಆಭರಣ ಪತ್ತೆಯಾಗಿದೆ' ಎಂದು ಕೇಂದ್ರ ನೇರ ತೆರಿಗೆಗಳ ಮಂಡಳಿ (ಸಿಬಿಡಿಟಿ) ಶನಿವಾರ ತಿಳಿಸಿದೆ.

ಚೆನ್ನೈ, ಮಧುರೈ, ಕೊಯಮತ್ತೂರು ಮತ್ತು ವೆಲ್ಲೂರ್‌ನಲ್ಲಿ ಶೋಧಕಾರ್ಯ ನಡೆಸಲಾಗಿದೆ. ₹26 ಕೋಟಿ ನಗದು ಮತ್ತು ₹3 ಕೋಟಿ ಮೌಲ್ಯದ ಚಿನ್ನಾಭರಣವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಸಿಬಿಡಿಟಿ ಮಾಹಿತಿ ನೀಡಿದೆ.

'ಹಣ ಅಕ್ರಮ ವರ್ಗಾವಣೆ ಮತ್ತು ಹೂಡಿಕೆಗಳಿಗೆ ಸಂಬಂಧಿಸಿದ ದಾಖಲೆಗಳು, ಡಿಜಿಟಲ್ ಉಪಕರಣಗಳನ್ನೂ ವಶಪಡಿಸಿಕೊಳ್ಳಲಾಗಿದೆ. ಕೆಲವು ಸಿನಿಮಾ ನಿರ್ಮಾಣ ಸಂಸ್ಥೆಗಳು ತೆರಿಗೆ ವಿನಾಯಿತಿ ಪಡೆಯಲು, ಸಿನಿಮಾದಿಂದ ಬಂದ ಆದಾಯವು ಕಡಿಮೆ ಎಂದು ತೋರಿಸಿದ್ದನ್ನು ಪತ್ತೆಹಚ್ಚಲಾಗಿದೆ' ಎಂದು ಹೇಳಿದೆ.

ಅಕ್ರಮವಾಗಿ ಸಂಗ್ರಹಿಸಿದ ಆದಾಯವನ್ನು ಅಘೋಷಿತ ಹೂಡಿಕೆಗೆ ಮತ್ತು ಅಘೋಷಿತ ಪಾವತಿಗೆ ಬಳಕೆ ಮಾಡಲಾಗಿದೆ ಎಂದು ಹೇಳಿದೆ.

ಚಿತ್ರಮಂದಿರಗಳಿಂದ 'ದಾಖಲೆಗಳನ್ನು ನಿರ್ವಹಿಸದೆಯೇ ಹಣ'ವನ್ನು ಸಂಗ್ರಹಿಸಲಾಗುತ್ತಿದೆ ಎಂದು ಸಿನಿಮಾ ವಿತರಕರಿಂದ ವಶಪಡಿಸಿಕೊಂಡ ದಾಖಲೆಗಳಿಂದ ತಿಳಿದುಬಂದಿದೆ. 'ಚಿತ್ರಮಂದಿರಗಳಿಂದ ಕಡಿಮೆ ಆದಾಯ ಬಂದಿದೆ' ಎಂದು ತೋರಿಸಲಾಗುತ್ತದೆ ಎಂದು ಸಿಬಿಡಿಟಿ ಹೇಳಿದೆ.

ರಾಜಸ್ಥಾನದ ಹಳ್ಳಿಯಿಂದ ಉಪರಾಷ್ಟ್ರಪತಿ ಸ್ಥಾನಕ್ಕೆ

ನವದೆಹಲಿ (ಪಿಟಿಐ): 'ರಾಜಕೀಯವೇ ಬೇಡ' ಎಂದು ದೂರವೇ ಉಳಿಯಲು ನಿರ್ಧರಿಸಿದ್ದ ಜಗದೀಪ್ ಧನಕರ್ ಅವರು 2019ರಲ್ಲಿ ಪಶ್ಚಿಮ ಬಂಗಾಳದ ರಾಜ್ಯಪಾಲರಾದದ್ದು, ಈಗ ಉಪರಾಷ್ಟ್ರಪತಿ ಹುದ್ದೆಗೆ ಏರಿದ್ದು ಹಲವರ ಅಚ್ಚರಿಗೆ ಕಾರಣವಾಗಿದೆ.

ಹಲವು ಹತ್ತು ಹವ್ಯಾಸಗಳನ್ನು ಹೊಂದಿರುವ ಧನಕರ್, ರಾಜಸ್ಥಾನ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನಲ್ಲಿ ಸುದೀರ್ಘ ಕಾಲ ವಕೀಲಿ ವೃತ್ತಿ ಮಾಡಿದ್ದಾರೆ. ಸ್ವಲ್ಪ ಕಾಲ ಅವರು ಸಂಸದೀಯ ವ್ಯವಹಾರಗಳ ರಾಜ್ಯ ಖಾತೆಯ ಸಚಿವರಾಗಿಯೂ ಇದ್ದರು. ಈ ಎಲ್ಲವೂ ರಾಜ್ಯಸಭೆ ಸಭಾಪತಿಯಾಗಿ ಕಾರ್ಯನಿರ್ವಹಿಸಲು ಅವರಿಗೆ ನೆರವಾಗಬಹುದು.

ರಾಜಸ್ಥಾನದ ಕಿಠಾನಾ ಎಂಬ ಸಣ್ಣ ಗ್ರಾಮದಲ್ಲಿ 1951ರ ಮೇ 18ರಂದು ಧನಕರ್ ಜನಿಸಿದರು. ಜೈಪುರದ ಮಹಾರಾಜ ಕಾಲೇಜಿನಿಂದ ಭೌತ ವಿಜ್ಞಾನದಲ್ಲಿ ಪದವಿ ಪಡೆದ ಬಳಿಕ ಜೈಪುರ ವಿಶ್ವವಿದ್ಯಾಲಯದಿಂದ ಎಲ್‌ಎಲ್‌ಬಿ ಪದವಿ ಪಡೆದಿದ್ದಾರೆ. ಪ್ರಾಥಮಿಕ ಶಿಕ್ಷಣವನ್ನು ತಮ್ಮ ಹುಟ್ಟೂರಿನಲ್ಲಿಯೇ ಆರಂಭಿಸಿದರೂ ಬಳಿಕ ಶಿಷ್ಯವೇತನ ಪಡೆದು ಚಿತ್ತೋರಗಡದ ಸೈನಿಕ ಶಾಲೆಗೆ ಸೇರಿಕೊಂಡರು.

1979ರ ನವೆಂಬರ್‌ನಲ್ಲಿ ರಾಜಸ್ಥಾನ ವಕೀಲರ ಸಂಘದಲ್ಲಿ ವಕೀಲರಾಗಿ ಹೆಸರು ನೋಂದಣಿ ಮಾಡಿಕೊಂಡರು. 1987ರಲ್ಲಿ ರಾಜಸ್ಥಾನ ವಕೀಲರ ಸಂಘದ ಅಧ್ಯಕ್ಷರಾಗಿಯೂ ಆಯ್ಕೆಯಾದರು.



1989ರಲ್ಲಿ ರಾಜಸ್ಥಾನದ ಝುಂಝುನು ಲೋಕಸಭಾ ಕ್ಷೇತ್ರದಲ್ಲಿ ಚುನಾವಣೆಗೆ ನಿಂತು ಗೆಲ್ಲುವ ಮೂಲಕ ಅವರ ರಾಜಕೀಯ ಪ್ರವೇಶ ನಡೆಯಿತು. ಆಗ ಅವರು ಜನತಾ ದಳದಲ್ಲಿದ್ದರು. ಚಂದ್ರಶೇಖರ್ ನೇತೃತ್ವದ ಸರ್ಕಾರದಲ್ಲಿ 1990ರಲ್ಲಿ ಸಂಸದೀಯ ವ್ಯವಹಾರಗಳ ರಾಜ್ಯ ಖಾತೆಯ ಸಚಿವರಾದರು. 1993ರಿಂದ 1998ರವರೆಗೆ ಅವರು ರಾಜಸ್ಥಾನ ವಿಧಾನಸಭೆಯ ಸದಸ್ಯರೂ ಆಗಿದ್ದರು. ನಂತರದ ದಿನಗಳಲ್ಲಿ ಅವರು ಕಾಂಗ್ರೆಸ್‌ಗೆ ಸೇರಿದರು.

2008ರಲ್ಲಿ ಬಿಜೆಪಿ ಸೇರುವ ಮುನ್ನ ಒಂದು ದಶಕ ಕಾಲ ರಾಜಕೀಯದಿಂದ ದೂರವಿದ್ದರು. ರಾಜಸ್ಥಾನ ರಾಜಕಾರಣದಲ್ಲಿ ಅಶೋಕ್ ಗೆಹಲೋತ್ ಅವರು ಪ್ರಬಲರಾಗುತ್ತಾ ಬಂದಂತೆ ಧನಕರ್ ಅವರು ಕಾಂಗ್ರೆಸ್‌ನಿಂದ ದೂರವಾದರು. ಬಿಜೆಪಿ ನಾಯಕಿ ವಸುಂಧರಾ ರಾಜೇ ಅವರಿಗೆ ಹತ್ತಿರವಾದರು.

ಧನಕರ್ ಅವರನ್ನು ಪಶ್ಚಿಮ ಬಂಗಾಳದ ರಾಜ್ಯಪಾಲರನ್ನಾಗಿ 2019ರ ಜುಲೈನಲ್ಲಿ ನೇಮಿಸಲಾಗಿತ್ತು. ರಾಜ್ಯಪಾಲರಾಗಿ ಇದ್ದಷ್ಟು ದಿನವೂ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಜತೆಗೆ ಸಂಘರ್ಷದಲ್ಲಿಯೇ ಇದ್ದರು. ಅವರು ಬಿಜೆಪಿಯ ಏಜೆಂಟ್ ಎಂದು ಆಡಳಿತಾರೂಢ ಟಿಎಂಸಿ ಹಲವು ಬಾರಿ ಆರೋಪಿಸಿತ್ತು. ಆದರೆ, ಧನಕರ್ ಅವರು ಸಂವಿಧಾನದ ಮೌಲ್ಯಗಳನ್ನು ಎತ್ತಿ ಹಿಡಿದವರು ಎಂದು ಬಿಜೆಪಿ ಶ್ಲಾಘಿಸಿತ್ತು. ಸಂವಿಧಾನ ಪ್ರಕಾರವೇ ನಡೆದುಕೊಂಡಿದ್ದೇನೆ ಎಂದು ಧನಕರ್ ಅವರು ಹಲವು ಬಾರಿ ತಮ್ಮನ್ನು ಸಮರ್ಥಿಸಿಕೊಂಡಿದ್ದರು.

'ರಮೇಶ್ ಕುಮಾರ್ ನಾಲಿಗೆ–ಮಿದುಳಿನ ಸಂಪರ್ಕ ಕಡಿದಿದೆ'

ಬೆಂಗಳೂರು: 'ವಿಕೃತ, ಕೊಳಕು ಮನಸ್ಥಿತಿಯ ಕೆ.ಆರ್. ರಮೇಶ್ ಕುಮಾರ್ ಅವರ ನಾಲಿಗೆ ಮತ್ತು ಮಿದುಳಿನ ನಡುವೆ ಸಂಪರ್ಕ ಕಡಿತವಾಗಿದೆ. ಇದರಿಂದಾಗಿ ಅವರು ಅಸಹಜವಾಗಿ ವರ್ತಿಸುತ್ತಿದ್ದಾರೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ವಾಗ್ದಾಳಿ ನಡೆಸಿದ್ದಾರೆ.

ಯರಗೋಳ್ ಜಲಾಶಯ ಉದ್ಘಾಟನೆ ವಿಳಂಬ ಆಗಿರುವ ಕುರಿತು ತಾವು ನೀಡಿದ್ದ ಹೇಳಿಕೆಗೆ ಪ್ರತಿಕ್ರಿಯಿಸುವಾಗ 'ದೌರ್ಬಲ್ಯವಿದ್ದರೆ ಮಕ್ಕಳು ಆಗೋದು ವಿಳಂಬ' ಎಂಬ ಹೇಳಿಕೆ ನೀಡಿರುವ ರಮೇಶ್ ಕುಮಾರ್ ವಿರುದ್ಧ ಸರಣಿ ಟ್ವೀಟ್ ಮೂಲಕ ಶನಿವಾರ ಟೀಕಾಪ್ರಹಾರ ನಡೆಸಿರುವ ಅವರು, 'ಬೆಳಗಾವಿ ಅಧಿವೇಶನದಲ್ಲಿ ಲಜ್ಜೆಗೆಟ್ಟು ಆಡಿದ ಮಾತಿಗೆ ಸ್ವಪಕ್ಷೀಯ ಶಾಸಕಿಯರಿಂದಲೇ ಛೀಮಾರಿ ಹಾಕಿಸಿಕೊಂಡ ಸ್ವಯಂಘೋಷಿತ ಸಂವಿಧಾನ ಪಂಡಿತರೇ ಅಧಿವೇಶನದಲ್ಲಿ ಆದ ಗರ್ವಭಂಗ ಮರೆತಿದ್ದೀರಾ' ಎಂದು ಪ್ರಶ್ನಿಸಿದ್ದಾರೆ.

'ಯರಗೋಳ್ ಯೋಜನೆಗೆ ಅನುಮತಿ ನೀಡಿರುವುದೇ ನಾನು. ಮಾಡಿದ್ದನ್ನೇ ನಾನು ಹೇಳಿದ್ದೇನೆ. ಬೇಕಾದರೆ ರಮೇಶ್ ಕುಮಾರ್ ಅವರು ದಾಖಲೆಗಳನ್ನು ನೋಡಿಕೊಳ್ಳಲಿ. ಕೆಆರ್ ಎಸ್, ಎತ್ತಿನಹೊಳೆ, ಕೆ.ಸಿ.ವ್ಯಾಲಿ, ಎಚ್‌ಎಎಲ್, ಎಚ್‌ಎಂಟಿಗಳನ್ನು ಮಾಡಿದ್ದು ನಾನು ಎಂದು ಎಲ್ಲಾದರೂ ಹೇಳಿಕೊಂಡಿದ್ದೇನೆಯೆ' ಎಂದು ಕೇಳಿದ್ದಾರೆ.

'ನಿಮಗೆ ಸ್ವಂತ ಶಕ್ತಿಯಿಂದ ರಾಜಕೀಯ ಮಾಡುವ ಯೋಗ್ಯತೆ ಇಲ್ಲ. ಯಾರ ಬಾಲಂಗೋಚಿ ಎಂಬುದು ಬಿಡಿಸಿ ಹೇಳಬೇಕಾಗಿಲ್ಲ. ಕೋಲಾರ ಜಿಲ್ಲೆಗೆ ನೀವು ಮಾಡಿರುವ ಘೋರ ಅನ್ಯಾಯ ಕಣ್ಣ ಮುಂದೆ ಇದೆ. ಎತ್ತಿನಹೊಳೆ ನೀರು ಹರಿಸುತ್ತೇನೆ ಎಂದು ಜನರನ್ನು ನಂಬಿಸಿ ಜಿಲ್ಲೆಯ ಕೆರೆಗಳಿಗೆ ವಿಷ ತುಂಬಿಸಿದ ಧೂರ್ತ ಕೃತ್ಯಕ್ಕೆ ಯಾರು ಕಾರಣ? ಕೆ.ಸಿ. ವ್ಯಾಲಿಯ ಎತ್ತುವಳಿ ಲೆಕ್ಕ ತೆಗೆದರೆ ಮುಖ ಎಲ್ಲಿ ಇಟ್ಟುಕೊಳ್ಳುತ್ತೀರಿ' ಎಂದು ಪ್ರಶ್ನಿಸಿದ್ದಾರೆ.

ತಿರಂಗಾ ಯಾತ್ರಾ... ಸ್ವತಂತ್ರ ಭಾರತದ ಅಮೃತ ಮಹೋತ್ಸವದ ಅಂಗವಾಗಿ ಉತ್ತರ ಪ್ರದೇಶದ ಮೀರತ್‌ನಲ್ಲಿ ಶನಿವಾರ ನಡೆದ 'ತಿರಂಗಾ ಯಾತ್ರೆ'ಯಲ್ಲಿ ಶಾಲಾ ವಿದ್ಯಾರ್ಥಿಗಳು ಪಾಲ್ಗೊಂಡು ಗಮನ ಸೆಳೆದರು –ಪಿಟಿಐ ಚಿತ್ರ

ಪಿಎಸ್‌ಐ ನೇಮಕಾತಿ ಅಕ್ರಮ ● ತಲೆಮರೆಸಿಕೊಂಡಿರುವ ಮಹಿಳಾ ಅಭ್ಯರ್ಥಿಗಾಗಿ ಹುಡುಕಾಟ

ಮೊದಲ ರ‍್ಯಾಂಕ್‌ಗೆ 30 ಲಕ್ಷ ನೀಡಿದ್ದ ರಚನಾ

● ಸಂತೋಷ ಜಿಗಳಿಕೊಪ್ಪ

ಬೆಂಗಳೂರು: 545 ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿಯ ಮಹಿಳಾ ವಿಭಾಗದಲ್ಲಿ ರಾಜ್ಯಕ್ಕೆ ಮೊದಲ ರ‍್ಯಾಂಕ್ ಪಡೆದಿದ್ದ ಅಭ್ಯರ್ಥಿ ರಚನಾ ಹನುಮಂತ, ₹ 30 ಲಕ್ಷ ನೀಡಿದ್ದರೆಂಬ ಮಾಹಿತಿ ಸಿಐಡಿ ತನಿಖೆಯಿಂದ ಹೊರಬಿದ್ದಿದೆ.

ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದಲ್ಲಿ ಒಂದನೇ ಎಸಿಎಂಎಂ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿರುವ ಸಿಐಡಿ, ರಚನಾ ಹಾಗೂ ಪೊಲೀಸ್ ನೇಮಕಾತಿ ವಿಭಾಗದ ಸಿಬ್ಬಂದಿ ನಡುವಿನ ಹಣದ ವ್ಯವಹಾರದ ದಾಖಲೆಯನ್ನು ಬಿಚ್ಚಿಟ್ಟಿದೆ.

'ವಿಜಯಪುರದ ಬಸವನಬಾಗೇವಾಡಿಯ ರಚನಾ, ಎಂಜಿನಿಯರಿಂಗ್ ಪದವೀಧರೆ. ಪಿಎಸ್‌ಐ ಹುದ್ದೆಗೆ ನೇಮಕಗೊಳ್ಳಲು ಮಧ್ಯವರ್ತಿಗಳ ಮೂಲಕ ಪೊಲೀಸ್ ನೇಮಕಾತಿ ವಿಭಾಗದ ಪ್ರಥಮ ದರ್ಜೆ ಸಹಾಯಕ (ಎಫ್‌ಡಿಎ) ಹರ್ಷ ನನ್ನು ಸಂಪರ್ಕಿಸಿದ್ದರು. ₹ 35 ಲಕ್ಷ ನೀಡುವುದಾಗಿ ಒಪ್ಪಂದ ಮಾಡಿಕೊಂಡು, ₹ 30 ಲಕ್ಷ ಮುಂಗಡ ನೀಡಿದ್ದರು' ಎಂಬ ಮಾಹಿತಿ ದೋಷಾರೋಪ ಪಟ್ಟಿಯಲ್ಲಿದೆ.

ರಚನಾ ಹನುಮಂತ

'ಹಣ ಪಡೆದಿದ್ದ ಹರ್ಷ, ಆರೋಪಿಯೂ ಆಗಿರುವ ಡಿವೈಎಸ್ಪಿ ಶಾಂತ ಕುಮಾರ್ ಅವರಿಗೆ ನೀಡಿದ್ದ. ಮೊದಲೇ ಯೋಜಿಸಿದ ರೀತಿಯಲ್ಲಿ ವಿಭಾಗದ ಭದ್ರತಾ ಕೊಠಡಿಯಲ್ಲೇ ರಚನಾ ಒಎಂಆರ್ ಪ್ರತಿ ತಿದ್ದಲಾಗಿತ್ತು. ರಚನಾ ಅವರಿಗೆ ಪತ್ರಿಕೆ–1ರಲ್ಲಿ (ಪ್ರಬಂಧ, ಭಾಷಾಂತರ, ಸಾರಾಂಶ ಬರಹ) 25 ಅಂಕ ಹಾಗೂ ಪತ್ರಿಕೆ–2ರಲ್ಲಿ (ಸಾಮಾನ್ಯ ಅಧ್ಯಯನ) 128.25 ಅಂಕ ಬಂದಿತ್ತು. ಒಟ್ಟು 153.25 ಅಂಕದೊಂದಿಗೆ ಮಹಿಳಾ ವಿಭಾಗದಲ್ಲಿ ರಚನಾ ಮೊದಲ ರ‍್ಯಾಂಕ್ ಪಡೆದಿದ್ದರು' ಎಂಬ ಸಂಗತಿಯೂ ಪಟ್ಟಿಯಲ್ಲಿದೆ.

ಆರ್‌ಪಿಐಗಳೇ ಮಧ್ಯವರ್ತಿಗಳು: 'ಕರ್ನಾಟಕ ಮೀಸಲು ಪೊಲೀಸ್ ಪಡೆಯ (ಕೆಎಸ್‌ಆರ್‌ಪಿ) ಇನ್‌ಸ್ಪೆಕ್ಟರ್‌ಗಳಾದ ಎಸ್. ವಿ. ಮಧು ಹಾಗೂ ಗುರುವ ಬಸವರಾಜ ಅವರೇ ಮಧ್ಯವರ್ತಿಗಳಾಗಿ ರಚನಾ ಅವರಿಂದ ಹಣ ಪಡೆದು ಹರ್ಷನಿಗೆ ಕೊಡಿಸಿದ್ದರು. ಇದರಲ್ಲಿ ತಮ್ಮ ಪಾಲು ಪಡೆದುಕೊಂಡಿದ್ದರು' ಎಂಬ ಮಾಹಿತಿ ಪಟ್ಟಿಯಲ್ಲಿದೆ.

'ಎಫ್‌ಡಿಎ ಹರ್ಷ, ಅಭ್ಯರ್ಥಿಗಳನ್ನು ಹುಡುಕಲು ಸಂಬಂಧಿಯೂ ಆದ ಮಧುಗೆ ಹೇಳಿದ್ದ. ಅದೇ ಮಧು, ಗುರುವ ಬಸವರಾಜನಿಗೂ ವಿಷಯ ತಿಳಿಸಿದ್ದ. ರಚನಾ ಅವರಿಗೆ ಬಸವರಾಜ ಮೂಲಕವೇ ಹರ್ಷನ ಸಂಪರ್ಕ ಸಿಕ್ಕಿತ್ತು' ಎಂಬ ಅಂಶ ಪಟ್ಟಿಯಲ್ಲಿದೆ.

'₹ 45 ಲಕ್ಷಕ್ಕೆ 6ನೇ ರ‍್ಯಾಂಕ್'

ಪ್ರಜಾವಾಣಿ ವಿಶೇಷ

'ರಚನಾ ಜೊತೆಯಲ್ಲೇ ಇನ್ನೊಬ್ಬ ಅಭ್ಯರ್ಥಿ ಎಚ್.ಆರ್. ಪ್ರವೀಣ್‌ಕುಮಾರ್ ಸಹ ₹ 30 ಲಕ್ಷ ನೀಡಿದ್ದ. ಈತ ಸಹ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ರಾಜ್ಯಕ್ಕೆ 6ನೇ ರ‍್ಯಾಂಕ್ ಪಡೆದಿದ್ದ' ಎಂಬ ಮಾಹಿತಿ ಪಟ್ಟಿಯಲ್ಲಿದೆ.

'ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಹೊದಿಕೆ ಹೊಸಹಳ್ಳಿ ಗ್ರಾಮದ ಪ್ರವೀಣ್‌ಕುಮಾರ್, ₹ 45 ಲಕ್ಷಕ್ಕೆ ಒಪ್ಪಂದ ಮಾಡಿಕೊಂಡಿದ್ದ. ಮುಂಗಡವಾಗಿ ₹ 30 ಲಕ್ಷ ನೀಡಿದ್ದ. ಆಯ್ಕೆ ಪಟ್ಟಿ ಪ್ರಕಟಗೊಂಡ ಬಳಿಕ ಉಳಿದ ಹಣ ನೀಡುವುದಾಗಿ ಹೇಳಿದ್ದ' ಎಂಬುದನ್ನು ಪಟ್ಟಿಯಲ್ಲಿ ಸಿಐಡಿ ಉಲ್ಲೇಖಿಸಿದೆ.

ಪ್ರತಿಭಟನೆಯಲ್ಲಿದ್ದ ರಚನಾ: 'ಅಕ್ರಮ ಬಯಲಾಗುತ್ತಿದ್ದಂತೆ ಮರು ಪರೀಕ್ಷೆ ನಡೆಸುವುದಾಗಿ ಸರ್ಕಾರ ಆದೇಶಿಸಿತ್ತು. ಇದರ ವಿರುದ್ಧ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆದಿದ್ದ ಪ್ರತಿಭಟನೆಯಲ್ಲಿ ರಚನಾ ಪಾಲ್ಗೊಂಡಿದ್ದರು. ನಂತರ, ವಿಚಾರಣೆಗಾಗಿ ನೋಟಿಸ್ ನೀಡುತ್ತಿದ್ದಂತೆ ರಚನಾ ತಲೆಮರೆಸಿಕೊಂಡಿದ್ದಾರೆ' ಎಂದು ಸಿಐಡಿ ಮೂಲಗಳು ಹೇಳಿವೆ.

'ರಚನಾ ಕೃತ್ಯದ ಬಗ್ಗೆ ದೋಷಾರೋಪ ಪಟ್ಟಿಯಲ್ಲಿ ಪ್ರಾಥಮಿಕ ಮಾಹಿತಿ ಮಾತ್ರ ಉಲ್ಲೇಖಿಸಲಾಗಿದೆ. ಅವರನ್ನು ಬಂಧಿಸಿದ ಬಳಿಕ ಹೆಚ್ಚುವರಿ ದೋಷಾರೋಪ ಪಟ್ಟಿ ಸಲ್ಲಿಸಲಾಗುವುದು' ಎಂದೂ ತಿಳಿಸಿವೆ.

ಬಯಲಾಟ ಅಕಾಡೆಮಿಗೆ ಅಜಿತ್ ನಾಗಪ್ಪ ಅಧ್ಯಕ್ಷ

ಅಕಾಡೆಮಿಗಳಿಗೆ ಸದಸ್ಯರ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಡಿ ಬರುವ ವಿವಿಧ ಅಕಾಡೆಮಿಗಳು, ರಂಗ ಸಮಾಜ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಸದಸ್ಯರನ್ನು ನೇಮಕ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

ಖಾಲಿಯಿದ್ದ ಕರ್ನಾಟಕ ಬಯಲಾಟ ಅಕಾಡೆಮಿ ಅಧ್ಯಕ್ಷ ಸ್ಥಾನಕ್ಕೆ ಹುಬ್ಬಳ್ಳಿಯ ಅಜಿತ್ ನಾಗಪ್ಪ ಬಸಾಪುರ ಅವರನ್ನು ನೇಮಕ ಮಾಡಲಾಗಿದೆ. ಮೂರು ವರ್ಷಗಳು ಪೂರ್ಣಗೊಳಿಸಿದ ಕೆಲ ಸದಸ್ಯರನ್ನು ಕೈಬಿಡಲಾಗಿದೆ. ಹೊಸ ನೇಮಕಾತಿಯು ಮುಂದಿನ ಆದೇಶದವರೆಗೆ ಜಾರಿ ಇರಲಿದೆ ಎಂದು ತಿಳಿಸಲಾಗಿದೆ.

ನೇಮಕರಾದ ಸದಸ್ಯರು: ಕರ್ನಾಟಕ ಬಯಲಾಟ ಅಕಾಡೆಮಿಗೆ ತಿಪ್ಪೇಸ್ವಾಮಿ (ಬಳ್ಳಾರಿ), ದತ್ತಾತ್ರೇಯ ಅರಳಿಕಟ್ಟೆ (ಚಿಕ್ಕಮಗಳೂರು), ಕರ್ನಾಟಕ ಲಲಿತಕಲಾ ಅಕಾಡೆಮಿಗೆ ರಾಮಗೌತಮ್ (ಮಡಿಕೇರಿ), ಗುರುಸಿದ್ದಪ್ಪ ಮಲ್ಲಾಪುರ (ಧಾರವಾಡ), ಕಮಲ್ ಅಹಮ್ಮದ್ (ಗದಗ), ಶಿಲ್ಪಾ ಕಡಕಭಾವಿ (ದಾವಣಗೆರೆ), ಕೊಂಕಣಿ ಸಾಹಿತ್ಯ ಅಕಾಡೆಮಿಗೆ ಓಂಗಣೇಶ್ (ಕುಂದಾಪುರ), ರಮೇಶ್ ಪುರುಸಯ್ಯ (ಹೊನ್ನಾವರ) ನೇಮಕರಾಗಿದ್ದಾರೆ.

ಕರ್ನಾಟಕ ನಾಟಕ ಅಕಾಡೆಮಿಗೆ ಶ್ರೀಧರ ಹೆಗಡೆ (ವಿಜಯಪುರ), ಪ್ರದೀಪಚಂದ್ರ (ಉಡುಪಿ), ಆರತಿದೇವಿ ಶಿಖಾಮಣಿ (ಧಾರವಾಡ), ಜೀವನ್ ಕುಮಾರ್ (ಮೈಸೂರು), ವಿಜಯಕುಮಾರ್ ಮಾಲೂರು (ಕೋಲಾರ), ಗಣಪತಿ ಹಿತ್ಲಕೈ (ಉತ್ತರ ಕನ್ನಡ), ಎಂ.ಎನ್. ಕಿರಣಕುಮಾರ್ (ಬೆಂಗಳೂರು), ಪ್ರಸನ್ನ ಕುಮಾರ್ (ಬೆಂಗಳೂರು), ಕರ್ನಾಟಕ ಜಾನಪದ ಅಕಾಡೆಮಿಗೆ ಡಾ. ಅಪ್ಪಾಜಿ (ತುಮಕೂರು), ಬಸವರಾಜ ಶಿವಪ್ಪ (ಹಾವೇರಿ), ಶಿವೇಶ್ವರಗೌಡ (ಬಳ್ಳಾರಿ), ಸಣ್ಣವೀರಪ್ಪ ಹಾಲಪ್ಪ ದೊಡ್ಡಮನಿ (ಬಾಗಲಕೋಟೆ), ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಗೆ ಗಣೇಶ ಉಡುಪ (ಹಾಸನ), ನಾಗರಾಜ ಹೆಗಡೆ ಶಿರನಾಳೆ ಮನೆ (ಯಲ್ಲಾಪುರ) ನೇಮಕಗೊಂಡಿದ್ದಾರೆ.

ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿಗೆ ಅಬ್ದುಲ್ ರಹಿಮಾನ್ (ಉಡುಪಿ), ಹೈದರಾಲಿ (ಮಂಗಳೂರು), ಎಂ.ಕೆ. ಮಠ (ದಕ್ಷಿಣ ಕನ್ನಡ), ಮಹಮ್ಮದ್ ಮುಸ್ತಫಾ (ಉಡುಪಿ), ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ಕೇಶವ ಬಂಗೇರ (ಮಂಗಳೂರು), ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಗೆ ಕೌಸಲ್ಯಾ ಸತೀಶ ಸೋಮಯೆಂಡ, ನಾಗೇಶ ಕಾಲೂರು (ಮಡಿಕೇರಿ), ಪ್ರಮೀಳಾ ನಾಚಯ್ಯ, ಚಾಮರ ದಿನೇಶ್ ಬೆಳ್ಯಪ್ಪ (ಸೋಮವಾರಪೇಟೆ), ರಂಗ ಸಮಾಜಕ್ಕೆ ಶಶಿಧರ ನರೇಂದ್ರ (ಧಾರವಾಡ), ಶೀನ ನಡೋಳಿ (ಬೆಳ್ತಂಗಡಿ), ರಾಜಣ್ಣ ಜೇವರ್ಗಿ (ಕಲಬುರ್ಗಿ), ದಾಕ್ಷಾಯಿಣಿ ಭಟ್ (ಬೆಂಗಳೂರು) ಹಾಗೂ ಗುರುಪ್ರಸಾದ್ ಟಿ.ಆರ್. (ಶಿಕಾರಿಪುರ) ನೇಮಕರಾಗಿದ್ದಾರೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಡ್ಯಾನಿ ಪೆರೇರಾ (ಹಾಸನ) ಹಾಗೂ ರಾಜೀವ ಲೋಚನ (ಚಿತ್ರದುರ್ಗ) ಅವರು ಸದಸ್ಯರಾಗಿ ನೇಮಕಾರಾಗಿದ್ದಾರೆ. ಅಬ್ದುಲ್ ರೆಹಮಾನ್ ಪಾಷಾ ಹಾಗೂ ವಸಂತ್ ಭಾರದ್ವಾಜ್ ಕಬ್ಬಿನಾಲೆ ಅವರನ್ನು ಕೈಬಿಡಲಾಗಿದೆ.

ಲಂಚ: ಉದ್ಯಮಿ ಪುತ್ರನ ಬಂಧನ

ನವದೆಹಲಿ (ಪಿಟಿಐ): ಪಾರಾದೀಪ್ ಪೋರ್ಟ್ ಟ್ರಸ್ಟ್ ಅಧಿಕಾರಿಯೊಬ್ಬರಿಗೆ ₹25 ಲಕ್ಷ ಲಂಚ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ಒಡಿಶಾ ಸ್ಟೀವಡೋರ್ಸ್ ಲಿಮಿಟೆಡ್ ಎಂ.ಡಿ ಮಹಿಮಾನಂದ ಮಿಶ್ರಾ ಅವರ ಪುತ್ರ ಚರ್ಚಿತ್ ಮಿಶ್ರಾ ಅವರನ್ನು ಸಿಬಿಐ ಬಂಧಿಸಿದೆ. ಪ್ರಕರಣದ ಪ್ರಮುಖ ಆರೋಪಿ ಪೋರ್ಟ್ ಟ್ರಸ್ಟ್ ಮುಖ್ಯ ಮೆಕಾನಿಕಲ್ ಎಂಜಿನಿಯರ್ ಸರೋಜ್ ಕುಮಾರ್ ದಾಸ್ ಖರೀದಿಸಿದ ಆಸ್ತಿಗೆ ಲಂಚದ ಹಣವನ್ನು ಮುಂಗಡ ಪಾವತಿಸಿದ ಬಿಲ್ಡರ್ ಸಿಸಿರ್ ಕುಮಾರ್ ದಾಸ್ ಅವರನ್ನು ಸಹ ಬಂಧಿಸಲಾಗಿದೆ.

ಒಡಿಶಾ ಸ್ಟೀವ್‌ಡೋರ್ಸ್ ಲಿಮಿಟೆಡ್ (ಒಎಸ್‌ಎಲ್) ಸರಕು ಇಳಿಸುವ ವೇಳೆ ಹಾನಿ ಮಾಡಿದ ಕನ್ವೇಯರ್ ಬೆಲ್ಟ್‌ನ ದುರಸ್ತಿಗೆ ಹಣ ಪಾವತಿಸದೆ ಬಿಡಲು ಸುಮಂತ ರೌಟ್ ಮೂಲಕ ಸರೋಜ್ ಕುಮಾರ್ ದಾಸ್ ₹ 60 ಲಕ್ಷ ಲಂಚಕ್ಕೆ ಬೇಡಿಕೆಯಿಟ್ಟಿದ್ದ ಎನ್ನಲಾಗಿದೆ.

ಜಾರ್ಖಂಡ್‌ನಲ್ಲಿ ನಡೆದಿದ್ದ ಪ್ರಕರಣ

ನ್ಯಾಯಾಧೀಶ ಹತ್ಯೆ: ಇಬ್ಬರಿಗೆ ಜೀವಾವಧಿ ಶಿಕ್ಷೆ

ಪ್ರಜಾವಾಣಿ ವಾರ್ತೆ

ಧನಬಾದ್ (ಜಾರ್ಖಂಡ್): ಕಳೆದ ವರ್ಷ ಜಾರ್ಖಂಡ್‌ನ ಧನಬಾದ್‌ನಲ್ಲಿ ನಡೆದಿದ್ದ ನ್ಯಾಯಾಧೀಶ ಉತ್ತಮ್ ಆನಂದ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆಟೋರಿಕ್ಷಾ ಚಾಲಕ ಮತ್ತು ಆತನ ಸಹಚರನಿಗೆ ಸಿಬಿಐ ವಿಶೇಷ ನ್ಯಾಯಾಲಯ ಶನಿವಾರ ಜೀವಾವಧಿ ಶಿಕ್ಷೆ ವಿಧಿಸಿದೆ.

ಆಟೊ ಚಾಲಕ ಲಖನ್ ವರ್ಮಾ ಮತ್ತು ಆತನ ಸಹಚರ ರಾಹುಲ್ ವರ್ಮಾ ಅವರನ್ನು ಈ ಪ್ರಕರಣದಲ್ಲಿ ದೋಷಿ ಎಂದು ಜುಲೈ 28ರಂದು ಆದೇಶಿಸಿದ್ದ ಸಿಬಿಐ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ರಜನಿಕಾಂತ್ ಪಾಠಕ್ ಅವರು ಶನಿವಾರ ಶಿಕ್ಷೆ ಪ್ರಕಟಿಸಿದರು.

ಜೀವಾವಧಿ ಶಿಕ್ಷೆಯ ಜತೆಗೆ ಇಬ್ಬರೂ ದೋಷಿಗಳಿಗೆ ತಲಾ ₹ 20 ಸಾವಿರ ದಂಡ ವಿಧಿಸಲಾಗಿದೆ. ಅಲ್ಲದೆ ಐಪಿಸಿ ಕಲಂ 201ರಡಿ (ಪುರಾವೆಗಳು ಕಣ್ಮರೆಯಾಗುವಂತೆ ಮಾಡಿದ ಮತ್ತು ಅಪರಾಧಿಯನ್ನು ರಕ್ಷಿಸಲು ಸುಳ್ಳು ಮಾಹಿತಿ ನೀಡಿದ್ದ ಆರೋಪ) ಇಬ್ಬರಿಗೂ ತಲಾ ಏಳು ವರ್ಷಗಳು ಜೈಲು ಶಿಕ್ಷೆಯ ಜತೆಗೆ ತಲಾ ₹ 10,000 ದಂಡವನ್ನು ವಿಧಿಸಲಾಗಿದೆ. ಎರಡೂ ಶಿಕ್ಷೆಯನ್ನೂ ಏಕಕಾಲದಲ್ಲಿ ಅನುಭವಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ನ್ಯಾಯಾಧೀಶ ಉತ್ತಮ್ ಆನಂದ್ (49) ಅವರು ಕಳೆದ ವರ್ಷ ಜುಲೈ 28ರಂದು ಬೆಳಿಗ್ಗೆ 5.30 ಗಂಟೆಗೆ ಜಾಗಿಂಗ್ ಮಾಡುತ್ತಿದ್ದಾಗ ಆಟೋರಿಕ್ಷಾದಿಂದ ಗುದ್ದಿ ಕೊಲ್ಲಲಾಗಿತ್ತು.

'ನ್ಯಾಯಾಧೀಶರ ಕೊಲೆಯು ಅತಿ ಅಪರೂಪದ ಅಪರಾಧವಾಗಿದ್ದು, ಉದ್ದೇಶ ಪೂರಕವಾಗಿಯೇ ಈ ಕೃತ್ಯ ನಡೆಸಲಾಗಿದೆ. ಹಾಗಾಗಿ ಅಪರಾಧಿಗಳಿಗೆ ಮರಣದಂಡನೆ ವಿಧಿಸುವಂತೆ' ಸಿಬಿಐ ಪರ ವಕೀಲ ಅಮಿತ್ ಜಿಂದಾಲ್ ವಾದಿಸಿದರು.

ಸಿಬಿಐ ನ್ಯಾಯಾಲಯದ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲಾಗುವುದು ಎಂದು ಅಪರಾಧಿಗಳ ಪರ ವಕೀಲ ಕುಮಾರ್ ಬಿಮಲೆಂದು ಪ್ರತಿಕ್ರಿಯಿಸಿದರು.

ನ್ಯಾಯಾಧೀಶ ಆನಂದ್ ಹತ್ಯೆ ಪ್ರಕರಣದ ವಿಚಾರಣೆ ಈ ವರ್ಷದ ಫೆಬ್ರುವರಿಯಲ್ಲಿ ಪ್ರಾರಂಭವಾಗಿತ್ತು. ನ್ಯಾಯಾಲಯವು 58 ಸಾಕ್ಷಿಗಳ ಹೇಳಿಕೆಗಳನ್ನು ದಾಖಲಿಸಿತ್ತು. ಪ್ರಕರಣವನ್ನು ಜಾರ್ಖಂಡ್ ಸರ್ಕಾರವು ಕೇಂದ್ರೀಯ ತನಿಖಾ ದಳಕ್ಕೆ (ಸಿಬಿಐ) ಹಸ್ತಾಂತರಿಸಿತ್ತು.

ಸಂತ್ರಸ್ತೆಯನ್ನು ರಸ್ತೆ ಬದಿ ಎಸೆದ ದುಷ್ಕರ್ಮಿಗಳು

ಮಹಿಳೆಯ ಮೇಲೆ ನಿರಂತರ ಅತ್ಯಾಚಾರ

ಪ್ರಜಾವಾಣಿ ವಾರ್ತೆ

ಮುಂಬೈ: 35 ವರ್ಷದ ಮಹಿಳೆ ಮೇಲೆ ನಿರಂತರ ಅತ್ಯಾಚಾರ ಎಸಗಿ, ರಸ್ತೆ ಬದಿಗೆ ಎಸೆದು ಹೋದ ಅಮಾನುಷ ಘಟನೆ ಮಹಾರಾಷ್ಟ್ರದ ವಿದರ್ಭ ಪ್ರದೇಶದ ಭಂಡಾರ ಜಿಲ್ಲೆಯಲ್ಲಿ ನಡೆದಿದೆ.

ಜುಲೈ 30ರಂದು ಸಂತ್ರಸ್ತ ಮಹಿಳೆ ಕಮರ್‌ಗಾವ್ ಗ್ರಾಮಕ್ಕೆ ಸೋದರನ ಮನೆಗೆ ತೆರಳುತ್ತಿದ್ದರು. ಈ ವೇಳೆ ಸ್ನೇಹಿತನ ಸೋಗಿನಲ್ಲಿ ಬಂದ ವ್ಯಕ್ತಿ ಅತ್ಯಾಚಾರ ಎಸಗಿದ್ದ. ಆ ನಂತರ ಆಗಸ್ಟ್ 1ರಂದು ಕನ್ಹಾಲ್‌ಮೋಹ್ ಪ್ರದೇಶದಲ್ಲಿ ಮತ್ತೊಮ್ಮೆ ಆಗಂತುಕರಿಬ್ಬರು ಮಹಿಳೆ ಮೇಲೆ ಅತ್ಯಾಚಾರ ನಡೆಸಿ ಆಕೆಯನ್ನು ನಡುರಸ್ತೆಯಲ್ಲಿ ಎಸೆದು ಹೋಗಿದ್ದರು. ಗಂಭೀರವಾಗಿ ಗಾಯಗೊಂಡಿದ್ದ ಸಂತ್ರಸ್ತೆಯನ್ನು ಸ್ಥಳೀಯರು ಗುರುತಿಸಿ ಪೊಲೀಸರಿಗೆ ಮಾಹಿತಿ ನೀಡಿದ್ದರು.

ಈ ಪ್ರಕರಣ ವರದಿಯಾಗುತ್ತಿದ್ದಂತೆಯೇ ಮಹಾರಾಷ್ಟ್ರದಲ್ಲಿ ಆಡಳಿತಾರೂಢ ಮತ್ತು ವಿರೋಧ ಪಕ್ಷಗಳ ನಡುವೆ ವಾಗ್ಯುದ್ಧ ಆರಂಭವಾಗಿದೆ. 'ಸಂಪುಟ ವಿಸ್ತರಿಸದೆ ತಡಮಾಡುತ್ತಿರುವ ಕಾರಣ ಸರ್ಕಾರ ದಿನದಿಂದ ದಿನಕ್ಕೆ ಆಡಳಿತದ ಮೇಲಿನ ನಿಯಂತ್ರಣವನ್ನು ಕಳೆದುಕೊಳ್ಳುತ್ತಿದೆ' ಎಂದು ವಿರೋಧ ಪಕ್ಷದ ನಾಯಕ ಅಜಿತ್ ಪವಾರ್ ವಾಗ್ದಾಳಿ ನಡೆಸಿದ್ದಾರೆ. ಈ ನಡುವೆ ಶಿಂದೆ ಅವರು ಪ್ರಕರಣದ ವಿಚಾರಣೆಯನ್ನು ಐಪಿಎಸ್ ಅಧಿಕಾರಿ ನೇತೃತ್ವದ ವಿಶೇಷ ತನಿಖಾ ತಂಡಕ್ಕೆ(ಎಸ್‌ಐಟಿ) ವಹಿಸಿದ್ದಾರೆ. ಪ್ರಕರಣ ಸಂಬಂಧ ಈವರೆಗೆ ಇಬ್ಬರನ್ನು ವಿಚಾರಣೆ ನಡೆಸಲಾಗಿದೆ.

ಸಂಕ್ಷಿಪ್ತ ಸುದ್ದಿ

ಕಾಳಿ ಚಿತ್ರಕ್ಕೆ ತಡೆಯಾಜ್ಞೆ: 29ರಂದು ವಿಚಾರಣೆ

ನವದೆಹಲಿ (ಪಿಟಿಐ): ಲೀನಾ ಮಣಿಮೇಕಲೈ ನಿರ್ಮಿಸಿರುವ 'ಕಾಳಿ' ಚಿತ್ರದ ಮೇಲೆ ಶಾಶ್ವತ ತಡೆಯಾಜ್ಞೆ ನೀಡುವಂತೆ ಕೋರಿ ಸಲ್ಲಿಕೆಯಾಗಿರುವ ಅರ್ಜಿಯ ವಿಚಾರಣೆಯನ್ನು ದೆಹಲಿ ನ್ಯಾಯಾಲಯವು ಆಗಸ್ಟ್ 29ರಂದು ನಡೆಸಲಿದೆ.

ಶನಿವಾರ ಅರ್ಜಿಯ ವಿಚಾರಣೆ ನಿಗದಿಯಾಗಿತ್ತು. ನ್ಯಾಯಾಧೀಶರು ರಜೆ ಇರುವುದರಿಂದ ವಿಚಾರಣೆ ಮುಂದೂಡಲಾಗಿದೆ.

ಹಿಂದೂ ದೇವತೆಯಾಗಿರುವ ಕಾಳಿ ಮಾತೆಯನ್ನು ಚಿತ್ರದ ಪೋಸ್ಟರ್‌ನಲ್ಲಿ ಆಕ್ಷೇಪಾರ್ಹ ರೀತಿಯಲ್ಲಿ ಚಿತ್ರಿಸಲಾಗಿದೆ ಎಂದು ಆರೋಪಿಸಿ ವಕೀಲ ರಾಜ್ ಗೌರವ್ ದೂರು ದಾಖಲಿಸಿದ್ದರು. ಅವರು ಶನಿವಾರ ಪ್ರಕರಣಕ್ಕೆ ಪೂರಕವಾಗಿರುವ ಹೆಚ್ಚುವರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ.

ಎನ್‌ಆರ್‌ಸಿ ಜಾರಿಗೆ ಮಣಿಪುರ ನಿರ್ಧಾರ

ಇಂಫಾಲ (ಪಿಟಿಐ): ರಾಜ್ಯ ಜನಸಂಖ್ಯಾ ಆಯೋಗ ರಚನೆ ಮತ್ತು ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ) ಜಾರಿಗೊಳಿಸುವ ಕುರಿತು ಮಣಿಪುರ ವಿಧಾನಸಭೆಯು ಸರ್ವಾನುಮತದಿಂದ ನಿರ್ಣಯಗಳನ್ನು ಅಂಗೀಕರಿಸಿದೆ.

ವಿಧಾನಸಭೆ ಬಜೆಟ್ ಅಧಿವೇಶನದ ಕಡೆಯ ದಿನವಾದ ಶನಿವಾರ ಜೆಡಿಯು ಸದಸ್ಯ ಜಾಯ್‌ಕಿಶನ್ ಅವರು ಈ ಸಂಬಂಧ ಪ್ರತ್ಯೇಕವಾಗಿ ಖಾಸಗಿ ನಿರ್ಣಯವನ್ನು ಮಂಡಿಸಿದ್ದರು.

ರಾಜ್ಯದ ಬೆಟ್ಟಗುಡ್ಡ ಪ್ರದೇಶಗಳಲ್ಲಿ 1971 ರಿಂದ 2001ರ ಅವಧಿಯಲ್ಲಿ ಜನಸಂಖ್ಯೆಯು ಶೇ 153.3ರಷ್ಟು ಏರಿದೆ. ಏರಿಕೆ ಪ್ರಮಾಣ 2001–2011ರ ಅವಧಿಯಲ್ಲಿ ಶೇ 250.9ರಷ್ಟಿದೆ ಎಂದು ಅವರು ಪ್ರತಿಪಾದಿಸಿದರು.

ಈ ಏರಿಕೆಗೆ ಹೊರಗಿನವರ ಒಳನುಸುಳುವಿಕೆಯೂ ಕಾರಣ ಎಂದು ಆತಂಕ ವ್ಯಕ್ತಪಡಿಸಿದರು. ಮಣಿಪುರ ರಾಜ್ಯಕ್ಕೆ ಹೊಂದಿಕೊಂಡಂತೆಯೇ ಮ್ಯಾನ್ಮಾರ್ ಅಂತರರಾಷ್ಟ್ರೀಯ ಗಡಿ ಇದೆ.

ಭಾನುವಾರ ● ಆಗಸ್ಟ್ 7, 2022 ಪ್ರಜಾವಾಣಿ

'ನೇಕಾರರ ಸಮಸ್ಯೆ ಬಗೆಹರಿಸಲು ಕ್ರಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೇಕಾರರಿಗೆ ಸಂಬಂಧಿಸಿದ ಹಲವು ಸಮಸ್ಯೆಗಳನ್ನು ಪಟ್ಟಿ ಮಾಡಲಾಗಿದ್ದು, ಇವುಗಳನ್ನು ಮುಖ್ಯಮಂತ್ರಿಯವರ ಗಮನಕ್ಕೆ ತಂದು ಬಗೆಹರಿಸಲು ಪ್ರಯತ್ನಿಸುವುದಾಗಿ ಸಕ್ಕರೆ, ಕೈಮಗ್ಗ ಮತ್ತು ಜವಳಿ ಸಚಿವ ಶಂಕರಗೌಡ ಪಾಟೀಲ ಮುನ್ನೇನಕೊಪ್ಪ ಭರವಸೆ ನೀಡಿದ್ದಾರೆ.

ರಾಜ್ಯ ನೇಕಾರರ ಸಮುದಾಯದ ನಿಯೋಗದ ಜತೆ ಸಚಿವರು ಶುಕ್ರವಾರ ಸಭೆ ನಡೆಸಿ ಅವರ ಸಮಸ್ಯೆಗಳನ್ನು ಆಲಿಸಿದರು.

'ನೇಕಾರರ ಸಮಸ್ಯೆಗಳ ಪರಿಹಾರಕ್ಕೆ ಸರ್ಕಾರ ಸದಾ ಸಿದ್ಧವಿದೆ. ನೇಕಾರರ ಉಳಿವಿಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. ಸಮಸ್ಯೆಗಳ ಪರಿಹಾರಕ್ಕೆ ಸಂಬಂಧಿಸಿದ ಅನೇಕ ಇಲಾಖೆಗಳ ಮುಖ್ಯಸ್ಥರ ಜತೆ ಸಭೆ ನಡೆಸಲಾಗುವುದು' ಎಂದು ಶಂಕರಗೌಡ ಪಾಟೀಲ ಭರವಸೆ ನೀಡಿದರು.

ಚಾಮರಾಜಪೇಟೆ ಮೈದಾನ ಖಾತೆ ಪ್ರಕರಣ ● ಬಿಬಿಎಂಪಿ ವಿಲೇವಾರಿ

ಈದ್ಗಾ: ವಕ್ಫ್ ಮಂಡಳಿ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಮರಾಜಪೇಟೆ ಈದ್ಗಾ ಮೈದಾನಕ್ಕೆ ಸಂಬಂಧಿಸಿದಂತೆ ಖಾತೆಯಲ್ಲಿ ತಮ್ಮ ಹೆಸರಿನಲ್ಲಿ ನಮೂದಿಸಬೇಕು ಎಂದು ರಾಜ್ಯ ವಕ್ಫ್ ಮಂಡಳಿ ಸಲ್ಲಿಸಿದ್ದ ಅರ್ಜಿಯನ್ನು ಬಿಬಿಎಂಪಿ ಪಶ್ಚಿಮ ವಲಯದ ಜಂಟಿ ಆಯುಕ್ತರು ವಜಾಗೊಳಿಸಿದ್ದಾರೆ.

ಚಾಮರಾಜಪೇಟೆಯಲ್ಲಿರುವ ಬೆಂಗಳೂರು ದಕ್ಷಿಣದ ಕೆಂಗೇರಿ ಹೋಬಳಿ ಗುಟ್ಟಹಳ್ಳಿ ಸರ್ವೆ ನಂ.40ರ 2 ಎಕರೆ 4 ಗುಂಟೆಗೆ ಖಾತೆಯನ್ನು ಇಂಡೀಕರಣ ಮಾಡಲು ರಾಜ್ಯ ವಕ್ಫ್ ಮಂಡಳಿಯವರು ಚಾಮರಾಜಪೇಟೆ ಸಹಾಯಕ ಕಂದಾಯ ಅಧಿಕಾರಿಗೆ ಜೂನ್ 21ರಂದು ಅರ್ಜಿ ಸಲ್ಲಿಸಿದ್ದರು. ಇದನ್ನು ಬಿಬಿಎಂಪಿ ಪಶ್ಚಿಮ ವಲಯದ ಜಂಟಿ ಆಯುಕ್ತರ ನ್ಯಾಯಾಲಯ, ಅರೆನ್ಯಾಯಿಕ ಪ್ರಾಧಿಕಾರದಿಂದ ವಿಚಾರಣೆ ನಡೆಸಿ, ತೀರ್ಪು ನೀಡಿದ್ದಾರೆ.

'ಈ ಆಸ್ತಿ ಕರ್ನಾಟಕ ಸರ್ಕಾರದ ಕಂದಾಯ ಇಲಾಖೆಗೆ ಸೇರಿದೆ ಎಂದು ಪರಿಗಣಿಸಿರುವುದರಿಂದ ಅರ್ಜಿದಾರರು ಈ ಆಸ್ತಿಯ ಬಗ್ಗೆ ಹಕ್ಕು ಸ್ಥಾಪಿಸಲು ಕಂದಾಯ ಇಲಾಖೆಯೊಂದಿಗೆ ವ್ಯವಹರಿಸುವ ಹಕ್ಕಿದೆ' ಎಂದು ಆದೇಶದಲ್ಲಿ ತಿಳಿಸಲಾಗಿದೆ. ಅಲ್ಲದೆ, 'ಬಿಬಿಎಂಪಿ ದಾಖಲೆಗಳಲ್ಲಿ ಆಸ್ತಿಯನ್ನು 'ಕರ್ನಾಟಕ ರಾಜ್ಯ ಸರ್ಕಾರದ ಕಂದಾಯ ಇಲಾಖೆ' ಎಂದು ನಮೂದಿಸುವಂತೆ ಅರೆನ್ಯಾಯಿಕ ಪ್ರಾಧಿಕಾರದ ಪೀಠಾಸೀನ ಅಧಿಕಾರಿ ಎಸ್.ಎಂ. ಶ್ರೀನಿವಾಸ ಸೂಚಿಸಿದ್ದಾರೆ.

ವಕ್ಫ್ ಮಂಡಳಿ ಅರ್ಜಿ ಸಲ್ಲಿಸಿದ ನಂತರ ಜೂನ್ 29ರಂದು ದಾಖಲೆಗಳನ್ನು ಸಲ್ಲಿಸುವಂತೆ ಹಿಂಬರಹ ನೀಡಲಾಗಿತ್ತು. ಸುಪ್ರೀಂ ಕೋರ್ಟ್ ಆದೇಶದ ಪ್ರತಿ, ಸಿವಿಲ್ ನ್ಯಾಯಾಲಯದ ಆರ್.ಎ ಪ್ರತಿ, ಸ್ವತ್ತಿನ ಮೂಲ ಪತ್ರ ಅಥವಾ ಕ್ರಯಪತ್ರ, 1968ರಿಂದ ಈವರೆಗೆ ತಹಶೀಲ್ದಾರ್‌ರಿಂದ ದೃಢೀಕೃತವಾದ ಪಹಣಿ, ಬೆಂಗಳೂರು ಡೆವಲಪ್‌ಮೆಂಟ್ ಬೋರ್ಡ್ ಲೇಔಟ್ ನಕ್ಷೆ, ತಹಶೀಲ್ದಾರ್ ದೃಢೀಕರಿಸಿದ ಖೇತವಾರು ಪತ್ರಿಕೆ, ಸರ್ಕಾರದಿಂದ ಬಂದಿರುವ ಆಸ್ತಿ ಪ್ರಕರಣ ಪತ್ರ, ಈವರೆಗೂ ಇ.ಸಿ. ನಮೂನೆಯನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು. ದಾಖಲೆ ಸಲ್ಲಿಸದ ಕಾರಣ ಜುಲೈ 7ರಂದು ಮತ್ತೆ 2ನೇ ಹಿಂಬರಹ ನೀಡಿ ಮತ್ತೆ 5 ದಿನಗಳ ಕಾಲ ಅವಕಾಶ ನೀಡಲಾಯಿತು.

ದಾಖಲೆಯನ್ನು ನೀಡದ ಕಾರಣ ಜುಲೈ 21ರಂದು ನೋಟಿಸ್ ನೀಡಿ ಜುಲೈ 27ರಂದು ದಾಖಲೆಗಳೊಂದಿಗೆ ಹಾಜರಾಗಿ, ಖಾತಾ ಇಂಡೀಕರಣಕ್ಕೆ ಹಕ್ಕು ಮಂಡಿಸಲು ಪಶ್ಚಿಮ ವಲಯದ ಜಂಟಿ ಆಯುಕ್ತರು ಸೂಚಿಸಿದರು. ವಕೀಲರೊಂದಿಗೆ ಹಾಜರಾದ ವಕ್ಫ್ ಮಂಡಳಿಯವರು ಕಾಲಾವಕಾಶ ಕೇಳಿದರು. ಆಗಸ್ಟ್ 3ಕ್ಕೆ ಪ್ರಕರಣ ಮುಂದೂಡಲಾಯಿತು. ಆ.3ರಂದು ಹಾಜರಾದ ಅರ್ಜಿದಾರರು ನ್ಯಾಯಾಲಯದ ಆದೇಶಗಳನ್ನು ಮಾತ್ರ ಸಲ್ಲಿಸಿದರು. ಮತ್ತಷ್ಟು ಕಾಲಾವಕಾಶ ಕೇಳಿದರು. ಸಾಕಷ್ಟು ಕಾಲಾವಕಾಶ ನೀಡಿದ್ದರೂ ಪೂರಕ ದಾಖಲೆಗಳನ್ನು ಸಲ್ಲಿಸದಿರುವ ಕಾರಣ ಮನವಿಯನ್ನು ಪರಿಗಣಿಸಿಲ್ಲ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಹಿಂದಿನ ವ್ಯಾಜ್ಯಗಳಲ್ಲಿ ಸಾಮೂಹಿಕ ಪ್ರಾರ್ಥನೆ ಮಾಡುವಲ್ಲಿ ಅಡ್ಡಿಪಡಿಸಬಾರದೆಂದು ದಾವೆ ಸಲ್ಲಿಸಲಾಗಿದೆ. ಆಸ್ತಿಯ ಮಾಲೀಕತ್ವ ಅಥವಾ ಸ್ವಾಧೀನ ಹೊಂದಿದ್ದೇವೆ ಎಂದು ಪ್ರತಿಪಾದಿಸಿಲ್ಲ. ಸುಪ್ರೀಂ ಕೋರ್ಟ್‌ನ ತೀರ್ಪಿನ ಅಂಶಗಳಂತೆ ಮತ್ತು ಮೈಸೂರು ಲ್ಯಾಂಡ್ ರೆವೆನ್ಯೂ ಕೋಡ್, ಕರ್ನಾಟಕ ಭೂ ಕಂದಾಯ ಅಧಿನಿಯಮದಂತೆ ಈ ಆಸ್ತಿ ರಾಜ್ಯ ಕಂದಾಯ ಇಲಾಖೆಯಲ್ಲಿಯೇ ಅಂದಿನಿಂದ ಇಂದಿನವರೆಗೂ ಉಳಿದುಕೊಂಡು ಬಂದಿದೆ ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಚರ್ಚಿಸಿ, ಮುಂದಿನ ತೀರ್ಮಾನ

'ಖಾತೆ ಮಾಡಿಸಿಕೊಳ್ಳುವಂತೆ ತಿಳಿಸಿದ್ದರಿಂದ ಬಿಬಿಎಂಪಿಗೆ ಅರ್ಜಿ ಸಲ್ಲಿಸಿದ್ದೆವು. 1897ರಿಂದಲೇ ಈ ಆಸ್ತಿ ವಕ್ಫ್ ಮಂಡಳಿಗೆ ಸೇರಿದೆ. ಈಗ ಕಂದಾಯ ಇಲಾಖೆಗೆ ಅರ್ಜಿ ಸಲ್ಲಿಸಬೇಕೋ ಅಥವಾ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಬೇಕೊ ಎಂಬುದನ್ನು ಕಾನೂನು ಕೋಶದೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುತ್ತೇವೆ' ಎಂದು ವಕ್ಫ್ ಮಂಡಳಿ ಅಧ್ಯಕ್ಷ ಮೌಲಾನಾ ಎನ್.ಕೆ. ಷಾಫಿ ಸಾ–ಆದಿ ತಿಳಿಸಿದರು.

ಧ್ವಜಾರೋಹಣಕ್ಕೆ ಮನವಿ

'ಖಾತೆ ಸಂಬಂಧ ಬಿಬಿಎಂಪಿ ನೀಡಿರುವ ಆದೇಶ ಸ್ವಾಗತಾರ್ಹ. ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ ಚಾಮರಾಜಪೇಟೆ ಆಟದ ಮೈದಾನದಲ್ಲಿ ರಾಷ್ಟ್ರ ಧ್ವಜಾರೋಹಣ ಮಾಡಲು ಅನುಮತಿ ನೀಡುವಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಜಿಲ್ಲಾಧಿಕಾರಿ, ಬಿಬಿಎಂಪಿ ಮುಖ್ಯ ಆಯುಕ್ತರು, ಪೊಲೀಸ್ ಆಯುಕ್ತರು ಸೇರಿ ಎಲ್ಲ ಇಲಾಖೆಗೂ ನಾವು ಈಗಾಗಲೇ ಮನವಿ ಸಲ್ಲಿಸಿದ್ದೇವೆ. ನಮಗೆ ಅನುಮತಿ ದೊರೆಯುತ್ತದೆ ಎಂಬ ಭರವಸೆ ಇದೆ' ಎಂದು ಚಾಮರಾಜಪೇಟೆ ನಾಗರಿಕರ ಒಕ್ಕೂಟಗಳ ವೇದಿಕೆ ಅಧ್ಯಕ್ಷ ರಾಮೇಗೌಡ ತಿಳಿಸಿದರು.

ಸುದ್ದಿ 2 ನಿಮಿಷ

ನಮ್ಮ ಕ್ಲಿನಿಕ್: ಲಾಂಛನ ಆಹ್ವಾನ

ಬೆಂಗಳೂರು: ರಾಜ್ಯ ಸರ್ಕಾರ ಪ್ರಾರಂಭಿಸುತ್ತಿರುವ 'ನಮ್ಮ ಕ್ಲಿನಿಕ್'ಗಳಿಗೆ ಆರೋಗ್ಯ ಇಲಾಖೆಯು ಲಾಂಛನಗಳನ್ನು (ಲೋಗೊ) ಆಹ್ವಾನಿಸಿದ್ದು, 'ಆಯ್ಕೆಯಾದ ಲಾಂಛನದ ವಿನ್ಯಾಸಕಾರರಿಗೆ ಮುಖ್ಯಮಂತ್ರಿ ಮತ್ತು ಸಚಿವರಿಂದ ವಿಶೇಷ ಗೌರವ ಸಿಗಲಿದೆ' ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ತಿಳಿಸಿದ್ದಾರೆ.

ಈ ಸ್ಪರ್ಧೆಗೆ ಶುಕ್ರವಾರ ಚಾಲನೆ ದೊರೆತಿದೆ. ಇದೇ 15ರವರೆಗೆ ಲಾಂಛನ ಕಳುಹಿಸಬಹುದು. ಸರ್ಕಾರವು 'ನಮ್ಮ ಕ್ಲಿನಿಕ್'ಗಳಿಗೆ ವಿಶಿಷ್ಟವಾದ ಗುರುತನ್ನು ಎದುರು ನೋಡುತ್ತಿದೆ. ಸೃಜನಾತ್ಮಕ ಮತ್ತು ನವೀನ ಲಾಂಛನವನ್ನು ವಿನ್ಯಾಸ ಮಾಡಲು ರಾಜ್ಯದ ಜನರಿಗೆ ಅವಕಾಶವಿದೆ. ರಾಜ್ಯದ 436 ಕಡೆಗಳಲ್ಲಿ ನಮ್ಮ ಕ್ಲಿನಿಕ್‌ಗಳು ಆರಂಭವಾಗಲಿವೆ. ಇದು ರಾಜ್ಯದ ಆರೋಗ್ಯ ವ್ಯವಸ್ಥೆಗೆ ಹೊಸ ಸ್ಪರ್ಶವನ್ನು ತಂದು ಕೊಡಲಿದೆ ಎಂದು ಇಲಾಖೆ ಹೇಳಿದೆ.

ಸಿದ್ಧಪಡಿಸಿದ ಲಾಂಛನಗಳನ್ನು logo4nammaclinic@gmail.comಗೆ ಕಳುಹಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಸಂಯುಕ್ತ ಕಿಸಾನ್ ಮೋರ್ಚಾದಿಂದ 'ಅಗ್ನಿಪಥ' ವಿರೋಧಿ ಅಭಿಯಾನ

ನವದೆಹಲಿ (ಪಿಟಿಐ): ಸಂಯುಕ್ತ ಕಿಸಾನ್ ಮೋರ್ಚಾವು ದೇಶದೆಲ್ಲೆಡೆ 'ಅಗ್ನಿಪಥ' ಯೋಜನೆ ವಿರೋಧಿ ಅಭಿಯಾನ ನಡೆಸಲು ಉದ್ದೇಶಿಸಿದ್ದು, ಇದಕ್ಕೆ ಭಾನುವಾರ ಚಾಲನೆ ನೀಡಲಾಗುತ್ತದೆ.

'ಯುನೈಟೆಡ್ ಫ್ರಂಟ್ ಆಫ್ ಎಕ್ಸ್–ಸರ್ವಿಸ್‌ಮೆನ್ ಹಾಗೂ ವಿವಿಧ ಯುವ ಸಂಘಟನೆಗಳ ಸಹಭಾಗಿತ್ವದಲ್ಲಿ ಅಭಿಯಾನ ಕೈಗೊಳ್ಳಲಾಗಿದೆ. ಇದರ ಮೊದಲ ಹೆಜ್ಜೆಯಾಗಿ ಆಗಸ್ಟ್ 7ರಿಂದ 14ರವರೆಗೆ 'ಜೈ ಜವಾನ್; ಜೈ ಕಿಸಾನ್' ಸಮ್ಮೇಳನ ಹಮ್ಮಿಕೊಳ್ಳಲಾಗುತ್ತದೆ' ಎಂದು ಸ್ವರಾಜ್ ಇಂಡಿಯಾ ಅಧ್ಯಕ್ಷ ಯೋಗೇಂದ್ರ ಯಾದವ್ ಸುದ್ದಿಗೋಷ್ಠಿಯಲ್ಲಿ ಶನಿವಾರ ಹೇಳಿದ್ದಾರೆ.

'ಅಗ್ನಿಪಥ ಯೋಜನೆಯಿಂದ ಆಗಲಿರುವ ಅಪಾಯಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು ಹಾಗೂ ಪ್ರಜಾಪ್ರಭುತ್ವದ ನೆಲೆಯಲ್ಲಿ ಶಾಂತಿಯುತವಾಗಿ ಅಭಿಯಾನ ನಡೆಸುವ ಮೂಲಕ ಯೋಜನೆ ಹಿಂಪಡೆಯುವಂತೆ ಕೇಂದ್ರದ ಮೇಲೆ ಒತ್ತಡ ಹೇರುವುದು ಅಭಿಯಾನದ ಉದ್ದೇಶ' ಎಂದಿದ್ದಾರೆ.

'ಅಭಿಯಾನದ ಅಂಗವಾಗಿ ಭಾನುವಾರ ಹರಿಯಾಣದ ಜಿಂದ್ ಜಿಲ್ಲೆ, ಉತ್ತರ ಪ್ರದೇಶದ ಮಥುರಾ ಮತ್ತು ಕೋಲ್ಕತ್ತದಲ್ಲಿ, ಆಗಸ್ಟ್ 9ರಂದು ಹರಿಯಾಣದ ರೇವಾಡಿ ಮತ್ತು ಉತ್ತರ ಪ್ರದೇಶದ ಮುಜಾಫರ್‌ನಗರದಲ್ಲಿ, ಆಗಸ್ಟ್ 10ರಂದು ಮಧ್ಯಪ್ರದೇಶದ ಇಂದೋರ್ ಮತ್ತು ಉತ್ತರ ಪ್ರದೇಶದ ಮೀರತ್‌ನಲ್ಲಿ ಹಾಗೂ ಆಗಸ್ಟ್ 11ರಂದು ಪಟ್ನಾದಲ್ಲಿ ಮಹತ್ವದ ಕಾರ್ಯಕ್ರಮಗಳನ್ನು ನಡೆಸಲು ನಿರ್ಧರಿಸಲಾಗಿದೆ' ಎಂದು ಮಾಹಿತಿ ನೀಡಿದ್ದಾರೆ.

ಕೋವಿಡ್ ಲಸಿಕೆ ಪಡೆಯದಿದ್ದರೂ ಪ್ರಮಾಣಪತ್ರ!

ಗೊಂದಲದಲ್ಲಿ ಮೊದಲ ಡೋಸ್ ಪಡೆದವರು ● ತಾಂತ್ರಿಕ ಕಾರಣಗಳಿಂದ ಸಮಸ್ಯೆ

● ವರುಣ ಹೆಗಡೆ

ಬೆಂಗಳೂರು: ತಪ್ಪಾಗಿ ಮೊಬೈಲ್ ಸಂಖ್ಯೆ ನಮೂದಿಸಿರುವುದೂ ಸೇರಿ ವಿವಿಧ ತಾಂತ್ರಿಕ ಕಾರಣಗಳಿಂದ ಕೋವಿಡ್ ಲಸಿಕೆ ಪಡೆಯದಿದ್ದರೂ ಪ್ರಮಾಣಪತ್ರಗಳು ಸೃಷ್ಟಿಯಾಗುತ್ತಿವೆ.

ನಗರದಲ್ಲಿ 2021ರ ಜ.16ರಿಂದ ಕೋವಿಡ್ ಲಸಿಕೆ ವಿತರಣೆ ಪ್ರಾರಂಭವಾಗಿದೆ. 2022ರ ಜ.10ರಿಂದ ಮೂರನೇ ಡೋಸ್ ವಿತರಣೆ ಮಾಡಲಾಗುತ್ತಿದೆ. ಎರಡು ಡೋಸ್ ಲಸಿಕೆ ಪಡೆದು ಆರು ತಿಂಗಳಾದವರಿಗೆ ಮುನ್ನೆಚ್ಚರಿಕೆ ಡೋಸ್ ಲಸಿಕೆ ನೀಡಲಾಗುತ್ತಿದೆ. ಲಸಿಕೆಯ ಡೋಸ್‌ಗಳನ್ನು ಪಡೆದ ಬಳಿಕ ಮೊಬೈಲ್ ಸಂಖ್ಯೆಗೆ 'ಕೋವಿನ್ ಪೋರ್ಟಲ್'ನಲ್ಲಿ ಪ್ರಮಾಣಪತ್ರಗಳು ಸೃಷ್ಟಿಯಾಗುತ್ತವೆ. ಆದರೆ, ಮೊದಲ ಡೋಸ್ ಪಡೆದು, ಎರಡನೇ ಡೋಸ್ ಪಡೆಯದಿದ್ದವರ ಹೆಸರಿನಲ್ಲಿಯೂ ಇತ್ತೀಚೆಗೆ ಲಸಿಕೆ ಪಡೆದಿರುವುದಾಗಿ ಪ್ರಮಾಣಪತ್ರಗಳು ಪೋರ್ಟಲ್‌ನಲ್ಲಿ ಕಾಣಿಸಿಕೊಳ್ಳುತ್ತಿವೆ.

ಸದ್ಯ ಬಿಬಿಎಂಪಿ ವ್ಯಾಪ್ತಿಯಲ್ಲಿ 375 ಸರ್ಕಾರಿ ಕೇಂದ್ರಗಳು ಹಾಗೂ 79 ಖಾಸಗಿ ಆಸ್ಪತ್ರೆಗಳಲ್ಲಿ ಲಸಿಕೆ ವಿತರಿಸಲಾಗುತ್ತಿದೆ. ಅದೇ ರೀತಿ, ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ 111 ಸರ್ಕಾರಿ ಹಾಗೂ 8 ಖಾಸಗಿ ಆಸ್ಪತ್ರೆಗಳಲ್ಲಿ ಲಸಿಕೆ ನೀಡಲಾಗುತ್ತಿದೆ.

ಸಮಸ್ಯೆ ಗಮನಕ್ಕೆ ಬಂದಿದೆ. ಆ ರೀತಿ ಪ್ರಮಾಣಪತ್ರ ಹೊಂದಿದವರು ಸ್ಥಳೀಯ ಪ್ರಾಥಮಿಕ ಆರೋಗ್ಯ ಕೇಂದ್ರ ಸಂಪರ್ಕಿಸಿ, ಸಮಸ್ಯೆ ನಿವಾರಿಸಿಕೊಳ್ಳಬಹುದು.

ಡಾ.ಕೆ.ವಿ. ತ್ರಿಲೋಕ್ ಚಂದ್ರ, ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ)

ಪ್ರಜಾವಾಣಿ ವಿಶೇಷ

ಗೊಂದಲ ಸೃಷ್ಟಿ: ನಮೂದಿತ ಮೊಬೈಲ್ ಸಂಖ್ಯೆಯ ಮೂಲಕ 'ಕೋವಿನ್ ಪೋರ್ಟಲ್'ನಲ್ಲಿ ಲಸಿಕೆಯ ಪ್ರಮಾಣಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳಲು ಅವಕಾಶವಿದೆ. ಲಸಿಕೆ ಪಡೆದ ಕೇಂದ್ರ, ಲಸಿಕೆ ನೀಡಿದವರ ಹೆಸರು ಸೇರಿ ವಿವಿಧ ಮಾಹಿತಿಗಳನ್ನು ಪ್ರಮಾಣಪತ್ರದಲ್ಲಿ ನಮೂದಿಸಲಾಗಿರುತ್ತದೆ. ನಿಗದಿತ ಅವಧಿಯ ಬಳಿಕ ಮೊಬೈಲ್ ಸಂಖ್ಯೆಗೆ ಲಸಿಕೆ ಪಡೆಯುವಂತೆ ದೂರವಾಣಿ ಸಂದೇಶ, ಕರೆಗಳು ಬರಲಿವೆ. ಇಷ್ಟಾಗಿಯೂ ಲಸಿಕೆ ಪಡೆಯದಿದ್ದ ಕೆಲವರ ಹೆಸರಿನಲ್ಲಿ ಪ್ರಮಾಣಪತ್ರಗಳು ಪೋರ್ಟಲ್‌ನಲ್ಲಿ ಸಿಗುತ್ತಿವೆ. ಲಸಿಕೆ ಪಡೆಯದಿದ್ದರೂ ಪ್ರಮಾಣಪತ್ರಗಳು ಸೃಷ್ಟಿಯಾಗುತ್ತಿರುವುದು ಗೊಂದಲಕ್ಕೆ ಕಾರಣವಾಗಿದೆ.

ಕೋವಿಡ್ ಎರಡು ಹಾಗೂ ಮೂರನೇ ಅಲೆಯಲ್ಲಿ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದಾಗ ಬಿಬಿಎಂಪಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಲಸಿಕೆ ವಿತರಣೆಗೆ ಸಂಬಂಧಿಸಿದಂತೆ ನಿಗದಿತ ಗುರಿ ನೀಡಿತ್ತು. ಇದರಿಂದಾಗಿಯೇ ಕೆಲ ಕೇಂದ್ರಗಳ ಸಿಬ್ಬಂದಿ ಅವಧಿಯಾದರೂ ಲಸಿಕೆ ಪಡೆಯಲು ಬರದಿದ್ದವರ ಹೆಸರಿನಲ್ಲಿ ದಾಖಲೆ ಸೃಷ್ಟಿಸಿದ್ದಾರೆ ಎಂಬ ಆರೋಪವಿದೆ.

'ಮೊದಲ ಡೋಸ್ ಪಡೆದು ಅವಧಿ ಪೂರೈಸಿದರೂ ಎರಡನೇ ಡೋಸ್ ಪಡೆದಿರಲಿಲ್ಲ. ಕೋವಿಡ್ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದ ಬಳಿಕ ಕೋವಿನ್ ಪೋರ್ಟಲ್ ಪರಿಶೀಲಿಸಿದಾಗ ಲಸಿಕೆ ಪಡೆದಿರುವ ಬಗ್ಗೆ ಪ್ರಮಾಣಪತ್ರ ಸೃಷ್ಟಿಯಾಗಿತ್ತು. ಇದರಿಂದಾಗಿ ಮೊದಲ ಡೋಸ್ ಮಾತ್ರ ಪಡೆದರೂ ಎರಡು ಡೋಸ್ ಪಡೆದಿರುವ ಬಗ್ಗೆ ಪ್ರಮಾಣಪತ್ರ ಲಭ್ಯವಾಯಿತು. ಇದೇ ರೀತಿ, ಎರಡನೇ ಡೋಸ್ ಪಡೆಯದ ಕೆಲವರಿಗೆ ಪ್ರಮಾಣಪತ್ರ ದೊರೆತಿದೆ' ಎಂದು ಗಿರಿನಗರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮೊದಲ ಡೋಸ್ ಲಸಿಕೆ ಪಡೆದಿದ್ದ ಬ್ಯಾಂಕ್ ಕಾಲೊನಿ ನಿವಾಸಿಯೊಬ್ಬರು ತಿಳಿಸಿದರು.

'ಎರಡನೇ ಡೋಸ್ ಪಡೆದಿರುವ ಬಗ್ಗೆ ಪ್ರಮಾಣಪತ್ರ ಇರುವುದರಿಂದ ಈಗ ಲಸಿಕೆ ಸಿಗುತ್ತದೆಯೋ ಇಲ್ಲವೋ ಎಂಬ ಗೊಂದಲ ಸೃಷ್ಟಿಯಾಗಿದೆ' ಎಂದರು.

'ಪ್ರಮಾಣಪತ್ರ ಹೊಂದಿದ್ದರೂ ಲಸಿಕೆ'

'ಲಸಿಕೆ ಪಡೆಯದಿದ್ದರೂ ಪ್ರಮಾಣಪತ್ರಗಳು ದೊರೆತಿರುವ ಬಗ್ಗೆ ಹಲವರು ವಿಚಾರಿಸಿದ್ದಾರೆ. ಮೊಬೈಲ್ ಸಂಖ್ಯೆ ಆಧಾರದಲ್ಲಿಯೇ ಪ್ರಮಾಣಪತ್ರ ಸೃಷ್ಟಿಸಲಾಗುತ್ತದೆ. ತಪ್ಪಾಗಿ ಮೊಬೈಲ್ ಸಂಖ್ಯೆ ನಮೂದಿಸಿರುವುದೂ ಸೇರಿ ವಿವಿಧ ತಾಂತ್ರಿಕ ಕಾರಣಗಳಿಂದ ಕೆಲವರಿಗೆ ಲಸಿಕೆ ಪಡೆಯದಿದ್ದರೂ ಪ್ರಮಾಣಪತ್ರ ದೊರೆತಿದೆ. ಕೆಲವರು ಉದ್ದೇಶ ಪೂರ್ವಕವಾಗಿ ತಪ್ಪಾದ ಮೊಬೈಲ್ ಸಂಖ್ಯೆ ನೀಡುತ್ತಾರೆ. ಇದರಿಂದಲೂ ಸಮಸ್ಯೆಯಾಗುತ್ತಿದೆ. ಲಸಿಕೆ ಪಡೆಯದೇ ಪ್ರಮಾಣಪತ್ರ ಹೊಂದಿದ್ದಲ್ಲಿ ಸಮಾಲೋಚನೆ ನಡೆಸಿ, ಲಸಿಕೆ ನೀಡಲಾಗುತ್ತದೆ' ಎಂದು ವಿಕ್ಟೋರಿಯಾ ಆಸ್ಪತ್ರೆಯ ಲಸಿಕೆ ವಿಭಾಗದ ನೋಡಲ್ ಅಧಿಕಾರಿ ಡಾ.ಟಿ.ಎಸ್. ರಂಗನಾಥ್ ತಿಳಿಸಿದರು.

ಕೋವಿಡ್ ಲಸಿಕೆಯ ವಿವರ

1.11 ಕೋಟಿ ಈವರೆಗೆ ಮೊದಲ ಡೋಸ್ ಪಡೆದವರು

1.08 ಕೋಟಿ ಎರಡನೇ ಡೋಸ್ ಪಡೆದವರು

13.11 ಲಕ್ಷ ಮೂರನೇ ಡೋಸ್ ಪಡೆದವರು

486 ಲಸಿಕೆ ವಿತರಿಸುತ್ತಿರುವ ಸರ್ಕಾರಿ ಕೇಂದ್ರಗಳು

87 ಲಸಿಕೆ ವಿತರಿಸುತ್ತಿರುವ ಖಾಸಗಿ ಕೇಂದ್ರಗಳು

ಫಾಝಿಲ್ ಸ್ಮರಣಾರ್ಥ ರಕ್ತದಾನ ಶಿಬಿರ ಇಂದು

ಮಂಗಳೂರು: ಇತ್ತೀಚೆಗೆ ದುಷ್ಕರ್ಮಿಗಳಿಂದ ಹತ್ಯೆಗೀಡಾದ ಮಹಮ್ಮದ್ ಫಾಝಿಲ್ ಮಂಗಳಪೇಟೆ ಸ್ಮರಣಾರ್ಥ 'ಬ್ಲಡ್ ಹೆಲ್ಪ್‌ಲೈನ್ ಕರ್ನಾಟಕ' ಸಂಸ್ಥೆ ವತಿಯಿಂದ ಆ.7ರಂದು ಜಿಲ್ಲೆಯ ವಿವಿಧೆಡೆ ರಕ್ತದಾನ ಶಿಬಿರ ಆಯೋಜಿಸಲಾಗಿದೆ. 'ರಕ್ತದಾನಿಯಾಗಿದ್ದ ಮೃತ ಫಾಝಿಲ್ ಅವರು ನಮ್ಮ ಸಂಸ್ಥೆಯ ಸಕ್ರಿಯ ಸದಸ್ಯರಾಗಿದ್ದರು. ತುರ್ತು ಸಂದರ್ಭದಲ್ಲಿ ರಕ್ತ ಪೂರೈಕೆಯಲ್ಲಿ ಮೂಂಚೂಣಿಯಲ್ಲಿದ್ದರು' ಎಂದು ಸಂಸ್ಥೆಯ ಸಲಹೆಗಾರ ಮುಸ್ತಫಾ ದೆಮ್ಮಲೆ ತಿಳಿಸಿದ್ದಾರೆ.

ಬೃಹತ್ ಕಂಪನಿಗಳ ಸಾಲ ಮನ್ನಾ: ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಷ್ಟ್ರೀಕೃತ ಬ್ಯಾಂಕ್ ಹಾಗೂ ಇತರೆ ಹಣಕಾಸು ಸಂಸ್ಥೆಗಳು ಕಳೆದ ಐದು ಹಣಕಾಸು ವರ್ಷಗಳಲ್ಲಿ ಬೃಹತ್ ಕಂಪನಿ, ಉದ್ದಿಮೆದಾರರಿಗೆ ₹10 ಲಕ್ಷ ಕೋಟಿ ಮೊತ್ತದ ಸಾಲವನ್ನು ಯಾವ ಆಧಾರದ ಮೇಲೆ ಸಾಲ ಮನ್ನಾ ಮಾಡಿವೆ' ಎಂದು ಸಾಮಾಜಿಕ ಹೋರಾಟಗಾರರು ಪ್ರಶ್ನಿಸಿದರು.

ಕೃಷಿ ಆರ್ಥಿಕ ತಜ್ಞ ಪ್ರಕಾಶ್ ಕಮ್ಮರಡಿ ಮಾತನಾಡಿ, 'ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಮೂರು–ನಾಲ್ಕು ವರ್ಷಗಳ ಹಿಂದೆ ನಡೆಸಿದ ಸಮೀಕ್ಷೆ ಪ್ರಕಾರ ದೇಶದಲ್ಲಿ 10 ಕೋಟಿಗಿಂತ ಹೆಚ್ಚು ರೈತ ಕುಟುಂಬಗಳಿದ್ದು, ಪ್ರತಿ ಕುಟುಂಬದ ಮೇಲೆ ಸರಾಸರಿ ₹1.70 ಲಕ್ಷ ಸಾಲವಿದೆ. ಐದು ವರ್ಷಗಳಿಗೊಮ್ಮೆ ಶೇಕಡಾ 60ರಷ್ಟು ಹೆಚ್ಚಾಗಿದೆ. ನಿಜವಾದ ಸಾಲ ಮನ್ನಾಗೆ ಇವರು ಅರ್ಹರು. ಬೆಂಬಲ ಬೆಲೆ ನೀತಿ ಜಾರಿಗೊಳಿಸಿ ಕಾನೂನು ಸ್ವರೂಪ ನೀಡಬೇಕು. ಬೀಜ, ರಸಗೊಬ್ಬರ ಮತ್ತು ಕ್ರಿಮಿನಾಶಕವನ್ನು ಉಚಿತವಾಗಿ ನೀಡಬೇಕು' ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

ರೈತ ಮುಖಂಡ ಬಡಗಲಪುರ ನಾಗೇಂದ್ರ, '2014ರಲ್ಲಿ ಅಧಿಕಾರಕ್ಕೆ ಬಂದ ಕೇಂದ್ರದ ಮೋದಿ ಸರ್ಕಾರ ಬಂಡವಾಳಶಾಹಿಗಳ ಪರವಾಗಿದೆ. ಅಧಿಕಾರಕ್ಕೆ ಬಂದ 11 ತಿಂಗಳಲ್ಲಿ ಕಾರ್ಪೊರೇಟ್ ಕಂಪನಿಗಳ 5,147 ಕೋಟಿ ಸಾಲ ಮನ್ನಾ ಮಾಡಿರುವುದೇ ಇದಕ್ಕೆ ಸಾಕ್ಷಿ. ರೈತರ ಸಾಲ ಮನ್ನಾ ಮಾಡದೇ ಇದ್ದರೂ ಬಡ್ಡಿಯನ್ನಾದರೂ ಮನ್ನಾ ಮಾಡಬೇಕು' ಎಂದು ಒತ್ತಾಯಿಸಿದರು.

ರೈತ ಮುಖಂಡ ಚಾಮರಸ ಮಾಲಿಪಾಟೀಲ್, 'ದೇಶದಲ್ಲಿ ರೈತರ ಬೆಳೆಗೆ ಭದ್ರತೆಯಿಲ್ಲ. ಬೆಳೆ ಬಂದರೂ ಮಾರುಕಟ್ಟೆಯಲ್ಲಿ ಸಮರ್ಪಕ ಬೆಲೆಯ ಭದ್ರತೆಯಿಲ್ಲ. ನೈಸರ್ಗಿಕ ವಿಕೋಪದಿಂದ ಆದ ನಷ್ಟವನ್ನು ರೈತರಿಂದ ಭರಿಸಲು ಸಾಧ್ಯವಿಲ್ಲ. ಆಡಳಿತ ನಡೆಸುವವರಿಗೆ ಇದು ತಿಳಿಯುತ್ತಿಲ್ಲವೇ? ಕಾರ್ಪೊರೇಟ್ ಕಂಪನಿಗಳ ಸಾಲ ಮನ್ನಾ ಮಾಡುವುದು ಎಷ್ಟು ಸರಿ? ಮೊದಲು ರೈತರ ಸಾಲ ಮನ್ನಾ ಮಾಡಬೇಕು' ಎಂದು ಹೇಳಿದರು.

ಎಎಪಿ ರಾಜ್ಯ ಘಟಕದ ಉಪಾಧ್ಯಕ್ಷ ಭಾಸ್ಕರ್ ರಾವ್ ಮಾತನಾಡಿದರು. ಮೈಕಲ್ ಫರ್ನಾಂಡಿಸ್, ಬಿ.ಗೋಪಾಲ್, ವಿ.ಗಾಯತ್ರಿ ಇದ್ದರು.

ಚಿತ್ರಾವಳಿ

ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತದ (ಬೆಂಗಳೂರು) ನೂತನ ಅಧ್ಯಕ್ಷರಾಗಿ ನೇಮಕಗೊಂಡಿರುವ ದೊಡ್ಡಬಸವರಾಜು ಅವರನ್ನು ಸಂಸದ ಡಿ.ವಿ. ಸದಾನಂದಗೌಡ ಅಭಿನಂದಿಸಿದರು. ವ್ಯವಸ್ಥಾಪಕ ನಿರ್ದೇಶಕಿ ಹೆಪ್ಸಿಬರಾಣಿ ಕೊರ್ಲಪಾಟಿ ಹಾಜರಿದ್ದರು

ಕೆ.ಆರ್‌.ಪುರ ಸಮೀಪದ ಮುನ್ನೇಕೊಳಲಿನಲ್ಲಿ ಕಾಂಗ್ರೆಸ್‌ನ ನೂತನ ವಾರ್ಡ್ ಕಚೇರಿ ಉದ್ಘಾಟನೆ ಹಾಗೂ ವರ ಮಹಾಲಕ್ಷ್ಮಿ ಹಬ್ಬದ ಅಂಗವಾಗಿ ಮಹಿಳೆಯರಿಗೆ ಸೀರೆ ಅರಿಶಿನ, ಕುಂಕುಮ, ಬಳೆ ವಿತರಿಸಲಾಯಿತು. ಜನಪದ ಸಾಹಿತಿ ಬಾನಂದೂರು ಕೆಂಪಯ್ಯ, ಬಿಬಿಎಂಪಿ ಮಾಜಿ ಸದಸ್ಯ ಉದಯಕುಮಾರ್ ನೇತೃತ್ವದಲ್ಲಿ ಮಹದೇವಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿಟಿಬಿ ಬಾಬು, ಪಣತ್ತೂರು ಬಾಬು, ಬಾಬುರೆಡ್ಡಿ, ಮಾಜಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಯರಾಂರೆಡ್ಡಿ, ರಾಮಕೃಷ್ಣಪ್ಪ ಇದ್ದರು

ಭಾರತದ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ರಾಷ್ಟ್ರೀಯ ನಾಟಕ ಶಾಲೆ ಭಾರತ ರಂಗಮಹೋತ್ಸವ ನಾಟಕೋತ್ಸವವನ್ನು ಶುಕ್ರವಾರ ದೇವರಾಜ ಅರಸು ಭವನದಲ್ಲಿ ಚಾಲನೆ ನೀಡಲಾಯಿತು. ಸಮಾಜ ಕಲ್ಯಾಣ ಇಲಾಖೆ ಕಾರ್ಯದರ್ಶಿ ಕೆ.ಎ. ದಯಾನಂದ್, ನಟ ಅನಿರುದ್ಧ ಜತ್ಕರ್, ರಾಷ್ಟ್ರೀಯ ನಾಟಕ ಶಾಲೆ ದೆಹಲಿ ನಿರ್ದೇಶಕ ರಮೇಶಚಂದ್ರ ಗೌರ್, ಬೆಂಗಳೂರು ಕೇಂದ್ರದ ನಿರ್ದೇಶಕಿ ವೀಣಾ ಶರ್ಮಾ ಇದ್ದರು

ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಹೇಳಿಕೆ

ಮಂಕಿಪಾಕ್ಸ್: 24 ಗಂಟೆಗಳೂ ಕಟ್ಟೆಚ್ಚರ

ಬೆಂಗಳೂರು: 'ಮಂಕಿಪಾಕ್ಸ್ (ಮಂಗನ ಸಿಡುಬು) ಪ್ರಕರಣಗಳು ರಾಜ್ಯದಲ್ಲಿ ಈವರೆಗೂ ಪತ್ತೆಯಾಗಿಲ್ಲ. ವಿಮಾನ ನಿಲ್ದಾಣ ಹಾಗೂ ಬಂದರುಗಳಲ್ಲಿ 24 ಗಂಟೆಗಳೂ ಕಟ್ಟೆಚ್ಚರ ವಹಿಸಲಾಗಿದೆ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ವಿಶ್ವ ರಕ್ತನಾಳ ದಿನದ ಪ್ರಯುಕ್ತ ವ್ಯಾಸ್ಕ್ಯುಲರ್ ಸರ್ಜನ್ಸ್ ಅಸೋಸಿಯೇಶನ್ ನಗರದಲ್ಲಿ ಶನಿವಾರ ಹಮ್ಮಿಕೊಂಡ ಜಾಗೃತಿ ನಡಿಗೆಯಲ್ಲಿ ಭಾಗವಹಿಸಿ, ಮಾತನಾಡಿದರು. 'ಮಂಕಿಪಾಕ್ಸ್‌ಗೆ ಸಂಬಂಧಿಸಿದಂತೆ ಆರಂಭದಿಂದಲೇ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸಲಾಗುತ್ತಿದೆ. ಗಡಿ ಭಾಗಗಳಲ್ಲಿ ಕಟ್ಟೆಚ್ಚರ ವಹಿಸಲಾಗಿದೆ. ಆಸ್ಪತ್ರೆಗಳಲ್ಲೂ ಚಿಕಿತ್ಸೆಗೆ ಸಿದ್ಧತೆ ಮಾಡಿಕೊಳ್ಳಲಾಗಿದೆ. ಅಂತರರಾಷ್ಟ್ರೀಯ ಪ್ರಯಾಣಿಕರು ರಾಜ್ಯಕ್ಕೆ ಬಂದಾಗ ಮಾರ್ಗಸೂಚಿಯನ್ನು ಪಾಲಿಸಬೇಕು. ಇಥಿಯೋಪಿಯಾದಿಂದ ಬಂದಿದ್ದ ವ್ಯಕ್ತಿಯೊಬ್ಬರಿಗೆ ಮಂಕಿಪಾಕ್ಸ್ ಇರುವ ಅನುಮಾನದ ಮೇಲೆ ಪರೀಕ್ಷೆಗೆ ಒಳಪಡಿಸಲಾಗಿತ್ತು. ಅವರಿಗೆ ಮಂಕಿಪಾಕ್ಸ್ ಇಲ್ಲ ಎನ್ನುವುದು ದೃಢಪಟ್ಟಿದೆ' ಎಂದರು.

ವ್ಯಾಸ್ಕ್ಯುಲರ್ ಸರ್ಜನ್ಸ್ ಅಸೋಸಿಯೇಶನ್ ನಗರದಲ್ಲಿ ನಡೆಸಿದ ಜಾಗೃತಿ ನಡಿಗೆಯಲ್ಲಿ ರಕ್ತನಾಳ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸಲಾಯಿತು

'ವಿಮಾನ ನಿಲ್ದಾಣ ಹಾಗೂ ಬಂದರುಗಳಲ್ಲಿ ಕಟ್ಟೆಚ್ಚರ ವಹಿಸಲು ಮೂರು ಬಗೆಯ ಪಾಳಿಯನ್ನು ನಿಗದಿ ಮಾಡಲಾಗಿದೆ. ಸಿಡುಬು ಸೇರಿ ವಿವಿಧ ಲಕ್ಷಣಗಳಿಂದ ಈ ರೋಗ ಗುರುತಿಸಬಹುದಾಗಿದೆ. ಕೋವಿಡ್‌ನಂತೆಯೇ ಮೂರು ನಾಲ್ಕು ದಿನಗಳ ಬಳಿಕ ರೋಗ ಪತ್ತೆಯಾಗುತ್ತದೆ' ಎಂದು ತಿಳಿಸಿದರು.

'ದೇಶದಲ್ಲಿ ರಕ್ತನಾಳ ಶಸ್ತ್ರಚಿಕಿತ್ಸಾ ತಜ್ಞರು ಕಡಿಮೆ ಸಂಖ್ಯೆಯಲ್ಲಿ ಇದ್ದಾರೆ. ರಕ್ತನಾಳದ ಸಮಸ್ಯೆ ಬಗ್ಗೆ ನಗರ ಪ್ರದೇಶಗಳಲ್ಲಿ ಹೆಚ್ಚು ಜಾಗೃತಿ ಮೂಡಿಸಬೇಕು. ರಕ್ತನಾಳ ಸಮಸ್ಯೆಗಳು ಬೇರೆ ಅನಾರೋಗ್ಯಕ್ಕೂ ದಾರಿ ಮಾಡಿಕೊಡುತ್ತವೆ. ಸಂಚಾರ ಪೊಲೀಸರು ಸಾಮಾನ್ಯ ಜನರಿಗಿಂತ ಹೆಚ್ಚು ಕಾಲ ನಿಂತುಕೊಳ್ಳುತ್ತಾರೆ. ಹಾಗೆಯೇ, ಶಿಕ್ಷಕರು, ಶಸ್ತ್ರಚಿಕಿತ್ಸಕರು ಮತ್ತಿತರರು ಕೂಡ ಹೆಚ್ಚು ಸಮಯ ನಿಂತುಕೊಳ್ಳುತ್ತಾರೆ. ಇದರಿಂದಾಗಿ ರಕ್ತನಾಳದ ಸಮಸ್ಯೆ ಕಾಣಿಸಿಕೊಳ್ಳುತ್ತದೆ' ಎಂದು ಹೇಳಿದರು.

'ಜಗತ್ತಿನಲ್ಲಿ ಪ್ರತಿ 6 ಸೆಕೆಂಡ್‌ಗೆ ಒಬ್ಬ ವ್ಯಕ್ತಿ ಕಾಲನ್ನು ಕಳೆದುಕೊಳ್ಳುವ ಸ್ಥಿತಿಯಿದೆ ಎಂದು ಅಂದಾಜಿಸಲಾಗಿದೆ. ರಕ್ತನಾಳದ ಆರೋಗ್ಯಕ್ಕೆ ಹೆಚ್ಚು ಒತ್ತು ನೀಡಬೇಕು. ಲಘು ವ್ಯಾಯಾಮವನ್ನು ಮಾಡುವಂತೆ ಎಲ್ಲರನ್ನೂ ಉತ್ತೇಜಿಸಬೇಕು' ಎಂದು ತಿಳಿಸಿದರು.

'ಪೌಲ್ ಅಕ್ರಮ ಆಸ್ತಿಗೂ, ನನಗೂ ಸಂಬಂಧವಿಲ್ಲ'

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: 'ಪಿಎಸ್‌ಐ ನೇಮಕಾತಿ ಹಗರಣದಲ್ಲಿ ಬಂಧಿತರಾಗಿರುವ ಎಡಿಜಿಪಿ ಅಮ್ರಿತ್ ಪೌಲ್ ತಾಲ್ಲೂಕಿನಲ್ಲಿ ಖರೀದಿಸಿರುವ ಜಮೀನಿಗೆ ಸಂಬಂಧಿಸಿದಂತೆ ಸಿಐಡಿ ಅಧಿಕಾರಿಗಳು ತಮಗೆ ನೋಟಿಸ್ ನೀಡಿದ್ದರು. ಈ ಹಿನ್ನೆಲೆಯಲ್ಲಿ ನಡೆದ ತನಿಖೆ ವೇಳೆ ಅಧಿಕಾರಿಗಳು ಕೇಳಿದ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿದ್ದೇನೆ. ಪೌಲ್ ಅಕ್ರಮ ಆಸ್ತಿಗೂ, ತಮಗೂ ಯಾವುದೇ ಸಂಬಂಧವಿಲ್ಲ. ಈ ವಿಚಾರದಲ್ಲಿ ವಿನಾಕಾರಣ ನನ್ನ ಹೆಸರನ್ನು ಸಿಲುಕಿಸಲಾಗುತ್ತಿದೆ' ಎಂದು ರಿಯಲ್ ಎಸ್ಟೇಟ್ ಉದ್ಯಮಿ ಹುಸ್ಕೂರು ಆನಂದ್ ಹೇಳಿದರು.

ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪಿಎಸ್‌ಐ ದೊಡ್ಡ ಹಗರಣವಾಗಿದೆ. ಇದನ್ನು ಯಾರೇ ಮಾಡಿದ್ದರೂ ತಪ್ಪು. ಹಗರಣದಲ್ಲಿ ನನ್ನದು ಯಾವುದೇ ಪಾತ್ರವಿಲ್ಲ. ಅಮ್ರಿತ್ ಪೌಲ್ ನನ್ನ ಸ್ನೇಹಿತರಾಗಿದ್ದಾರೆ. ಅವರ ಫೋನ್ ಕಾಲ್ ಆಧಾರದ ಮೇಲೆ ತನಿಖೆಗೆ ಬರುವಂತೆ ನನಗೆ ನೋಟಿಸ್ ನೀಡಲಾಗಿತ್ತು' ಎಂದು ತಿಳಿಸಿದರು.

'ಎರಡು ದಿನಗಳ ಕಾಲ ಹೋಗಿ ಅವರು ಕೇಳಿದ ಎಲ್ಲಾ ದಾಖಲೆ ನೀಡಿದಾಗ ತಮ್ಮದೇನೂ ತಪ್ಪಿಲ್ಲ ಎಂದು ಕಳುಹಿಸಿದ್ದಾರೆ. ಮತ್ತೆ ಕರೆದರೂ ಹೋಗಿ ತನಿಖೆಗೆ ಸಹಕಾರ ನೀಡುತ್ತೇನೆ' ಎಂದು ತಿಳಿಸಿದರು.

'ಅಕ್ರಮವಾಗಿ ಹುಸ್ಕೂರು ಬಳಿ 60 ಎಕರೆ ಮತ್ತು ದೇವನಹಳ್ಳಿ ಬಳಿ 20 ಎಕರೆ ಜಮೀನು ಹೊಂದಿದ್ದಾರೆ ಎಂದು ನನ್ನ ಮೇಲೆ ಆರೋಪಿಸುತ್ತಿದ್ದಾರೆ. ಇದರಲ್ಲಿ ಯಾವುದೇ ಹುರುಳಿಲ್ಲ. 2002ರಲ್ಲಿ ಬ್ಯಾಂಕ್‌ನಲ್ಲಿ ಈ ಜಮೀನು ಅಡವಿಟ್ಟು ₹ 20 ಕೋಟಿ ಸಾಲ ಪಡೆದಿದ್ದೆ. 1980ರಲ್ಲಿಯೇ ನಾನು ಜಮೀನು ಖರೀದಿ ಮಾಡಿದ್ದೇನೆ. ಅದು ಬೇನಾಮಿ ಹೇಗೆ ಆಗುತ್ತದೆ. ನನಗೆ ಬೇನಾಮಿ ಆಸ್ತಿ ಮಾಡುವ ಅಗತ್ಯವಿಲ್ಲ' ಎಂದು ಹೇಳಿದರು.

'2016ರಲ್ಲಿ ನನಗೆ ಪೌಲ್ ಪರಿಚಯವಾಯಿತು. ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಜಮೀನು ಖರೀದಿಸಲು ಬಂದ ಅವರಿಗೆ ಪಿಂಡಕೂರು ತಿಮ್ಮನಹಳ್ಳಿ ಬಳಿ 3.14 ಎಕರೆ ಜಮೀನು ಕೊಡಿಸಿದ್ದೇನೆ' ಎಂದರು.

'100 ಎಕರೆ ಜಮೀನುದಾರ ಆಗಿರುವ ನಾನು ಕಾಲಕಾಲಕ್ಕೆ ವರಮಾನ ತೆರಿಗೆಯನ್ನೂ ಪಾವತಿಸುತ್ತಿದ್ದೇನೆ. ಎಲ್ಲಾ ಲೆಕ್ಕಪತ್ರ, ದಾಖಲೆಗಳು ಪಾರದರ್ಶಕವಾಗಿವೆ. ನನ್ನ ಮಗಳ ಮೇಲೆ ಬಂದಿರುವ ಆರೋಪವೂ ನಿರಾಧಾರವಾದುದು. ಅವಳ ಹೆಸರಿನಲ್ಲಿರುವ ದಾಖಲೆಗಳು ಸಹ ಪಾರದರ್ಶಕವಾಗಿವೆ' ಎಂದರು.

'ಪೌಲ್ ಆರೋಪಿ ಸ್ಥಾನದಲ್ಲಿದ್ದಾರೆ. ನಾನು ಅವರ ಜೊತೆ ಸಂಪರ್ಕದಲ್ಲಿದ್ದೆ ಎನ್ನುವ ಕಾರಣಕ್ಕೆ ನನಗೆ ಆಗದೇ ಇರುವವರು ವಿನಾಕಾರಣ ದೂರು ನೀಡಿ ನನ್ನನ್ನು ಸಿಲುಕಿಸಿದ್ದಾರೆ. ಹಗರಣದಲ್ಲಿ ಸಿಲುಕಿರುವ ಅವರ ಅಕ್ರಮ ಆಸ್ತಿ ಕುರಿತು ನ್ಯಾಯಾಲಯ ತೀರ್ಮಾನಿಸುತ್ತದೆ' ಎಂದು ತಿಳಿಸಿದರು.

ಮುಖಂಡರಾದ ಪುಟ್ಟಬಸವರಾಜ್, ಶಿವಣ್ಣ, ಮುನಿಹನುಮಯ್ಯ, ಚೆನ್ನರಾಮಯ್ಯ, ಸಿದ್ಧಗಂಗಪ್ಪ, ರಾಮಕೃಷ್ಣಪ್ಪ, ಕುಮಾರ್ ಹಾಜರಿದ್ದರು.

'ಯಾರು, ಎಷ್ಟು ಬಸ್ ಕಳುಹಿಸಿದ್ದರು ಗೊತ್ತು'

ಕೋಲಾರ: 'ದಾವಣಗೆರೆಯಲ್ಲಿ ನಡೆದ ಸಿದ್ದರಾಮಯ್ಯ ಅವರ 75ನೇ ಜನ್ಮದಿನದ ಉತ್ಸವಕ್ಕೆ ಯಾರು ಎಷ್ಟು ಶ್ರಮ ಹಾಕಿದ್ದಾರೆ? ಯಾರು ಎಷ್ಟು ಬಸ್ ಕಳುಹಿಸಿದ್ದಾರೆ? ಯಾವ ಜಿಲ್ಲೆಯಿಂದ ಎಷ್ಟು ಜನ ಹೋಗಿದ್ದರು ಎಂಬ ಮಾಹಿತಿ ನಮ್ಮಲ್ಲಿ ಇದೆ' ಎಂದು ಸಚಿವ ಮುನಿರತ್ನ ಹೇಳಿದರು.

ಶನಿವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಕುಮಾರಸ್ವಾಮಿ ಕೂಡ ಈಚೆಗೆ ಸಮಾವೇಶ ನಡೆಸಿ 125 ಸೀಟು ಬರಲಿದೆ ಎಂಬುದಾಗಿ ಹೇಳಿದ್ದರು. ಮೈದಾನದಲ್ಲಿ ಜನ ಸೇರಿಸಿ ಕಾರ್ಯಕ್ರಮ ಮಾಡಿದ ಮಾತ್ರಕ್ಕೆ ಒಂದು ಪಕ್ಷ ಅಧಿಕಾರಕ್ಕೆ ಬರುವುದಿಲ್ಲ. ಜನರ ನಿಲುವು, ಒಲವು, ಅಭಿಪ್ರಾಯ ಬೇರೆ ಇರುತ್ತದೆ. ಜನ ಸೇರಿಸಿದ ಮಾತ್ರಕ್ಕೆ ಬಿಜೆಪಿ ಬೆದರಿದೆ ಎಂದುಕೊಂಡರೆ ಅದು ಅವರ ಭ್ರಮೆ. ನಾವು ಮತ್ತೆ ಅಧಿಕಾರಕ್ಕೆ ಬರುತ್ತೇವೆ. ಸಿದ್ದರಾಮಯ್ಯ ಅವರ ಅಕ್ಕಪಕ್ಕದಲ್ಲಿ ಇರುವ ಮುಖಂಡರಿಗೆ ಹೊಟ್ಟೆಉರಿ ಇರಬಹುದೇ ಹೊರತು ನಮಗೆ ಅಲ್ಲ' ಎಂದರು.

ಪತ್ರಕರ್ತ ಜಿ.ಎನ್. ರಂಗನಾಥ ರಾವ್ ಅವರ 'ಆ ಪತ್ರಿಕೋದ್ಯಮ' ಕೃತಿ ಬಿಡುಗಡೆ

ಮೌಲ್ಯಾಧಾರಿತ ಪತ್ರಿಕೆ 'ಪ್ರಜಾವಾಣಿ': ರಾಮಚಂದ್ರನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಧ್ಯಮಗಳಿಗೆ ಸಾಮಾಜಿಕ ಬದ್ಧತೆ ಇರಬೇಕು. ಅಂತಹ ಮೌಲ್ಯಾಧಾರಿತ ಬದ್ಧತೆಯನ್ನು 'ಪ್ರಜಾವಾಣಿ' ಸದಾ ಪಾಲಿಸಿಕೊಂಡು ಬಂದಿರುವುದು ಜಿ.ಎನ್. ರಂಗನಾಥ ರಾವ್ ಅವರ ಕೃತಿಯಲ್ಲೂ ಪ್ರತಿಫಲಿಸಿದೆ ಎಂದು ವಿಮರ್ಶಕ ಸಿ.ಎನ್. ರಾಮಚಂದ್ರನ್ ಬಣ್ಣಿಸಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಬಹುರೂಪಿ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಪತ್ರಕರ್ತ ಜಿ.ಎನ್. ರಂಗನಾಥ ರಾವ್ ಅವರ ಮಾಧ್ಯಮ ಲೋಕದ ಪಯಣದ ಕಥನ 'ಆ ಪತ್ರಿಕೋದ್ಯಮ' ಕೃತಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಪ್ರಸ್ತುತ ಸನ್ನಿವೇಶ ಮಾಧ್ಯಮಗಳಿಗೆ ಸವಾಲಾಗಿದೆ. ಜಾಹೀರಾತು ಇಲ್ಲದೇ ಪತ್ರಿಕೆ ನಡೆಸಲು ಸಾಧ್ಯವಿಲ್ಲ ಎನ್ನುವ ಸನ್ನಿವೇಶ ಸೃಷ್ಟಿಯಾಗಿದೆ. ಪತ್ರಕರ್ತರೂ ಹಲವು ಒತ್ತಡಗಳನ್ನು ಅನುಭವಿಸುತ್ತಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು.



ಬೆಂಗಳೂರಿನಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಪತ್ರಕರ್ತ ಜಿ.ಎನ್. ರಂಗನಾಥ ರಾವ್ ಅವರ 'ಆ ಪತ್ರಿಕೋದ್ಯಮ' ಪುಸ್ತಕವನ್ನು ವಿಮರ್ಶಕ ಸಿ.ಎನ್. ರಾಮಚಂದ್ರನ್ ಬಿಡುಗಡೆ ಮಾಡಿದರು. ಪತ್ರಕರ್ತೆ ಎಚ್.ಎನ್.ಆರತಿ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಪತ್ರಕರ್ತ ಜಿ.ಎನ್.ಮೋಹನ್ ಇದ್ದರು. – ಪ್ರಜಾವಾಣಿ ಚಿತ್ರ

ಮಾಧ್ಯಮಗಳು ವೃತ್ತಿನಿಷ್ಠೆ ಮರೆಯಬೇಕಾದ ಅಗತ್ಯ ಇದೆ. ಆಳುವ ವರ್ಗದ ಓಲೈಕೆ ಮಾಡದೆ, ಕಾರ್ಪೊರೇಟ್ ಸಂಸ್ಥೆಗಳ ಬೆನ್ನು ಬೀಳದೆ, ಪ್ರಕಟಿಸುವ ಅಗತ್ಯ ಹಿಂದಿಗಿಂತಲೂ ಈಗ ಹೆಚ್ಚಿದೆ ಎಂದು ಪ್ರತಿಪಾದಿಸಿದರು.

ಸಾಹಿತಿ ಎಚ್.ಎನ್.ಆರತಿ, ಹಿಂದಿನ, ಈಗಿನ ಪತ್ರಿಕೋದ್ಯಮದ ಮಧ್ಯೆ ದೊಡ್ಡ ಕಂದರವಿದೆ. ಪತ್ರಿಕೋದ್ಯಮದ ಆದ್ಯತೆಗಳು ಬದಲಾಗಿವೆ. ತಂತ್ರಜ್ಞಾನದ ಫಲವಾಗಿ ಸಮಾಜಮುಖಿ ನೋಟ ಇಲ್ಲವಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಅಧ್ಯಕ್ಷತೆ ವಹಿಸಿದ್ದರು. ಬಹುರೂಪಿಯ ಜಿ.ಎನ್. ಮೋಹನ್, ವಿ.ಎನ್.ಶ್ರೀಜಾ, ಕೃತಿಯ ಲೇಖಕ ಜಿ.ಎನ್.ರಂಗನಾಥ ರಾವ್, ಸಂಘದ ಉಪಾಧ್ಯಕ್ಷ ಭವಾನಿ ಸಿಂಗ್ ಠಾಕೂರ್, ಕಾರ್ಯದರ್ಶಿ ಜಿ.ಸಿ. ಲೋಕೇಶ್ ಉಪಸ್ಥಿತರಿದ್ದರು.

ಪುಸ್ತಕ ಪರಿಚಯ

ಕೃತಿ:	ಆ ಪತ್ರಿಕೋದ್ಯಮ
ಲೇಖಕರು:	ಜಿ.ಎನ್. ರಂಗನಾಥ ರಾವ್
ಪ್ರಕಾಶನ:	ಬಹುರೂಪಿ
ಪುಟಗಳು:	224
ಬೆಲೆ:	₹ 300

ಜಾನೂರ್ ಕಲೆಗೆ ಫಿದಾ ಆದ ಮಹಿಳೆಯರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾನೂರ್ ಕಲೆಯ ಮೂಲಕ ಕಪ್ಪು ಸುಂದರಿ ಪ್ರತಿಮೆಗೆ ಎಳೆ ತೆಂಗಿನ ಗರಿಗಳಿಂದ ತೊಡಿಸಿದ್ದ ಉಡುಗೆ ರೂಪದರ್ಶಿಯರನ್ನು ನಾಚಿಸುವಂತಿತ್ತು, ತರಕಾರಿಗಳಿಂದ ಮಾಡಿದ ನವಿಲು, ಸರ್ಪ ಹಾಗೂ ಇತರೆ ಕಲೆಗಳು ನೋಡುಗರ ಮನಸೂರೆಗೊಂಡವು. ಇವೆಲ್ಲಾ ಹೂಗಳ ಪ್ರದರ್ಶನ ಚಿತ್ತಾಕರ್ಷಕವಾಗಿತ್ತು, ಜನರು ತಮ್ಮ ಇಷ್ಟದ ಪ್ರದರ್ಶನಗಳ ಎದುರು ನಿಂತು ಫೋಟೊ ತೆಗೆಸಿಕೊಳ್ಳುತ್ತಿದ್ದರು.

ಸ್ವಾತಂತ್ರ್ಯೋತ್ಸವದ ಅಂಗವಾಗಿ ಡಾ.ರಾಜ್ ಕುಮಾರ್ ಮತ್ತು ಪುನೀತ್ ರಾಜ್‌ಕುಮಾರ್ ಸ್ಮರಣಾರ್ಥ ಆಯೋಜಿಸಿರುವ ಫಲಪುಷ್ಪ ಪ್ರದರ್ಶನದ ಅಂಗವಾಗಿ ಲಾಲ್‌ಬಾಗ್‌ನ ಎಂ.ಎಚ್. ಮರಿಗೌಡ ಸ್ಮಾರಕ ಭವನದಲ್ಲಿ ಆಯೋಜಿಸಿದ್ದ ವಿಶೇಷ ಪ್ರದರ್ಶನದಲ್ಲಿ ಶನಿವಾರ ಕಂಡುಬಂದ ದೃಶ್ಯವಿದು.

ತೋಟಗಾರಿಕೆ ಇಲಾಖೆ ಹಾಗೂ ಮೈಸೂರು ಉದ್ಯಾನ ಕಲಾ ಸಂಘದ ಸಹಯೋಗದಲ್ಲಿ ಶನಿವಾರ ಆಯೋಜಿಸಿದ್ದ ಇಕೆಬಾನ, ಪುಷ್ಪ ಭಾರತಿ, ತರಕಾರಿ ಕೆತ್ತನೆ, ಒಣ ಹೂವಿನ ಜೋಡಣೆ, ಥಾಯ್ ಆರ್ಟ್, ತೆಂಗಿನ ಗರಿಯ ಚಿತ್ತಾರದಿಂದ ಕೂಡಿದ ಜಾನೂರ್ ಕಲೆ, ಡಚ್ ಹೂವಿನ ಜೋಡಣೆ ಮತ್ತು ಬೋನ್ಸಾಯ್ ಗಿಡಗಳ ಪ್ರದರ್ಶನವನ್ನು ಸಾಹಿತಿ ಎ.ಜಿ. ರತ್ನ ಕಾಳೇಗೌಡ ಉದ್ಘಾಟಿಸಿದರು.

ಜಾನೂರ್ ಕಲೆಯಿಂದ ಸಿದ್ಧಪಡಿಸಲಾಗಿದ್ದ ಸೆಲ್ಫಿ ಬೂತ್ ಒಳಗೆ ನಿಂತು ಚಿಣ್ಣರು ಮಹಿಳೆಯರು ತಮ್ಮಿಷ್ಟದ ಭಂಗಿಯಲ್ಲಿ ನಿಂತು ಫೋಟೊಗಳೊಂದಿಗೆ ಸೆಲ್ಫಿ ಕ್ಲಿಕ್ಕಿಸಿಕೊಂಡರು. ಜಾನೂರ್ ಕಲೆಯ ಚಿತ್ತಾರದಲ್ಲಿ ಮೂಡಿ ಬಂದ ಪುನೀತ್ ರಾಜ್‌ಕುಮಾರ್ ಅವರ ನಗುಮುಖದ ಈ ಪ್ರದರ್ಶನಕ್ಕೆ ಮತ್ತಷ್ಟು ಮೆರುಗು ನೀಡಿತು.

ಎರಡನೇ ದಿನವಾದ ಶನಿವಾರ ಒಟ್ಟು 21 ಸಾವಿರ ಮಂದಿ ಫಲಪುಷ್ಪ ಪ್ರದರ್ಶನವನ್ನು ವೀಕ್ಷಿಸಿದರು. ಭಾನುವಾರ ಹೆಚ್ಚಿನ ಸಂಖ್ಯೆಯಲ್ಲಿ ಜನ ಭೇಟಿ ನೀಡುವ ನಿರೀಕ್ಷೆ ಇದೆ ಎಂದು ಲಾಲ್‌ಬಾಗ್ ಉಪನಿರ್ದೇಶಕಿ ಕುಸುಮಾ ಮಾಹಿತಿ ನೀಡಿದರು.

ಮುಖ್ಯಾಂಶಗಳು

- ಲಾಲ್‌ಬಾಗ್‌ನಲ್ಲಿ ನಡೆಯುತ್ತಿರುವ ಪುಷ್ಪ ಪ್ರದರ್ಶನದ ಒಂದು ಭಾಗ
- ತೆಂಗು ಸಹಿತ ವಿವಿಧ ಗರಿಗಳ ಚಿತ್ತಾರವೇ ಜಾನೂರ್ ಕಲೆ

ಫಲಪುಷ್ಪ ಪ್ರದರ್ಶನಕ್ಕೆ ಭೇಟಿ ನೀಡಿದವರು (ಶನಿವಾರ)

ವಯಸ್ಕರು	18 ಸಾವಿರ
ಮಕ್ಕಳು	3 ಸಾವಿರ
ಒಟ್ಟು	21 ಸಾವಿರ
ಸಂಗ್ರಹವಾದ ಹಣ	₹12.50ಲಕ್ಷ

ಜಾನೂರ್ ಕಲೆಯಲ್ಲಿ ಅರಳಿದ ಪುನೀತ್ ಭಾವಚಿತ್ರ

–ಪ್ರಜಾವಾಣಿ ಚಿತ್ರಗಳು– ಎಸ್.ಕೆ.ದಿನೇಶ್

ಸೆಲ್ಫಿ ಬೂತ್‌ನಲ್ಲಿ ನಿಂತು ಫೋಟೊ ತೆಗೆಸಿಕೊಂಡ ಮಹಿಳೆಯರು

ಜಾನೂರ್ ಕಲೆಯ ಮೂಲಕ ಕಪ್ಪು ಸುಂದರಿ ಪ್ರತಿಮೆಗೆ ಎಳೆ ತೆಂಗಿನ ಗರಿಗಳಿಂದ ತೊಡಿಸಿದ್ದ ಉಡುಗೆಯನ್ನು ಯುವತಿಯರು ಕುತೂಹಲದಿಂದ ವೀಕ್ಷಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರವರ ಕಛೇರಿ, ಬಿಬಿಎಂಪಿ, ನರಸಿಂಹರಾಜ ಚೌಕ, ಬೆಂಗಳೂರು – 560 002.

ಸಾರ್ವಜನಿಕ ಪ್ರಕಟಣೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಮಂಜೂರಾತಿ ನಕ್ಷೆಗಳ ಉಲ್ಲಂಘನೆ, ಅನಧಿಕೃತ ಕಟ್ಟಡಗಳ ನಿರ್ಮಾಣಗಳನ್ನು ಪರಿಣಾಮಕಾರಿಯಾಗಿ ತಡೆಯುವ ಸಂಬಂಧ ಮಾರ್ಗಸೂಚಿ ಹೊರಡಿಸಲು ಹಾಗೂ ಈ ರೀತಿ ನಕ್ಷೆಗಳ ಉಲ್ಲಂಘನೆ ಮತ್ತು ಅನಧಿಕೃತ ನಿರ್ಮಾಣಗಳನ್ನು ತಡೆಯಲು ವಿವಿಧ ಅಧಿಕಾರಿಗಳ ಕರ್ತವ್ಯ ಮತ್ತು ಜವಾಬ್ದಾರಿ ಹಾಗು ಅವುಗಳ ನಿರ್ವಹಣೆಯಲ್ಲಿ ವಿಫಲರಾಗುವ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಜರುಗಿಸಲು ಘನ ಉಚ್ಚ ನ್ಯಾಯಾಲಯವು W.P ಸಂಖ್ಯೆ: 29499–506/2016 ರಲ್ಲಿ ನೀಡಿರುವ ಮಧ್ಯಂತರ ಆದೇಶದನ್ವಯ ಪಾಲಿಕೆಯಿಂದ ದಿನಾಂಕ: 21–07–2022 ರಂದು ಈ ಕೆಳಕಂಡ ಕಛೇರಿ ಆದೇಶ ಹೊರಡಿಸಿದ್ದು, ಸದರಿ ಆದೇಶವನ್ನು ಸಾರ್ವಜನಿಕರ ಮಾಹಿತಿಗಾಗಿ ದಿನಪತ್ರಿಕೆಗಳಲ್ಲಿ ಪ್ರಚುರಪಡಿಸಲು ಘನ ನ್ಯಾಯಾಲಯವು ಆದೇಶಿಸಿರುವ ಹಿನ್ನಲೆಯಲ್ಲಿ, ಸದರಿ ಆದೇಶವನ್ನು ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲಾಗಿದೆ.

ಸಂಖ್ಯೆ: ಮುಆ/ಪಿಆರ್/43/2022–23

ಕಛೇರಿ ಆದೇಶ

ದಿನಾಂಕ: 21–07–2022

ವಿಷಯ : ಮಂಜೂರಾತಿ ನಕ್ಷೆಗಳ ಉಲ್ಲಂಘನೆ, ಅನಧಿಕೃತ ಕಟ್ಟಡಗಳ ನಿರ್ಮಾಣದ ತಡೆಗೆ ಹಾಗೂ ವಿವಿಧ ಅಧಿಕಾರಿಗಳ ಜವಬ್ದಾರಿ ಮತ್ತು ಅವುಗಳ ನಿರ್ವಹಣೆಯಲ್ಲಿ ವಿಫಲರಾಗುವ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮದ ಮಾರ್ಗಸೂಚಿ.

ಉಲ್ಲೇಖ :

1) ಕಛೇರಿ ಆದೇಶ ಬಿ12 (1)/ಪಿಆರ್/223/2010–11 ದಿ:28/10/2010
2) ಕಛೇರಿ ಆದೇಶ ಬಿ12 (1)/ಪಿಆರ್/223/2010–11 ದಿ.29/10/2011
3) ಕಛೇರಿ ಆದೇಶ ಬಿ12 (1)/ಪಿಆರ್/223/2010–11 ದಿ.29/06/2015
4) ಘನ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 29499–506/2016 ರ ಮಧ್ಯಂತರ ಆದೇಶ ದಿನಾಂಕ: 06–06–2022,
5) ಸುತ್ತೋಲೆ ಸಂಖ್ಯೆ: ಮು.ಆ/ಪಿಆರ್/35/22–23, ದಿನಾಂಕ: 06–07–2022.

* * * * * *

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕಟ್ಟಡ ಉಪವಿಧಿ ಹಾಗೂ ಮಂಜೂರಾತಿ ನಕ್ಷೆ ಉಲ್ಲಂಘಿಸಿ ಮತ್ತು ಅನಧಿಕೃತವಾಗಿ ನಿರ್ಮಾಣವಾಗುತ್ತಿರುವ ಕಟ್ಟಡಗಳ ವಿರುದ್ಧ ಕೆ.ಎಂ.ಸಿ. ಕಾಯ್ದೆ ಕಲಂ 321 ಹಾಗೂ ಪ್ರಸ್ತುತ ಬಿಬಿಎಂಪಿ ಕಾಯ್ದೆ 2020 ಕಲಂ 248 ರಡಿಯಲ್ಲಿ ಕಾನೂನು ಕ್ರಮ ಜರುಗಿಸಬೇಕಾಗಿರುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ನಕ್ಷೆ ಉಲ್ಲಂಘನೆ / ಅನಧಿಕೃತ ಕಟ್ಟಡ ನಿರ್ಮಾಣ ಪ್ರಕರಣಗಳು ಕೂಡ ಹೆಚ್ಚುತ್ತಿರುತ್ತದೆ. ಇಂತಹ ಪ್ರಕರಣಗಳಲ್ಲಿ ಅನಧಿಕೃತ ನಿರ್ಮಾಣ / ನಕ್ಷೆಗಳ ಉಲ್ಲಂಘನೆಯನ್ನು ತಡೆಯುವಲ್ಲಿ ಬಿಬಿಎಂಪಿ ಕಾಯ್ದೆಯಡಿಯಲ್ಲಿ ನೀಡಲಾಗುವ ತಾತ್ಕಾಲಿಕ ಮತ್ತು ಅಂತಿಮ ಆದೇಶ ಮತ್ತು ಅದಕ್ಕೆ ಸಂಬಂಧಪಟ್ಟ ಪ್ರಕ್ರಿಯೆಗಳನ್ನು ಅಂತಿಮಗೊಳಿಸಲು ನಕ್ಷೆ ಉಲ್ಲಂಘಿತ ಭಾಗಗಳನ್ನು ತೆರವುಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳು, ವಿಳಂಬ ಮಾಡುತ್ತಿರುವುದು ಅಥವಾ ವಿಫಲರಾಗುತ್ತಿರುವುದು ಕಂಡು ಬರುತ್ತಿದ್ದು, ಇಂತಹ ವಿಷಯಗಳಲ್ಲಿ ಘನ ನ್ಯಾಯಾಲಯವು ಉಲ್ಲೇಖ (4) ರಲ್ಲಿ ಅಂತಹ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಜರುಗಿಸುವಂತೆ ನಿರ್ದೇಶನವನ್ನು ನೀಡಿರುತ್ತದೆ.

ಪಾಲಿಕೆಯಿಂದ ಉಲ್ಲೇಖ (5) ರ ಆದೇಶದಲ್ಲಿ ಬಿಬಿಎಂಪಿ ಕಾಯ್ದೆ–2020 ಕಲಂ 240 ಮತ್ತು 240 (ಎ) ರಡಿಯಲ್ಲಿ ವಲಯ ಕಛೇರಿ ಮತ್ತು ಕೇಂದ್ರ ಕಛೇರಿಯಲ್ಲಿ ನಕ್ಷೆ ಮಂಜೂರಾತಿ ನೀಡಲು ಅಧಿಕಾರವನ್ನು ವಿವಿಧ ಅಧಿಕಾರಿಗಳಿಗೆ ಪ್ರತ್ಯಾಯೋಜಿಸಲಾಗಿದೆ.

ಪಾಲಿಕೆಯಲ್ಲಿ ಮಂಜೂರಾಗುವ ಎಲ್ಲಾ ಕಟ್ಟಡ ನಕ್ಷೆಗಳನ್ನು EoDB ತಂತ್ರಾಂಶದಲ್ಲಿ ಆನ್‌ಲೈನ್‌ನಲ್ಲಿ ಮಂಜೂರಾತಿ ನೀಡಲಾಗುತ್ತಿದೆ. ಹೀಗೆ ಆನ್‌ಲೈನ್‌ನಲ್ಲಿ ಕೇಂದ್ರ ಮತ್ತು ವಲಯ ಕಛೇರಿಯಲ್ಲಿ ಮಂಜೂರಾಗುವ ನಕ್ಷೆಗಳ ವಿವರಗಳನ್ನು ವಲಯ ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುವ ಸಹಾಯಕ ಕಾರ್ಯಪಾಲಕ ಅಭಿಯಂತರರ ಕಾರ್ಯವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿ ಹಾಗೂ ವಲಯ ಕಛೇರಿಗಳ ಸಹಾಯಕ ಕಂದಾಯ ಅಧಿಕಾರಿಗಳ ಕಾರ್ಯವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿ, ನೇರವಾಗಿ ಆನ್‌ಲೈನ್ ತಂತ್ರಾಂಶದಲ್ಲಿ ಪಡೆಯಲು ಅನುಕೂಲವಾಗುವಂತೆ ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರುಗಳಿಗೆ, ಕಾರ್ಯಪಾಲಕ ಅಭಿಯಂತರರುಗಳಿಗೆ ಹಾಗೂ ಸಹಾಯಕ ಕಂದಾಯ ಅಧಿಕಾರಿಗಳಿಗೆ ಮತ್ತು ಕಂದಾಯ ಅಧಿಕಾರಿಗಳಿಗೆ ಪ್ರತ್ಯೇಕ Console ಸೃಜಿಸಿ ಅವರವರುಗಳ ವ್ಯಾಪ್ತಿಯಲ್ಲಿ ನಕ್ಷೆ ಮಂಜೂರಾದ ತಕ್ಷಣ ವಿವರಗಳು ಸದರಿಯವರುಗಳ Console ಗಳಲ್ಲಿ ಲಭ್ಯವಾಗುವಂತೆ ವ್ಯವಸ್ಥೆ ಕಲ್ಪಿಸಲು ಕ್ರಮ ಕೈಗೊಳ್ಳಲಾಗುತ್ತಿರುತ್ತದೆ.

ಉಲ್ಲೇಖ (5) ಆದೇಶದಲ್ಲಿ ವಿವಿಧ ಅಧಿಕಾರಿಗಳಿಗೆ ನಕ್ಷೆ ಮಂಜೂರಾತಿ ಅಧಿಕಾರವನ್ನು ಪ್ರತ್ಯಾಯೋಜಿಸಿರುವುದರಿಂದ ಮತ್ತು ಉಲ್ಲೇಖ (4) ಘನ ಉಚ್ಚ ನ್ಯಾಯಾಲಯದ ಆದೇಶ ಮತ್ತು ನಿರ್ದೇಶನದ ಹಿನ್ನಲೆಯಲ್ಲಿ ಈ ಸುತ್ತೋಲೆಯನ್ನು ಹೊರಡಿಲಾಗಿರುತ್ತದೆ. ಈ ಮೂಲಕ ಉಲ್ಲೇಖ (1), (2) & (3) ರಲ್ಲಿ ಈ ಹಿಂದೆ ಹೊರಡಿಸಲಾಗಿದ್ದ ಸುತ್ತೋಲೆಯನ್ನು ಹಿಂಪಡೆಯಲಾಗಿದೆ.

ಅನಧಿಕೃತ ಕಟ್ಟಡಗಳ ನಿರ್ಮಾಣಗಳಿಗೆ ಸಂಬಂಧಪಟ್ಟಂತೆ, ಒಟ್ಟಾರೆಯಾಗಿ ಅನಧಿಕೃತ ನಿರ್ಮಾಣಗಳನ್ನು ಮೂರು ವರ್ಗಗಳಾಗಿ ವಿಂಗಡಿಸಬಹುದಾಗಿದೆ ಅವುಗಳು ಈ ಕೆಳಕಂಡಂತಿರುತ್ತದೆ.

I. ನಕ್ಷೆ ಮಂಜೂರಾತಿ ಪಡೆದು ನಕ್ಷೆ ಉಲ್ಲಂಘನೆ ಮಾಡಿ ನಿರ್ಮಾಣವಾಗುವ ಕಟ್ಟಡಗಳು (ಸ್ವಾಧೀನಾನುಭವ ಪ್ರಮಾಣಪತ್ರ ಪಡೆಯುವವರೆವಿಗೂ)
II. ಸ್ವಾಧೀನಾನುಭವ ಪ್ರಮಾಣಪತ್ರ ಪಡೆದ ನಂತರ, ನಕ್ಷೆ ಉಲ್ಲಂಘನೆ ಮಾಡಿ ಹೆಚ್ಚುವರಿಯಾಗಿ / ವ್ಯತಿರಿಕ್ತವಾಗಿ ನಿರ್ಮಾಣವಾಗುವ ಕಟ್ಟಡಗಳು
III. ನಕ್ಷೆ ಮಂಜೂರಾತಿ ಪಡೆಯದೇ ಅನಧಿಕೃತವಾಗಿ ನಿರ್ಮಾಣವಾಗುವ ಕಟ್ಟಡಗಳು

ಮೇಲ್ಕಂಡ ವರ್ಗಗಳಲ್ಲಿ ತಿಳಿಸಿರುವಂತೆ ಮಂಜೂರಾತಿ ನಕ್ಷೆ ಉಲ್ಲಂಘನೆ ಅಥವಾ ಅನಧಿಕೃತ ನಿರ್ಮಾಣವನ್ನು ತಡೆಯುವ ಸಂಬಂಧ ಪಾಲಿಕೆಯ ವಿವಿಧ ಅಧಿಕಾರಿಗಳು ಈ ಕೆಳಕಂಡಂತೆ ಕರ್ತವ್ಯ ನಿರ್ವಹಿಸಲು ಆದೇಶಿಸಿದೆ.

ಪ್ರವರ್ಗ– I.

ನಕ್ಷೆ ಮಂಜೂರಾತಿ ಪಡೆದು ನಕ್ಷೆ ಉಲ್ಲಂಘನೆ ಮಾಡಿ ನಿರ್ಮಾಣವಾಗುವ ಕಟ್ಟಡಗಳು (ಕಟ್ಟಡ ನಿರ್ಮಾಣ ಪೂರ್ಣಗೊಂಡು ಕಟ್ಟಡಕ್ಕೆ ಸ್ವಾಧೀನಾನುಭವ ಪ್ರಮಾಣಪತ್ರ ಪಡೆಯುವವರೆವಿಗೂ)

- ನಕ್ಷೆ ಮಂಜೂರಾತಿ ನೀಡಿದ ನಂತರ ನಡುಜಾಗಗಳನ್ನು ಬಿಟ್ಟು ತಳಪಾಯದ ಗಡಿರೇಖೆಯನ್ನು (Building Plinth Line) ಅನ್ನು ಗುರುತು ಮಾಡಿಕೊಡುವ ಸಂಬಂಧ ಕೇಂದ್ರ ಹಾಗೂ ವಲಯ ಕಛೇರಿಯಲ್ಲಿ ಈ ಕೆಳಕಂಡಂತೆ ಕ್ರಮ ಕೈಗೊಳ್ಳುವುದು.
  - i) ಕೇಂದ್ರ ಕಛೇರಿಯಲ್ಲಿ ಮಂಜೂರಾದ ನಕ್ಷೆಗಳಿಗೆ ನಕ್ಷೆ ಮಂಜೂರಾತಿ ದಿನದಿಂದ 30 ದಿನದ ಒಳಗೆ ನಿಗಧಿಪಡಿಸಿದ ದಿನದಂದು (ನಕ್ಷೆ ಮಂಜೂರಾತಿ ಸಂದರ್ಭದಲ್ಲಿಯೇ ನಿಗಧಿಪಡಿಸುವುದು) ಕೇಂದ್ರ ಕಛೇರಿಯ ಸಹಾಯಕ ನಿರ್ದೇಶಕರುಗಳು ಕಟ್ಟಡ ಮಾಲೀಕರು / ಆತನ ಪ್ರತಿನಿಧಿಗಳ ಸಮ್ಮುಖದಲ್ಲಿ Building Plinth Line ಅನ್ನು ಗುರುತು ಮಾಡಿಕೊಡುವುದು. ಅದನ್ನು ಸಂಬಂಧಪಟ್ಟ ನಕ್ಷೆ ಮಂಜೂರಾತಿಯ ಕಡತದಲ್ಲಿ ಅಂತರ್ಜಾಲ ತಂತ್ರಾಂಶದಲ್ಲಿ (ಆನ್‌ಲೈನ್‌ನಲ್ಲಿ) GPS Coordinate (ನಿವೇಶನದ ಮಧ್ಯ ಮತ್ತು ನಾಲ್ಕು ಮೂಲೆಯಲ್ಲಿ) ಹಾಗೂ ಛಾಯಾಚಿತ್ರದೊಂದಿಗೆ ದಾಖಲಿಸುವುದು. ಈ ಪ್ರಕ್ರಿಯೆ ಸಮರ್ಪಕವಾಗಿರುವ ಬಗ್ಗೆ ಉಪ ನಿರ್ದೇಶಕರು ನಿಗಾವಹಿಸಿ ಅದನ್ನು ದೃಢೀಕರಿಸಿಕೊಂಡು ಕೇಂದ್ರ ಕಛೇರಿಯ ಜಂಟಿ ನಿರ್ದೇಶಕರ ಗಮನಕ್ಕೆ ತರುವುದು.
  - ii) ವಲಯ ಕಛೇರಿಯಲ್ಲಿ ಮಂಜೂರಾದ ನಕ್ಷೆಗಳಿಗೆ ಸಂಬಂಧಪಟ್ಟ ವಾರ್ಡ್‌ನಲ್ಲಿ ಕಾರ್ಯ ನಿರ್ವಹಿಸುವ ಸಹಾಯಕ ಅಭಿಯಂತರರು / ಕಿರಿಯ ಅಭಿಯಂತರರುಗಳು, ಸಹಾಯಕ ಕಾರ್ಯಪಾಲಕ ಅಭಿಯಂತರರ console ಗಳಲ್ಲಿ ಲಭ್ಯವಾಗುವ ಮಂಜೂರಾದ ನಕ್ಷೆಗಳ ವಿವರಗಳನ್ನು ಪಡೆದು, ನಕ್ಷೆ ಮಂಜೂರಾದ 30 ದಿನದ ಒಳಗೆ ನಿಗಧಿಪಡಿಸಿದ ದಿನದಂದು (ನಕ್ಷೆ ಮಂಜೂರಾತಿ ಸಂದರ್ಭದಲ್ಲಿಯೇ ನಿಗಧಿಪಡಿಸುವುದು) ಸಂಬಂಧಪಟ್ಟ ಕಟ್ಟಡ ಮಾಲೀಕರು / ನಿರ್ಮಾಣದಾರರು / ಆತನ ಪ್ರತಿನಿಧಿಗಳ ಸಮ್ಮುಖದಲ್ಲಿ Building Plinth Line ಅನ್ನು ಗುರುತು ಮಾಡಿಕೊಡುವುದು ಅದನ್ನು ಸಂಬಂಧಪಟ್ಟ ನಕ್ಷೆ ಮಂಜೂರಾತಿಯ ಕಡತದಲ್ಲಿ ಅಂತರ್ಜಾಲ ತಂತ್ರಾಂಶದಲ್ಲಿ (ಆನ್‌ಲೈನ್‌ನಲ್ಲಿ) GPS Coordinate (ನಿವೇಶನದ ಮಧ್ಯ ಮತ್ತು ನಾಲ್ಕು ಮೂಲೆಯಲ್ಲಿ) ಹಾಗೂ ಛಾಯಾಚಿತ್ರದೊಂದಿಗೆ ದಾಖಲಿಸುವುದು. ಈ ಸಂಬಂಧ ಕ್ರಮ ಕೈಗೊಂಡಿರುವ ಅಂಶವನ್ನು ಸಂಬಂಧಪಟ್ಟ ವಲಯದ ಸಹಾಯಕ ನಿರ್ದೇಶಕರು ದೃಢೀಕರಿಸಿಕೊಂಡು ಅದನ್ನು ಜಂಟಿ ನಿರ್ದೇಶಕರು / ಮುಖ್ಯ ಅಭಿಯಂತರರು (ಜಂಟಿ ನಿರ್ದೇಶಕರ ಅನುಪಸ್ಥಿತಿಯಲ್ಲಿ) ರವರ ಗಮನಕ್ಕೆ ತರುವುದು.
- Plinth Line ಗುರುತಿಸಿದ ನಂತರ ಕಟ್ಟಡದ ತಳಪಾಯದ ಕಾಮಗಾರಿಯು ಅನುಮೋದಿತ ನಕ್ಷೆಯಂತೆ ನಿರ್ಮಾಣವಾಗುತ್ತಿರುವ ಬಗ್ಗೆ ದೃಢೀಕರಿಸಿಕೊಳ್ಳುವ ಬಗ್ಗೆ ಸಂಬಂಧಪಟ್ಟ ವಲಯ ಹಾಗೂ ಕೇಂದ್ರ ಕಛೇರಿಯಲ್ಲಿ ಈ ಕೆಳಕಂಡಂತೆ ಕ್ರಮ ಕೈಗೊಳ್ಳುವುದು.
  - i) ಕೇಂದ್ರ ಕಛೇರಿಯಲ್ಲಿ Plinth Line ಅನ್ನು ಗುರುತಿದ ನಂತರ ಕಾಲಕಾಲಕ್ಕೆ ಕಿರಿಯ / ಸಹಾಯಕ ಅಭಿಯಂತರರು / ನಗರ ಯೋಜಕರು / ಸಹಾಯಕ ನಿರ್ದೇಶಕರು ಪರಿಶೀಲನೆ ನಡೆಸಿ ಕಟ್ಟಡದ ತಳಪಾಯದ ಕಾಮಗಾರಿ ಅನುಮೋದಿತ ನಕ್ಷೆಯಂತೆ ನಿರ್ಮಾಣವಾಗುತ್ತಿರುವ ಬಗ್ಗೆ ದೃಢೀಕರಿಸಿಕೊಂಡು ಅದನ್ನು ನಕ್ಷೆ ಮಂಜೂರಾತಿ ನೀಡಿರುವ ಕಡತದಲ್ಲಿ (ಆನ್‌ಲೈನ್‌ನಲ್ಲಿ) GPS Coordinate (ನಿವೇಶನದ ಮಧ್ಯ ಮತ್ತು ನಾಲ್ಕು ಮೂಲೆಯಲ್ಲಿ) ಹಾಗೂ ಛಾಯಾಚಿತ್ರಗಳೊಂದಿಗೆ 60 ದಿನಗಳೊಳಗೆ ದಾಖಲಿಸುವುದು. ಈ ಪ್ರಕ್ರಿಯೆ ಸಮರ್ಪಕತೆಯ ಬಗ್ಗೆ ಉಪ ನಿರ್ದೇಶಕರು ನಿಗಾವಹಿಸಿ ಅದನ್ನು ದೃಢೀಕರಿಸಿಕೊಂಡು ಜಂಟಿ ನಿರ್ದೇಶಕರ ಗಮನಕ್ಕೆ ತರುವುದು.
  - ii) ವಲಯ ಕಛೇರಿಯಲ್ಲಿ Plinth Line ಗುರುತಿಸಿದ ನಂತರ ಕಾಲಕಾಲಕ್ಕೆ ವಲಯ ಕಛೇರಿಯಲ್ಲಿ ನಗರ ಯೋಜನೆ ಶಾಖೆಯಲ್ಲಿ ಕಾರ್ಯ ನಿರ್ವಹಿಸುವ ಕಿರಿಯ / ಸಹಾಯಕ ಅಭಿಯಂತರರು/ ನಗರ ಯೋಜಕರು / ಸಹಾಯಕ ನಿರ್ದೇಶಕರುಗಳು ಪರಿಶೀಲನೆ ನಡೆಸಿ ಕಟ್ಟಡದ ತಳಪಾಯದ ಕಾಮಗಾರಿ ಅನುಮೋದಿತ ನಕ್ಷೆಯಂತೆ ನಡೆಯುತ್ತಿರುವ ಬಗ್ಗೆ ದೃಢೀಕರಿಸಿಕೊಂಡು ಅದನ್ನು ನಕ್ಷೆ ಮಂಜೂರಾತಿ ನೀಡಿರುವ ಕಡತದಲ್ಲಿ (ಆನ್‌ಲೈನ್‌ನಲ್ಲಿ) GPS Coordinate (ನಿವೇಶನದ ಮಧ್ಯ ಮತ್ತು ನಾಲ್ಕು ಮೂಲೆಯಲ್ಲಿ) ಹಾಗೂ ಛಾಯಾಚಿತ್ರಗಳೊಂದಿಗೆ 30 ದಿನಗಳೊಳಗೆ ದಾಖಲಿಸಿರುವುದು. ಇದನ್ನು ಸಹಾಯಕ ನಿರ್ದೇಶಕರು ನಿಗಾ ವಹಿಸಿ ಈ ಪ್ರಕ್ರಿಯೆ ಕೈಗೊಂಡಿರುವ ಬಗ್ಗೆ ದೃಢೀಕರಿಸಿಕೊಂಡು ಜಂಟಿ ನಿರ್ದೇಶಕರು / ಮುಖ್ಯ ಅಭಿಯಂತರರು (ಜಂಟಿ ನಿರ್ದೇಶಕರ ಅನುಪಸ್ಥಿತಿಯಲ್ಲಿ) ರವರ ಗಮನಕ್ಕೆ ತರುವುದು.

    ಕಟ್ಟಡ ನಿರ್ಮಾಣದಲ್ಲಿ ಉಲ್ಲಂಘನೆ ಕಂಡು ಬಂದಲ್ಲಿ; ಕೇಂದ್ರ / ವಲಯ ಕಛೇರಿಯಲ್ಲಿ ಮಂಜೂರಾದ ನಕ್ಷೆಗಳಿಗೆ ಸಂಬಂಧಪಟ್ಟ ಸಹಾಯಕ ನಿರ್ದೇಶಕರು ಪರಿಶೀಲಿಸಿ ಉಪ ನಿರ್ದೇಶಕರೊಂದಿಗೆ ದೃಢೀಕರಿಸಿಕೊಂಡು ಜಂಟಿ ನಿರ್ದೇಶಕರ ಗಮನಕ್ಕೆ ತರುವುದು.

    ಒಂದುವೇಳೆ, ಮೇಲ್ಕಂಡಂತೆ ನಿಗಧಿತ ಸಮಯದಲ್ಲಿ Plinth Line ಗುರುತಿಸಲು ಹಾಗೂ ತಳಪಾಯದ ಕಾಮಗಾರಿ ಅನುಮೋದಿತ ನಕ್ಷೆಯಂತೆ ನಡೆಯುತ್ತಿರುವ ಬಗ್ಗೆ ದೃಢೀಕರಿಸಿಕೊಂಡು ಆ ಛಾಯಾಚಿತ್ರಗಳನ್ನು ಅಂತರ್ಜಾಲ ತಂತ್ರಾಂಶದಲ್ಲಿ (ಆನ್‌ಲೈನ್‌ನಲ್ಲಿ) GPS Coordinate (ನಿವೇಶನದ ಮಧ್ಯ ಮತ್ತು ನಾಲ್ಕು ಮೂಲೆಯಲ್ಲಿ) ಗಳೊಂದಿಗೆ upload ಮಾಡಲು ವಿಫಲರಾಗುವ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು / ಸಿಬ್ಬಂದಿಗಳ ವಿರುದ್ದ ಕೆ.ಎಂ.ಸಿ. ಕಾಯ್ದೆ ಕಲಂ 321(ಬಿ) ರ ಅಡಿಯಲ್ಲಿ ಪ್ರಸ್ತುತ ಬಿಬಿಎಂಪಿ ಕಾಯ್ದೆ–2020 ರ ಕಲಂ 252 ರ ಅಡಿಯಲ್ಲಿ ಅಗತ್ಯ ಶಿಸ್ತುಕ್ರಮ ಕೈಗೊಳ್ಳಲಾಗುವುದು.
- ಕೇಂದ್ರ ಕಛೇರಿ ಹಾಗೂ ವಲಯ ಕಛೇರಿ ವ್ಯಾಪ್ತಿಗಳಲ್ಲಿ ಕಟ್ಟಡ ನಕ್ಷೆ ಮಂಜೂರಾತಿ ನೀಡಿರುವ ಕಟ್ಟಡಗಳ ನಿರ್ಮಾಣ ಪ್ರಾರಂಭಿಸಿದ ನಂತರ, ನಿರ್ಮಾಣವಾಗುತ್ತಿರುವ ಕಟ್ಟಡಗಳ ಬಗ್ಗೆ ನಕ್ಷೆ ಮಂಜೂರಾತಿ ನೀಡಿದ ಸಂಬಂಧಪಟ್ಟ ಕಛೇರಿಯಲ್ಲಿ ವಲಯ ಕಛೇರಿಯ ನಗರ ಯೋಜನೆ ಶಾಖೆ ಮತ್ತು ಕೇಂದ್ರ ಕಛೇರಿಯ ನಗರ ಯೋಜನೆ ಶಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನಗರ ಯೋಜಕರು / ಸಹಾಯಕ ಅಭಿಯಂತರರು ಹಾಗೂ ಸಹಾಯಕ ನಿರ್ದೇಶಕರು ಕಟ್ಟಡಗಳ ಮಂಜೂರಾತಿ ನಕ್ಷೆ ಅನುಗುಣವಾಗಿ ನಿರ್ಮಾಣ ಮಾಡುತ್ತಿರುವ ಬಗ್ಗೆ ಕಾಲಕಾಲಕ್ಕೆ ಪರಿಶೀಲನೆ ನಡೆಸಿ ದೃಢೀಕರಿಸಿಕೊಳ್ಳತಕ್ಕದ್ದು.
- ಮೇಲ್ಕಂಡಂತೆ ಪರಿಶೀಲನೆಗಳು ದೃಢೀಕರಣಗಳ ಹೊರತಾಗಿಯೂ ಮಂಜೂರಾತಿ ನೀಡಿರುವ ನಕ್ಷೆಗೆ ವ್ಯತಿರಿಕ್ತವಾಗಿ ಕಟ್ಟಡ ನಿರ್ಮಿಸುತ್ತಿರುವುದು ಕಂಡು ಬಂದಲ್ಲಿ, ಬಿಬಿಎಂಪಿ ಕಾಯ್ದೆ – 2020 ಕಲಂ 248 ರ ಅಡಿಯಲ್ಲಿ ಅಧಿಕಾರ ಪ್ರತ್ಯಾಯೋಜಿತವಾದ, ನಕ್ಷೆ ಮಂಜೂರಾತಿ / ಪರವಾನಗಿ ನೀಡಿಕೆಯಲ್ಲಿ ಅವರ ಕಾರ್ಯ ವ್ಯಾಪ್ತಿಗೊಳಪಡುವ ಸಹಾಯಕ ನಿರ್ದೇಶಕರುಗಳು ಅಂತಹ ಕಟ್ಟಡಗಳಿಗೆ ಕೂಡಲೇ ಕಟ್ಟಡ ನಿರ್ಮಾಣವನ್ನು ಸ್ಥಗಿತಗೊಳಿಸಲು ಬಿಬಿಎಂಪಿ ಕಾಯ್ದೆ – 2020 ರ ಕಲಂ 248 (1) ರಡಿಯಲ್ಲಿ ಕ್ರಮವಹಿಸತಕ್ಕದ್ದು. ಬಿಬಿಎಂಪಿ ಕಾಯ್ದೆ 248 (2) & (3) ರಡಿಯಲ್ಲಿ ತಾತ್ಕಾಲಿಕ ಮತ್ತು ಸ್ಥಿರೀಕರಣ (PO/CO) ಆದೇಶವನ್ನು ಜಾರಿ ಮಾಡಿ ಈ ಪ್ರಕ್ರಿಯೆಗಳನ್ನು 248 (1) ರಡಿಯಲ್ಲಿ ನೋಟಿಸ್ ನೀಡಿದ 60 ದಿನಗಳೊಳಗಾಗಿ ಅಂತಿಮಗೊಳಿಸತಕ್ಕದ್ದು.
- ಬಿಬಿಎಂಪಿ ಕಾಯ್ದೆ–2020 ಕಲಂ 248(3) ರ ಸ್ಥಿರಿಕರಣ ಆದೇಶದಲ್ಲಿ, ಕಲಂ 356(1) ನ್ನು ಉಲ್ಲೇಖಿಸಿ, ಒಂದು ಪಕ್ಷ ಸ್ಥಿರೀಕರಣ ಆದೇಶ ಜಾರಿಯಾದ ದಿನಾಂಕದಿಂದ 30ದಿನಗಳ ಒಳಗಾಗಿ (ಬೃಹತ್ ಕಟ್ಟಡಗಳಿಗೆ ಸಂದರ್ಭಾನುಸಾರ ಸಮಯ ನಿಗಧಿಪಡಿಸಿ) ಕಟ್ಟಡ ಮಾಲೀಕರು ಅಥವಾ ಸ್ವಾಧೀನದಾರರು ಸ್ಥಿರೀಕರಣ ಆದೇಶದಂತೆ ಅನಧಿಕೃತ ಕಟ್ಟಡ/ಕಟ್ಟಡದ ವ್ಯತಿರಿಕ್ತ ಭಾಗವನ್ನು ತೆರವುಗೊಳಿಸಲು ತಿಳಿಸತಕ್ಕದ್ದು. ಒಂದು ಪಕ್ಷ ಆ ಅವಧಿಯಲ್ಲಿ ತೆರವುಗೊಳಿಸದೇ ಇದ್ದಲ್ಲಿ, ಬಿಬಿಎಂಪಿ ಕಾಯ್ದೆ–2020 ಕಲಂ 356(2)ರ ಅಡಿಯಲ್ಲಿ ಕ್ರಮ ಕೈಗೊಂಡು ಕಟ್ಟಡವನ್ನು/ವ್ಯತಿರಿಕ್ತ ಭಾಗವನ್ನು ತೆರವುಗೊಳಿಸಲಾಗುವುದು ಮತ್ತು ಅದಕ್ಕೆ ತಗಲುವ ಖರ್ಚನ್ನು ಕಟ್ಟಡದ ಮಾಲೀಕರು/ಸ್ವಾಧೀನದಾರರಿಂದ ವಸೂಲಿಗಾಗಿ ಕ್ರಮಕೈಗೊಂಡು ವೆಚ್ಚದ ಹಣವನ್ನು ವಸೂಲು ಮಾಡಲಾಗುವುದೆಂದು ತಿಳಿಸತಕ್ಕದ್ದು.
- ತಾತ್ಕಾಲಿಕ ಮತ್ತು ಸ್ಥಿರೀಕರಣ ಆದೇಶಗಳಿಗೆ ಸಕ್ಷಮ ಮೇಲ್ಮನವಿ ಪ್ರಾಧಿಕಾರ/ನ್ಯಾಯ ಮಂಡಳಿ ಅಥವಾ ಇನ್ನಾವುದೇ ನ್ಯಾಯಾಲಯಗಳಲ್ಲಿ ಪ್ರಕರಣ ದಾಖಲಾಗಿ ತಡೆಯಾಜ್ಞೆ ನೀಡಿರುವ ಪ್ರಕರಣಗಳನ್ನು ಹೊರತುಪಡಿಸಿ, ಕೆ.ಎಂ.ಸಿ. ಕಾಯ್ದೆ ಕಲಂ 321(3), ಪ್ರಸ್ತುತ ಬಿಬಿಎಂಪಿ ಕಾಯ್ದೆ–2020 ರ ಕಲಂ 248(3) ರ ಅಡಿಯಲ್ಲಿ ಸ್ಥಿರೀಕರಣ ಆದೇಶದಂತೆ ವಲಯ ಕಛೇರಿಗಳು ಮತ್ತು ಕೇಂದ್ರ ಕಛೇರಿಗಳಲ್ಲಿ ಮೇಲ್ಕಂಡ ಕಂಡಿಕೆಗಳಲ್ಲಿ ತಿಳಿಸಿರುವಂತೆ ಬಿಬಿಎಂಪಿ ಕಾಯ್ದೆ ಕಲಂ 356 ರಂತೆ ಅಧಿಕಾರ ಪ್ರತ್ಯಾಯೋಜಿತ ಅಧಿಕಾರಿಗಳಾದ ವಲಯ ಕಛೇರಿ ಮತ್ತು ಕೇಂದ್ರ ಕಛೇರಿಯ ನಗರ ಯೋಜನಾ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ನಗರ ಯೋಜಕರು / ಸಹಾಯಕ ಅಭಿಯಂತರರು / ಕಿರಿಯ ಅಭಿಯಂತರರು / ಸಹಾಯಕ ನಿರ್ದೇಶಕರು / ಉಪ ನಿರ್ದೇಶಕರು / ಜಂಟಿ ನಿರ್ದೇಶಕರು / ಮುಖ್ಯ ಅಭಿಯಂತರರು (ವಲಯ ಕಛೇರಿಯ ನಗರ ಯೋಜನೆಯಲ್ಲಿ ಜಂಟಿ ನಿರ್ದೇಶಕರ ಅನುಪಸ್ಥಿತಿಯಲ್ಲಿ) / ಉಪ ನಿರ್ದೇಶಕರುಗಳು (ಕೇಂದ್ರ ಕಛೇರಿಯಲ್ಲಿ) ಕಟ್ಟಡದ ಅನಧಿಕೃತ ನಿರ್ಮಾಣದ ಭಾಗವನ್ನು ತೆರವುಗೊಳಿಸಲು ಕ್ರಮ ಜರುಗಿಸತಕ್ಕದ್ದು.
- ಬಿಬಿಎಂಪಿ ಕಾಯ್ದೆ 248 (1), (2) & (3) ರಡಿಯಲ್ಲಿ ಕ್ರಮ ವಹಿಸಿದ ನಂತರದಲ್ಲಿ ವಲಯ ಕಛೇರಿಗಳಲ್ಲಿ ನಗರ ಯೋಜಕರು, ಸಹಾಯಕ ನಿರ್ದೇಶಕರು ಸಂಬಂಧಪಟ್ಟ ನಗರ ಯೋಜನೆ ಜಂಟಿ ನಿರ್ದೇಶಕರ / ಮುಖ್ಯ ಅಭಿಯಂತರರ (ಜಂಟಿ ನಿರ್ದೇಶಕರ ಅನುಪಸ್ಥಿತಿಯಲ್ಲಿ) ಅನುಮೋದನೆಯೊಂದಿಗೆ ಹಾಗೂ ಕೇಂದ್ರ ಕಛೇರಿಯಲ್ಲಿ ಸಂಬಂಧಪಟ್ಟ ಉಪ ನಿರ್ದೇಶಕರುಗಳ ಅನುಮೋದನೆಯೊಂದಿಗೆ (ಬಿಬಿಎಂಪಿ ಕಾಯ್ದೆ ಕಲಂ 356 ರಲ್ಲಿ ಅಧಿಕಾರ ಪ್ರತ್ಯಾಯೋಜಿತ ಅಧಿಕಾರಿಗಳು) ಬಿಬಿಎಂಪಿ ಕಾಯ್ದೆ 2020 ಸೆಕ್ಷನ್ 356 ರನ್ವಯ ಉಲ್ಲಂಘನೆಯ ಕಟ್ಟಡದ ಭಾಗಗಳನ್ನು ತೆರವುಗೊಳಿಸಲು 248 (3) ರಡಿಯಲ್ಲಿ ಆದೇಶ ನೀಡಿದ 30 ದಿನಗಳೊಳಗಾಗಿ ಕ್ರಮ ಕೈಗೊಳ್ಳುವುದು.
- ಬಿಬಿಎಂಪಿ ಕಾಯ್ದೆಯಡಿಯಲ್ಲಿ ಪಿ.ಓ / ಸಿ.ಓ. ನೀಡಿದ ನಂತರ ಕಾಯ್ದೆಯ 356 ರಡಿಯಲ್ಲಿ ಕಟ್ಟಡವನ್ನು ತೆರವುಗೊಳಿಸಲು ಮೇಲ್ಕಂಡ ಅಧಿಕಾರಿಗಳು ವಲಯ ಕಛೇರಿಯ ಮುಖ್ಯ ಅಭಿಯಂತರರ ಸಹಕಾರ ಪಡೆಯುವುದು. ಇದು ಮೇಲೆ ವಿವರಿಸಿದ ಅಧಿಕಾರಿಗಳ (ನಗರ ಯೋಜಕರು / ಸಹಾಯಕ ಅಭಿಯಂತರರು / ಸಹಾಯಕ ನಿರ್ದೇಶಕರು / ಉಪ ನಿರ್ದೇಶಕರು / ಜಂಟಿ ನಿರ್ದೇಶಕರು) ಗಳ ಜಂಟಿ ಜವಾಬ್ದಾರಿಯಾಗಿರುತ್ತದೆ.

ಪ್ರವರ್ಗ– II

ಕಟ್ಟಡಕ್ಕೆ ಸ್ವಾಧೀನಾನುಭವ ಪ್ರಮಾಣಪತ್ರ ಪಡೆದ ನಂತರ, ನಕ್ಷೆ ಉಲ್ಲಂಘನೆ ಮಾಡಿ ಹೆಚ್ಚುವರಿಯಾಗಿ / ವ್ಯತಿರಿಕ್ತವಾಗಿ ನಿರ್ಮಾಣವಾಗುವ ಕಟ್ಟಡಗಳು

ಪ್ರವರ್ಗ– III

ನಕ್ಷೆ ಮಂಜೂರಾತಿ ಪಡೆಯದೇ ಅನಧಿಕೃತವಾಗಿ ನಿರ್ಮಾಣವಾಗುವ ಕಟ್ಟಡಗಳು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ನಿರ್ಮಾಣ ಮಾಡುವ ಪ್ರಕರಣಗಳೂ ಕೂಡ ಬಹಳ ಹೆಚ್ಚಾಗುತ್ತಿದ್ದು, ಇದರಿಂದ ನಗರದ ಯೋಜಿತ ಬೆಳವಣಿಗೆಗೆ ತೊಂದರೆಯಾಗುವುದಲ್ಲದೇ, ರಾಜಕಾಲುವೆಗಳ ಒತ್ತುವರಿ, ಸರ್ಕಾರಿ ಜಾಗಗಳ ಒತ್ತುವರಿಯಾಗುವುದಲ್ಲದೇ, ಪಾಲಿಕೆಯ ಆದಾಯಕ್ಕೆ ಧಕ್ಕೆಯಾಗುತ್ತಿರುತ್ತದೆ.ಅನಧಿಕೃತ ಕಟ್ಟಡಗಳ ನಿರ್ಮಾಣಕ್ಕೆ ಸಂಬಂಧಪಟ್ಟಂತೆ ವಾರ್ಡ್ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಬಂಧಪಟ್ಟ ಸಹಾಯಕ / ಕಿರಿಯ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರ ಜವಬ್ದಾರಿ ಹೆಚ್ಚಿರುತ್ತದೆ.ವಾರ್ಡ್‌ಗಳಲ್ಲಿ ಕಾರ್ಯ ನಿರ್ವಹಿಸುವ ಸಹಾಯಕ ಅಭಿಯಂತರರು / ಕಿರಿಯ ಅಭಿಯಂತರರು, ಉಪವಿಭಾಗಗಳಲ್ಲಿ ನಿರ್ವಹಿಸುವ ಸಹಾಯಕ ಕಾರ್ಯಪಾಲಕ ಅಭಿಯಂತರರ ಕಾರ್ಯವ್ಯಾಪ್ತಿ ಕಡಿಮೆ ಇರುವುದರಿಂದ, ಇವರುಗಳು ಅನಧಿಕೃತ ಕಟ್ಟಡಗಳ ನಿರ್ಮಾಣವನ್ನು ತಡೆಯುವಲ್ಲಿ ಹೆಚ್ಚು ಪರಿಣಾಮಾಕಾರಿಯಾಗಿ ಕಾರ್ಯನಿರ್ವಹಿಸ ಬಹುದಾಗಿರುತ್ತದೆ. ಈ ಹಿನ್ನಲೆಯಲ್ಲಿ ಮೇಲ್ಕಂಡ ಎರಡೂ ಆದೇಶಗಳನ್ನು ಒಟ್ಟುಗೂಡಿಸಿ (ಪ್ರವರ್ಗ (II) & (III))ಮೇಲ್ಕಂಡ ಎರಡೂ ಪ್ರವರ್ಗದಡಿಯಲ್ಲಿ ಬರುವ ಉಲ್ಲಂಘನೆಗಳನ್ನು ತಡೆಯುವ ನಿಟ್ಟಿನಲ್ಲಿ ಈ ಕೆಳಕಂಡಂತೆ ಕಾರ್ಯನಿರ್ವಹಿಸಲು ಆದೇಶಿಸಿದೆ.

ಯಾವುದೇ ಕಟ್ಟಡ ನಿರ್ಮಾಣಕ್ಕೆ ಮಂಜೂರಾತಿ ನೀಡಿದ ನಂತರ ಅವುಗಳಿಗೆ ಸ್ವಾಧೀನಾನುಭವ ಪ್ರಮಾಣಪತ್ರ ನೀಡುವವರೆವಿಗೂ ಉಲ್ಲಂಘನೆಯಾದಲ್ಲಿ ಅವುಗಳನ್ನು ಸಕ್ರಮಗೊಳಿಸುವ / ತೆರವುಗೊಳಿಸುವವರೆವಿಗೂ ಅವುಗಳ ಮೇಲ್ವಿಚಾರಣೆ / ಜವಾಬ್ದಾರಿಯು ನಕ್ಷೆ ಮಂಜೂರಾತಿ ನೀಡಿದ ಸಂಬಂಧಪಟ್ಟ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ನಗರ ಯೋಜಕರು / ಸಹಾಯಕ ಅಭಿಯಂತರರು (ನಗರ ಯೋಜನೆ ಶಾಖೆಯಲ್ಲಿ ಕಾರ್ಯ ನಿರ್ವಹಿಸುವ) / ನಗರ ಯೋಜನೆ ಸಹಾಯಕ ನಿರ್ದೇಶಕರುಗಳದ್ದಾಗಿರುತ್ತದೆ. ಸ್ವಾಧೀನಾನುಭವ ಪ್ರಮಾಣಪತ್ರ ನೀಡಿದ ನಂತರ ಉಲ್ಲಂಘನೆಯಾದಲ್ಲಿ ಅದು ಸಂಬಂಧಪಟ್ಟ ಉಪ–ವಿಭಾಗದ ಸಹಾಯಕ / ಕಿರಿಯ ಅಭಿಯಂತರರು ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರುಗಳದ್ದಾಗಿರುತ್ತದೆ.

- ಆನ್‌ಲೈನ್ ವ್ಯವಸ್ಥೆಯಲ್ಲಿ ಮಂಜೂರಾದ ನಕ್ಷೆಗಳನ್ನು ಪಡೆಯಲು ಪ್ರತಿನಿತ್ಯ ಸಹಾಯಕ ಕಾರ್ಯಪಾಲಕ ಅಭಿಯಂತರರುಗಳು ಅವರುಗಳ ಆನ್‌ಲೈನ್ ವ್ಯವಸ್ಥೆಯಲ್ಲಿ ಹಿಂದಿನ ಕಂಡಿಕೆಯಲ್ಲಿ ವಿವರಿಸಲಾದಂತೆ ಸೃಜಿಸಲಾದ Console ಗಳನ್ನು ಪ್ರತಿನಿತ್ಯ ಪರಿಶೀಲಿಸಿ ಅವರುಗಳ ವ್ಯಾಪ್ತಿಯಲ್ಲಿ ಮಂಜೂರಾದ ನಕ್ಷೆಗಳ ವಿವರಗಳನ್ನು ಪಡೆಯುವುದು.
- ಸದರಿ ಸಹಾಯಕ ಕಾರ್ಯಪಾಲಕ ಅಭಿಯಂತರರ ವ್ಯಾಪ್ತಿಯಲ್ಲಿ ನಿರ್ಮಾಣವಾಗುವ ಕಟ್ಟಡಗಳ ಬಗ್ಗೆ ಸಂಬಂಧಪಟ್ಟ ಕಿರಿಯ / ಸಹಾಯಕ ಅಭಿಯಂತರರು / ಸಹಾಯಕ ಕಾರ್ಯಪಾಲಕ ಅಭಿಯಂತರರುಗಳು ನಿಗಾ ಇಡುವುದು. ಈ ರೀತಿ ನಿರ್ಮಾಣವಾಗುವ ಕಟ್ಟಡಗಳ ಪೈಕಿ ಮಂಜೂರಾತಿ ಪಡೆಯದೇ, ನಿರ್ಮಾಣವಾಗುವ ಕಟ್ಟಡಗಳ ಬಗ್ಗೆ ಬಿಬಿಎಂಪಿ ಕಾಯ್ದೆ–2020 ಕಲಂ 248 (1) ರಡಿಯಲ್ಲಿ ಕ್ರಮವಹಿಸಿ ಕಾಮಗಾರಿಯನ್ನು ಸ್ಥಗಿತಗೊಳಿಸಲು ಆದೇಶ ನೀಡುವುದು. ಕಾಯ್ದೆಯ 248 (2) & (3) ರಡಿಯಲ್ಲಿ ತಾತ್ಕಾಲಿಕ ಮತ್ತು ಸ್ಥಿರೀಕರಣ (PO / CO) ಆದೇಶವನ್ನು ಜಾರಿ ಮಾಡಿ ಈ ಪ್ರಕ್ರಿಯೆಗಳನ್ನು 60 ದಿನಗಳೊಳಗಾಗಿ ಅಂತಿಮಗೊಳಿಸತಕ್ಕದ್ದು.
- ಬಿಬಿಎಂಪಿ ಕಾಯ್ದೆ–2020 ಕಲಂ 248(3) ರ ಸ್ಥಿರಿಕರಣ ಆದೇಶದಲ್ಲಿ, ಕಲಂ 356(1) ನ್ನು ಉಲ್ಲೇಖಿಸಿ, ಒಂದು ಪಕ್ಷ ಸ್ಥಿರೀಕರಣ ಆದೇಶ ಜಾರಿಯಾದ ದಿನಾಂಕದಿಂದ 30ದಿನಗಳ ಒಳಗಾಗಿ (ಬೃಹತ್ ಕಟ್ಟಡಗಳಿಗೆ ಸಂದರ್ಭಾನುಸಾರ ಸಮಯ ನಿಗಧಿಪಡಿಸಿ) ಕಟ್ಟಡ ಮಾಲೀಕರು ಅಥವಾ ಸ್ವಾಧೀನದಾರರು ಸ್ಥಿರೀಕರಣ ಆದೇಶದಂತೆ ಅನಧಿಕೃತ ಕಟ್ಟಡವನ್ನು ತೆರವುಗೊಳಿಸಲು ತಿಳಿಸತಕ್ಕದ್ದು. ಒಂದು ಪಕ್ಷ ಆ ಅವಧಿಯಲ್ಲಿ ತೆರವುಗೊಳಿಸದೇ ಇದ್ದಲ್ಲಿ, ಬಿಬಿಎಂಪಿ ಕಾಯ್ದೆ–2020 ಕಲಂ 356(2)ರ ಅಡಿಯಲ್ಲಿ ಕ್ರಮ ಕೈಗೊಂಡು ಕಟ್ಟಡವನ್ನು ತೆರವುಗೊಳಿಸಲಾಗುವುದು ಮತ್ತು ಅದಕ್ಕೆ ತಗಲುವ ಖರ್ಚನ್ನು ಕಟ್ಟಡದ ಮಾಲೀಕರು/ಸ್ವಾಧೀನದಾರರಿಂದ ವಸೂಲಿಗಾಗಿ ಕ್ರಮಕೈಗೊಂಡು ವೆಚ್ಚದ ಹಣವನ್ನು ವಸೂಲು ಮಾಡಲಾಗುವುದೆಂದು ತಿಳಿಸತಕ್ಕದ್ದು.
- ತಾತ್ಕಾಲಿಕ ಹಾಗೂ ಸ್ಥಿರೀಕರಣ ಆದೇಶಗಳಿಗೆ ಸಕ್ಷಮ ಮೇಲ್ಮನವಿ ಪ್ರಾಧಿಕಾರ ಹಾಗೂ ಇತರೇ ನ್ಯಾಯಾಲಯಗಳಲ್ಲಿ ಪ್ರಕರಣ ದಾಖಲಾಗಿ, ಬಾಕಿ ಇರುವ ಹಾಗೂ ತಡೆಯಾಜ್ಞೆ ಇರುವ ಪ್ರಕರಣಗಳನ್ನು ಹೊರತುಪಡಿಸಿ ಸಹಾಯಕ ಕಾರ್ಯಪಾಲಕ ಅಭಿಯಂತರರುಗಳು ಸಂಬಂಧಪಟ್ಟ ವಿಭಾಗದ ಕಾರ್ಯಪಾಲಕ ಅಭಿಯಂತರರುಗಳಿಂದ ಕೆ.ಎಂ.ಸಿ. ಕಾಯ್ದೆ ಕಲಂ 462 ಹಾಗೂ ಪ್ರಸ್ತುತ ಬಿಬಿಎಂಪಿ ಕಾಯ್ದೆ – 2020 ರ ಕಲಂ 356 ರಡಿಯಲ್ಲಿ ಸ್ಥಿರೀಕರಣ ಆದೇಶದಂತೆ ಕಟ್ಟಡ ತೆರವುಗೊಳಿಸಲು ಕ್ರಮ ಕೈಗೊಳ್ಳತಕ್ಕದ್ದು.
- ಬಿಬಿಎಂಪಿ ಕಾಯ್ದೆ 248 (1), (2) & (3) ರಡಿಯಲ್ಲಿ PO/CO ನೋಟೀಸ್ ಜಾರಿ ಮಾಡಲು ಕ್ರಮ ವಹಿಸಿದ ನಂತರದಲ್ಲಿ ವಲಯ ಕಛೇರಿಗಳಲ್ಲಿ ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರ ಅನುಮೋದನೆಯೊಂದಿಗೆ ಕಿರಿಯ ಅಭಿಯಂತರರು / ಸಹಾಯಕ ಅಭಿಯಂತರರು / ಸಹಾಯಕ ಕಾರ್ಯಪಾಲಕ ಅಭಿಯಂತರರುಗಳು (ಬಿಬಿಎಂಪಿ ಕಾಯ್ದೆ ಕಲಂ 356 ರಲ್ಲಿ ಅಧಿಕಾರ ಪ್ರತ್ಯಾಯೋಜಿತ ಅಧಿಕಾರಿಗಳು) ಬಿಬಿಎಂಪಿ ಕಾಯ್ದೆ 2020 ಸೆಕ್ಷನ್ 356 ರನ್ವಯ ಉಲ್ಲಂಘನೆಯ ಕಟ್ಟಡದ ಭಾಗವನ್ನು ತೆರವುಗೊಳಿಸಲು ಕ್ರಮ ವಹಿಸುವುದು.
- ಬಿಬಿಎಂಪಿ ಕಾಯ್ದೆಯಡಿಯಲ್ಲಿ ಪಿ.ಓ / ಸಿ.ಓ. ನೀಡಿದ ನಂತರ ಕಾಯ್ದೆಯ 356 ರಡಿಯಲ್ಲಿ ಕಟ್ಟಡವನ್ನು ತೆರವುಗೊಳಿಸಲು ಮೇಲ್ಕಂಡ ಅಧಿಕಾರಿಗಳು ವಲಯ ಕಛೇರಿಯ ಮುಖ್ಯ ಅಭಿಯಂತರರ ಸಹಕಾರ ಪಡೆಯುವುದು. ಇದು ಮೇಲೆ ವಿವರಿಸಿದ ಅಧಿಕಾರಿಗಳ ಕಿರಿಯ / ಸಹಾಯಕ ಅಭಿಯಂತರರು / ಸಹಾಯಕ ಕಾರ್ಯಪಾಲಕ ಅಭಿಯಂತರರು / ಕಾರ್ಯಪಾಲಕ ಅಭಿಯಂತರರುಗಳ ಜಂಟಿ ಜವಾಬ್ದಾರಿಯಾಗಿರುತ್ತದೆ.

ಕಂದಾಯ ಅಧಿಕಾರಿಗಳ ಕಾರ್ಯವ್ಯಾಪ್ತಿ ಮತ್ತು ಜವಾಬ್ದಾರಿ

ಕಟ್ಟಡ ನಿರ್ಮಾಣ ಪ್ರಕ್ರಿಯೆ ಮುಗಿದ ನಂತರ, ಸದರಿ ಕಟ್ಟಡಗಳಿಗೆ ಕಂದಾಯ ನಿಗಧಿಪಡಿಸುವ ಹಾಗೂ ಕಂದಾಯ ವಸೂಲಿ ಮಾಡುವ ಹೊಣೆಗಾರಿಕೆಯು ಕಂದಾಯ ಅಧಿಕಾರಿಗಳ ಮೇಲಿರುತ್ತದೆ. ಈ ಹಿನ್ನಲೆಯಲ್ಲಿ ಕಂದಾಯ ಅಧಿಕಾರಿಗಳು, ಸಹಾಯಕ ಕಂದಾಯ ಅಧಿಕಾರಿ, ಅಸೆಸ್ಸರ್ (Assessor), ಕಂದಾಯ ಪರಿವೀಕ್ಷಕರು, ಹಾಗೂ ಕಂದಾಯ ವಸೂಲಿಗಾರರು ಅವರವರ ಕಾರ್ಯವ್ಯಾಪ್ತಿಯಲ್ಲಿ ಸದರಿ (ಕಂದಾಯ ವಸೂಲಿ) ಕಾರ್ಯ ನಿರ್ವಹಣೆಗೆ ಅವರ ಕಾರ್ಯವ್ಯಾಪ್ತಿಯಲ್ಲಿ ಪರಿವೀಕ್ಷಣೆ ಮಾಡಬೇಕಾಗಿರುತ್ತದೆ. ಕಟ್ಟಡ ನಿರ್ಮಾಣ ಮತ್ತು ಕಂದಾಯ ನಿಗಧಿ ಒಂದಕ್ಕೊಂದು ಸಂಬಂಧಪಟ್ಟಿರುವ ಹಿನ್ನಲೆಯಲ್ಲಿ ಹಾಗೂ ಈ ಕಾರಣಗಳಿಂದ ಅನಧಿಕೃತ ನಿರ್ಮಾಣಗಳ ಬಗ್ಗೆ ಸದರಿಯವರೂ ಕೂಡ ನಿಗಾ ವಹಿಸುವುದು ಅತ್ಯವಶ್ಯಕವಾಗಿರುತ್ತದೆ. ಈ ಹಿನ್ನಲೆಯಲ್ಲಿ ಅಸೆಸ್ಸರ್ (Assessor), ಕಂದಾಯ ಪರಿವೀಕ್ಷಕರು (RI), ಕಂದಾಯ ವಸೂಲಿಗಾರರು (TI) ಈ ಕೆಳಕಂಡಂತೆ ಕಾರ್ಯ ನಿರ್ವಹಿಸಲು ಸೂಚಿಸಿದೆ.

- ಪಾಲಿಕೆ ವ್ಯಾಪ್ತಿಗಳಲ್ಲಿ ಮಂಜೂರಾಗುವ ಆನ್‌ಲೈನ್ ನಕ್ಷೆಗಳನ್ನು ಮೇಲ್ಕಂಡ ಕಂದಾಯ ಅಧಿಕಾರಿಗಳು ನೇರವಾಗಿ ಪಡೆಯಲು ಈ ಹಿಂದಿನ ಕಂಡಿಕೆಗಳಲ್ಲಿ ವಿವರಿಸಿದಂತೆ ಸೃಜಿಸಲಾದ Console ಗಳಲ್ಲಿ ಸದರಿ ನಕ್ಷೆಗಳನ್ನು ಪಡೆಯಲು ಪ್ರತಿನಿತ್ಯ ಸಹಾಯಕ ಕಂದಾಯ ಅಧಿಕಾರಿ ಅವರುಗಳ Console ಗಳನ್ನು ಪ್ರತಿನಿತ್ಯ ಪರಿಶೀಲಿಸಿ ಮಂಜೂರಾದ ವಿವರಗಳನ್ನು ಪಡೆದು ಅವುಗಳನ್ನು ಅಸೆಸ್ಸರ್, ಕಂದಾಯ ಪರಿವೀಕ್ಷಕರು (RI), ಕಂದಾಯ ವಸೂಲಿಗಾರರು (TI) ರವರುಗಳಿಗೆ ನೀಡುವುದು.
- ಕಂದಾಯ ಅಧಿಕಾರಿಗಳು (ಕಂದಾಯ ವಸೂಲಿಗಾರರು, ಕಂದಾಯ ಪರಿವೀಕ್ಷಕರು, ಅಸೆಸ್ಸರ್ ಹಾಗೂ ಸಹಾಯಕ ಕಂದಾಯ ಅಧಿಕಾರಿ) ಅವರುಗಳ ವ್ಯಾಪ್ತಿಯಲ್ಲಿ ಕಟ್ಟಡಗಳು ಅನಧಿಕೃತವಾಗಿ ನಿರ್ಮಾಣವಾಗುತ್ತಿದ್ದಲ್ಲಿ ಅವುಗಳ ವಿವರಗಳನ್ನು ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರುಗಳಿಗೆ ಒದಗಿಸತಕ್ಕದ್ದು. ಇದು ಅವರ ಹೊಣೆಗಾರಿಕೆಯಾಗಿರುತ್ತದೆ.

ಇತ್ತೀಚಿನ ದಿನಗಳಲ್ಲಿ ನಕ್ಷೆ ಉಲ್ಲಂಘನೆ ಮತ್ತು ಅನಧಿಕೃತ ನಿರ್ಮಾಣ ಪ್ರಕರಣಗಳು ಹೆಚ್ಚುತ್ತಿದ್ದು, ಈ ಬಗ್ಗೆ ಘನ ನ್ಯಾಯಾಲಯಗಳೂ ಕೂಡ ಅಸಮಾಧಾನ ವ್ಯಕ್ತಪಡಿಸುತ್ತಿರುವುದರಿಂದ ಹಾಗೂ ಮೇಲೆ ವಿವರಿಸಿರುವ ಕಾರಣಗಳಿಂದ ಈ ಕಾರ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಕಟ್ಟುನಿಟ್ಟಾಗಿ ಸೂಚಿಸಿದೆ.

ಆಯಾ ವಲಯಗಳ ವಲಯ ಆಯುಕ್ತರುಗಳು ಹಾಗೂ ಕೇಂದ್ರ ಕಛೇರಿಯ ಅಪರ ನಿರ್ದೇಶಕರು ರವರು ಕೆ.ಎಂ.ಸಿ ಕಾಯ್ದೆ ಕಲಂ 321 ಹಾಗೂ ಪ್ರಸ್ತುತ ಬಿಬಿಎಂಪಿ ಕಾಯ್ದೆ ಕಲಂ 248 ರಡಿಯಲ್ಲಿನ ಮೇಲ್ಕಂಡ ಅಧಿಕಾರ ಪ್ರತ್ಯಾಯೋಜನೆಯಂತೆ ಕೇಂದ್ರ, ವಲಯ ಹಾಗೂ ಉಪ ವಿಭಾಗದ ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಿರಿಯ / ಸಹಾಯಕ ಅಭಿಯಂತರರು / ನಗರ ಯೋಜಕರು / ಸಹಾಯಕ ಕಾರ್ಯಪಾಲಕ ಅಭಿಯಂತರರುಗಳು / ಸಹಾಯಕ ನಿರ್ದೇಶಕರುಗಳು / ಕಾರ್ಯಪಾಲಕ ಅಭಿಯಂತರರುಗಳು / ಉಪ ನಿರ್ದೇಶಕರುಗಳು / ಜಂಟಿ ನಿರ್ದೇಶಕರುಗಳು ಮಂಜೂರಾತಿ ನಕ್ಷೆ ಉಲ್ಲಂಘಿಸಲಾಗುವ ಕಟ್ಟಡ ನಿರ್ಮಾಣವನ್ನು ಹಾಗೂ ಅನುಮತಿ ಪಡೆಯದೇ ನಿರ್ಮಾಣವಾಗುವ ಅನಧಿಕೃತ ಕಟ್ಟಡಗಳು, ತಡೆಯಲು ವಿಳಂಬ ಪ್ರಕ್ರಿಯೆಯನ್ನು ಅನುಸರಿಸುವ ಅಥವಾ ಅನಧಿಕೃತ ನಿರ್ಮಾಣಗಳನ್ನು ತೆರವುಗೊಳಿಸುವ ಪ್ರಕ್ರಿಯೆಯನ್ನು ಅಂತಿಮಗೊಳಿಸದಿರುವ ಅಧಿಕಾರಿಗಳ ಮಾಹಿತಿಯನ್ನು ಕೂಡಲೇ ಶಿಸ್ತುಕ್ರಮಕ್ಕಾಗಿ ಮುಖ್ಯ ಆಯುಕ್ತರ ಕಛೇರಿಗೆ ಸಲ್ಲಿಸಲು ಈ ಮೂಲಕ ಸೂಚಿಸಲಾಗಿದೆ.

ವಲಯ ಅಯುಕ್ತರುಗಳು ಈ ಸುತ್ತೋಲೆಯಂತೆ ಕಾರ್ಯ ನಿರ್ವಹಿಸಲು ಪಾಲಿಕೆಯ ಕೇಂದ್ರ ಕಛೇರಿ / ವಲಯ ಕಛೇರಿ ಅಧಿಕಾರಿಗಳಿಗೆ ಬಿಬಿಎಂಪಿ ಕಾಯ್ದೆ–2020 ರ ಕಲಂ 313, 248 (1), (2) & (3) ರ ಅಧಿಕಾರವನ್ನು ಮತ್ತು ಬಿಬಿಎಂಪಿ ಕಾಯ್ದೆ–2020 ಕಲಂ 74 (ಡಿ) ರಡಿಯಲ್ಲಿ ಅಧಿಕಾರ ಪ್ರತ್ಯಾಯೋಜಿಸಲು ತಿಳಿಸಿದೆ.

ನಕ್ಷೆ ಮಂಜೂರಾತಿ ಉಲ್ಲಂಘಿತ ಮತ್ತು ಅನಧಿಕೃತ ಕಟ್ಟಡ/ಕಟ್ಟಡದ ಭಾಗವನ್ನು ತೆರವುಗೊಳಿಸಲು ಕೈಗೊಳ್ಳುವ ಪ್ರಕ್ರಿಯೆಯನ್ನು ಅಂತಿಮಗೊಳಿಸಿ, ಕಾನೂನಿನಡಿ ಅನಧಿಕೃತ ಕಟ್ಟಡ/ಕಟ್ಟಡದ ಭಾಗವನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲು ವಿಫಲರಾಗುವ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು / ಸಿಬ್ಬಂದಿಗಳ ವಿರುದ್ದ ಕೆ.ಎಂ.ಸಿ. ಕಾಯ್ದೆ ಕಲಂ 321(ಬಿ) ರ ಅಡಿಯಲ್ಲಿ ಪ್ರಸ್ತುತ ಬಿಬಿಎಂಪಿ ಕಾಯ್ದೆ–2020 ರ ಕಲಂ 252 ರ ಅಡಿಯಲ್ಲಿ ಅಗತ್ಯ ದಂಡ ವಿಧಿಸಿ ಅವರನ್ನು ಅಮಾನತ್ತಿನಲ್ಲಿಟ್ಟು, ಇಲಾಖಾ ವಿಚಾರಣೆ ನಡೆಸಿ ಸೂಕ್ತ ಶಿಸ್ತುಕ್ರಮ ಕೈಗೊಳ್ಳಲಾಗುವುದು ಎಂದು ಈ ಮೂಲಕ ತಿಳಿಸಲಾಗಿದೆ.

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸಹಿ/–
ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮಲೆನಾಡಿನಂತೆ ಭಾಸವಾದ ‘ಸಿಲಿಕಾನ್ ಸಿಟಿ’ • ಸುತ್ತಮುತ್ತಲ ಜಿಲ್ಲೆಗಳಲ್ಲೂ ಭಾರಿ ಮಳೆ

ರಾಜಧಾನಿಯಲ್ಲಿ ವಾಡಿಕೆಗಿಂತ ದುಪ್ಪಟ್ಟು ಮಳೆ

• ಆದಿತ್ಯ ಕೆ.ಎ.

ಪ್ರಜಾವಾಣಿ ವಿಶೇಷ

ಬೆಂಗಳೂರು: ‘ಸಿಲಿಕಾನ್ ಸಿಟಿ’ಯಲ್ಲಿ ಒಂದು ವಾರದಿಂದ ಮಲೆನಾಡಿನ ವಾತಾವರಣ. ಬೆಳಿಗ್ಗೆ ಮೋಡ ಕವಿದ ವಾತಾವರಣ ಇದ್ದರೆ ಮಧ್ಯಾಹ್ನ ಹಾಗೂ ಸಂಜೆಯ ವೇಳೆಗೆ ಧೋ... ಎಂದು ಸುರಿಯುವ ಮಳೆ.

ರಾಜಧಾನಿಯಲ್ಲಿ ಒಮ್ಮೆಲೇ ಆರ್ಭಟಿಸುತ್ತಿರುವ ಮಳೆಯಿಂದ ಜನಜೀವನ ಅಸ್ತವ್ಯಸ್ತಗೊಂಡಿದೆ. ಈ ವರ್ಷ ವಾಡಿಕೆಗೂ ಅಧಿಕವಾಗಿ ಮಳೆ ಸುರಿದಿದೆ. ಜನವರಿ 1ರಿಂದ ಆಗಸ್ಟ್ 6ರ ತನಕ ಬೆಂಗಳೂರು ನಗರ ಜಿಲ್ಲೆಯಲ್ಲಿ ವಾಡಿಕೆ ಮಳೆಯ ಪ್ರಮಾಣ 34.4 ಸೆಂ.ಮೀ. ಸುರಿಯಬೇಕಿತ್ತು. ಆದರೆ, 76.1 ಸೆಂ.ಮೀನಷ್ಟು ಮಳೆಯಾಗಿದೆ. ರಾಜ್ಯದ ಕರಾವಳಿ, ಮಲೆನಾಡು ಜಿಲ್ಲೆಗಳಿಗೆ ಮುಂಗಾರು ಪ್ರವೇಶಿಸುವುದು ಈ ವರ್ಷ ತಡವಾಗಿತ್ತು. ರಾಜಧಾನಿಯಲ್ಲೂ ಜೂನ್ ಆರಂಭದಲ್ಲಿ ಮಳೆ ಕೈಕೊಟ್ಟಿದ್ದರೂ ಜುಲೈ, ಆಗಸ್ಟ್‌ನಲ್ಲಿ ಅಧಿಕವಾಗಿ ಸುರಿಯಿತು.

ಮುಂಗಾರು ಅವಧಿಯಲ್ಲಿ ಅಂದರೆ ಜೂನ್ 1ರಿಂದ ಆಗಸ್ಟ್ 6ರ ವರೆಗೆ 18.8 ಸೆಂ.ಮೀ. ವಾಡಿಕೆಯ ಮಳೆ ಬೀಳಬೇಕಿತ್ತು. ಆದರೆ, 43.5 ಸೆಂ.ಮೀ ಮಳೆ ಬಿದ್ದಿದೆ. ಹೀಗಾಗಿ ವಾಡಿಕೆಗಿಂತ ಸರಾಸರಿ 24.7 ಸೆಂ.ಮೀನಷ್ಟು ಹೆಚ್ಚು ಮಳೆಯಾಗಿದೆ ಎಂದು ಹವಾಮಾನ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ನಗರದಲ್ಲಿ ಕಳೆದ ಆರು ದಿನಗಳಲ್ಲಿ ಭಾರಿ ಮಳೆ ಸುರಿದು, ಜನಜೀವನ ಅಸ್ತವ್ಯಸ್ತಗೊಂಡಿದೆ. ಏಕಾಏಕಿ ಸುರಿದ ಮಳೆಯಿಂದ ಶ್ರೀಸಾಯಿ ಲೇಔಟ್, ಕುಮಾರಸ್ವಾಮಿ ಲೇಔಟ್, ರಾಜೀವ್‌ಗಾಂಧಿ ನಗರ, ಕಾವೇರಿ ಬಡಾವಣೆ, ಫೈಯಜಾಬಾದ್ ನಗರ ‘ಜಲಮಯ’ಗೊಂಡಿದ್ದವು. ಈಗ ಅಲ್ಲಿ ನೀರು ಇಳಿದಿದ್ದರೂ ನಿವಾಸಿಗಳ ಕಣ್ಣೀರು ನಿಂತಿಲ್ಲ. ಆಗಸ್ಟ್ 1ರಿಂದ 6ರ ತನಕ ವಾಡಿಕೆ ಮಳೆ ಪ್ರಮಾಣ 2.3 ಸೆಂ.ಮೀನಷ್ಟು. ಆದರೆ, 13.7 ಸೆಂ.ಮೀ ಮಳೆ ಸುರಿದು ಪ್ರಮುಖ ಕೆರೆಗಳೆಲ್ಲವೂ ಭರ್ತಿಯಾಗಿವೆ. ಹಲವು ವರ್ಷಗಳಿಂದ ಕೋಡಿ ಬೀಳದಿದ್ದ ಕೆರೆಗಳಲ್ಲೂ ‘ಜಲರಾಶಿ’ ಕಾಣಿಸುತ್ತಿದೆ. ನಗರದ ಹಲವು ಕೆರೆಗಳು ದೊಡ್ಡ ಸಮುದ್ರದಂತೆ ಕಾಣಿಸುತ್ತಿವೆ.

ಬೆಂಗಳೂರು ನಗರ ಜಿಲ್ಲೆಗೆ ಹೊಂದಿಕೊಂಡಿರುವ ಜಿಲ್ಲೆಗಳಲ್ಲೂ ಮುಂಗಾರು ಅವಧಿಯಲ್ಲಿ (ಜೂನ್ 1ರಿಂದ ಇದುವರೆಗೆ) ವಾಡಿಕೆಗೂ ಅಧಿಕ ಮಳೆ ಸುರಿದಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 30.7 ಸೆಂ.ಮೀ, ರಾಮನಗರ 27.8 ಸೆಂ.ಮೀ., ಕೋಲಾರ 23.7 ಸೆಂ.ಮೀ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಸರಾಸರಿ 22.3 ಸೆಂ.ಮೀ ಹೆಚ್ಚು ಮಳೆ ಸುರಿದು, ಬೆಳೆ ನಷ್ಟಕ್ಕೂ ಕಾರಣವಾಗಿದೆ.

ಮುಖ್ಯಾಂಶಗಳು

- ಮಳೆಯಿಂದ ಜನಜೀವನ ಅಸ್ತವ್ಯಸ್ತ
- ಮಳೆ ಇಳಿದರೂ ನಿಲ್ಲದ ಕಣ್ಣೀರು

ಭಾರಿ ಮಳೆಯಿಂದ ಸಾಯಿ ಲೇಔಟ್‌ನಲ್ಲಿ ಸಂಗ್ರಹಗೊಂಡಿದ್ದ ನೀರು (ಎಡಚಿತ್ರ), ವಿಮಾನ ನಿಲ್ದಾಣ ರಸ್ತೆಯಲ್ಲಿ ಮಳೆಯ ನಡುವೆ ವಾಹನಗಳು ಸಾಗಿದ ದೃಶ್ಯ



ಸುದ್ದಿ 2 ನಿಮಿಷ

ಸ್ವತಂತ್ರ ಭಾರತದ ಕಥೆ ಹೇಳುವ ‘ಇಂಡಿಯಾ ಕಿ ಉಡಾನ್’ ಅನಾವರಣ

ನವದೆಹಲಿ (ಪಿಟಿಐ): ಸ್ವತಂತ್ರ ಭಾರತದ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ಗೂಗಲ್ ಸಂಸ್ಥೆಯು ‘ಇಂಡಿಯಾ ಕಿ ಉಡಾನ್’ ಎಂಬ ಆನ್‌ಲೈನ್ ಕಾರ್ಯಕ್ರಮ ಅನಾವರಣಗೊಳಿಸಿದೆ.

ಗೂಗಲ್‌ನ ಕಲಾ ಮತ್ತು ಸಾಂಸ್ಕೃತಿಕ ವಿಭಾಗ ಈ ಯೋಜನೆ ಕೈಗೊಂಡಿದೆ. ಸ್ವಾತಂತ್ರ್ಯ ದೊರೆತ ನಂತರ ದೇಶ ಸ್ಥಾಪಿಸಿರುವಂತಹ ಮಹತ್ವದ ಮೈಲಿಗಲ್ಲುಗಳನ್ನು ಸಚಿತ್ರ ವಿವರಣೆಯೊಂದಿಗೆ ಮೆಲುಕು ಹಾಕುವುದು ಇದರ ಉದ್ದೇಶ.

‘ಕೇಂದ್ರ ಸರ್ಕಾರದ ‘ಆಜಾದಿ ಕಿ ಅಮೃತ ಮಹೋತ್ಸವ’ ಕಾರ್ಯಕ್ರಮಕ್ಕೆ ಕೈಜೋಡಿಸುವ ಸಲುವಾಗಿ ಈ ಯೋಜನೆ ಕೈಗೊಳ್ಳಲಾಗಿದೆ. 1947ರ ನಂತರ ಭಾರತವು ವಿಕಸನಗೊಂಡ ಬಗೆ, ಇದಕ್ಕೆ ಕೊಡುಗೆ ನೀಡಿದ ಮಹಾನೀಯರ ಕುರಿತ ವಿವರಗಳನ್ನು ‘ಇಂಡಿಯಾ ಕಿ ಉಡಾನ್’ ಒಳಗೊಂಡಿರಲಿದೆ. ಒಟ್ಟಾರೆಯಾಗಿ ಸ್ವಾತಂತ್ರ್ಯ ಭಾರತದ ಕಥೆ ಹೇಳುವುದು ಇದರ ಉದ್ದೇಶ’ ಎಂದು ಗೂಗಲ್ ತಿಳಿಸಿದೆ.

‘ಡೂಡಲ್4ಗೂಗಲ್’-2022 ಸ್ಪರ್ಧೆಗೂ ಶುಕ್ರವಾರ ಚಾಲನೆ ನೀಡಲಾಗಿದೆ.

‘ಮುಂದಿನ 25 ವರ್ಷಗಳಲ್ಲಿ ನನ್ನ ಭಾರತ’ ಎಂಬ ವಿಷಯದಡಿ ಸ್ಪರ್ಧೆ ನಡೆಸಲಾಗುತ್ತಿದ್ದು, 1 ರಿಂದ 10ನೇ ತರಗತಿ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಅರ್ಜಿ ಸಲ್ಲಿಸಬಹುದು. ವಿಜೇತರಿಗೆ ₹5 ಲಕ್ಷ ವಿದ್ಯಾರ್ಥಿವೇತನ ಹಾಗೂ ಅವರು ವ್ಯಾಸಂಗ ಮಾಡು ತ್ತಿರುವ ಶಾಲೆ ಅಥವಾ ಸಂಸ್ಥೆಗೆ ₹2 ಲಕ್ಷ ತಾಂತ್ರಿಕ ನೆರವು ನೀಡಲಾಗುತ್ತದೆ. ವಿಜೇತರು ರಚಿಸಿರುವ ಕಲಾ ಕೃತಿಯು ನ.14ರಂದು ಗೂಗಲ್ ಹೋಂ ಪೇಜ್‌ನಲ್ಲಿ (ಭಾರತ) ಪ್ರಕಟವಾಗಲಿದೆ. ಗುಂಪು ಹಂತದ ನಾಲ್ವರು ವಿಜೇತರಿಗೆ ಹಾಗೂ ಫೈನಲ್ ಪ್ರವೇಶಿಸುವ 15 ಮಂದಿಗೆ ಆಕರ್ಷಕ ಬಹುಮಾನಗಳು ದೊರೆಯಲಿವೆ’ ಎಂದು ಗೂಗಲ್ ತಿಳಿಸಿದೆ.

ಗ್ರಾಮ ಪಂಚಾಯಿತಿಗೆ 7,500 ಧ್ವಜ ಹಸ್ತಾಂತರ

ಯಲಹಂಕ: ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಕೇಂದ್ರ ಸರ್ಕಾರದ ‘ಹರ್ ಘರ್ ತಿರಂಗಾ’ (ಮನೆ ಮನೆಯ ಮೇಲೆ ತ್ರಿವರ್ಣ ಧ್ವಜ) ಅಭಿಯಾನಕ್ಕೆ ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಸಂಸ್ಥೆಯಲ್ಲಿ ಚಾಲನೆ ನೀಡಲಾಯಿತು.

ಕುಲಪತಿ ಡಾ.ವೆಂಕಟೇಶ್ ಮಾತನಾಡಿ, ‘ನಮ್ಮ ಸಂಸ್ಥೆಯ ವತಿಯಿಂದ 7,500 ಧ್ವಜಗಳನ್ನು ಗಂಟಿಗಾನಹಳ್ಳಿ ಗ್ರಾಮ ಪಂಚಾಯಿತಿಗೆ ಹಸ್ತಾಂತರಿಸಲಾಗಿದೆ. ಅಲ್ಲದೇ ಪ್ರತಿಯೊಬ್ಬ ಕೆಲಸಗಾರ ಮತ್ತು ಶಾಲಾ ವಿದ್ಯಾರ್ಥಿಗೂ ರಾಷ್ಟ್ರಧ್ವಜದ ಬ್ಯಾಡ್ಜ್ ವಿತರಿಸಲಾಗುವುದು’ ಎಂದು ತಿಳಿಸಿದರು.

ಮಕ್ಕಳು, ಜನಸಾಮಾನ್ಯರು ಹಾಗೂ ಯುವಜನಾಂಗಕ್ಕೆ ಸ್ವಾತಂತ್ರ್ಯ ಸಂಗ್ರಾಮದ ಬಗ್ಗೆ ತಿಳಿಸುವುದರ ಜೊತೆಗೆ ರಾಷ್ಟ್ರ ಮತ್ತು ಧ್ವಜದ ಬಗ್ಗೆ ಪ್ರೇಮ, ಗೌರವ ಹಾಗೂ ಹೆಮ್ಮೆ ಮೂಡಿಸುವುದು ಈ ಕಾರ್ಯ ಕ್ರಮದ ಮೂಲ ಉದ್ದೇಶ ಎಂದರು. ಕುಲಸಚಿವ ಡಾ.ನಾರಾಯಣ ಸಬಾಹಿತ್, ಸಹ ಕುಲಪತಿ ಡಾ.ಪ್ರಜ್ಞಾರಾವ್, ಉಪ ಕುಲಸಚಿವೆ ಡಾ.ವಿದ್ಯಾಶೆಟ್ಟಿ ಉಪಸ್ಥಿತರಿದ್ದರು.

ಜೆಜೆಎಂ ಅನುಷ್ಠಾನ ತ್ವರಿತಕ್ಕೆ ಸಿಎಂ ಬೊಮ್ಮಾಯಿ ಸೂಚನೆ

ಬೆಂಗಳೂರು: ಜಲ ಜೀವನ್ ಮಿಷನ್ (ಜೆಜೆಎಂ) ಅಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳಿಗೆ ತ್ವರಿತವಾಗಿ ಕಾರ್ಯಾದೇಶ ನೀಡಿ, ಅನುಷ್ಠಾನ ಆರಂಭಿಸಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧಿಕಾರಿಗಳಿಗೆ ಸೂಚಿಸಿದರು.

ಶುಕ್ರವಾರ ನಡೆದ ‘ದಿಶಾ’ ರಾಜ್ಯಮಟ್ಟದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ‘ಜೆಜೆಎಂ ಅಡಿಯಲ್ಲಿ ದಿನವೊಂದಕ್ಕೆ 7,000 ಮನೆಗಳಿಗೆ ನಲ್ಲಿ ಮೂಲಕ ಕುಡಿಯುವ ನೀರು ಸಂಪರ್ಕ ಕಲ್ಪಿಸಲಾಗುತ್ತಿದೆ. ಈ ಯೋಜನೆ ಅನುಷ್ಠಾನದಲ್ಲಿ ವಿಳಂಬ ಆಗದಂತೆ ಎಚ್ಚರಿಕೆ ವಹಿಸಬೇಕು’ ಎಂದರು.

ಕೇಂದ್ರ ಪುರಸ್ಕೃತ ಯೋಜನೆಗಳ ಪೈಕಿ ಕೆಲವು ಯೋಜನೆಗಳ ಅನುಷ್ಠಾನದಲ್ಲಿ ನಿರೀಕ್ಷಿತ ಪ್ರಗತಿ ಆಗಿಲ್ಲ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅನುಷ್ಠಾನದ ಒಟ್ಟು ಸಾಧನೆ ಉತ್ತಮವಾಗಿದೆ. ಆದರೆ, ಕೆಲವು ಜಿಲ್ಲೆಗಳಲ್ಲಿ ಇನ್ನೂ ನಿಗದಿತ ಗುರಿ ತಲುಪಿಲ್ಲ. ಅಂತಹ ಜಿಲ್ಲೆಗಳಿಗೆ ವಿಶೇಷ ಗಮನಹರಿಸಬೇಕು ಎಂದು ಸೂಚಿಸಿದರು.

ಫಸಲ್ ಬಿಮಾ ಯೋಜನೆ ಅನುಷ್ಠಾನದಲ್ಲಿ ವಿಮಾ ಕಂಪನಿಗಳ ಕಡೆಯಿಂದ ಇರುವ ನ್ಯೂನತೆಗಳನ್ನು ಸರಿಪಡಿಸಬೇಕು. ಕ್ಲೇಮುಗಳು ಬಾಕಿ ಇರುವ ಪ್ರಕರಣಗಳನ್ನು ವಿಲೇವಾರಿ ಮಾಡಲು ಜಿಲ್ಲಾಧಿಕಾರಿಗಳು ಸಭೆ ನಡೆಸಿ, ಕ್ರಮ ಕೈಗೊಳ್ಳಬೇಕು. ಸಂಸದರ ಆದರ್ಶ ಗ್ರಾಮ ಯೋಜನೆಯ ಕಾಮಗಾರಿಗಳನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಬೇಕು ಎಂದರು.

ಪ್ರತಿ ಜಿಲ್ಲೆಯಲ್ಲೂ ಕಡ್ಡಾಯವಾಗಿ ಮೂರು ತಿಂಗಳಿಗೊಮ್ಮೆ ದಿಶಾ ಸಮಿತಿ ಸಭೆ ನಡೆಸಬೇಕು. ಸಮಿತಿಯ ಸದಸ್ಯರು ಕ್ಷೇತ್ರಕ್ಕೆ ಭೇಟಿನೀಡಲು ವ್ಯವಸ್ಥೆ ಮಾಡಬೇಕು ಮತ್ತು ಅವರಿಂದ ವರದಿ ಪಡೆಯಬೇಕು ಎಂದು ಬೊಮ್ಮಾಯಿ ಸೂಚಿಸಿದರು.

ಮಂಡ್ಯ ಸಂಸದೆ ಸುಮಲತಾ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ, ಯೋಜನಾ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್, ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್ ಸೇರಿದಂತೆ ಹಿರಿಯ ಅಧಿಕಾರಿಗಳು ಸಭೆಯಲ್ಲಿದ್ದರು.

ಚುನಾವಣೆ ಸೋಲುವ ಭೀತಿಯಿಂದ, ಗೂಂಡಾಗಿರಿ ಪ್ರದರ್ಶನ: ಅಶ್ವತ್ಥ ನಾರಾಯಣ

‘ಸೋಲೊಪ್ಪಿಕೊಂಡ ಕಾಂಗ್ರೆಸ್’

ಬೆಂಗಳೂರು: ಬಿಬಿಎಂಪಿ ಚುನಾವಣೆಗೂ ಮೊದಲೇ ಸೋಲೊಪ್ಪಿಕೊಂಡಿರುವ ಕಾಂಗ್ರೆಸ್ ಪಕ್ಷ, ವಾರ್ಡ್ ಮರುವಿಂಗಡಣೆ ಮತ್ತು ಮೀಸಲಾತಿ ವಿಚಾರದಲ್ಲಿ ಗೂಂಡಾಗಿರಿ ಪ್ರದರ್ಶಿಸುತ್ತಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ವಾಗ್ದಾಳಿ ನಡೆಸಿದರು.

ಬಿಜೆಪಿ ರಾಜ್ಯ ಘಟಕದ ಕಚೇರಿಯಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ವಾರ್ಡ್ ಮರುವಿಂಗಡಣೆ ಮತ್ತು ಮೀಸಲಾತಿ ನಿಗದಿಯಲ್ಲಿ ಕಾನೂನು ಉಲ್ಲಂಘನೆ ನಡೆದಿದ್ದರೆ ಕಾಂಗ್ರೆಸ್ ಮುಖಂಡರು ಕಾನೂನಿನ ಪ್ರಕಾರವೇ ಪ್ರಶ್ನಿಸಬೇಕಿತ್ತು. ತಕರಾರು ಸಲ್ಲಿಸಲು ಅವಕಾಶವಿತ್ತು. ಆದರೆ, ಚುನಾವಣೆಯಲ್ಲಿ ಸೋಲುವ ಭಯದಿಂದ ನಗರಾಭಿವೃದ್ಧಿ ಇಲಾಖೆ ಕಚೇರಿಯಲ್ಲಿ ತಮ್ಮ ಗೂಂಡಾಗಿರಿ ಸಂಸ್ಕೃತಿ ಪ್ರದರ್ಶಿಸಿದ್ದಾರೆ’ ಎಂದರು.

‘ಬಿಬಿಎಂಪಿ ಚುನಾವಣೆ ನಡೆಸಲು ಬಿಜೆಪಿ ಸರ್ಕಾರ ಸಿದ್ಧವಾಗಿದೆ. ಈ ವಿಚಾರದಲ್ಲಿ ಯಾವ ಗೊಂದಲವೂ ಇಲ್ಲ. ಕಾಂಗ್ರೆಸ್ ನಾಯಕರು ಕಾನೂನಿನ ಅರಿವಿಲ್ಲದವರಂತೆ ಮಾತನಾಡುತ್ತಿದ್ದಾರೆ. ರಾಮಲಿಂಗಾ ರೆಡ್ಡಿ, ದಿನೇಶ್ ಗುಂಡೂರಾವ್, ಜಮೀರ್ ಅಹಮ್ಮದ್ ಖಾನ್ ಮತ್ತಿತರರು ಮುಸ್ಲಿಂ ಮಹಿಳೆಯರಿಗೆ ವಾರ್ಡ್‌ಗಳನ್ನು ಮೀಸಲಿರಿಸಿರುವುದನ್ನು ಆಕ್ಷೇಪಿಸಿದ್ದಾರೆ. ಮುಸ್ಲಿಂ ಮಹಿಳೆಯರು ಬಿಬಿಎಂಪಿ ಸದಸ್ಯರಾಗಿ ಆಯ್ಕೆಯಾಗುವುದು ತಪ್ಪೆ’ ಎಂದು ಪ್ರಶ್ನಿಸಿದರು.

243 ವಾರ್ಡ್‌ಗಳನ್ನು ರಚಿಸಿ, ಅದಕ್ಕೆ ಸಮನಾಗಿ ಮೀಸಲಾತಿ ನಿಗದಿಪಡಿಸಲಾಗಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ಶೇಕಡ 50ರಷ್ಟು ಸ್ಥಾನಗಳನ್ನು ಮೀಸಲಿಡಲಾಗಿದೆ. ಶೇ 50ರಷ್ಟು ಸ್ಥಾನಗಳನ್ನು ಸಾಮಾನ್ಯ ವರ್ಗಕ್ಕೆ ಮೀಸಲಿಡಲಾಗಿದೆ. ಒಟ್ಟು ಸ್ಥಾನಗಳಲ್ಲಿ ಶೇ 50ರಷ್ಟನ್ನು ಮಹಿಳೆಯರಿಗೆ ಮೀಸಲಿಡಲಾಗಿದೆ. ತಪ್ಪುಗಳು ಕಂಡುಬಂದರೆ ಕಾನೂನಿನ ಪ್ರಕಾರವೇ ಪ್ರಶ್ನಿಸಲಿ ಎಂದು ಸವಾಲು ಹಾಕಿದರು.

‘ಬಿಜೆಪಿಯಲ್ಲಿ ಸಣ್ಣಪುಟ್ಟ ಗೊಂದಲಗಳು ಇರಬಹುದು. ಅವುಗಳೆಲ್ಲವನ್ನೂ ಪರಿಹರಿಸಿಕೊಂಡು ಚುನಾವಣೆಯಲ್ಲಿ ಜಯ ಗಳಿಸುತ್ತೇವೆ. ಕಾಂಗ್ರೆಸ್ ಎಲ್ಲ ಕಡೆಗಳಲ್ಲೂ ನೆಲೆ ಕಳೆದುಕೊಳ್ಳುತ್ತಾರೆ’ ಎಂದು ಹೇಳಿದರು.

ವಿಧಾನಸಭೆಯಲ್ಲಿ ಸರ್ಕಾರದ ಮುಖ್ಯ ಸಚೇತಕ ಎಂ. ಸತೀಶ್ ರೆಡ್ಡಿ ಮಾತನಾಡಿ, ‘ಜಮೀರ್, ದಿನೇಶ್ ಗುಂಡೂರಾವ್ ಅವರು 2015ರಲ್ಲಿ ಮಹಿಳಾ ಮೀಸಲಾತಿ ಕುರಿತು ಆಕ್ಷೇಪ ಎತ್ತಿರಲಿಲ್ಲ. ಈಗ ಏಕೆ ಆ ಪ್ರಶ್ನೆ ಎತ್ತಿದ್ದಾರೆ? ಚುನಾವಣೆ ಮುಂದೂಡುವ ಕಾರ್ಯಸೂಚಿಯ ಭಾಗವಾಗಿ ಕಾಂಗ್ರೆಸ್ ಮುಖಂಡರು ಈ ರೀತಿ ಮಾಡುತ್ತಿದ್ದಾರೆ’ ಎಂದು ದೂರಿದರು.

ವಿಧಾನಪರಿಷತ್ ಸದಸ್ಯ ಎನ್. ರವಿಕುಮಾರ್ ಪತ್ರಿಕಾಗೋಷ್ಠಿಯಲ್ಲಿದ್ದರು.

ಚಿತ್ರಾವಳಿ

ಹೆಬ್ಬಾಳದ ಕರ್ನಾಟಕ ಪಶು ವೈದ್ಯಕೀಯ ಮತ್ತು ಮೀನುಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯದ(ಬೀದರ್) ನೂತನ ಕುಲಪತಿಯಾಗಿ ಅಧಿಕಾರ ವಹಿಸಿಕೊಂಡಿರುವ ಪ್ರೊ.ಕೆ.ಸಿ.ವೀರಣ್ಣ ಅವರಿಗೆ ವಿಶ್ವವಿದ್ಯಾಲಯದ ಅಂಗಸಂಸ್ಥೆಯಾದ ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆಯ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವತಿಯಿಂದ ಸನ್ಮಾನಿಸಲಾಯಿತು. ಕುಲಸಚಿವ ಪ್ರೊ.ಬಿ.ವಿ. ಶಿವಪ್ರಕಾಶ್, ಸಂಸ್ಥೆಯ ನಿರ್ದೇಶಕ ಡಾ.ಎಂ.ಡಿ.ವೆಂಕಟೇಶ್, ಬೋಧಕರ ಸಂಘದ ಖಜಾಂಚಿ ಡಾ.ಸಂಜೀವ್ ಕುಮಾರ್, ಬೋಧಕೇತರ ಸಂಘದ ರಾಜ್ಯ ಉಪಾಧ್ಯಕ್ಷ ಎಂ.ಶ್ರೀನಿವಾಸಮೂರ್ತಿ, ಜಂಟಿ ಕಾರ್ಯದರ್ಶಿ ಎ.ಕೆ.ಹನುಮಂತರಾಯಪ್ಪ ಇತರರು ಇದ್ದರು.

ಬ್ಯಾಟರಾಯನಪುರ ಕ್ಷೇತ್ರದ ಥಣಿಸಂದ್ರ ವಾರ್ಡ್ ವ್ಯಾಪ್ತಿಯ ವಿದ್ಯಾಸಾಗರ ಮತ್ತು ಮುನಿನಾಗಪ್ಪ ಬಡಾವಣೆಯಲ್ಲಿ ₹ 1 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಂಡಿರುವ ಕಾಂಕ್ರೀಟ್ ರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೃಷ್ಣಬೈರೇಗೌಡ ಚಾಲನೆ ನೀಡಿದರು. ಕಾಂಗ್ರೆಸ್ ಮುಖಂಡರಾದ ಎಂ.ಜಯಗೋಪಾಲಗೌಡ, ಪಳನಿ ವೆಂಕಟೇಶ್, ಬಸವರಾಜ್, ಟಿ.ಎಂ.ಶ್ರೀನಿವಾಸ್, ಟಿ.ಎನ್‌ಮಹೇಶ್ ಕುಮಾರ್, ಬಿಬಿಎಂಪಿ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಸುರೇಶ್ ದೇವತ್ ರಾಜ್ ಇದ್ದರು.

ನ್ಯಾಷನಲ್ ಇಂಟಿಗ್ರೇಟೆಡ್ ಮೆಡಿಕಲ್ ಅಸೋಸಿಯೇಷನ್ (ಎನ್‌ಐಎಂಎ) ನಗರದಲ್ಲಿ ಶನಿವಾರ ಹಮ್ಮಿಕೊಂಡ ರಾಜ್ಯ ಮಟ್ಟದ ಸಮಾವೇಶದಲ್ಲಿ ವಿಶ್ವ ಸಂತೋಷ ಭಾರತಿ ಸ್ವಾಮೀಜಿ ಅವರಿಗೆ ‘ವೈದ್ಯ ರತ್ನ ಪ್ರಶಸ್ತಿ’ ನೀಡಿ ಗೌರವಿಸಲಾಯಿತು. ಡಾ. ಜೈಪ್ರಕಾಶ್ ನಾರಾಯಣ್, ಎನ್‌ಐಎಂಎ ಕರ್ನಾಟಕ ರಾಜ್ಯ ಶಾಖೆಯ ಅಧ್ಯಕ್ಷ ಡಾ.ಭೂಸನೂರಮಠ ರಾಜಶೇಖರ್, ಸಂಸ್ಥೆಯ ಡಾ.ಕೆ.ಸಿ.ಬಲ್ಲಾಳ್, ಶ್ರೀ ಶ್ರೀ ತತ್ತ್ವ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಅರವಿಂದ್ ವರ್ಚಸ್ವಿ ಮತ್ತು ಅಸೋಸಿಯೇಷನ್‌ನ ಪದಾಧಿಕಾರಿಗಳು ಇದ್ದಾರೆ ಪ್ರಜಾವಾಣಿ ಚಿತ್ರ

ಮೇಕಪ್ ಮಾಡಿಸಿಕೊಳ್ಳುವ ಮೂಲಕ ವಸ್ತು ಪ್ರದರ್ಶನಕ್ಕೆ ಸಚಿವ ವಿ.ಸೋಮಣ್ಣ ಚಾಲನೆ ನೀಡಿದರು. ಕಲ್ಪವಲ್ಲಿ ಸೌಹಾರ್ದ ಸಹಕಾರಿ ನಿಯಮಿತದ ಅಧ್ಯಕ್ಷ ಬಿ.ಗಂಗಾಧರ್, ಕಲಾವಿದ ಮುತ್ತುರಾಜ್, ನಿಗಮದ ಅಧ್ಯಕ್ಷ ಎಸ್‌ನರೇಶ್‌ಕುಮಾರ್ ಇದ್ದರು. –ಪ್ರಜಾವಾಣಿ ಚಿತ್ರ

ಕೇಶ ವಿನ್ಯಾಸ ವಸ್ತು ಪ್ರದರ್ಶನಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೇರ್ ಕೇರ್, ಸಲೂನ್ ಮತ್ತು ಸ್ಪಾ ಎಕ್ಸ್‌ಪೋ ನಗರದಲ್ಲಿ ಆರಂಭವಾಗಿದ್ದು, ನಾಲ್ಕು ದಿನಗಳ ವಸ್ತು ಪ್ರದರ್ಶನಕ್ಕೆ ಶನಿವಾರ ಚಾಲನೆ ದೊರೆತಿದೆ.

ನಾಗವಾರದ ಹೊರ ವರ್ತುಲ ರಸ್ತೆಯಲ್ಲಿನ ಮ್ಯಾನ್ಫೋ ಕನ್ವೆನ್ಷನ್ ಸೆಂಟರ್‌ನಲ್ಲಿ ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ ಆಯೋಜಿಸಿರುವ ವಸ್ತು ಪ್ರದರ್ಶನಕ್ಕೆ ವಸತಿ ಸಚಿವ ವಿ.ಸೋಮಣ್ಣ ಚಾಲನೆ ನೀಡಿದರು.

‘ಕೇಶ ವಿನ್ಯಾಸ ಮತ್ತು ಸೌಂದರ್ಯವರ್ಧಕ ಕ್ಷೇತ್ರದಲ್ಲಿ ವರ್ಷಕ್ಕೆ ₹30 ಸಾವಿರ ಕೋಟಿಯಷ್ಟು ವಹಿವಾಟು ನಡೆಯುತ್ತಿದೆ. ಇದರಲ್ಲಿ ಶೇ 35ರಷ್ಟು ಮಾತ್ರ ಸವಿತಾ ಸಮಾಜದವರಿದ್ದು, ಎಲ್ಲಾ ಜಾತಿ ಮತ್ತು ಧರ್ಮದವರೂ ಈ ಕ್ಷೇತ್ರದಲ್ಲಿ ಈಗ ತೊಡಗಿಕೊಂಡಿದ್ದಾರೆ. ಸವಿತಾ ಸಮಾಜದವರು ಇನ್ನಷ್ಟು ಪರಿಣತಿ ಸಾಧಿಸಲು ಈ ವಸ್ತು ಪ್ರದರ್ಶನ ಅನುಕೂಲ ಆಗಲಿದೆ’ ಎಂದು ನಿಗಮದ ಅಧ್ಯಕ್ಷ ಎಸ್. ನರೇಶ್‌ಕುಮಾರ್ ತಿಳಿಸಿದರು.

‘ಅಂತರರಾಷ್ಟ್ರೀಯ ಮಟ್ಟದ ಕಲಾವಿದರು, ಕೇಶ ವಿನ್ಯಾಸಕರು ಸ್ಥಳದಲ್ಲೇ ಮೇಕಪ್ ಮಾಡಲಿದ್ದಾರೆ. ಇದು ಈ ಸಮುದಾಯದ ವೃತ್ತಿನಿರತರಿಗೆ ತರಬೇತಿಯಂತೆ ಆಗಲಿದೆ. ಅಲ್ಲದೇ ಕೀಳರಿಮೆ ತೊರೆದು ಆತ್ಮವಿಶ್ವಾಸದಿಂದ ಕೆಲಸ ಮಾಡಲು ಸಾಧ್ಯವಾಗುತ್ತದೆ’ ಎಂದರು.

ಕಾಸ್ಮಿಕ್ ಪಾರ್ಕ್‌ಗೆ ಪ್ರಸ್ತಾವನೆ

‘ಸೌಂದರ್ಯವರ್ಧಕ ಉತ್ಪನ್ನಗಳ ತಯಾರಿಕೆಗೆ ರಾಜ್ಯದಲ್ಲಿ ‘ಕಾಸ್ಮಿಕ್ ಪಾರ್ಕ್’ ತೆರೆಯುವ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುತ್ತಿದೆ’ ಎಂದು ಎಸ್. ನರೇಶ್‌ಕುಮಾರ್ ತಿಳಿಸಿದರು.

ಅಗತ್ಯ ಇರುವ 150 ಎಕರೆ ಜಾಗ ಗುರುತಿಸುವ ಸಂಬಂಧ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ಅವರೊಂದಿಗೆ ಚರ್ಚಿಸಲಾಗಿದೆ ಎಂದರು.

‘ಪೌಡರ್, ಕ್ರೀಮ್, ಬ್ಲೇಡ್ ಸೇರಿ ಎಲ್ಲಾ ವಸ್ತುಗಳು ಸ್ಥಳೀಯವಾಗಿಯೇ ಉತ್ಪಾದನೆ ಮಾಡಿಕೊಳ್ಳಬಹುದು. ಸದ್ಯ ಉತ್ತರ ಭಾರತ ಮತ್ತು ಹೊರ ದೇಶಗಳನ್ನು ಅವಲಂಬಿಸಿದ್ದೇವೆ’ ಎಂದು ಹೇಳಿದರು.

ಕೇಶ ವಿನ್ಯಾಸದ ಬಗ್ಗೆ ತರಬೇತಿ ನೀಡುವ ಪಠ್ಯಕ್ರಮವೇ ಇಲ್ಲ. ಆಸ್ಟ್ರೇಲಿಯಾ, ಟರ್ಕಿ ಮತ್ತು ಇಂಗ್ಲೆಂಡ್‌ನಲ್ಲಿ ಪಠ್ಯಕ್ರಮ ಆಧರಿತ ತರಬೇತಿ ನೀಡಲಾಗುತ್ತಿದೆ. ವಿವಿಯಲ್ಲಿ ಈ ಕೋರ್ಸ್‌ಗಳನ್ನೂ ತೆರೆಯುವ ಅಗತ್ಯವಿದೆ. ಈ ಸಂಬಂಧವೂ ಸರ್ಕಾರದ ಜತೆ ಮಾತುಕತೆ ನಡೆಸಲಾಗುತ್ತಿದೆ’ ಎಂದು ತಿಳಿಸಿದರು.

11 ಅಧಿಕಾರಿಗಳು ಅಮಾನತು

ನವದೆಹಲಿ (ಪಿಟಿಐ): ಸಮರ್ಪಕವಾಗಿ ಅಬಕಾರಿ ನೀತಿ ಜಾರಿಗೊಳಿಸಲು ವಿಫಲವಾದ ಆರೋಪದಡಿ ದೆಹಲಿಯ ಅಬಕಾರಿ ಆಯುಕ್ತ ಸೇರಿ 11 ಅಧಿಕಾರಿಗಳನ್ನು ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೆನಾ ಅಮಾನತುಪಡಿಸಿದ್ದಾರೆ.

ಉಪ ಅಬಕಾರಿ ಆಯುಕ್ತ ಆನಂದ್ ಕುಮಾರ್ ತಿವಾರಿ, ದೆಹಲಿ ಅಬಕಾರಿ ಇಲಾಖೆಯ ಆರು ಮಂದಿ ಅಧಿಕಾರಿಗಳು ಅಮಾನತುಗೊಂಡವರಲ್ಲಿ ಸೇರಿದ್ದಾರೆ ಎಂದು ಲೆಫ್ಟಿನೆಂಟ್ ಗವರ್ನರ್ ಕಚೇರಿ ಮೂಲಗಳು ತಿಳಿಸಿವೆ

‘ಅರ್ಥ ಕಳೆದುಕೊಳ್ಳುತ್ತಿರುವ ವಿ.ವಿಗಳು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉನ್ನತ ಶಿಕ್ಷಣದ ಜ್ಞಾನಾರ್ಜನೆಯ ಕೇಂದ್ರಗಳಾದ ವಿಶ್ವವಿದ್ಯಾಲಯಗಳ ಸ್ವರೂಪ ಬದಲಾಗುತ್ತಿದ್ದು, ಅರ್ಥ ಕಳೆದುಕೊಳ್ಳುತ್ತಿವೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಬೇಸರ ವ್ಯಕ್ತಪಡಿಸಿದರು.

ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯುನ್ಮಾನ ಮಾಧ್ಯಮ ವಿಭಾಗ, ದಿಶಾ ಭಾರತ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯದಲ್ಲಿ ಆರೂವರೆ ಕೋಟಿ ಜನಸಂಖ್ಯೆ ಇದ್ದರೂ, ಗುಣಮಟ್ಟದ ಶಿಕ್ಷಣ ದೊರಕುತ್ತಿಲ್ಲ. ಪ್ರತಿಭಾವಂತರ ಕೊರತೆ ಇದೆ. ವಿಶ್ವವಿದ್ಯಾಲಯಗಳು ವಿದ್ಯಾರ್ಥಿಗಳ ಬದ್ಧತೆ, ಪ್ರತಿಭೆಗೆ ಮನ್ನಣೆ ನೀಡದೆ, ಅಂಕಗಳ ಆಧಾರದಲ್ಲಿ ಪ್ರವೇಶ ನೀಡುತ್ತಿವೆ. ಇಂತಹ ಸನ್ನಿವೇಶದಲ್ಲಿ ತರಗತಿ ಕಲಿಕೆ ತೊರೆದು ಹೊರಬಂದರೆ ಗುಣಮಟ್ಟದ ಶಿಕ್ಷಣ ಸಿಗಲು ಸಾಧ್ಯ. ಅದಕ್ಕಾಗಿಯೇ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಆಮೂಲಾಗ್ರ ಬದಲಾವಣೆ ತರಲಾಗುತ್ತಿದೆ ಎಂದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಬಿ.ವಿ.ವಸಂತ್‌ಕುಮಾರ್, ‘ಮನೆಗಿಂತ ದೊಡ್ಡ ವಿಶ್ವವಿದ್ಯಾಲಯವಿಲ್ಲ. ಮನೆಯ ಸಂಸ್ಕೃತಿಯಿಂದ ಕಲಿಯದ ಪಾಠ ಬೇರೆ ಎಲ್ಲಿಯೂ ಕಲಿಯಲು ಸಾಧ್ಯವಿಲ್ಲ. ದಾನ, ಧರ್ಮದ ವಿಷಯ ಯಾವ ವಿವಿಯೂ ಕಲಿಸುವುದಿಲ್ಲ. ಹಳ್ಳಿಗಳಲ್ಲಿರುವ ರೈತರು ಬೆಳೆ ಬಂದಾಗ ಬಡವರಿಗೆ, ದರಿದ್ರರಿಗೆ ದಾನ ಮಾಡಿ ನಂತರ ಮನೆಗೆ ತೆಗೆದುಕೊಂಡು ಹೋಗುತ್ತಿದ್ದರು. ಇಂತಹ ಗುಣಗಳನ್ನು ಕಲಿಸಿದ್ದೇ ಭಾರತ ಎಂದು ಬಣ್ಣಿಸಿದರು.

ಬೆಂಗಳೂರು ವಿವಿ ಕುಲಪತಿ ಎಸ್.ಎಂ.ಜಯಕರ, ಕುಲಸಚಿವ ಎಂ. ಕೊಟ್ರೇಶ್, ದಿಶಾ ಭಾರತ್ ಅಧ್ಯಕ್ಷ ಎನ್. ವಿ.ರಘುರಾಮ್ ಉಪಸ್ಥಿತರಿದ್ದರು.

ಬೆಂಗಳೂರು ವಿಶ್ವವಿದ್ಯಾಲಯ, ದಿಶಾ ಭಾರತ್ ಶುಕ್ರವಾರ ಆಯೋಜಿಸಿದ್ದ ವಿಚಾರಗೋಷ್ಠಿಯಲ್ಲಿ (ಎಡದಿಂದ) ಬೆಂಗಳೂರು ವಿಶ್ವವಿದ್ಯಾಲಯದ ಕುಲಸಚಿವ, ಎಂ.ಕೊಟ್ರೇಶ್, ಕುಲಪತಿ ಎಸ್‌.ಎಂ ಜಯಕರ್, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಬಿ.ವಿ ವಸಂತ್ ಕುಮಾರ್, ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, ದಿಶಾ ಭಾರತ್‌ಅ ಧ್ಯಕ್ಷ ಡಾ.ಎನ್‌.ವಿ ರಘುರಾಮ್ ಧ್ವಜ ಪ್ರದರ್ಶಿಸಿದರು

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ನಡೆದ ಸ್ವಾತಂತ್ರ್ಯ ಚಳವಳಿ ಕುರಿತು ಅಂತರ್ ವಿಭಾಗೀಯ ಸಾಂಸ್ಕೃತಿಕ ಸ್ಪರ್ಧೆಗಳನ್ನು ಕುಲಪತಿ ಡಾ.ಎಸ್‌.ಎಂ. ಜಯಕರ್ ಉದ್ಘಾಟಿಸಿದರು. ಕುಲಸಚಿವ ಡಾ.ಎಂ.ಕೊಟ್ರೇಶ್, ಪ್ರೊ. ರಾಜಪ್ಪ ದಳವಾಯಿ, ಸಿಂಡಿಕೇಟ್ ಸದಸ್ಯ ಡಾ. ಸಿ.ಆರ್. ಮಹೇಶ್ ಇದ್ದರು.

‘ಕಸಾಪ ಅಧ್ಯಕ್ಷರಿಗೆ ಸಂಪುಟ ಸಚಿವ ದರ್ಜೆ ಸ್ಥಾನ ನೀಡಿ’

ಬೆಂಗಳೂರು: ‘ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷರಿಗೆ ನೀಡಿರುವ ರಾಜ್ಯ ಸಚಿವ ದರ್ಜೆ ಸ್ಥಾನಮಾನವನ್ನು ಸಂಪುಟ ಸಚಿವ ದರ್ಜೆಗೆ ಏರಿಸಬೇಕು’ ಎಂದು ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್ ಆಗ್ರಹಿಸಿದ್ದಾರೆ.

ಕಸಾಪ ಅಧ್ಯಕ್ಷ ಮಹೇಶ ಜೋಶಿ ಅವರಿಗೆ ನಗರದಲ್ಲಿ ಶುಕ್ರವಾರ ಶುಭ ಹಾರೈಸಿದ ಅವರು, ‘ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಕನ್ನಡ ಸಾಂಸ್ಕೃತಿಕ ರಾಯಭಾರಿಗಳಾಗಿ ಕನ್ನಡದ ಅಸ್ಮಿತೆಯನ್ನು ಉಳಿಸಿ ಬೆಳೆಸುವಲ್ಲಿ ಕ್ರಿಯಾಶೀಲರಾಗಿ ಕಾರ್ಯನಿರತರಾಗಿದ್ದಾರೆ.ಇವರಿಗೆ ಸರ್ಕಾರ ರಾಜ್ಯ ಸಚಿವ ದರ್ಜೆಗೆ ಸಮನಾದ ಸ್ಥಾನಮಾನ ನೀಡಿರುವುದು ಸ್ವಾಗತಾರ್ಹ’ ಎಂದರು.

ಕಾಂಗ್ರೆಸ್ ಮುಖಂಡ ಎಂ.ವೀರಪ್ಪ ಮೊಯಿಲಿ ಆರೋಪ

‘ಕಾರ್ಯಕರ್ತರ ಸಮಸ್ಯೆಗೆ ಸ್ಪಂದಿಸದ ಮುಖಂಡರು’

ಪ್ರಜಾವಾಣಿ ವಾರ್ತೆ

ಯಲಹಂಕ: ಕಾರ್ಯಕರ್ತರಿಗೆ ಕೊಲೆ ಬೆದರಿಕೆಗಳು ಬಂದಿದ್ದು, ಈ ವೇಳೆ ನಾಯಕರಿಗೆ ಕರೆ ಮಾಡಿದರೂ ಸ್ವೀಕರಿಸುವುದಿಲ್ಲ. ನಾಯಕರು ಬಣಗಳನ್ನು ಕಟ್ಟಿಕೊಂಡು ಓಡಾಡುತ್ತಿದ್ದು, ಕಾರ್ಯಕರ್ತರ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ ಎಂದು ಹೆಸರಘಟ್ಟ ಹೋಬಳಿ ದೊಡ್ಡಬ್ಯಾಲಕೆರೆಯಲ್ಲಿ ನಡೆದ ಯಲಹಂಕ ಕ್ಷೇತ್ರದ ಕಾಂಗ್ರೆಸ್ ಚೈತನ್ಯ ಸಮಾಲೋಚನಾ ಸಭೆಯಲ್ಲಿ ಕಾರ್ಯಕರ್ತರು ದೂರಿದರು.

ಕಾಂಗ್ರೆಸ್ ಮುಖಂಡ ಎಂ.ವೀರಪ್ಪ ಮೊಯಿಲಿ ಮಾತನಾಡಿ, ’ಪಕ್ಷದ ಸಂಘಟನೆಯ ಉದ್ದೇಶದಿಂದ ಎಲ್ಲ ಬ್ಲಾಕ್ ಮಟ್ಟದಲ್ಲಿ ಸಭೆಗಳನ್ನು ನಡೆಸಲು ತೀರ್ಮಾನಿಸಲಾಗಿದೆ. ಈಗಾಗಲೇ ಈ ಪ್ರಕ್ರಿಯೆ ಆರಂಭವಾಗಿದ್ದು, ಸ್ಥಳೀಯ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಕ್ರಮ ವಹಿಸಲಾಗುವುದು‘ ಎಂದರು.

ಬಿಬಿಎಂಪಿ ಚುನಾವಣೆಗೆ ಸಂಬಂಧಿಸಿದಂತೆ ಪ್ರತ್ಯೇಕ ಸಭೆ ಹಾಗೂ ಬೂತ್ ಮಟ್ಟದಲ್ಲಿ ಸಭೆ ನಡೆಸಲಾಗುವುದು. ಜಿಲ್ಲಾ, ತಾಲ್ಲೂಕು ಪಂಚಾಯಿತಿ ಸೇರಿ ವಿವಿಧ ಚುನಾವಣೆಗಳಲ್ಲಿ ಗೆದ್ದಿರುವ ಮತ್ತು ಸೋತಿರುವ ಅಭ್ಯರ್ಥಿಗಳನ್ನು ಆಹ್ವಾನಿಸಿ, ಸಲಹೆ ಪಡೆದು ಸಮಸ್ಯೆಗಳಿಗೆ ಸ್ಪಂದಿಸುವುದರ ಜೊತೆಗೆ ಪಕ್ಷ ಸಂಘಟನೆಗೆ ಒತ್ತು ನೀಡಲಾಗುವುದು ಎಂದು ಅವರು ತಿಳಿಸಿದರು.

’ಕಾರ್ಯಕರ್ತರಿಗೆ ಕೊಲೆ ಬೆದರಿಕೆ ಸೇರಿ ಸಮಸ್ಯೆಗಳಾಗಿ ಪೊಲೀಸ್ ಠಾಣೆಗಳಿಗೆ ಹೋದಾಗ ನೇರವಾಗಿ ನನಗೆ ಕರೆ ಮಾಡಿ. ತಕ್ಷಣ ಸಂಬಂಧಪಟ್ಟ ಪೊಲೀಸ್ ವರಿಷ್ಠಾಧಿಕಾರಿಗಳ ಜತೆಗೆ ಚರ್ಚಿಸಿ ಸಮಸ್ಯೆ ಬಗೆಹರಿಸಲು ಪ್ರಯತ್ನ ಮಾಡುವೆ‘ ಎಂದು ಭರವಸೆ ನೀಡಿದರು.

ಯಲಹಂಕ ಕ್ಷೇತ್ರದ ಚುನಾವಣಾ ಉಸ್ತುವಾರಿ ಧರ್ಮಸೇನ, ಕಾಂಗ್ರೆಸ್ ಮುಖಂಡರಾದ ಎಂ.ಎನ್. ಗೋಪಾಲಕೃಷ್ಣ, ಕೇಶವರಾಜಣ್ಣ, ಎಸ್.ಬಿ.ಭಾಷಾ, ಯಲಹಂಕ, ಹೆಸರಘಟ್ಟ, ದಾಸನಪುರ ಹಾಗೂ ಗ್ರಾಮಾಂತರ ಘಟಕಗಳ ಅಧ್ಯಕ್ಷರಾದ ವೈ.ಆರ್.ಶ್ರೀಧರ್, ನಾಗರಾಜಗೌಡ, ಜಯರಾಮಯ್ಯ, ಎನ್. ಎಂ.ಶ್ರೀನಿವಾಸ್, ಕೆಪಿಸಿಸಿ ಮಾಧ್ಯಮ ವಕ್ತಾರ ಮಂಜುನಾಥ್ ಅದ್ದೆ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರಾದ ಲಾವಣ್ಯ ನರಸಿಂಹಮೂರ್ತಿ, ರಂಗಸ್ವಾಮಿ ಇದ್ದರು.



ಕಾರ್ಯಕರ್ತರನ್ನು ಉದ್ದೇಶಿಸಿ ವೀರಪ್ಪ ಮೊಯಿಲಿ ಮಾತನಾಡಿದರು

ಎಸಿಬಿ ವಿಚಾರಣೆ ಎದುರಿಸಿದ ಜಮೀರ್ ಅಹಮ್ಮದ್

ಪ್ರಜಾವಾಣಿ ವಾರ್ತೆ



ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪ ಎದುರಿಸುತ್ತಿರುವ ಕಾಂಗ್ರೆಸ್ ಶಾಸಕ ಬಿ.ಜೆಡ್. ಜಮೀರ್ ಅಹಮ್ಮದ್ ಖಾನ್ ಅವರು, ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಎದುರು ಶನಿವಾರ ವಿಚಾರಣೆಗೆ ಹಾಜರಾಗಿದ್ದರು.

₹ 87.34 ಕೋಟಿ ಅಕ್ರಮ ಆಸ್ತಿ ಹೊಂದಿರುವ ಆರೋಪದ ಮೇಲೆ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಅಡಿಯಲ್ಲಿ ಜಮೀರ್ ವಿರುದ್ಧ ಎಫ್‌ಐಆರ್ ದಾಖಲಿಸಿದ್ದ ಎಸಿಬಿ, ಜುಲೈ 5ರಂದು ಅವರಿಗೆ ಸಂಬಂಧಿಸಿದ ಸ್ಥಳಗಳಲ್ಲಿ ಶೋಧ ನಡೆಸಿತ್ತು. ಈ ಪ್ರಕರಣದಲ್ಲಿ ವಿಚಾರಣೆಗೆ ಹಾಜರಾಗುವಂತೆ ತನಿಖಾ ತಂಡವು ಶಾಸಕರಿಗೆ ಜುಲೈ 16ರಂದು ನೋಟಿಸ್ ಜಾರಿಮಾಡಿತ್ತು.

ನಗರದ ರೇಸ್‌ಕೋರ್ಸ್ ರಸ್ತೆಯಲ್ಲಿರುವ ಖನಿಜ ಭವನದಲ್ಲಿನ ಭ್ರಷ್ಟಾಚಾರ ನಿಗ್ರಹ ದಳದ ಕೇಂದ್ರ ಕಚೇರಿಗೆ ಶನಿವಾರ ಬೆಳಿಗ್ಗೆ ಹಾಜರಾದ ಜಮೀರ್ ಅಹಮ್ಮದ್ ಖಾನ್, ಕೆಲವು ಗಂಟೆಗಳ ಕಾಲ ತನಿಖಾ ತಂಡದ ಪ್ರಶ್ನೆಗಳಿಗೆ ಉತ್ತರ ನೀಡಿದರು. ನಗರದ ಕಂಟೋನ್ಮೆಂಟ್ ರೈಲ್ವೆ ನಿಲ್ದಾಣದ ಸಮೀಪದಲ್ಲಿ ಶಾಸಕರು ನಿರ್ಮಿಸಿರುವ ಬೃಹತ್ ಬಂಗಲೆಗೆ ಸಂಬಂಧಿಸಿದಂತೆಯೇ ತನಿಖಾ ತಂಡ ಹಲವು ಪ್ರಶ್ನೆಗಳನ್ನು ಕೇಳಿದೆ ಎಂದು ಮೂಲಗಳು ತಿಳಿಸಿವೆ.

ಜಾರಿ ನಿರ್ದೇಶನಾಲಯವು ನೀಡಿರುವ ವರದಿ ಆಧಾರದಲ್ಲಿ ಎಸಿಬಿ ಎಫ್‌ಐಆರ್ ದಾಖಲಿಸಿ, ತನಿಖೆ ನಡೆಸುತ್ತಿದೆ. ಮನೆ ನಿರ್ಮಾಣಕ್ಕೆ ಸಂಬಂಧಿಸಿದ ಕೆಲವು ಮಾಹಿತಿ ಹಾಗೂ ದಾಖಲೆಗಳನ್ನು ಒದಗಿಸುವಂತೆ ತನಿಖಾ ತಂಡ ಸೂಚಿಸಿದೆ.

ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳ ವಿಚಾರಣೆ ಎದುರಿಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಜಮೀರ್ ಅಹಮ್ಮದ್ ಅವರು , 'ನನ್ನ ವಿರುದ್ಧ ರಾಜಕೀಯ ದುರುದ್ದೇಶದಿಂದ ಪ್ರಕರಣ ದಾಖಲಿಸಲಾಗಿದೆ. ಈ ರಾಜ್ಯದಲ್ಲಿ ನಾನು ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಇಬ್ಬರೇ ಇವರೆಲ್ಲರ ಕಣ್ಣಿಗೆ ಕಾಣುತ್ತಿದ್ದೇವೆ' ಎಂದು ಹೇಳಿದರು.

'ತನಿಖಾ ತಂಡ ಕೇಳಿರುವ ಎಲ್ಲ ಪ್ರಶ್ನೆಗಳಿಗೂ ಉತ್ತರ ನೀಡುವೆ. ಅವರು ಕೇಳಿರುವ ದಾಖಲೆಗಳನ್ನು ಒದಗಿಸಲು ಸ್ವಲ್ಪ ಕಾಲಾವಕಾಶ ನೀಡುವಂತೆ ಮನವಿ ಮಾಡಿದ್ದೇನೆ' ಎಂದು ಹೇಳಿದರು.



ಅವೆನ್ಯೂ ರಸ್ತೆ ನಿವಾಸಿಗಳಲ್ಲಿ ಮನೆಮಾಡಿದ ಆತಂಕ

ಮೂರು ಅಂತಸ್ತಿನ ಕಟ್ಟಡ ಕುಸಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೆಲದಿನಗಳಿಂದ ಬಿಡುವು ಕೊಡುತ್ತಲೇ ನಿರಂತರವಾಗಿ ಮಳೆ ಸುರಿಯುತ್ತಿದ್ದು, ಮೋಡ ಕವಿದ ವಾತಾವರಣ ಮುಂದುವರಿದಿದೆ.

ಅವೆನ್ಯೂ ರಸ್ತೆಯಲ್ಲಿ ಶಿಥಿಲಗೊಂಡಿದ್ದ ಮೂರು ಅಂತಸ್ತಿನ ಕಟ್ಟಡ ನಿರಂತರ ಮಳೆಯಿಂದಾಗಿ ಶನಿವಾರ ನಸುಕಿನಲ್ಲಿ ಕುಸಿದುಬಿದ್ದಿದ್ದು, ಅವಶೇಷಗಳ ತೆರವುಗೊಳಿಸುವ ಕೆಲಸ ಆರಂಭವಾಗಿದೆ.

'ಬೆಳ್ಳಿ ಬಸವ ದೇವಸ್ಥಾನದ ಬಳಿ ಕಟ್ಟಡವಿತ್ತು. ಇದರ ಮಾಲೀಕರು ಭಂಡಾರಿ ಕುಟುಂಬದವರೆಂದು ಗೊತ್ತಾಗಿದೆ. ಘಟನೆಯಿಂದ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ' ಎಂದು ಪೊಲೀಸರು ತಿಳಿಸಿದರು.

'ಹಲವು ತಿಂಗಳ ಹಿಂದೆಯೇ ಕಟ್ಟಡ ಶಿಥಿಲಗೊಂಡಿತ್ತು. ಕಟ್ಟಡದಲ್ಲಿ ವಾಸವಿದ್ದ ಕುಟುಂಬದವರು ಬೇರೆಡೆ ಸ್ಥಳಾಂತರಗೊಂಡಿದ್ದರು. ಆದರೆ, ಕಟ್ಟಡದ ಕೆಳ ಮಹಡಿಯಲ್ಲಿದ್ದ ಮಳಿಗೆಗಳನ್ನು ಬಾಡಿಗೆಗೆ ನೀಡಲಾಗಿತ್ತು.'

'ಶುಕ್ರವಾರ ರಾತ್ರಿಯೇ ಮಾಲೀಕರು ತಮ್ಮ ಅಂಗಡಿ ಬಂದ್ ಮಾಡಿಕೊಂಡು ಹೋಗಿದ್ದರು. ನಸುಕಿನಲ್ಲಿ ಕಟ್ಟಡ ಕುಸಿದಿದ್ದರಿಂದ, ಅಂಗಡಿಯಲ್ಲಿದ್ದ ವಸ್ತುಗಳು ಅವಶೇಷಗಳಡಿ ಸಿಲುಕಿದ್ದವು. ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಬಂದು ಕಾರ್ಯಾಚರಣೆ ನಡೆಸಿದರು' ಎಂದು ಹೇಳಿದರು.

ಅಕ್ಕ–ಪಕ್ಕದ ನಿವಾಸಿಗಳಿಗೆ ಆತಂಕ: 'ಕುಸಿದ ಕಟ್ಟಡದಿಂದಾಗಿ ಅಕ್ಕ–ಪಕ್ಕದ ಮನೆಯ ತಳಪಾಯಕ್ಕೆ ಧಕ್ಕೆ ಆಗುವ ಸ್ಥಿತಿ ಇದೆ. ಸಂಬಂಧಪಟ್ಟ ಅಧಿಕಾರಿಗಳು, ಅವಶೇಷವನ್ನು ಸ್ಥಳಾಂತರಿಸಿ ಮನೆಗಳ ಸುರಕ್ಷತೆಗೆ ಕ್ರಮ ಕೈಗೊಳ್ಳಬೇಕು' ಎಂದು ನಿವಾಸಿಗಳು ಆಗ್ರಹಿಸಿದರು.

ಅವೆನ್ಯೂ ರಸ್ತೆಯಲ್ಲಿ ಶನಿವಾರ ನಸುಕಿನಲ್ಲಿ ಕುಸಿದು ಬಿದ್ದಿದ್ದ ಕಟ್ಟಡದ ಅವಶೇಷಗಳನ್ನು ಜೆಸಿಬಿ ಯಂತ್ರದಿಂದ ತೆರವು ಮಾಡಲಾಯಿತು

– ಪ್ರಜಾವಾಣಿ ಚಿತ್ರ

ಆಟೊ ಕದ್ದು ಸಿಕ್ಕಿಬಿದ್ದ 'ಮಾರಿಗುಡಿ'

ಬೆಂಗಳೂರು: ಸಾರ್ವಜನಿಕ ಸ್ಥಳಗಳಲ್ಲಿ ನಿಲ್ಲಿಸುತ್ತಿದ್ದ ಆಟೊ ಕಳ್ಳತನ ಮಾಡುತ್ತಿದ್ದ ಆರೋಪಿ ರಘು ಅಲಿಯಾಸ್ ಮಾರಿಗುಡಿ (35) ಎಂಬುವವರನ್ನು ನಂದಿನಿ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ನಂದಿನಿ ಲೇಔಟ್ ನಿವಾಸಿ ರಘು, ಟೆಂಟ್ ಹೌಸ್‌ನಲ್ಲಿ ಕೆಲಸ ಮಾಡುತ್ತಿದ್ದ. ರಾತ್ರಿ ವೇಳೆ ನಗರದಲ್ಲಿ ಸುತ್ತಾಡಿ ಆಟೊ ಕದಿಯುತ್ತಿದ್ದ. ಈತನಿಂದ ಎರಡು ಆಟೊ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಮದ್ಯವ್ಯಸನಿಯಾಗಿದ್ದ ಈತನ ಕಿರುಕುಳದಿಂದ ಬೇಸತ್ತು ಪತ್ನಿ ದೂರವಾಗಿದ್ದಳು. ಈತನಿಗೆ ಬರುತ್ತಿದ್ದ ಸಂಬಳ, ಖರ್ಚಿಗೆ ಸಾಲುತ್ತಿರಲಿಲ್ಲ. ಇದೇ ಕಾರಣಕ್ಕೆ ಆಟೊ ಕದ್ದು, ಅದನ್ನು ಮಾರಾಟ ಮಾಡಿ ಹಣ ಸಂಪಾದಿಸುತ್ತಿದ್ದ' ಎಂದು ಪೊಲೀಸರು ತಿಳಿಸಿದರು.

'ಶಂಕರನಗರದ ಬಿಬಿಎಂಪಿ ಆಸ್ಪತ್ರೆ ಮುಂಭಾಗದಲ್ಲಿ ನಿಲ್ಲಿಸಿದ್ದ ಆಟೊವನ್ನು ಜುಲೈ 29ರಂದು ಆರೋಪಿ ಕದ್ದಿದ್ದ. ಈ ಬಗ್ಗೆ ಪ್ರಕರಣ ದಾಖಲಾಗಿತ್ತು. ಕದ್ದ ಆಟೊದಲ್ಲೇ ಆರೋಪಿ ವಿಧಾನಸೌಧ ಲೇಔಟ್ ವೃತ್ತದಲ್ಲಿ ಹೊರಟಿದ್ದ. ಗಸ್ತಿನಲ್ಲಿದ್ದ ಸಿಬ್ಬಂದಿ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಿಸಿದಾಗ ಕಳ್ಳತನದ ವಿಷಯ ಬಾಯ್ಬಿಟ್ಟ' ಎಂದೂ ಪೊಲೀಸರು ಹೇಳಿದರು.

ಆರೋಪಿ ರಘು ಬಳಿಯಿಂದ ನಂದಿನಿ ಲೇಔಟ್ ಪೊಲೀಸರು ಜಪ್ತಿ ಮಾಡಿದ ಆಟೊಗಳು

ಜೂಜಾಡುತ್ತಿದ್ದ ಪಾಲಿಕೆ ಸದಸ್ಯನ ಬಂಧನ

ಧಾರವಾಡ: ನಗರದ ಭೂಸಪ್ಪ ಚೌಕ್ ಬಳಿಯ ಮೇದಾರ ಓಣಿಯಲ್ಲಿ ನಡೆಯುತ್ತಿದ್ದ ಜೂಜಾಟದ ಅಡ್ಡೆಯ ಮೇಲೆ ಹುಬ್ಬಳ್ಳಿ ಧಾರವಾಡ ಸಿಸಿಬಿ ಪೊಲೀಸರ ತಂಡ ದಾಳಿ ಮಾಡಿ, ಪಾಲಿಕೆ ಸದಸ್ಯ ಸೇರಿ 10 ಜನರನ್ನು ಶನಿವಾರ ಬಂಧಿಸಿದೆ.

ಗಣೇಶ

ಮಹಾನಗರ ಪಾಲಿಕೆಯ 17ನೇ ವಾರ್ಡ್‌ನ ಕಾಂಗ್ರೆಸ್ ಪಕ್ಷದ ಸದಸ್ಯ ಗಣೇಶ ಮುಧೋಳ ಸೇರಿ ಹತ್ತಕ್ಕೂ ಹೆಚ್ಚು ಜನರನ್ನು ಬಂಧಿಸಲಾಗಿದೆ. ಮುಧೋಳ ಅವರ ಸಂಬಂಧಿಕರ ಮನೆಯ ಮೇಲೆ ಖಚಿತ ಮಾಹಿತಿ ಆಧರಿಸಿ ದಾಳಿ ನಡೆದಿದ್ದು, ಈ ದಾಳಿಯಲ್ಲಿ ಜೂಜಾಟಕ್ಕೆ ಬಳಸಿದ ₹1.10 ಲಕ್ಷವನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಈ ಕುರಿತು ಶಹರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೆಂಕಿಗಾಹುತಿಯಾದ ಕಾರು

ಕಾರಿಗೆ ಬೆಂಕಿ: ಅಪರಿಚಿತ ವ್ಯಕ್ತಿ ಸಜೀವ ದಹನ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ತಾಲ್ಲೂಕಿನ ಕುಂದಾಣ ಹೋಬಳಿ ಹೆಗ್ಗನಹಳ್ಳಿಯ ಖಾಸಗಿ ಲೇಔಟ್‌ನಲ್ಲಿ ಕಾರೊಂದು ಶನಿವಾರ ಸಂಜೆ ಬೆಂಕಿಗಾಹುತಿಯಾಗಿದ್ದು, ಅಪರಿಚಿತ ವ್ಯಕ್ತಿಯೊಬ್ಬರು ಸಜೀವವಾಗಿ ದಹನಗೊಂಡಿದ್ದಾರೆ.

ಮೃತರು ಯಲಹಂಕದವರು ಎಂದು ತಿಳಿದುಬಂದಿದ್ದು, ಕೌಟುಂಬಿಕ ಸಮಸ್ಯೆಯಿಂದ ಈ ಕೃತ್ಯ ಎಸಗಿರಬಹುದು ಎಂದು ಶಂಕಿಸಲಾಗಿದೆ. ಕಾರಿನ ಮಾಲೀಕರು ಪತ್ತೆಯಾಗಿಲ್ಲ. ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಬೆಳಿಗ್ಗೆ ಕೇಂದ್ರದ ಮಾಜಿ ಸಚಿವ ದಿವಂಗತ ಅನಂತಕುಮಾರ್ ಪ್ರತಿಷ್ಠಾನಕ್ಕೆ 3.10 ಎಕರೆ ಜಮೀನು ಮಂಜೂರು ಮಾಡಿರುವ ರಾಜ್ಯ ಸಚಿವ ಸಂಪುಟದ ತೀರ್ಮಾನ ಖಂಡಿಸಿ ಗ್ರಾಮಸ್ಥರು ಪ್ರತಿಭಟನೆ ನಡೆಸಿದ್ದ ಗ್ರಾಮದ ಸರಹದ್ದಿನಲ್ಲಿಯೇ ಈ ಕೃತ್ಯ ನಡೆದಿದೆ.

ನಿರಂತರ ಮಳೆ: ಹಲವೆಡೆ ಬಿತ್ತನೆಗೆ ಅಡ್ಡಿ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಹಲವು ದಿನಗಳಿಂದ ನಿತ್ಯ ಸುರಿಯುತ್ತಿರುವ ಮಳೆಯಿಂದ ನೆಲಮಂಗಲ ತಾಲ್ಲೂಕಿನ ರೈತರು ತತ್ತರಿಸಿದ್ದಾರೆ.

ಮಳೆಯಿಂದ ಹಲವೆಡೆ ಬಿತ್ತನೆ ಮಾಡಲು ಸಾಧ್ಯವಾಗದೆ ರೈತರು ಕೈಕಟ್ಟಿ ಕುಳಿತಿದ್ದಾರೆ. ಕೆಲವೆಡೆ ಬಿತ್ತನೆಯಾದ ಬೆಳೆಗಳಲ್ಲಿ ಕಳೆ ಕಿತ್ತು, ಗೊಬ್ಬರ ಹಾಕಿ ಬೇಸಾಯ ಮಾಡಲು ಸಾಧ್ಯವಾಗುತ್ತಿಲ್ಲ.

ತಾಲ್ಲೂಕಿನಲ್ಲಿ ಮುಂಗಾರು ಮಳೆಗೆ ತೊಗರಿ, ಅಲಸಂದೆ, ಅವರೆ, ಮೆಕ್ಕೆಜೋಳ, ಕಡಲೆಕಾಯಿ ಬಿತ್ತನೆ ಮಾಡಲಾಗುತ್ತದೆ. ಜುಲೈ ತಿಂಗಳ ಮಧ್ಯಭಾಗದಿಂದ, ಆಗಸ್ಟ್ ತಿಂಗಳ ಮಧ್ಯಭಾಗದವರೆಗೆ ರಾಗಿ ಬಿತ್ತನೆಯಾಗುತ್ತದೆ. ಆದರೆ, ಮಳೆಯ ಕಾಟದಿಂದ ಈ ಬಾರಿ ರೈತರು ಸಕಾಲಕ್ಕೆ ಬಿತ್ತನೆ ಮಾಡಲು ಸಾಧ್ಯವಾಗಿಲ್ಲ. ಬಿತ್ತನೆ ಆಗಿದ್ದರೂ ಅದರ ಬೇಸಾಯಕ್ಕೆ ಮಳೆ ಬಿಡುವು ಕೊಡುತ್ತಿಲ್ಲ. ತಗ್ಗುಪ್ರದೇಶಗಳಲ್ಲಿ ನೀರು ನಿಂತಿದ್ದು ಬಿತ್ತನೆಯಾಗಿರುವ ರಾಗಿ, ತೊಗರಿ, ಅವರೆ, ಜೋಳ ಸಂಪೂರ್ಣ ಮುಳುಗಿ ಕೊಳೆಯುವ ಸ್ಥಿತಿ ಮೂಡಿದೆ. ನಿರಂತರ ಮಳೆಯಿಂದ ಕಳೆ ಹೆಚ್ಚಾಗಿದೆ. ಬೆಳೆಗಳಿಗಿಂತ ಕಳೆಯೇ ಹೊಲಗಳಲ್ಲಿ ಕಾಣಿಸುತ್ತಿದೆ. ಒಂದಷ್ಟು ದಿನಗಳ ಕಾಲ ಮಳೆ ಬಿಡುವು ಕೊಟ್ಟಿದ್ದರೆ ಬೇಸಾಯಕ್ಕೆ ಅನುಕೂಲವಾಗುತ್ತಿತ್ತು ಎನ್ನುತ್ತಾರೆ ಯುವ ರೈತ ಜಗದೀಶ್.

ನೆಲಮಂಗಲ ತಾಲ್ಲೂಕಿನಲ್ಲಿ ಮುಂಗಾರು ಸಾಲಿನಲ್ಲಿ 1496.10 ಹೆಕ್ಟೇರ್ ಪ್ರದೇಶದಲ್ಲಿ ರಾಗಿ, 403.50 ಹೆಕ್ಟೇರ್‌ನಲ್ಲಿ ಮೆಕ್ಕೆಜೋಳ, 117.50 ಹೆಕ್ಟೇರ್‌ನಲ್ಲಿ ತೊಗರಿ, 21.0 ಹೆಕ್ಟೇರ್‌ನಲ್ಲಿ ಅವರೆ ಮತ್ತು 16.90 ಅಲಸಂದೆ ಬಿತ್ತನೆಯ ಗುರಿ ಹೊಂದಲಾಗಿದೆ.

ತಾಲ್ಲೂಕಿನಲ್ಲಿ 372 ಮಿಲಿ ಮೀಟರ್ ವಾಡಿಕೆ ಮಳೆಯಾಗಲಿದ್ದು, ಈಗಾಗಲೇ ಸರಾಸರಿ ಮಳೆ 536.17 ಮಿಲಿ ಮೀಟರ್ ಮಳೆಯಾಗಿದೆ.

ರೈತರು ಮಳೆಯಿಂದ ತಮ್ಮ ಬೆಳೆಗಳನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಬೆಳೆ ವಿಮೆಗಳನ್ನು ಮಾಡಿಸಿಕೊಳ್ಳುವ ಅಗತ್ಯವಿದ್ದು, ತಾಲ್ಲೂಕಿನ ರೈತರು ಆಗಸ್ಟ್ 15ರೊಳಗೆ ಬೆಳೆ ವಿಮೆ ಮಾಡಿಸಿಕೊಳ್ಳಬೇಕು ಎಂದು ನೆಲಮಂಗಲ ತಾಲ್ಲೂಕು ಸಹಾಯಕ ಕೃಷಿ ಅಧಿಕಾರಿ ರಾಘವೇಂದ್ರ ಹೇಳಿದರು.

ಆಗಸ್ಟ್ ತಿಂಗಳ ಕೊನೆಯವರೆಗೆ ರಾಗಿ ಬಿತ್ತನೆಗೆ ಅವಕಾಶವಿದೆ. ರೈತರು ಮಳೆ ಬಿಡುವು ಕೊಟ್ಟ ನಂತರ ಭೂಮಿಯನ್ನು ಹಸನು ಮಾಡಿಕೊಂಡು ಬಿತ್ತನೆ ಮಾಡಬಹುದು ಎನ್ನುತ್ತಾರೆ ಸಹಾಯಕ ಕೃಷಿ ಅಧಿಕಾರಿ ರಾಘವೇಂದ್ರ.

ಮಳೆಯಿಂದ ತೊಗರಿ ಹೊಲದಲ್ಲಿ ನೀರು ನಿಂತಿದೆ

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

AUTOMOTIVE

Four Wheelers Selling

Others

SALE DEC 2020 RENAULT TRIBER RXZ, 9500 KMS, WHITE, GOOD YEAR TYRES, MINT CONDITION. 9448081676.

OTHERS

Dance/ Music Classes

'MUSIC LESSONS, Personal/ Online. Piano, Guitar, Western and Carnatic Vocals in Indiranagar. Contact 9901968421 for more details.'

PUBLIC NOTICE

PUBLIC NOTICE

My client proposes to purchase the property more particularly described in the schedule hereunder from its present owner MRS.ANNIE KURIAKOSE, aged about 66 years, wife of late Mr.C.T.Kuriakose, residing at No.80/10, Bannerghatta Road, Hulivamu, Bangalore – 560076. It is represented by the present owner that she has clear and marketable title to the Schedule Property. Any person/persons who claims any right, title or interest of any nature or any lien, charge or enforceable right in relation to the Schedule Property and/or has any objections of any nature to the transaction should lodge such claim and/or objections in writing to the undersigned together with supporting documents within fifteen (15) days hereof, failing which it will presumed that no valid claims or objections subsist and my clients would proceed to complete the transaction with the present owner thereof subject to compliance with other statutory and legal formalities.

SCHEDULE PROPERTY

Item No.1 All that piece and parcel of the agricultural lands comprised in various survey numbers of Uchalagollahalli Village, Thondebhavi Hobli, Gowribidanur Taluk, Chikkaballapura District.

No.1, Sy.No.10/3, Total Extent Acre 3 | Gunta 32, Kharab Acre | Gunta, Net Extent Acre 3 | Gunta 32, Boundarie : E: East by, W: West by N: North by, S: South by, E: Sy.No.10/1A, W:Sy, No.8 of N: Sy, No.9, S:Sy. No.10/2

2	19/6	1	1½	–	1½	1	E:Sy. No.19/1 W: Sy. No.20 N: No.19/5 S: Sy. No.19/4
3	10/1B2	3			3		E:Sy. No.14/1 W: Sy. No.10/1A, N: No.10/1B1, S:Sy.No.12

Item No.2 All that piece and parcel of the agricultural lands comprised in various survey numbers of Arasalabande Village, Manchenahalli Hobli, Gowribidanur Taluk, Chikkaballapura District.

No.1, Sy. No. 65/4, Total Extent Acre 3 | Gunta 19, Kharab Net Extent Acre 3 | Gunta 19, Boundaries E: East by, W: West by, N: North by, S: South by, E: Village Road, W: Sy. No.65/2, N: Sy. No.65/3, S: Village Boundary

2. Sy. No. 65/5, Total Extent Acre 2 | Gunta 11, Kharab Net Extent Acre 2 | Gunta 11, Boundaries E: East by, W: West by, N: North by, S: South by, E: Village Road, W: Sy. E:Sy.No.64, W:Remaining portion of Sy.No.65/1, N:Sy.No.67, S:Sy.No.65/3

3. Sy. No. 65/6, Total Extent Acre - | Gunta 20, Kharab Net Extent Acre - | Gunta 20, Boundaries E: East by, W: West by, N: North by, S: South by, E: Village Road, E:Sy.No.65/4, W: Remaining portion of Sy.No.65/2, N: Property of Sri. A.L. Anjan & Sri.A.L. Prashanth S: Uchalagollahalli Village Boundary

ARVIND RAGHAVAN
Advocate
No.48, 'ISHITHA', 2nd Main Road,
Vyalikaval, Bangalore – 560 003.
Place: Bengaluru Mob: 98450 04419
Date: 07/08/2022

PUBLIC NOTICE

From:
MR. SANTOSH MARKOSE,
aged about 48 years. son of Mr.CM. Markose, residing at 108/130A, MOUNTS BAYRD, PERTH, NA 6000 represented by his General Power of Attorney holder
MR.SAM JOSEPH,
aged about 47 years, son of Mr.C.M. Markose,residing at No.302, TGR Comer, 3 Main Road,Opp:Diya School, Bethel Nagar, Krishnarajapuram, Bangalore-560036
To,
MR. ARVIND RAGHAVAN,
ADVOCATE #48, ISHITHA', 2ND MAIN, VYALIKAVAL BANGALORE-560 003.
Sir,
As you are aware, I have negotiated with your clients RANKA RAJ PROPERTIES a partnership firm, having its office at No.07/1, Old No.451, 3rd Floor, No.451, 22nd Cross, 3rdBlock, Jayanagar, Bengaluru-560 017 for the sale the Schedule Property. In this regard, I hereby give my no objection and express consent to your issuing a public notice in English and Vernacular Newspapers, inviting objections and or claims of any nature whatsoever by any other person/s who are interested in the same in any manner within a period of fifteen (15) days from the publication of such notice. This letter in itself does not constitutes any agreement or arrangement for the sale of the Schedule Property to your clients and is been issued only for the purpose of enabling you to proceed with issue of a public notice in English and Vernacular Newspapers for and on behalf of your client to invite claims or objections by any person/s to the proposed purchase of the Schedule Property by your clients for a period of 15 days from the date of issue of the notice.

SCHEDULE PROPERTY

All that piece and parcel of the agricultural lands comprised in various survey numbers of Uchalagollahalli Village Thondebhavi Hobli, Gowribidanur Taluk, Chikkaballapura District.

No.1, Sy.No.9, Total Extent Acre 5| Gunta 20 | Kharab Acre -| Gunta, 20, Net Extent Acre 5 | Gunta -, Boundaries : E: East by, W: West by N: North by, S: South by, E: Arsalabande Village Boundary W: Sy, No.8/2 of, N: Araslabande Village Boundary, S: Sy. No.10/2

ARVIND RAGHAVAN
Advocate
No.48, 'ISHITHA', 2nd Main Road,
Vyalikaval, Bangalore – 560 003.
Mob: 98450 04419
Place: Bengaluru
Date: 07/08/2022

PUBLIC NOTICE

My Client M/s. RANKA RAJ VENTURE, a registered partnership firm having its office at 3rd Floor, No.451, 22nd Cross, 3rd Block, Jayanagar, Bangalore - 560011, has submitted the documents of title and other connected records relating to lands measuring an extent of about 30 Acres 30 Guntas comprised in several Sy. Nos. of Uchalagollahalli Village, Thondebhavi Hobli, Gowribidanuru Taluk, Chikkaballapura District which are owned by them which are set out in detail in the Schedule hereunder and hereinafter referred to as the "Schedule Property" with instructions to carry out a due diligence on title and submit an opinion on title to them. In this regard, I am calling upon any person/s vide this Notice who have claims/objections, if any, on the title of my clients to the Schedule Property to submit such claims/objections in writing either in person or through their Advocate/s within a period of 15 days from the date of this Notice.

SCHEDULE PROPERTY

All that piece and parcel of lands measuring an extent of 30 Acres 30 Guntas comprised in several Sy. Nos. of Uchalagollahalli Village, Thondebhavi Hobli, Gowribidanuru Taluk, Chikkaballapura District.

Sl.No.	Survey Nos.	Extent A - G
1	6	11-39
2	20/1	6-09
3	20/2	5-21
4	21/1	1-29
5	21/2	3-06
6	22/1	2-06

ARVIND RAGHAVAN
ARVIND RAGHAVAN & ASSOCIATES
ADVOCATES AND SOLICITORS
ISHITA #48, 2ND FLOOR, 2ND MAIN ROAD, VYALIKAVAL,
BANGALORE – 560 003
E-MAIL : arvind_ncsr@yahoo.com
Place: Bengaluru
Date: 07/08/2022

WEEKEND CORNER



ದೇಶದ ಬೊಂಬೆಗಳ ಮಾರುಕಟ್ಟೆಯಲ್ಲಿ ತೀವ್ರ ಸಂಚಲನ ಮೂಡಿದ್ದು, ಬೊಂಬೆಗಳ ರಫ್ತು ವಹಿವಾಟನಲ್ಲಿಯೂ ಭಾರಿ ಏರಿಕೆ ಆಗಿದೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ. ದೇಶದ ಬೊಂಬೆಗಳ ಮಾರುಕಟ್ಟೆಯಲ್ಲಿ ಮಹತ್ವದ ಸ್ಥಾನ ಪಡೆದಿರುವ ರಾಜ್ಯದ ಚನ್ನಪಟ್ಟಣ ಮತ್ತು ಕಿನ್ನಾಳ ಈ ಬೆಳವಣಿಗೆಗೆ ಹೇಗೆ ಸ್ಪಂದಿಸಿವೆ? ಈ ಪ್ರಶ್ನೆಗೆ ಉತ್ತರವಾಗಿ ಬೊಂಬೆಗಳೇ ಹೇಳಿದ ಕಥೆಗಳನ್ನು ಕೇಳೋಣ ಬನ್ನಿ...

ಬೊಂಬೆ ಹೇಳುತೈತಿ...

ನಾನೇ ರಾಜಕುಮಾರ, ಆದ್ರೆ ಆ ಚೀನಾದವನು...

ನಿರೂಪಣೆ: ಎಂ.ಎನ್.ಯೋಗೇಶ್

ಇನ್ನೂರು ವರ್ಷಗಳಿಂದ ರೂಪರೂಪಗಳನ್ನು ದಾಟಿ ಬಂದಿದ್ದೇನೆ, ನಾಮ ಕೋಟಿಗಳನ್ನು ಮೀಟಿ ಬಂದಿದ್ದೇನೆ. ಮೊದಮೊದಲು ಮಕ್ಕಳ ಕೈಯಲ್ಲಿ ಕೇವಲ ಆಟಿಕೆಯಾಗಿದ್ದೆ, ಜನಪದರ ಬದುಕು ಬಿಂಬಿಸುವ ಸಾಮಗ್ರಿಯಾಗಿದ್ದೆ. ನವರಾತ್ರಿ ಬಂದಾಗ ರಾಜ-ರಾಣಿ, ಆನೆ, ಕುದುರೆ, ಪೇದೆಯಾಗುತ್ತಿದ್ದೆ. ಕೃಷ್ಣ ಜನ್ಮಾಷ್ಟಮಿ ಕಾಲದಲ್ಲಿ ಕೊಳನೂದುವ ಕೃಷ್ಣನಾದೆ, ರಾಧೆ, ರುಕ್ಮಿಣಿಯ ರೂಪ ಪಡೆದೆ.

ಕಾಲಕಳೆದಂತೆ ಬದಲಾವಣೆಗಳ ಪರ್ವ ಕಂಡೆ. ಮಕ್ಕಳ ಕಲಿಕಾ ಉಪಕರಣವಾದೆ, ಗಣಿತ, ವಿಜ್ಞಾನದ ಮಾದರಿಯಾದೆ. ಉಡುಗೊರೆಯ ವಸ್ತುವಾದೆ, ಮನೆಯ ಆಲಂಕಾರಿಕ ಸಾಮಗ್ರಿಯಾದೆ, ಹೆಂಗಳರ ಕಿವಿಯೋಲೆ, ಕೊರಳ ಮಾಲೆಯಾದೆ. ನನ್ನ ಬಹುರೂಪ ಅಷ್ಟಕ್ಕೇ ನಿಲ್ಲುವುದಿಲ್ಲ. ಈಗೀಗ ಇನ್ನಷ್ಟು ಬದಲಾಗಿದ್ದೇನೆ, ವೈದ್ಯಕೀಯ ಉಪಕರಣವಾಗಿದ್ದೇನೆ. ಕ್ಯಾನ್ಸರ್ ರೋಗಿಗಳ ಗಂಟಲಲ್ಲಿ ಧ್ವನಿ ಪೆಟ್ಟಿಗೆಯಾಗಿದ್ದೇನೆ. ಮಧುಮೇಹಿಗಳ ಪಾದರಕ್ಷೆಯಾಗಿದ್ದೇನೆ, ಹಸ್ತರಕ್ಷೆಯಾಗಿದ್ದೇನೆ.

ನಾನು ಯಾರು ಎಂದು ಗೊತ್ತಾಯಿತಾ? ನಾನು ಕಲೆ ಸಂಸ್ಕೃತಿಯ ಭಾಗ. ಹೌದು ನಾನು ಬೇರಾರೂ ಅಲ್ಲ, ಚನ್ನಪಟ್ಟಣ ಗೊಂಬೆ...

ನಾನು ಇಲ್ಲಿಯವರೆಗೂ ಮೌನವಾಗಿಯೇ ಇದ್ದೆ, ಈಗ ಮೌನ ಮುರಿಯಬೇಕು ಅಂದುಕೊಂಡಿದ್ದೇನೆ. ನಿವ್ವೇಳುವಂತಹ ಈ ಆಧುನಿಕ ಕಾಲದಲ್ಲಿ ಒಂದಷ್ಟು ವಿಚಾರ ಹಂಚಿಕೊಳ್ಳಬೇಕಿದೆ. ನಿಮ್ಮಂತೆ ನಾನೂ ಬದಲಾಗಿದ್ದೇನೆ ಎಂಬುದನ್ನು ಹೇಳಲೇಬೇಕಿದೆ. ನನ್ನ ಹಾದಿಯ ಮುಂದಿರುವ ಸವಾಲುಗಳನ್ನು ಬಿಚ್ಚಿಡಬೇಕಿದೆ. ದಯವಿಟ್ಟು ಕಿವಿಗೊಟ್ಟು ಕೇಳಿ.

ನಾನು ಚನ್ನಪಟ್ಟಣಕ್ಕೆ ಬರುವುದಕ್ಕೂ ಮೊದಲು ಪರ್ಷಿಯಾ ಕುಶಲಕರ್ಮಿಗಳ ಕೈಯೊಳಗಿದ್ದೆ. ನನ್ನದು ಜಪಾನಿ ವಿನ್ಯಾಸ ಎನ್ನುತ್ತಾರೆ ಇತಿಹಾಸವನ್ನು ಬರೆದವರು. ನನ್ನನ್ನು ಮನಸಾರೆ ಮೆಚ್ಚಿಕೊಂಡಿದ್ದ ಟಿಪ್ಪು ಸುಲ್ತಾನ್ ಪರ್ಷಿಯಾದಿಂದ ಕುಶಲಗಾರರನ್ನು ಕರೆತಂದು ಚನ್ನಪಟ್ಟಣದ ಕುಶಲರ್ಮಿಗಳಿಗೆ ತರಬೇತಿ ಕೊಡಿಸಿದ. ನಂತರ ನಾನು ಚನ್ನಪಟ್ಟಣ, ನೀಲಸಂದ್ರ, ಕರಿಯಪ್ಪನ ದೊಡ್ಡಿ, ಹೊಂಗನೂರು, ಕಲಾನಗರ ಗ್ರಾಮಗಳ ಜನರ ಬದುಕಿನ ಭಾಗವಾಗಿ ಬೆಳೆದೆ. ನಂತರ ಚನ್ನಪಟ್ಟಣವು ನನ್ನ ಹೆಸರಿನಿಂದಲೇ ಗುರುತಿಸಿಕೊಂಡಿದ್ದು ಇತಿಹಾಸ.

ಎಲ್ಲೆಂದರಲ್ಲಿ ಬೆಳೆಯುತ್ತಿದ್ದ 'ಆಲೆ ಮರ' ನನಗೆ ರೂಪ ನೀಡಿತು. ಅನ್ಯ ಉದ್ದೇಶಕ್ಕೆ ಬಳಕೆಯಾಗದ ಈ ಮೆದುವಾದ ಮರದ ತುಂಡೇ ನನ್ನ ದೇಹ, ನನ್ನ ಜೀವ. ಮರದಲ್ಲಿ ದೂಳಿನ ಘಾಟಿಲ್ಲ, ಕೆಟ್ಟ ವಾಸನೆಯಿಲ್ಲ, ಹಾಲಿನಂತೆ ಶುದ್ಧ, ನನ್ನ ಮನಸ್ಸಿನಂತೆಯೇ ಪರಿಶುದ್ಧ. ನನ್ನ ಜನ್ಮದಾತರಿಗೆ ನಾನೆಂದೂ ತೊಂದರೆ ಕೊಟ್ಟಿಲ್ಲ. ತಾಳೆ ಗರಿ, ಅರಗು, ತರಕಾರಿಗಳ ನೈಸರ್ಗಿಕ ವರ್ಣವೇ ನನ್ನ ಬಣ್ಣ. ಕಾಮನಬಿಲ್ಲಿಗಿಂತಲೂ ಹೆಚ್ಚು ಬಣ್ಣಗಳಿಂದ ನಾನು ರೂಪಿತ ಎನ್ನುವುದನ್ನು ಮತ್ತೆ ನಿಮಗೆ ಹೇಳವ ಅಗತ್ಯವಿಲ್ಲ ಅಲ್ಲವೇ?

ಕಡುಗೆಂಪು, ತಿಳಿ ನೀಲಿ, ಗಿಳಿ ಹಸಿರು, ನೇರಳೆ, ಹಳದಿ, ಕಿತ್ತಳೆ, ಕಪ್ಪು... ನೀವು ಬಣ್ಣದ ಹೆಸರು ಹೇಳಿ. ಅದೇ ಬಣ್ಣದಲ್ಲಿ ನಾನು ನಿಮ್ಮ ಮುಂದೆ ಇರುತ್ತೇನೆ. ನಿಸರ್ಗದ ಬಣ್ಣಗಳ ಒಡನಾಟ ನನ್ನದು, ಮಕ್ಕಳು ಆಟವಾಡುವಾಗ ನನ್ನನ್ನು ಬಾಯಿಗಿಟ್ಟರೂ ಅವರಿಗೆ ತೊಂದರೆಯಾಗದು. ಅವರೆಲ್ಲ ನನ್ನ ಪ್ರೀತಿಯ ಗೆಳೆಯರಲ್ಲವೇ?

ಮೈಸೂರು ಮಹಾರಾಜರ ಪ್ರಭಾವದಿಂದ ನಾನು ಹೊಸ ರೂಪ ಪಡೆದೆ. ದಸರಾ ಗೊಂಬೆಯಾಗಿ ಅರಮನೆಯ ಸುಖ ಅನುಭವಿಸಿದೆ. ರಾಜ-ರಾಣಿಯಾಗಿ ಸಿಂಹಾಸನವೇರಿದೆ. ಜಂಬೂಸವಾರಿಯ ಪ್ರತಿರೂಪವಾದೆ. ಕೇವಲ ಆಟಿಕೆಯಾಗಿದ್ದ ನನಗೆ ದೊಡ್ಡ ಸ್ಥಾನವೇ ಸಿಕ್ಕಿತು. ಇನ್ನೇನು ನವರಾತ್ರಿ ಬರುತ್ತಿದೆ, ಮನೆಮನೆಯಲ್ಲೂ ನನ್ನ ವೈಭವ ಗರಿಗೆದರುವ ಕಾಲವಿದು.

ಬದಲಾವಣೆ ಜಗದ ನಿಯಮ ಎಂಬಂತೆ ನನ್ನ ಜನನದ ಸ್ವರೂಪವೂ ಬದಲಾಗಿದೆ. ಮೊದಮೊದಲು ಸಹಜ ಹೆರಿಗೆಗಳ ಮೂಲಕ (ಕೈಯಂತ್ರ - ಪಟ್ರಿ) ಜನ್ಮ ಪಡೆಯುತ್ತಿದ್ದ ನಾನೀಗ ಅತ್ಯಾಧುನಿಕ ಲೇತ್, ಟರ್ನರ್‌ನಲ್ಲಿ ಅರಳುತ್ತಿದ್ದೇನೆ. ಆದರೂ ನೀಲಸಂದ್ರ ಗ್ರಾಮದ 60 ಕುಟುಂಬಗಳು ಈಗಲೂ ಪಟ್ರಿಯಿಂದಲೇ ನನಗೆ ಜನ್ಮ ಕೊಡುತ್ತಿದ್ದಾರೆ.

ನಾನು 25ಕ್ಕೂ ಹೆಚ್ಚು ದೇಶಗಳಿಗೆ ರಫ್ತಾಗುತ್ತೇನೆ, 15 ಎಕರೆ ಭೂಮಿಯಲ್ಲಿ ಚನ್ನಪಟ್ಟಣ ಕ್ರಾಫ್ಟ್ ಪಾರ್ಕ್ ಸಹ ತಲೆ ಎತ್ತಿದೆ. ಹತ್ತಾರು ಕರಕುಶಲ ಕಂಪನಿಗಳು ಅಲ್ಲಿ ವಹಿವಾಟು ನಡೆಸುತ್ತಿವೆ. ಬೆಂಗಳೂರಿನಿಂದ ಮೈಸೂರಿನವರೆಗೆ ರಾಷ್ಟ್ರೀಯ ಹೆದ್ದಾರಿಯಲ್ಲಿ ನನ್ನನ್ನು ಮಾರಾಟಮಾಡುವ ನೂರಾರು ಅಂಗಡಿಗಳಿವೆ, ರೈಲುನಿಲ್ದಾಣ, ವಿಮಾನನಿಲ್ದಾಣದಲ್ಲೂ ನನ್ನನ್ನು ಗಡಿಗಳಾಚೆಗೆ ಕಳಿಸಿಕೊಡುವ ಮಳಿಗೆಗಳಿವೆ. ಆದರೆ, ನನ್ನ ಪ್ರಶ್ನೆಗೆ ಉತ್ತರ ಕೊಡಿ, ಯಾರು, ಯಾರು ಕೇಳುತ್ತಾರೋ ಅವರ ಬಳಿ ಕಳುಹಿಸಿಕೊಡಲು ನನ್ನ ಪ್ರತಿರೂಪರನ್ನು ಸೃಷ್ಟಿಸಿಕೊಡುವ ಜನ ಚನ್ನಪಟ್ಟಣದಲ್ಲಿ ಎಲ್ಲಿದ್ದಾರೆ?

ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ 'ಮನ್ ಕಿ ಬಾತ್'ನಲ್ಲಿ ನನ್ನನ್ನು ಕೊಂಡಾಡಿದ ನಂತರ ಜನರ ಆಸಕ್ತಿ ನನ್ನತ್ತ ಹೆಚ್ಚು ಹೊರಳಿದೆ. ವೋಕಲ್ ಫಾರ್ ಲೋಕಲ್ ಟಾಯ್, ಟೇಕ್ ಅಪ್ ಫಾರ್ ಟಾಯ್ಸ್, ಲೆಟ್ ಅಸ್ ಮೇಕ್ ಟಾಯ್ಸ್ ಟುಗೆದರ್ (ಸ್ಥಳೀಯ ಗೊಂಬೆಗಳಿಗೆ ಧ್ವನಿಯಾಗೋಣ, ಗೊಂಬೆಗಳ ಜೊತೆ ಸಾಗೋಣ, ಒಟ್ಟಾಗಿ ಎಲ್ಲರೂ ಗೊಂಬೆ ತಯಾರಿಸೋಣ) ಎಂದೆಲ್ಲಾ ಪದಪುಂಜ ಉದುರಿಸಿದ್ದಾರೆ ಪ್ರಧಾನಿ. ಆದರೆ ವಾಸ್ತವದ ವಿಚಾರ ಹೇಳ್ತೀನಿ ಕೇಳಿ. ನನ್ನನ್ನು ವಿದೇಶಗಳಿಗೆ ಕಳಿಸುವಷ್ಟು ನನ್ನ ಪ್ರತಿರೂಪಗಳ ಜನನ ಆಗುತ್ತಿಲ್ಲ. ಹೀಗಾಗಿ ಬಹುತೇಕ ಅಂಗಡಿಗಳಲ್ಲಿ ಶೇ 80ರಷ್ಟು ಚೀನಾ ಗೊಂಬೆ, ಆಟಿಕೆಗಳೇ ತುಳುಕುತ್ತಿವೆ. ನನ್ನ ವಿನ್ಯಾಸವನ್ನೇ ಹೋಲುವ, ನನ್ನ ಬಣ್ಣವನ್ನೇ ಮರೆಮಾಚುವ, ನನ್ನಂತೆಯೇ ಕಾಣುವ ಚೀನಿ ಗೊಂಬೆ ನನ್ನನ್ನು ತುಳಿಯುತ್ತಿದೆ.

ಪ್ರಧಾನಿಯವರೇ, ನಿಮ್ಮ ಭಾಷಣ ಖಂಡಿತಾ ಚೆನ್ನಾಗಿದೆ. ನಿಮ್ಮ ಮಾತು ಕೇಳಿ ನಾನೂ ಖುಷಿ ಪಟ್ಟಿದ್ದೇನೆ. ಆದರೆ ನನ್ನ ಉಳಿವಿಗಾಗಿ ಚೀನಿ ಗೊಂಬೆಯನ್ನು ನಿಷೇಧಿಸಲು ನಿಮಗೆ ಸಾಧ್ಯವಿದೆಯೇ? ಚೀನಿ ಗೊಂಬೆಗೆ ನನಗಿಂತಲೂ ಬೆಲೆ ಕಡಿಮೆ ಇದ್ದು ಜನರು ಅದನ್ನೇ ಖರೀದಿಸುತ್ತಿದ್ದಾರೆ. ಅದು ನನ್ನಷ್ಟು ಮೆದುವಾಗಿಲ್ಲ, ಹಿತವಾಗಿಲ್ಲ, ನೈಸರ್ಗಿಕವಾಗಿಲ್ಲ, ಪರಿಸರ ಸ್ನೇಹಿಯಾಗಿಲ್ಲ. 11ನೇ ಪುಟಕ್ಕೆ...

ನನ್ನ ಭವಿಷ್ಯ ಚಿಂತಿ ತಂದೈತಿ ಸಾಹೇಬ್ರ...

ನಿರೂಪಣೆ: ಪ್ರಮೋದ

ನಮಸ್ಕಾರ್ರೀ ಸಾಹೇಬ್ರ,

ಕಣ್ಣು ಹೆಂಗ ಹೊಳಿತಾವು ಗೊತ್ತೇನ್ರಿ? ನೋಡಾಕ ರಾಜಕುಮಾರಿ ಹಂಗ ಕಾಣ್ತೇನಿ. ಜರದಾರಿ ಸೀರಿ ಉಟ್ಟೀನಿ, ಕಾಸಿನ ಸರ ಹಾಕೀನಿ, ಮೈಮರೆಸುವ ಬಣ್ಣ ನನ್ನದೈತಿ, ನೋಡಿದ ಕೂಡ್ಲೇ ಎತ್ಕೊಂಡು ಮುದ್ದು ಮಾಡ್ಬೇಕು ನೋಡ್ರಿ ನನ್ನ. ಅಬ್ಬಬ್ಬಾ, ನನ್ನ ಜನ್ಮದಾತರು ನನ್ನೊಳಗ ಎಂಥಾ ಕಳೆ ತುಂಬ್ಯಾರ. ಜೀವನೂ ಇದ್‌ಬಿಟ್ಟಿದ್ರ ನಡೆದಾಡಿಬಿಡ್ತಿದ್ದೆ.

ಇಷ್ಟು ಹೇಳಿದ ಮೇಲೆ ನಾ ಯಾರೆಂದು ಗುರ್ತು ಸಿಕ್ತಲ್ಲ? ನಾನು ಬೊಂಬೆ, ಕಿನ್ನಾಳದ ಬೊಂಬೆ. ವಿಜಯನಗರ ಸಾಮ್ರಾಜ್ಯದ ಕಾಲದೊಳಗ ನಾನೂ ರಾಣಿಯಾಗಿ ಮೆರೆದಾಡೀನಿ. ಪಂಪಾ ವಿರೂಪಾಕ್ಷೇಶ್ವರ, ವಿಜಯವಿಠ್ಠಲ ದೇವಾಲಯ, ಕನಕಗಿರಿಯ ಕನಕಾಚಲಪತಿ ದೇವಸ್ಥಾನ ಹೀಗೆ ಎಲ್ಲ ಕಡಿಗೂ ನಾನದೀನಿ. ಕೊಪ್ಪಳ ಜಿಲ್ಲಾದ ಕಿನ್ನಾಳಕ್ಕ ಬಂದು ಶಾಶ್ವತವಾಗಿ ಠಿಕಾಣಿ ಹೂಡೀನಿ. ನನ್ನ ಇತಿಹಾಸ ಭಾಳಾ ದೊಡ್ಡದದ ನೋಡ್ರೆಪ.

ವಿಜಯನಗರ ಮತ್ತ ಮೈಸೂರಿನ ದೊರೆಗಳ ಬಳಿಕ ನವಾಬರ ಆಡಳಿತ ಶುರುವಾತಲ್ಲ? ಈಗಿನ ಕಲ್ಯಾಣ ಕರ್ನಾಟಕ ವ್ಯಾಪ್ತಿಯ ಕೊಪ್ಪಳ ಜಿಲ್ಲೆಯಲ್ಲಿ ಸಾಲರ್‌ಜಂಗ್ ಎಂಬ ನವಾಬರು, ಪುಣ್ಯಾತ್ಮರು, ಕರಕುಶಲ ಕಲೆಗೆ ಪ್ರೋತ್ಸಾಹ ಕೊಟ್ಟಿದ್ರು. ಈ ನಾಡಿನೊಳಗ ನಾನು ಈಗಲೂ ಜೀವಂತವಾಗಿರಲು ಕಾರಣರಾದವರು ಅವರು ಅನ್ನೂದನ್ನ ಮನಸಾರೆ ಸ್ಮರಿಸ್ತೀನಿ. ವಿಜಯನಗರ ದೊರೆಗಳ ಕಾಲದೊಳಗ ಚಿತ್ರಗಾರ ಕುಟುಂಬದವರು ನನ್ನ ಉತ್ತುಂಗಕ್ಕೆ ಕೊಂಡೊಯ್ದದ್ದೂ ದೊಡ್ಡ ಕತಿ ಐತಿ ನೋಡ್ರೆಪ. ವಿಜಯನಗರ ಸಾಮ್ರಾಜ್ಯ ಪತನ ಆಯ್ತಲ್ಲ, ಚಿತ್ರಗಾರರಲ್ಲಿ ಕೆಲವರು ಹೊಟ್ಟೆಪಾಡಿಗಾಗಿ ಕನಕಗಿರಿಗೆ ಹೊಂಟ್‌ಹೋದ್ರು. ಉಳಿದವರು ಕಿನ್ನಾಳಕ್ಕೆ ಬಂದು ಬಿಡಾರ ಹೂಡಿದ್ರು. ಅವರೇ ಈಗಲೂ ನನ್ನ ಜನ್ಮದಾತರು.

ನನಗೆ ಹೆಂಗ ರೂಪ ಕೊಡ್ತಾರ ಅಂತ ಹೇಳಿ ಬಿಡುವೆ. ಕಟ್ಟಿಗಿಯಿಂದಲೇ ನಮ್ ದೇಹ ನೋಡ್ರಿ ಸಾಹೇಬ್ರ. ಸೆಣಬು ನೆನೆಸಿ ತುಂಡುಗಳಾಗಿ ಕತ್ತರಿಸಿ, ಒಣಗಿಸಿ ಪುಡಿಮಾಡ್ತಾರ. ಕಟ್ಟಿಗಿ ಪುಡಿ ಮತ್ತು ಹುಣಸೆ ಬೀಜದ ಪೇಸ್ಟ್ ಬೆರೆಸಿ ಕಿಟ್ಟಾ ತಯಾರು ಮಾಡ್ತಾರ. ಕಟ್ಟಿಗೆಯ ಪುಡಿಯನ್ನು ನೀರಿನಲ್ಲಿ ಕಲಿಸಿ ಹದಗೊಳಿಸಿ ಉಂಡಿ ಮಾಡಿ ಒಣಗಿಸ್ತಾರ. ಆಕಾರ ಕೊಟ್ಟ ನಂತರ ಕಿಟ್ಟಾ ಹಚ್‌ತಾರ.

ಕಿನ್ನಾಳ ಕಲೆಯೊಳಗ ನಮ್ ಜೊತಿ ಪ್ರಾಣಿಗಳು, ಪಕ್ಷಿಗಳು, ಕಾಯಿಪಲ್ಯ, ಹಣ್ಣು ಹಂಪಲುಗಳ ಮಾದರಿಗಳಿಗೂ ಬೇಡಿಕಿ ಐತೆಂತ. ಹಬ್ಬದ ಋತುವಿನಲ್ಲಿ, ಜೇಡಿಮಣ್ಣಿನ ಆಟಿಕೆ, ಚಿತ್ರಗಳನ್ನು ಹೆಚ್ಚಾಗಿ ಗೋಮಯ ಮತ್ತು ಕಟ್ಟಿಗಿಯಿಂದ ತಯಾರು ಮಾಡ್ತಾರ.

ಕಿನ್ನಾಳವೆಂದರೆ ನಮ್ಮ ಕಿಸ್ಕಾಲು ಬೊಂಬೆಕ್ಕ ಮೊದಲ ಅಕರ್ಷಣಾ. ರಾಮಾಯಣ, ಮಹಾಭಾರತ, ಸ್ಕಂದಪುರಾಣದ ದೃಶ್ಯ, ನವಗ್ರಹಗಳು, ಗ್ರಾಮದೇವತೆಗಳ ಮೂರ್ತಿ, ಪಲ್ಲಕ್ಕಿ, ಛತ್ರಿ, ಚಾಮರ, ದುರ್ಗಾದೇವಿ, ಕೀಲುಗೌರಿ, ಕೀಲುಗೊಂಬೆ, ಅಲಂಕಾರಕ್ಕೆ ಬಳಸುವ ಆಟಿಕೆ ಸಾಮಗ್ರಿ, ಆಕಳು, ಆನೆ, ಲಕ್ಷ್ಮಿ, ಸರಸ್ವತಿ, ಗಣೇಶ, ಮತ್ಸ್ಯ, ದ್ವಾರಪಾಲಕರು, ಆಂಜನೇಯ, ಪಲ್ಲಕ್ಕಿ, ಜಾತ್ರೆಯ ಸಾಮಗ್ರಿ, ಚೌಕಿ, ಟಿಪಾಯಿ, ಗರುಡ, ಆಂಜನೇಯ, ರತಿ ಮನ್ಮಥ, ಕೂರ್ಮಾವತಾರ, ವರಾಹ, ನರಸಿಂಹ, ವಾಮನ, ಗೌರಿ, ಕೊಂತಿ ಪಟ್ಟಿ, ಪರಶುರಾಮ, ರಾಮ, ಕೃಷ್ಣ, ಬುದ್ಧ, ಕಲ್ಕಿ, ದಸರಾ ಬೊಂಬೆ... ಹಿಂಗ ನಮ್ಗ ಏನೇನೋ ಹೆಸರು ಕೊಟ್ಟು ಇಲ್ಲಿಂದ ಕರ್ಕೊಂಡು ಹೊಕ್ಕಾರ.

ನನ್ನ ಸೃಷ್ಟಿಕರ್ತರ ಬಗ್ಗೆಯೂ ಒಂದಷ್ಟು ಮಾತನಾಡಬೇಕಾಗೈತ್ರಿ. ಕಿನ್ನಾಳದಲ್ಲಿರುವ 72 ಚಿತ್ರಗಾರ ಕುಟುಂಬಗಳಷ್ಟೇ ಈ ಕಲೆಯನ್ನು ಪೋಷಣಾ ಮಾಡಕ್ಕತ್ತಾವ. ನನ್ನನ್ನೇ ನಂಬಿಕೊಂಡು ಅವರೆಲ್ಲ ಜೀವನ ನಡೆಸ್ಯಾರ ಅನ್ನೂದು ನಂಗೂ ಹೆಮ್ಮೆಯ ಮಾತಾಗೇದ. ನಾನು ಮಾರಾಟವಾಗಿ ರಾಜ್ಯ, ಹೊರರಾಜ್ಯಕ್ಕೆ ಹೋಗೀನಿ. ಜರ್ಮನಿ, ಇಂಗ್ಲೆಂಡ್, ಮಲೇಷ್ಯಾ, ಸಿಂಗಪುರ, ಸ್ವಿಟ್ಜರ್ಲೆಂಡ್ ಅಂತ ಯಾವ, ಯಾವ್ದೊ ದೇಶ ಸುತ್ತಾಡೀನಿ.

ವಿಜಯನಗರ ಅರಸರು ತಾವು ಕುಳಿತುಕೊಳ್ಳುವ ಸಿಂಹಾಸನಕ್ಕೆ ನಮ್ಮ ಕಿನ್ನಾಳ ಕಲೆಯ ಕಲಾಕೃತಿ ಹಾಕ್ಸಿದ್ರು. ಇದು ಹೆಮ್ಮೆ ಮಾತು ಹೌದೊ, ಅಲ್ಲೊ ನೀವ ಹೇಳ್ರಿ. ಸುಳ್ಳು ಯಾಕ್ ಹೇಳ್ಬೇಕು, ಹಿಂದ ನನ್ನ ಸೃಷ್ಟಿಕರ್ತರು ನನ್ನನ್ನೇ ನಂಬಿಕೊಂಡು ಅನೇಕ ಬಾರಿ ಉಪವಾಸ ಬಿದ್ದಾರ. ಆ ಕಷ್ಟದ ದಿನಗಳನ್ನೂ ನಾವು ನೆಪ್ಪ ಮಾಡ್ಕೋಬೇಕು ನೋಡ್ರಿ. ದಿನಾ ಜೋಳದ ರೊಟ್ಟಿ ತಿಂದು ವಾರಕ್ಕೆ ಒಂದು ದಿನ ಮಾತ್ರ ಅನ್ನ ಉಣ್ಣಬೇಕಾದ ಕೆಟ್ಟ ಪರಿಸ್ಥಿತಿಯನ್ನ ಅವರು ಕಂಡಾರ. ಈಗ ಸ್ಥಿತಿ ಸಾಕಷ್ಟು ಸುಧಾರಣೆ ಆಗೈತಿ. ನನ್ನನ್ನೇ ನಂಬಿಕೊಂಡವರಿಗೆ ದಿನಾ ಹೊಟ್ಟೆ ತುಂಬಾ ಊಟ, ಮೈ ತುಂಬಾ ಬಟ್ಟೆಗೆ ಏನೂ ಕೊರತೆ ಆಗಿಲ್ಲ ನೋಡ್ರಿ.

ನನ್ನ ಭವಿಷ್ಯದ ಬಗ್ಗೆ ಚಿಂತಿ ಆಗೈತಿ. ನನ್ನ ಸೃಷ್ಟಿ ಮಾಡಾಕ ಬೇಕಾದ ಪೊಳಕಿ ಮರ ಹಾಗೂ ಟಣಕಿನ ಮರ (ಹಗುರವಾದ ಕಟ್ಟಿಗೆ) ಮೊದಲು ನನ್ನ ಜಿಲ್ಲೆಯಲ್ಲಿಯೇ ಸಿಗ್ತಿದ್ದವು. ಯಾರೊ ಕಟ್ಟಿಗೆ ಕದ್ದೊಯ್ದರು ಎಂದು ಈಗ ಯಾರಿಗೂ ಕೊಡಾಣಿಲ್ಲ ಅಂತಾರ. ನನ್ನ ಅಂದ ಹೆಚ್ಚಿಸಾಕ ಬಣ್ಣದಲ್ಲಿ ಹಾಕುವ ಚಮಟಗಿ ತಯಾರಿಸಲು ಸುಮಾರು ಒಂದು ತಾಸು ಕಲ್ಲಿನಿಂದ ಕುಟ್ಟಿದರೆ 100 ಗ್ರಾಂ ಮಾತ್ರ ಚಮಟಗಿ ಬರ್ತೈತಿ. ಇದಕ್ಕ ಒಂದು ಯಂತ್ರ ಬೇಕಾಗೈತಿ. ಹಿಂಗ ತಯಾರು ಮಾಡಿದ ಬಣ್ಣ ಕನಿಷ್ಠ 100 ವರ್ಷ ಬಾಳ್ತದ. ನಮ್ ಆಂಜನೇಯ ಚಿತ್ರಗಾರ ಅದಾರಲ್ಲ, ಭಾಳಾ ಕೆಲಸ ಮಾಡಾಕತ್ಯಾರ. ನನ್ ಹೆಂಗ ತಯಾರು ಮಾಡ್ಬೇಕು ಅಂತ ಎಲ್ಲರಿಗೂ ಹೇಳಿಕೊಡ್ತಾರ. ಅವರ ಮಕ್ಕಳು ಸಂತೋಷ್ ಮತ್ತ ನಾಗರಾಜ್ ಅಂತ ಅದಾರ. ಅದೇನೋ ಅಂತೀರಲ್ಲಪ್ಪ, ಆನ್‌ಲೈನ್ ಅಂತ. ಅದ್ರಾಗಿಂದ ನಮ್ಮನ್ನ ಬೇರೆಯವ್ರ ಹತ್ರ ಕಳಿಸಿಕೊಡ್ತಾರ. ಕಿನ್ನಾಳಕ್ಕ ಸ್ಕಾಟ್ಲೆಂಡ್‌ನವರೂ ಬಂದು ನಮ್ಮನ್ನ ಸೃಷ್ಟಿ ಮಾಡುವ ಕಲೆ ಕಲ್ತು ಹೋಗ್ಯಾರ. ಅದೇನೋ ಟಾಯ್ ಕ್ಲಸ್ಟರ್ ಅಂತ್ರೆಪ, ಅದೂ ಬ್ಯಾರೆ ಇಲ್ಲೇ ಬಂದೈತಿ. ಅಲ್ಲೂ ನಮ್ಮನ್ನ ತಯಾರು ಮಾಡುವ ವಿಧಾನ ಹೇಳಿ ಕೊಡ್ತಾರ.

ಚಿತ್ರಗಾರ ಸಮಾಜದ ಎಲ್ಲರಿಗೂ ಮಾರುಕಟ್ಟೆ ಹ್ಯಾಂಗ ಕಂಡ್ಕೋಬೇಕು, ಆನ್‌ಲೈನ್ ಮೂಲಕ ಹ್ಯಾಂಗ ವಹಿವಾಟು ನಡೆಸಬೇಕು ಅನ್ನೂದು ಗೊತ್ತಿಲ್ಲ. ನಾನೇ ಎಷ್ಟೆಲ್ಲ ದೇಶಾ ಸುತ್ತು ಹೊಡೆದ್ರೂ ವ್ಯಾಪಾರದ ವಿಷ್ಯ ಬಂದ್ರ ಬಿಟ್‌ಕಣ್ಣು ಬಿಟ್ಟು ಮಿಕಿಮಿಕಿ ನೋಡ್ತಿರ್ತೀನಿ. ಸರ್ಕಾರ ನೇರವಾಗಿ ಖರೀದಿ ಮಾಡಿದ್ರ ಇನ್ನೊಂದಷ್ಟು ಕಾಲ ನೆಮ್ಮದಿಯಿಂದ ಬದುಕ್ತೀನಿ. ನನ್ನ ಕಲೆಯಿಂದ ವಿಜೃಂಭಿಸ್ತೀನಿ. ಇಲ್ಲದಿದ್ರೆ ನಾನು ಎಷ್ಟ್ ಚಂದ ಕಾಣ್ತಿದ್ರೂ ಕಣ್ಣೊಳಗ ನೀರು ಜಿನುಗ್ತಾನ ಇರತೈತಿ. ನೀವೆಲ್ಲರೂ ನನ್ ಜತಿಗೆ ಇರಿ. ನಿಮ್ ಮನಿಗೆ ಕರ್ಕೊಂಡು ಹೋಗಾಕ ಕಿನ್ನಾಳಕ್ಕ ಬರ್ರಿ. ನನ್ನ ಸೃಷ್ಟಿಕರ್ತರ ಕತಿ ಕೇಳ್ರಿ, ಅವರು ಬಿಚ್ಚಿಟ್ಟ ಬಾಳಿನ ಬುತ್ತಿಯ ಸವಿ ನೋಡ್ರಿ. ನನ್ನ ಅಲಂಕಾರವನ್ನ ಕಣ್ತುಂಬಿಕೊಳ್ರಿ.

ನೀವು ಬರ್ತೀರಂತ ಪ್ರೀತಿಯಿಂದ ಕಾಯಾಕತ್ತೀನಿ
ಕಿನ್ನಾಳದ ಬೊಂಬೆ.

(ಎಡದಿಂದ ಬಲಕ್ಕೆ); ರಮೇಶಬಾಬು ಪ್ರಜ್ಞಾನಂದ, ಅದಿಬನ್ ಭಾಸ್ಕರನ್, ದೊಮ್ಮರಾಜು ಗುಕೇಶ್, ನಿಹಾಲ್ ಸರಿನ್

ಕೃತಕ ಬುದ್ಧಿಮತ್ತೆಯ ಕಾಲದಲ್ಲಿ ಚದುರಂಗ ಚತುರರು

ಗಿರೀಶ ದೊಡ್ಡಮನಿ

ಅದೊಂದು ಕಾಲವಿತ್ತು. ಚೆಸ್ ಕ್ರೀಡೆಯೆಂದರೆ ವಯಸ್ಕ, ಅನುಭವಿ ಮತ್ತು ಬುದ್ಧಿವಂತ ಆಟಗಾರರ ಹೆಸರುಗಳಷ್ಟೇ ಪ್ರಚಲಿತವಾಗಿರುತ್ತಿದ್ದವು. ಆದರೆ, ಈಗ ಕಾಲ ಬದಲಾಗಿದೆ. ಎಂಟರಿಂದ ಹದಿನಾರು ವರ್ಷದೊಳಗಿನ ಚಿನಕುರುಳಿಗಳೇ ದಿಗ್ಗಜ ಆಟಗಾರರಿಗೆ ಸೋಲಿನ ರುಚಿ ತೋರಿಸುತ್ತಿದ್ದಾರೆ. ಗ್ರ್ಯಾಂಡ್‌ಮಾಸ್ಟರ್ ಪಟ್ಟವೇರುತ್ತಿದ್ದಾರೆ. ನಾರ್ವೆಯ ಗ್ರ್ಯಾಂಡ್‌ಮಾಸ್ಟರ್ ಮ್ಯಾಗ್ನಸ್ ಕಾರ್ಲಸನ್ ಅವರಂತಹ ಆಟಗಾರನಿಗೆ ತಮಿಳುನಾಡಿನ 15ರ ಪೋರ ಆರ್. ಪ್ರಜ್ಞಾನಂದ ಸೋಲಿನ ಕಹಿಯುಣಿಸಿದ್ದು ಐತಿಹಾಸಿಕ ಸಾಧನೆ. ಪ್ರಜ್ಞಾನಂದನ ಅಕ್ಕ ವೈಶಾಲಿ ರಮೇಶಬಾಬು ಗ್ರ್ಯಾಂಡ್‌ಮಾಸ್ಟರ್ ಆಗಿದ್ದು ಕೂಡ ಹದಿನಾರು ತುಂಬುವ ಮುನ್ನವೇ. ಕೇರಳದ ನಿಹಾಲ್ ಸರಿನ್, ತೆಲಂಗಾಣದ ಅರ್ಜುನ್ ಎರೈಗಸಿ, ಮಹಾರಾಷ್ಟ್ರದ ರೇಣುಕಾ ಸಾಧ್ವಾನಿ, ತಮಿಳುನಾಡಿನ ಡಿ. ಗುಕೇಶ್, ಗೋವಾದ ಲಿಯೊ ಲೂಕ್ ಮೆಂಡೋನ್ಸಾ... ಹೀಗೆ ಪಟ್ಟಿ ಬೆಳೆಯುತ್ತದೆ.

ಸದ್ಯ ತಮಿಳುನಾಡಿನ ಮಹಾಬಲಿಪುರಂನಲ್ಲಿ ನಡೆಯುತ್ತಿರುವ ಫಿಡೆ ಚೆಸ್ ಒಲಿಂಪಿಯಾಡ್‌ನಲ್ಲಿ ಭಾರತದ ಪದಕ ಸಾಧನೆಯ ಕನಸು ಹೊತ್ತು ಸಾಗುತ್ತಿರುವ ಪಡೆಯಲ್ಲಿ ಈ ಉದಯೋನ್ಮುಖರ ಸಂಖ್ಯೆಯೇ ಸಿಂಹಪಾಲು. ಆದರೆ ಇದೆಲ್ಲ ಆಗಿದ್ದು ಹೇಗೆ? ಇಲ್ಲಿ ಆಧುನಿಕ ತಂತ್ರಜ್ಞಾನದ ಪಾತ್ರವಿದೆ. ತರಬೇತಿ ಹಂತದಲ್ಲಿ ಆಧುನಿಕ ತಂತ್ರಾಂಶಗಳು ಮತ್ತು ಕೃತಕ ಬುದ್ಧಿಮತ್ತೆಯ ಬಳಕೆ. ಚೆಸ್ ಕ್ರೀಡೆಯ ಬೆಳವಣಿಗೆಗೆ ಸೂಪರ್ ಸಾನಿಕ್ ವೇಗವನ್ನು ಕೊಡುತ್ತಿರುವ ಅಂಶಗಳು ಇವು.

ಹಳೆ ಪದ್ಧತಿ; ಹೊಸ ತಂತ್ರಜ್ಞಾನ

ಎರಡೂವರೆ ದಶಕಗಳ ಹಿಂದೆ ದಿಗ್ಗಜ ಗ್ಯಾರಿ ಕಾಸ್ಪರೋವ್ ಮತ್ತು ಸೂಪರ್ ಕಂಪ್ಯೂಟರ್ ನಡುವಣ ಪಂದ್ಯವು ಚೆಸ್ ಆಟವು ಮಗ್ಗುಲು ಬದಲಿಸಿದ ಐತಿಹಾಸಿಕ ಘಟ್ಟ. ಆರು ಗೇಮ್‌ಗಳ ಆ ಪಂದ್ಯವು ಡೀಪ್ ಬ್ಲ್ಯೂ ವರ್ಸಸ್ ಕಾಸ್ಪರೋವ್ ಹಣಾಹಣಿಯೆಂದೇ ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. ಆ ಕಾಲಘಟ್ಟದ ಅಪ್ರತಿಮ ಆಟಗಾರ ಕಾಸ್ಪರೋವ್ ಅವರಿಗೇ ಸೆಡ್ಡು ಹೊಡೆಯಲು ಕೃತಕ ಬುದ್ಧಿಮತ್ತೆಯ ಬಳಕೆ ಮಾಡಲಾಗಿತ್ತು.

ಅಲ್ಲಿಂದ ಶುರುವಾದ ತಂತ್ರಜ್ಞಾನ ಮತ್ತು ಮಾನವನ ನಡುವಣ ಪೈಪೋಟಿಯಲ್ಲಿ ಲಾಭವಾಗಿದ್ದು ಚೆಸ್ ಕ್ಷೇತ್ರಕ್ಕೆ. ಬಾಲ್ಯದಲ್ಲಿಯೇ ಬುದ್ಧಿವಂತರು ಮತ್ತು ಚುರುಕಾಗಿರುವ ಮಕ್ಕಳನ್ನು ಗುರುತಿಸಿ ಆಧುನಿಕ ತಂತ್ರಜ್ಞಾನದೊಂದಿಗೆ ತರಬೇತಿ ಕೊಡುವ ಪದ್ಧತಿ ಬೆಳೆಯಿತು.

ಕೋವಿಡ್ ಸೃಷ್ಟಿಸಿದ ಬಿಕ್ಕಟ್ಟಿನಿಂದಾಗಿ ಎಲ್ಲ ಕ್ರೀಡಾಂಗಣಗಳ ಬಾಗಿಲು ಮುಚ್ಚಿದಾಗ ಮನೆಯಂಗಳದಲ್ಲಿ ಅರಳಿದ್ದು ಚೆಸ್ ಬೋರ್ಡ್‌ಗಳೇ. ಕೋವಿಡ್ ಸಂಕಷ್ಟವು ಈ ಕ್ರೀಡೆಗೆ ವರದಾನವಾಗಿದ್ದಂತೂ ನಿಜ. ಆನ್‌ಲೈನ್ ಮೂಲಕ, ಯೂಟ್ಯೂಬ್‌ನಲ್ಲಿ ಚೆಸ್ ತರಬೇತಿ, ಸ್ಪರ್ಧೆಗಳು ಬಹಳಷ್ಟು ಸಂಖ್ಯೆಯಲ್ಲಿ ನಡೆದವು. ಮತ್ತಷ್ಟು ಹೊಸ ಪ್ರತಿಭೆಗಳು ಈ ಮೂಲಕ ಹೊರಹೊಮ್ಮಲು ತಂತ್ರಜ್ಞಾನ ನೆರವಾಯಿತು.

'ಈಗ ಹತ್ತಾರು ಸಾಫ್ಟ್‌ವೇರ್‌ಗಳು ಲಭ್ಯ ಇವೆ. ಆವುಗಳಲ್ಲಿ ಯಾವುದನ್ನು ಯಾರಿಗಾಗಿ ಬಳಸಬೇಕು ಎಂದು ನಿರ್ಧರಿಸುವುದು ಕೋಚ್ ಮುಂದಿರುವ ಪ್ರಮುಖ ಸವಾಲು. ಪ್ರಸ್ತುತ ಚೆಸ್ ಆಡಲು ಬರುವ ಮಕ್ಕಳಲ್ಲಿ ಹಲವರಿಗೆ ತಂತ್ರಜ್ಞಾನ ಬಳಕೆ ಗೊತ್ತು. ನೆನಪಿನ ಶಕ್ತಿ ಕೂಡ ಚುರುಕಾಗಿರುತ್ತದೆ. ಇದನ್ನು ಆಧುನಿಕ ಕಾಲದ ಕೋಚ್‌ಗಳು ಮನಗಂಡಿದ್ದಾರೆ. ಅದಕ್ಕಾಗಿ ತಾವು ಕೂಡ ಅಪ್ಡೇಟ್ ಆಗಿದ್ದಾರೆ. ವಿಶ್ವದ ಹಲವೆಡೆ ನಡೆಯುವ ಬೇರೆ ಬೇರೆ ಶೈಲಿಯ ಚೆಸ್ ನಡೆಗಳನ್ನು ಹತ್ತಿರದಿಂದ ಅಧ್ಯಯನ್ ಮಾಡಲು ಸಾಧ್ಯವಾಗುತ್ತಿದೆ. ಬೇರೆ ಬೇರೆ ದೇಶಗಳಲ್ಲಿ ಆಟಗಾರರು ವಿವಿಧ ಸವಾಲುಗಳನ್ನು ಎದುರಿಸಿ ಯಶಸ್ವಿಯಾಗಲು ಬಯಸುವ ನಡೆಗಳನ್ನೂ ಇಲ್ಲಿ ಕುಳಿತಲ್ಲಿಯೇ ತಿಳಿದುಕೊಳ್ಳಬಹುದು. ಅದರ ಸಹಾಯದಿಂದ ತಮ್ಮ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುತ್ತಾರೆ.

13ನೇ ಪುಟಕ್ಕೆ...

ರುದ್ರ ರಮಣೀಯ ಲಡಾಖ್

ಪ್ಯಾಂಗಾಂಗ್ ಸರೋವರ

ಮುರುಗೇಶ ಹನಗೋಡಿಮಠ

ಪ್ರವಾಸ

ನಾವು ದೆಹಲಿಯಿಂದ ಲೇಹ್ ವಿಮಾನ ನಿಲ್ದಾಣದಲ್ಲಿ ಬಂದು ಇಳಿದಾಗ ಬೆಳಗಿನ ಜಾವ ಆರು ಗಂಟೆ. ಲೇಹ್, ಲಡಾಖ್‌ನ ರಾಜಧಾನಿ. ತಾಪಮಾನ ಬಹುಶಃ ಐದು ಡಿಗ್ರಿ ಸೆಲ್ಸಿಯಸ್! ನಮ್ಮ ಜೀವಮಾನದಲ್ಲಿಯೇ ಅಂಥ ಚಳಿಯನ್ನು ನಾವು ಅನುಭವಿಸಿರಲಿಲ್ಲ! ಮೈಕೈ ಎಲ್ಲ ಮರಗಟ್ಟಿ ಹೋಗಿತ್ತು. ಸರಿ, ಹೋದದಿನ ವಸತಿಗೃಹದಲ್ಲಿ ವಿರಮಿಸಿದೆವು.

ಲಡಾಖ್ ಸಮುದ್ರ ಮಟ್ಟದಿಂದ ಸುಮಾರು ಹನ್ನೊಂದು ಸಾವಿರ ಅಡಿ ಎತ್ತರದಲ್ಲಿದೆ. ಇಲ್ಲಿ ಆಮ್ಲಜನಕದ ಪ್ರಮಾಣ ಕಡಿಮೆ. ನಮ್ಮ ಉಸಿರಾಟದಲ್ಲಿ ತುಸು ಲಯ ಕಡಿಮೆ ಆಗುವುದಾದರೂ ಪ್ರಾಣಾಯಾಮ ಮಾಡುವುದರಿಂದ ಓಡಾಟ ಸರಾಗವಾಗುತ್ತದೆ. ಲೇಹ್, ಬಹುರಮ್ಯ ಸ್ಥಳ. ನೀಲ ಆಗಸ, ಬೆಳ್ಳಿ ಮೋಡ, ಪಕ್ಕದಲ್ಲಿ ಬೆಟ್ಟ ಗುಡ್ಡಗಳ ಸಾಲು, ನೋಡಲು ಬಲು ಚೆನ್ನ.

ಮಾರನೆಯ ದಿನ ನಮ್ಮ ಲಡಾಖ್ ಪ್ರವಾಸದ ಆರಂಭ. ಸನಿಹದಲ್ಲಿ ಶಾಂತಿ ಸ್ತೂಪ ಎಂಬ ಸುಂದರವಾದ ಬುದ್ಧ ವಿಹಾರವಿದೆ. ಇದನ್ನು ಬುದ್ಧ ಅವತರಿಸಿದ 2500 ವರ್ಷಗಳ ನೆನಪಿಗಾಗಿ 1991ರಲ್ಲಿ ನಿರ್ಮಿಸಲಾಗಿದೆ. ಇಲ್ಲಿಂದ ಸುತ್ತಲೂ ಕಣ್ಣು ಹಾಯಿಸಿದರೆ ಲೇಹ್ ನಗರವು ಬಹು ಸುಂದರವಾಗಿ ಕಾಣಿಸುತ್ತದೆ. ಶುಭ್ರವಾದ ಗಾಳಿ, ಹಿತಕರ ವಾತಾವರಣ ಮನಸ್ಸಿಗೆ ತುಂಬಾ ಮುದ ನೀಡುತ್ತವೆ. ಬುದ್ಧನಮೂರ್ತಿ ಬಹು ಎತ್ತರ ಮತ್ತು ಭವ್ಯವಾಗಿದೆ. ಆತನ ಕರುಣೆ, ವಾತ್ಸಲ್ಯ ಸುಂದರ ಮುಖದಲ್ಲಿ ಎದ್ದು ಕಾಣಿಸುತ್ತವೆ.

ಎರಡನೆಯ ದಿನ ತುಸು ದೂರವಿರುವ ಇನ್ನೊಂದು ಬುದ್ಧ ವಿಹಾರದ ದರ್ಶನ. ಸಾಮಾನ್ಯವಾಗಿ ಎಲ್ಲ ಬುದ್ಧ ವಿಹಾರಗಳು ಒಂದೇ ತೆರನಾಗಿರುತ್ತವೆ. ಮತ್ತೆ ಎಲ್ಲವೂ ಬೆಟ್ಟಗಳ ಮೇಲೆಯೇ ಇರುತ್ತವೆ. ನಮ್ಮ ಮೂರನೆಯ ದಿನದ ಪ್ರವಾಸ ಖಾರ್ ದೂಂಗ್ ಲಾ ಪಾಸ್ ಮುಖಾಂತರ ಶುರುವಾಯಿತು. ಅತ್ಯಂತ ಕಡಿದಾದ ಬೆಟ್ಟವನ್ನು ಸೀಳಿ, ಬಗೆದು ರಸ್ತೆ ಮಾಡಿದ್ದಾರೆ. ಇದು ತುಸು ಅಪಾಯಕಾರಿ ಪ್ರಯಾಣ. ಸುಮಾರು ನೂರೈವತ್ತು ಮೈಲಿ ದೂರ ಹೋಗಲು ಆರು ಗಂಟೆ ಬೇಕು! ಎಲ್ಲ ಮಣ್ಣಿನ ರಸ್ತೆ. ಎದುರಿಗೆ ಬರುವ ವಾಹನಗಳು, ಮೋಟಾರ್ ಬೈಕ್ ಸವಾರರು ಎಲ್ಲರನ್ನೂ ಸಂಭಾಳಿಸಿಕೊಂಡು ಹೋಗುವುದು ಚಾಲಕನ ಅನುಭವ ಮತ್ತು ಚಾಕಚಕ್ಯತೆಯನ್ನು ಅವಲಂಬಿಸಿದೆ!

ಕೆಳಗಿನಿಂದ ಮೇಲಕ್ಕೇರುವಾಗ ಆ ಹೆಬ್ಬಾವಿನ ರಸ್ತೆಗಳನ್ನು ನೋಡುವುದೇ ಒಂದು ಸೊಗಸು. ನಂತರ ತುಟ್ಟ ತುದಿಗೆ ಬಂದು ನಿಂತಾಗ ಕೆಳಗೆ ನೋಡಲು ಎದೆ ಝಲ್ ಎನ್ನುತ್ತದೆ. ಅಷ್ಟು ರೌದ್ರ ಮತ್ತು ಭಯಾನಕ ಆ ದೃಶ್ಯ. ಸುತ್ತಲೂ ದೈತ್ಯಾಕಾರವಾಗಿ ನಿಂತ ಪರ್ವತಗಳ ಸಾಲು. ಅಲ್ಲಲ್ಲಿ ಹಿಮಾಚ್ಛಾದಿತ ಸುಂದರ ದೃಶ್ಯ. ನಿಜಕ್ಕೂ ಅದು ತುಂಬಾ ರೋಮಾಂಚನಕಾರಿ ಅನುಭವ!

ಚಾಂಗ್ಲಾ ಪಾಸ್ ಎಂಬುದು ಲಡಾಖ್ ಭಾಗದಲ್ಲಿರುವ ಜಗತ್ತಿನ ಅತ್ಯಂತ ಎತ್ತರದ ಬೆಟ್ಟದ ತುದಿ. ಇದು ಸಮುದ್ರ ಮಟ್ಟದಿಂದ ಸುಮಾರು ಹದಿನೇಳು ಸಾವಿರ ಅಡಿ ಎತ್ತರದಲ್ಲಿದೆ. ಇಲ್ಲಿಗೆ ದೆಹಲಿ, ಜಮ್ಮು ಮತ್ತು ಕಾಶ್ಮೀರದಿಂದ ಮೋಟಾರ್ ಬೈಕ್ ಸವಾರರು ಬರುತ್ತಾರೆ. ಇಲ್ಲಿನ ಬೈಕ್ ಸವಾರಿ ಬಹು ಸಾಹಸಿ ಮತ್ತು ರೋಮಾಂಚಕಾರಿ ಅನುಭವ. ಚಾಂಗ್ ಲಾ ಪಾಸ್ ಬೆಟ್ಟದ ತುದಿ ಮುಟ್ಟಿದರೆ ಅವರಿಗೆ ಎವರೆಸ್ಟ್ ಶಿಖರ ಏರಿದಂತೆ! ಅವರ ಧೈರ್ಯ, ಸಾಹಸ ಮೆಚ್ಚುವಂಥದ್ದು.

ನಮ್ಮ ಮುಂದಿನ ಪ್ರಯಾಣ ಸಿಂಧೂ ನದಿ ಮತ್ತು ಝನ್ಸ್ಕಾರ್ ನದಿಗಳ ಸಂಗಮ ತಾಣ. ಚಿಕ್ಕವರಿದ್ದಾಗ ಸಿಂಧೂ ನದಿಯ ಸಂಸ್ಕೃತಿಯ ಮತ್ತು ಮೊಹೆಂಜೋದಾರೊ ಮತ್ತು ಹರಪ್ಪ ಕುರಿತು ಓದಿದ್ದೆವು. ಸಿಂಧೂ ಕೈಲಾಸ ಮಾನಸ ಸರೋವರದಲ್ಲಿ ಜನಿಸಿ ಕೆಳಗೆ ಹರಿದು ಬರುತ್ತಾಳೆ. ಪಚ್ಚೆ ಹಸುರಿನ ಸೀರೆಯುಟ್ಟು ನಮ್ಮ ಸಿಂಧೂ ಬರುವುದನ್ನು ಒಮ್ಮೆಯಾದರೂ ನೋಡಬೇಕು. ಆ ರಮ್ಯ, ವಿಹಂಗಮ ದೃಶ್ಯ ಅಪ್ರತಿಮ! ಮತ್ತೆ ಎದುರು ದಿಕ್ಕಿನಿಂದ ನೂರೈವತ್ತು ಮೈಲಿ ದೂರದಿಂದ ಮಣ್ಣಿನ ಮಗಳಾದ ಝನ್ಸ್ಕಾರ್ ಇಳಿದು ಬರುತ್ತಾಳೆ. ಸಿಂಧೂ ಮತ್ತೆ ಝನ್ಸ್ಕಾರ್ ಇಬ್ಬರೂ ಸಂಗಮಿಸಿ ಮುಂದೆ ಪಾಕಿಸ್ತಾನಕ್ಕೆ ತೆರಳುತ್ತಾರೆ.

ಮುಂದಿನ ಪ್ರಯಾಣ ಪ್ಯಾಂಗಾಂಗ್ ಸರೋವರ. ನಾವಲ್ಲಿ ತಲುಪಿದಾಗ ಸಂಜೆ ನಾಲ್ಕು ಗಂಟೆ. ಮೈ ಕೈ ಎಲ್ಲ ಸೆಟೆದು ನಿಂತಿದ್ದವು. ಅಂಥ ಭೀಕರ ಚಳಿ. ತಾಪಮಾನ ಎರಡು ಡಿಗ್ರಿ ಸೆಲ್ಸಿಯಸ್ ಮಾತ್ರ! ನಮ್ಮ ಕಾರು ಚಾಲಕ ಮೊದಲೇ ನಮ್ಮನ್ನು ಎಚ್ಚರಿಸಿದ್ದ. ಬೆಚ್ಚಗಿರಿ, ಕೈಗೆ ಗ್ಲೌಸ್ ಹಾಕಿಕೊಳ್ಳಿ ಎಂದು. ಪ್ಯಾಂಗಾಂಗ್ ಸರೋವರದ ದಡದಲ್ಲಿ ನಿಂತು ನೋಡಿದರೆ ಅದೆಂಥ ವಿಸ್ಮಯ. ಅತಿ ಶುಭ್ರವಾದ ನೀರು. ಒಂದಿನಿತೂ ಕಲ್ಮಶ ಇಲ್ಲ. ಸುತ್ತಲೂ ಮೇಘಾಚ್ಛಾದಿತ ಶಿಖರಗಳ ಸಾಲು. ತುಂಬು ಸರೋವರ. ನೀರನ್ನು ಮುಟ್ಟಿ ನೋಡಿದರೆ ಶಾಕ್ ಹೊಡೆದಂತಾಯಿತು. ನಮ್ಮ ಬೆರಳು ಕಳಚಿಹೋಯಿತೇ ಎಂದು ಗಾಬರಿ ಆಯಿತು. ಮೇಲೆ ತಣ್ಣಗಿನ ಗಾಳಿ, ಇಬ್ಬನಿಯ ಹನಿ. ಆಗ ನನಗೆ ಅನಿಸಿದ್ದು, ಬಹುಶಃ ಪಾಂಡವರು ವನವಾಸದಲ್ಲಿ ಬಾಯಾರಿಕೆ ತಣಿಸಿಕೊಳ್ಳಲು ಈ ಪ್ಯಾಂಗಾಂಗ್ ಸರೋವರಕ್ಕೆ ಬಂದಿದ್ದರು, ಯಕ್ಷನ ಪ್ರಶ್ನೆಗೆ ಉತ್ತರಿಸಲಾಗದೆ ಮೂರ್ಛೆ ಹೋದರು ಎಂದು!

ಈ ಪ್ಯಾಂಗಾಂಗ್ ಸರೋವರದ ದಡದಲ್ಲಿ 'ತ್ರಿ ಈಡಿಯಟ್ಸ್' ಸಿನಿಮಾದ ಕೊನೆಯ ದೃಶ್ಯ ಚಿತ್ರೀಕರಣ ನಡೆದಿದೆ. ಮತ್ತು 'ಜಾನ್ ಹೈ ತೋ ಜಹಾನ್ ಹೈ' ಚಿತ್ರೀಕರಣ ಕೂಡ ಆಗಿದೆ. ರಾತ್ರಿ ಅಲ್ಲಿನ ವಸತಿಗೃಹದಲ್ಲಿ ಪಟ್ಟ ಪಾಡು ಅಷ್ಟಿಷ್ಟಲ್ಲ. ಆಗ ತಾಪಮಾನ ಮೈನಸ್ ಎರಡು ಡಿಗ್ರಿ ಸೆಲ್ಸಿಯಸ್. ಎಷ್ಟು ರಜಾಯಿ ಹೊದ್ದು ಮಲಗಿದರೂ ಚಳಿ ಗಾಳಿ ನುಸುಳಿ ಬರುತ್ತಿತ್ತು. ಅದು ನಿಜಕ್ಕೂ ಯಾತನೀಯ. ಆದರೆ, ಮನುಷ್ಯ ಜೀವನದಲ್ಲಿ ಒಂದು ರಾತ್ರಿ ಇಲ್ಲಿ ಕಳೆಯಬೇಕು. ನಿಸರ್ಗದ ಮಡಿಲಲ್ಲಿ ಮಲಗಿ ಅನುಭವ ಪಡಬೇಕು. ಅದೊಂದು ಮರೆಯಲಾಗದ ರಾತ್ರಿ. ಆದರೆ ಅಲ್ಲಿನ ಹೋಟೆಲ್ ಸಿಬ್ಬಂದಿ ಅಂಥ ಚಳಿಯನ್ನೂ ಲೆಕ್ಕಿಸದೆ ನಮಗೆ ಆತಿಥ್ಯ ನೀಡಿದರು. ಅವರಿಗೆಲ್ಲ ನಾವು ಚಿರಋಣಿ.

ಅಲ್ಲಿಂದ ಮುಂದೆ ನಮ್ಮ ಪಯಣ ನುಬ್ರಾ ಪಟ್ಟಣದ ಕಡೆಗೆ. ಅಲ್ಲಿಯ ಒಂಟೆ ಸವಾರಿ ಬಹಳ ಪ್ರಸಿದ್ಧ. ಅಲ್ಲಿಯ ಒಂಟೆಗಳು ಜೋಡಿ ಡುಬ್ಬ ಹೊಂದಿವೆ. ಮುಂದೆ ಲೇಹ್ ನಗರಕ್ಕೆ ಮರಳಿ ಬಂದು ಮಾರುಕಟ್ಟೆಗೆ ಹೋಗಿದ್ದೆವು. ಇಲ್ಲಿನ ಡ್ರೈ ಫ್ರೂಟ್ಸ್ ತುಂಬಾ ಪ್ರಸಿದ್ಧ. ಲಡಾಖ್ ಜನರು ಸ್ನೇಹಪರರು ಮತ್ತು ಒಳ್ಳೆಯ ಆತಿಥ್ಯ ನೀಡುವವರು. ಎಲ್ಲ ಕಡೆ ಬೌದ್ಧರೆ ಹೆಚ್ಚು.

ತುರ್ ತುಕ್ ಎಂಬ ಹಳ್ಳಿಗೂ ನಾವು ಹೋಗಿದ್ದೆವು. ಅದು ನಮ್ಮ ದೇಶದ ಕೊನೆಯ ಹಳ್ಳಿ. ಅಲ್ಲಿಂದ ನಾವು ಪಾಕಿಸ್ತಾನವನ್ನು ಕಾಣಬಹುದು, ದುರ್ಬೀನು ಮೂಲಕ. 1971ರ ಪಾಕಿಸ್ತಾನ ಯುದ್ಧದಲ್ಲಿ ಎರಡು ಹಳ್ಳಿಗಳು ಬೇರೆ ಬೇರೆ ಆದವು. ಒಂದು ಪಾಕಿಸ್ತಾನದಲ್ಲಿ ಫಾರ್ನು, ಇನ್ನೊಂದು ಭಾರತದಲ್ಲಿ ತಾಂಗ್. ಅವಳಿ ಗ್ರಾಮಗಳು. ಅಲ್ಲಿ ಒಂದು ಬೋರ್ಡ್ ಹಾಕಿದ್ದಾರೆ. ಪತಿ ಒಂದು ಕಡೆ, ಪತ್ನಿ ಒಂದು ಕಡೆ, ತಂದೆ ತಾಯಿ ಒಂದು ಕಡೆ, ಮಕ್ಕಳು ಒಂದು ಕಡೆ. ಹೀಗೆ ದೇಶದ ಜತೆ ಕುಟುಂಬಗಳೂ ವಿಭಜನೆಯಾಗಿವೆ. ಹೀಗೆ ಇರುವಾಗ ನಮ್ಮಲ್ಲಿ ಒಂದು ಪ್ರಶ್ನೆ ಕಾಡುತ್ತದೆ. ಯುದ್ಧದಲ್ಲಿ ಗೆದ್ದವರು ಯಾರು? ಯಾರೂ ಇಲ್ಲ. ಸೋತವರು, ಸತ್ತವರು ಅಮಾಯಕರು ಮಾತ್ರ. ಬೇರೆಲ್ಲ ಪ್ರೇಕ್ಷಣೀಯ ಸ್ಥಳಗಳಿಗೆ ಹೋಲಿಸಿದರೆ ಲಡಾಖ್ ಯಾನ ಬಹು ಸಾಹಸಿ ಮತ್ತು ರೋಮಾಂಚಕಾರಿ ಅನುಭವ.

ಲಡಾಖಿನ ಸುಂದರಿಯರು...ಆದಿ ಮಹೋತ್ಸವ ಹಬ್ಬದಲ್ಲಿ ನೃತ್ಯಕ್ಕೆ ಸಿದ್ಧಗೊಳ್ಳುತ್ತಿರುವಾಗ



ನುಬ್ರಾ ಕಣಿವೆಯಲ್ಲಿರುವ ಬುದ್ಧ ವಿಹಾರದ ನೋಟ

ಮುನ್ನೋಟ 07-08-2022 ರಿಂದ 13-08-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಮನಸ್ಸಿನಲ್ಲಿನ ದ್ವಂದ್ವದಿಂದ ಯಾವುದೇ ನಿರ್ಧಾರವನ್ನು ತೆಗೆದುಕೊಳ್ಳಲು ಕಷ್ಟಪಡುವಿರಿ. ಸಂಗೀತ ಮತ್ತು ಲಲಿತಕಲೆಗಳನ್ನು ಕಲಿತಿರುವವರಿಗೆ ಬೇಡಿಕೆ ಹೆಚ್ಚುತ್ತದೆ. ಹಿರಿಯರ ಸಲಹೆ ನಿಮಗೆ ಅತ್ಯಮೂಲ್ಯ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಹೆಚ್ಚಿನ ಪ್ರಗತಿ ಇರುತ್ತದೆ. ಗೆಳೆಯರ ಕೆಲಸಗಳಿಗೆ ಹೆಚ್ಚು ಸಹಕಾರ ನೀಡುವಿರಿ. ವ್ಯಾಪಾರ ವ್ಯವಹಾರಗಳಲ್ಲಿ ಗೆಳೆಯರಿಂದ ಸಹಕಾರ ದೊರೆಯುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಹಣಕಾಸಿನ ಅನುಕೂಲವಿರುತ್ತದೆ. ಕಾನೂನಿಗೆ ಸಂಬಂಧಪಟ್ಟ ವ್ಯವಹಾರಗಳಲ್ಲಿ ನಿಮಗೆ ಜಯ ಇರುತ್ತದೆ. ಮಾದಕ ವಸ್ತುಗಳ ಅಭ್ಯಾಸವಿದ್ದವರಿಗೆ ಸಾಕಷ್ಟು ತೊಂದರೆ ಇರುತ್ತದೆ. ವಿವಾಹ ಆಕಾಂಕ್ಷಿಗಳಿಗೆ ಸಂಬಂಧ ದೊರಕುವ ಸಾಧ್ಯತೆ ಇದೆ. ವಿದ್ಯಾರ್ಥಿಗಳಿಗೆ ಈಗ ಉತ್ತಮ ಸಾಧನೆ ಮಾಡುವ ಯೋಗವಿದೆ. ಯಾಂತ್ರಿಕ ಉದ್ಯೋಗದಲ್ಲಿ ಸ್ವಲ್ಪಮಟ್ಟಿನ ಬದಲಾವಣೆಯನ್ನು ಕಾಣಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ನಿಮ್ಮ ನಡವಳಿಕೆಯು ಸಂಪೂರ್ಣವಾಗಿ ವ್ಯಾವಹಾರಿಕವಾಗಿರುತ್ತದೆ. ಹಣದ ಒಳಹರಿವು ನಿಮ್ಮ ಅಗತ್ಯವನ್ನು ಪೂರೈಸುತ್ತದೆ. ಮಕ್ಕಳಿಗಾಗಿ ಹೆಚ್ಚು ಹಣ ವ್ಯಯವಾಗುತ್ತದೆ. ಶೀತಬಾಧೆ ಇರುವವರಿಗೆ ಅದರ ತೀವ್ರತೆ ಹೆಚ್ಚಬಹುದು. ಸಂಗಾತಿಗೆ ಉದ್ಯೋಗ ದೊರೆಯುವ ಸಾಧ್ಯತೆಗಳಿವೆ. ಕೆಲವೊಂದು ವ್ಯವಹಾರದ ಮಾತುಕತೆಗಳಲ್ಲಿ ನಿಮ್ಮ ನಿರೀಕ್ಷೆಗೆ ತಕ್ಕಂತೆ ಪ್ರತಿಕ್ರಿಯೆ ದೊರೆತು ಸಂತಸವಾಗುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಸರ್ಕಾರಿ ಮಟ್ಟದ ಹಣಕಾಸಿನ ವ್ಯವಹಾರಗಳು ಸರಾಗವಾಗಿ ಆಗುತ್ತವೆ. ಮನೆಯವರೊಂದಿಗೆ ಶುಭಕಾರ್ಯಕ್ಕೆ ಪ್ರಯಾಣ ಮಾಡಬೇಕಾದ ಸಾಧ್ಯತೆ ಇದೆ. ಬಹಳಷ್ಟು ಚುರುಕಾಗಿ ಓಡಾಡಿ ವ್ಯವಹಾರ ವಿಸ್ತರಣೆಯನ್ನು ಮಾಡುವಿರಿ. ಹೊಸ ಆಸ್ತಿಕೊಳ್ಳಲು ಈಗ ಸಕಾಲವಲ್ಲ. ಮಕ್ಕಳ ಅಭಿವೃದ್ಧಿಯ ವಿಷಯದಲ್ಲಿ ಈಗ ನೆಮ್ಮದಿ ಬರುತ್ತದೆ. ಸಂಗಾತಿಯ ಜೊತೆ ಕಾವೇರಿದ ಮಾತುಗಳಾದರೂ ಸ್ವಲ್ಪಹೊತ್ತಿನಲ್ಲೇ ತಿಳಿಯಾಗುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ತಮ್ಮ ಉತ್ತಮ ಸಾಧನೆಯನ್ನು ತೋರಿಸಲು ಕ್ರೀಡಾಪಟುಗಳಿಗೆ ಅವಕಾಶ ದೊರೆಯುತ್ತದೆ. ಹಣದ ಹರಿವು ತೃಪ್ತಿಕರವಾಗಿರುತ್ತದೆ. ಈಗ ಸ್ಥಿರಾಸ್ತಿಯನ್ನು ಮಾಡುವ ವಿಚಾರದಲ್ಲಿ ಶುಭಸೂಚನೆಗಳು ದೊರೆಯುತ್ತವೆ. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹೆಚ್ಚು ಹಣ ಖರ್ಚು ಮಾಡಬೇಕಾದ ಅನಿವಾರ್ಯವಿದೆ. ಮೂಳೆ ಸಂಬಂಧಿ ಕಾಯಿಲೆ ಇರುವವರು ಎಚ್ಚರ ವಹಿಸಿರಿ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಸಂಗಾತಿ ಕಡೆಯಿಂದ ನಿಮ್ಮ ವ್ಯವಹಾರಗಳಿಗೆ ಅನುಕೂಲಕರ ರೀತಿಯಲ್ಲಿ ಬಂಡವಾಳ ಹರಿದು ಬರುತ್ತದೆ. ಉದ್ಯೋಗದ ನಿಮಿತ್ತ ತರಬೇತಿಯಲ್ಲಿ ಭಾಗವಹಿಸುವಿರಿ. ದೂರ ದೇಶದಲ್ಲಿರುವ ಮಕ್ಕಳನ್ನು ಭೇಟಿ ಮಾಡುವ ಸಾಧ್ಯತೆ ಇದೆ. ನೆರೆಹೊರೆಯವರೊಡನೆ ಸಂಬಂಧ ವ್ಯತ್ಯಾಸಗೊಳ್ಳಬಹುದು. ಬರಬೇಕಾಗಿದ್ದ ಹಣ ಬರುವುದು ನಿಧಾನವಾಗುತ್ತದೆ. ಬೆಳೆದ ಮಕ್ಕಳ ನಡವಳಿಕೆ ಬಗ್ಗೆ ಎಚ್ಚರ ವಹಿಸಿರಿ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಮಧ್ಯಮವರ್ಗದವರಿಗೆ ಬಯಸುತ್ತಿದ್ದ ಆರ್ಥಿಕ ಅನುಕೂಲಗಳು ನಿಧಾನವಾಗಿ ದೊರೆಯುವ ಸಾಧ್ಯತೆಗಳಿವೆ. ಉದಾಸೀನ ಗತಿಯ ನಡವಳಿಕೆ ಇರುತ್ತದೆ. ನಿಶ್ಚಿತ ಗುರಿಯನ್ನು ತಲುಪಲು ಹೆಚ್ಚು ಶ್ರಮ ಹಾಕಲೇಬೇಕಾದ ಅನಿವಾರ್ಯವಿದೆ. ವ್ಯಾಪಾರಿಗಳಿಗೆ ವಸ್ತುಗಳ ಬೇಡಿಕೆ ಹೆಚ್ಚಾಗಿ ಧನಲಾಭ ಬರುತ್ತದೆ. ಸಂಗಾತಿಯ ಅಧಿಕ ಖರ್ಚು ಚಿಂತೆಗೀಡು ಮಾಡಬಹುದು. ಗರ್ಭಿಣಿಯರು ಹೆಚ್ಚು ಜಾಗ್ರತೆ ವಹಿಸಿ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಗೃಹ ಬಳಕೆಯ ವಸ್ತುಗಳನ್ನು ಮಾರಾಟ ಮಾಡುವವರಿಗೆ ವ್ಯಾಪಾರ ವೃದ್ಧಿಸಿ ಲಾಭ ಬರುತ್ತದೆ. ಬಹಳ ದಿನಗಳಿಂದ ಕಾಯುತ್ತಿದ್ದ ಪಿತ್ರಾರ್ಜಿತ ಆಸ್ತಿ ಈಗ ಒದಗುವ ಸಂದರ್ಭವಿದೆ. ನಿಮ್ಮ ಶತ್ರುಗಳನ್ನು ಪರಾಕ್ರಮದಿಂದ ಎದುರಿಸಿ ಅವರ ಸದ್ದಡಗಿಸುವಿರಿ. ಆಭರಣಗಳ ಮೇಲೆ ಕುಸುರಿ ಕಲೆಗಳನ್ನು ಮಾಡುವ ಕಲೆಗಾರರಿಗೆ ಬೇಡಿಕೆ ಹೆಚ್ಚುತ್ತದೆ. ಕಾರ್ಮಿಕ ವರ್ಗದವರಿಗೆ ಬಿಡುವಿಲ್ಲದ ಕೆಲಸವಿದ್ದು ಹೆಚ್ಚು ಸಂಪಾದನೆಯಾಗುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಸಾವಯವ ಕೃಷಿ ಮಾಡುವವರಿಗೆ ಮತ್ತು ಅವರು ಬೆಳೆದ ಉತ್ಪನ್ನಗಳಿಗೆ ಹೆಚ್ಚು ಬೇಡಿಕೆ ಬರುತ್ತದೆ. ಉದ್ದಿಮೆಯನ್ನು ಸ್ಥಾಪಿಸಬೇಕೆನ್ನುವವರಿಗೆ ಈಗ ಸರ್ಕಾರದ ಕಡೆಯಿಂದ ಸೂಕ್ತ ಸೂಚನೆ ದೊರೆಯುತ್ತದೆ. ಹಣದ ಒಳಹರಿವು ಮಂದಗತಿಯಲ್ಲಿ ಇದ್ದರೂ ಅದರ ನಿರ್ವಹಣೆ ಸರಿಯಾಗಿ ಮಾಡುವಿರಿ. ಸ್ಥಿರಾಸ್ತಿಯನ್ನು ಮಾರಾಟ ಮಾಡಿಸುವ ಮಧ್ಯವರ್ತಿಗಳಿಗೆ ಉತ್ತಮ ಕಮಿಷನ್ ಹಣ ದೊರೆಯುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಕೆಲವು ರಾಜಕಾರಣಿಗಳು ತಮ್ಮ ನಾಯಕರ ವಿರುದ್ಧ ತಿರುಗಿಬಿದ್ದು ಸೂಕ್ತ ಸ್ಥಾನವನ್ನು ಪಡೆದುಕೊಳ್ಳುವರು. ಕಟ್ಟಡ ಸಾಮಗ್ರಿಗಳನ್ನು ಸಗಟು ಮಾರಾಟ ಮಾಡುವವರ ವ್ಯವಹಾರ ವಿಸ್ತರಿಸುತ್ತದೆ. ಸಹಕಾರಿರಂಗವನ್ನು ಮುನ್ನಡೆಸುತ್ತಿರುವವರಿಗೆ ಸ್ಥಾನ ಹಾಗೂ ಗೌರವ ದೊರೆಯುತ್ತದೆ. ನಿಮ್ಮದೇ ಉತ್ತಮ ಕೆಲಸದ ಬಗ್ಗೆ ಕುಹಕ ಮಾಡಿದವರು ತಮ್ಮ ತಪ್ಪಿನ ಅರಿವಾಗಿ ಕ್ಷಮೆ ಯಾಚಿಸುವರು.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಧನಾದಾಯವು ಅಗತ್ಯವನ್ನು ಪೂರೈಸುವಷ್ಟು ಇರುತ್ತದೆ. ಒಂದೆಡೆ ಸಾಲಪಡೆದು ಇತರ ಸಾಲಗಳನ್ನು ತೀರಿಸಬಹುದು. ಅನಗತ್ಯವಾಗಿ ಆಸ್ತಿ ಖರೀದಿಸಲು ಮುಂದಾಗಬೇಡಿ. ಈ ಕಾರ್ಯಕ್ಕೆ ಇದು ಸಕಾಲವಲ್ಲ. ಮಹಿಳಾ ಉದ್ಯಮಿಗಳಿಗೆ ಪ್ರೋತ್ಸಾಹ ದೊರೆತು ಅಭಿವೃದ್ಧಿಯತ್ತ ಮುನ್ನಡೆಯುವರು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಅತಿಯಾದ ಆತ್ಮಗೌರವ ನಿಮ್ಮನ್ನು ಆವರಿಸಬಹುದು. ಮಾತನಾಡುವಾಗ ಸಾಕಷ್ಟು ಎಚ್ಚರಿಕೆ ವಹಿಸಿರಿ. ಇಲ್ಲವಾದಲ್ಲಿ ನಿಮ್ಮ ಮಾತು ನಿಮಗೆ ತಿರುಗುಬಾಣವಾಗಬಹುದು. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ. ವಿದೇಶಿ ವಸ್ತುಗಳನ್ನು ತಯಾರಿಸಿ ಮಾರಾಟ ಮಾಡುವವರ ವ್ಯವಹಾರದಲ್ಲಿ ಕಾನೂನು ತೊಡಕುಗಳು ಆಗಬಹುದು. ಹೆಣ್ಣುಮಕ್ಕಳ ವಿದ್ಯಾಭ್ಯಾಸವು ನಿರೀಕ್ಷೆಗಿಂತ ಹೆಚ್ಚಿಗೆ ಇರುತ್ತದೆ.

ಪದಬಂಧ 2750



ಮೇಲಿನಿಂದ ಕೆಳಕ್ಕೆ

1. ಸೂರ್ಯವಂಶದ ಶ್ರೇಷ್ಠ ಕುಲನಾಮ ದಶರಥಾತ್ಮಜನ ಜೊತೆ ಸೇರಿದೆ 4
2. ಮತ ನೀತಿಯ ಮಾರ್ಗದರ್ಶಕ 4
4. ಪರಮಾತ್ಮನನ್ನು ಮಲಗಿಸಲು ಹೇಳುವ ಪದ 4
5. ಓಡುವ ಕುದುರೆಗೆ ಹಾಕುವ ಲಗಾಮು 4
7. ಭೂಮಿಯೊಳಗೆ ಹೋಗಲು ನಿರ್ಮಿಸಿದ ಬಿಲದ್ವಾರ 5
8. ಚಿತ್ರನಟರು, ಚಿತ್ರಕಾರರಿಬ್ಬರಿಗೂ ಅನ್ವಯವಾಗುವ ಹೆಸರು 5
9. ಒಬ್ಬರು ಮಾಡಿದ್ದನ್ನು ಒಪ್ಪವಾಗಿ ಮಾಡಿ ತೋರಿಸು 5
10. ರಾಜ್ಯ ರಾಜ್ಯಗಳ ನಡುವೆ ರೇಖಾಮಿತಿಯ ಬಗೆಹರಿಯದ ವ್ಯಾಜ್ಯ 5
15. ನಾಶ ಮಾಡುವ ಬುದ್ಧಿ 4
16. ಏರು ಪೇರಾಗದೆ ಸಮತ್ವ ಸ್ಥಿತಿಯಲ್ಲಿ ಸಿಗುವ ತೃಪ್ತಿ 4
18. ಸತತವಾಗಿ ಹರಿಯುವ ದ್ರವದ ಪ್ರವಾಹ 4
19. ಶತ್ರುವಿನ ಒಂದು ತುಕಡಿ 4

ಎಡದಿಂದ ಬಲಕ್ಕೆ

1. ರಕ್ಷಣೆಯ ಸಂಕೇತವಾಗಿ ದಾರದಲ್ಲಿ ಬಿಗಿದ ಸೋದರ ಪ್ರೇಮ 5
3. ಸೌಂದರ್ಯವನ್ನು ಹೆಚ್ಚಿಸಲು ಬಳಸುವ ಸಾಧನ 4
6. ಗೃಹವನ್ನು ಮತ್ತು ಕುಟುಂಬವನ್ನು ಒಡೆಯುವವ 5
9. ದಾನವರ ಗುಂಪು 5
11. ಹಿಂದೆ ಹಳ್ಳಿಗಳಲ್ಲಿ ಹಿಡಿಯುತ್ತಿದ್ದ ದೀಪ 3
12. ಎಡ ಪಂಥದ ದೇವತೆ 4
13. ಸುಖವೇ ಕಾಣದೆ ಕಾರ್ಪಣ್ಯದ ಬದುಕು ನಡೆಸುವವ 4
14. ಕಾನಡಾ ರಾಗಕ್ಕೆ ಬೆರೆವ ಆಸ್ಥಾನ 3
15. ಕ್ಷೀರ ಮತ್ತು ಅದು ಒಡೆದು ಹೆಪ್ಪಾದ ದ್ರವ ಭಾಗ 5
17. ಭೂಲೋಕದ ಚೆಲುವೆ 5
20. ಹಾಸ ಬೆಳಕಿನಂತೆ ಹರಿದಿದೆ 5
21. ಹಳ್ಳಿಗಳಿಗೆ ನೀರಿನಾಸರೆಯಾದ ತಟಾಕದ ವಿಶಾಲ ಪ್ರದೇಶ 5

ಪದಬಂಧ ಉತ್ತರ -2749

ಮೇಲಿಂದ ಕೆಳಕ್ಕೆ

1. ಸ್ವಾಗತ 2.ವಜೀರ 3.ರಕ್ತಕ 5. ಯಮುನ 7.ಗಾಂಪರು 10.ಹಗುರ 11.ತಿಜೋರಿ 12.ತರಹ 14.ರಮಣಿ 16.ಮಂಥನ 19. ಉರಗ 20.ನಮನ 21.ಸಹಿ 23. ರಿಪು

ಎಡದಿಂದ ಬಲಕ್ಕೆ

1.ಸ್ವಾತಂತ್ರ್ಯೋತ್ಸವ 3.ರಸಭಂಗ 4. ಜೀವಭಯ 6. ತರಂಗಾಂತರ 8.ಕಡಲು 9.ಕವನ 10.ಹಸಿರುಕ್ರಾಂತಿ 12. ತಲೆದೂಗು 13.ಜೋಕುಮಾರ 15.ರಸಮಂಜರಿ 17.ಹರಳು 18.ಪುಟಾಣಿ 19.ಉಪನಯನ 21.ಸರದಾರ 22.ಮದನಾರಿ 23.ಗಜವದನ

ನಾನೇ ರಾಜಕುಮಾರ...

10ನೇ ಪುಟದಿಂದ...

ರಾಸಾಯನಿಕ ಬಣ್ಣವನ್ನೇ ಹೊದ್ದು, ಮೆದ್ದುಕೊಂಡಿದ್ದರೂ ಚೀನಿ ಗೊಂಬೆಯತ್ತ ಏಕಷ್ಟು ಆಕರ್ಷಣೆ? ಪುಟಾಣಿ ಮಕ್ಕಳ ಆರೋಗ್ಯ ಕಾಪಾಡುವವರು ಯಾರು?

ನನಗೆ ಮೋಸ ಮಾಡುವವರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ. ನನ್ನ ಹೆಸರಿನಲ್ಲಿ ನನ್ನ ಶತ್ರುವನ್ನೇ ಮಾರಾಟ ಮಾಡುತ್ತಿದ್ದಾರೆ. ಹತ್ತು ವರ್ಷಗಳ ಹಿಂದೆ 15 ಸಾವಿರ ಕುಶಲಕರ್ಮಿಗಳು ಚನ್ನಪಟ್ಟಣದಲ್ಲಿ ಇದ್ದರು. 1,500 ತಯಾರಿಕಾ ಘಟಕಗಳಿದ್ದವು. ಆದರೀಗ ಕುಶಲಕರ್ಮಿಗಳ ಸಂಖ್ಯೆ ನಾಲ್ಕು ಸಾವಿರಕ್ಕಿಳಿದಿದೆ. ಘಟಕಗಳ ಸಂಖ್ಯೆ 500ಕ್ಕಿಳಿದಿದೆ. ಅಯ್ಯೋ, ಕೋವಿಡ್ ನಂತರ ಕೆಲಸಬಿಟ್ಟವರು ಮತ್ತೆ ಹಿಂದಿರುಗಿ ಬರಲೇ ಇಲ್ಲವಲ್ಲ? ಬೇಡಿಕೆ ಇದೆ, ಲಾಭ ಇದೆ, ಆದರೂ ಏಕಿಷ್ಟು ತಾತ್ಸಾರ? ದಿನಕ್ಕೆ ₹ 1,200 ದುಡಿಯವಷ್ಟು ತಾಕತ್ತು ಒಬ್ಬ ಕುಶಲಕರ್ಮಿಗಿದೆ. ಆದರೂ ಅವರು ಬೆಂಗಳೂರಿನಲ್ಲಿ ಆಟೊ ಓಡಿಸುತ್ತಿರುವುದನ್ನು, ಗಾರ್ಮೆಂಟ್ ಕಾರ್ಖಾನೆಯಲ್ಲಿ ಬಟ್ಟೆ ಹೊಲಿಯುತ್ತಿರುವುದನ್ನು ನೋಡಿದರೆ ನನಗೆ ನೋವಾಗುತ್ತದೆ.

ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದಿಂದ (ಕೆಎಚ್‌ಡಿಸಿ) ನನ್ನೂರಿನ ಕುಶಲಕರ್ಮಿಗಳಿಗೆ ಸಿಕ್ಕಿದ್ದೇನು? ಕಾವೇರಿ ಮಾರಾಟ ಮಳಿಗೆಗಳು ನೆಪಕ್ಕಿವೆ. ಹೆದ್ದಾರಿ ಬದಿಯ ಅಂಗಡಿಗಳಿಗಿಂತಲೂ ಕಡಿಮೆ ಬೆಲೆ ನಿಗದಿ ಮಾಡಿರುವುದು ನನ್ನ ತಯಾರಕಲ್ಲಿ ನೋವುಂಟು ಮಾಡಿದೆ. ಈ ಅಧಿಕಾರಿಗಳು ಮಳಿಗೆಗಳಿಗೆ ನೇರವಾಗಿ ನನ್ನನ್ನು ಖರೀದಿಸುವುದಿಲ್ಲ, ಮಧ್ಯವರ್ತಿಗಳನ್ನು ನೇಮಿಸಿಕೊಂಡಿದ್ದಾರೆ. ಕಮಿಷನ್ ದಂಧೆ ಮಾಡಲು ನಿಮಗೆ ನಾಚಿಕೆಯಾಗುವುದಿಲ್ಲವೇ?

ಚನ್ನಪಟ್ಟಣದ ಹೃದಯ ಭಾಗದಲ್ಲಿರುವ ಕರಕುಶಲ ವಸ್ತುಗಳ ತರಬೇತಿ ಕೇಂದ್ರ ಪಾಳು ಬಿದ್ದಿದೆ. ಯಂತ್ರಗಳು ತುಕ್ಕು ಹಿಡಿಯುತ್ತಿವೆ. ಹೀಗಿರುವಾಗ ಹೊಸ ಹುಡುಗರು ಕುಶಲಗಾರಿಕೆಯತ್ತ ಆಸಕ್ತಿ ಬೆಳೆಸಿಕೊಳ್ಳುವುದಾದರೂ ಹೇಗೆ? ಮೊದಲು ನನ್ನ ತಯಾರಿಕೆ ಮನೆಯ ಉದ್ಯೋಗವಾಗಿತ್ತು. ಮನೆ ಮಕ್ಕಳೆಲ್ಲರೂ ನನ್ನ ತಯಾರಿಕೆಯಲ್ಲಿ ತೊಡಗುತ್ತಿದ್ದರು. ಶಾಲೆಯಿಂದ ಬಂದವರೇ ನನ್ನ ಒಡನಾಟ ಬೆಳೆಸಿಕೊಳ್ಳುತ್ತಿದ್ದರು. ಈಗ ಮಕ್ಕಳು ನನ್ನ ತಯಾರಿಸಿದರೆ ಬಾಲಕಾರ್ಮಿಕ ತಡೆ ಕಾನೂನಿನಡಿ ಕೇಸ್ ಹಾಕ್ತಾರೆ.

'ಚನ್ನಪಟ್ಟಣದ ಬೊಂಬೆ ಸಂಸ್ಕೃತಿಗೆ ಪುನಶ್ಚೇತನ ನೀಡಲು ಶಿಕ್ಷಣದಲ್ಲಿ ಕರಕುಶಲ ಕಲೆಯನ್ನು ಪಠ್ಯವಾಗಿ ಅಳವಡಿಸಬೇಕು' ಎಂದು ನನ್ನ ಪ್ರೀತಿಯ ಕುಶಲಕರ್ಮಿ ಬಿ.ವೆಂಕಟೇಶ್ ಹೇಳುತ್ತಲೇ ಇದ್ದಾರೆ. ಆದರೆ, ಸರ್ಕಾರ ಕೇಳಿಸಿಕೊಳ್ಳುತ್ತಲೇ ಇಲ್ಲವಲ್ಲ. ಒಂದಂತೂ ನಿಜ, ನಾನು ಎಂದಿಗೂ ಸಾಯುವುದಿಲ್ಲ. ಸದಾ ನಿಮಗಾಗಿ, ನಿಮ್ಮ ಜೊತೆಯಲ್ಲೇ ಇರುತ್ತೇನೆ. ನಿಮ್ಮ ಸಂಸ್ಕೃತಿಯನ್ನು ಪೊರೆಯುತ್ತೇನೆ. ನಾನು ಡಾ.ರಾಜ್‌ಕುಮಾರ್ ಅವರ ಕೈಯೊಳಗಾಡಿದ 'ಕಸ್ತೂರಿ ನಿವಾಸ'ದ ಗೊಂಬೆ. ನಾನೆಂದಿಗೂ ತಲೆ ಬಾಗಿಸಲಾರೆ. ಆದರೂ ಈ ಹಾಡನ್ನು ನೆನಪಿಸಿಕೊಳ್ಳುತ್ತಾ ನನ್ನ ಗೋಳಿನತ್ತಲೂ ಕೊಂಚ ಗಮನ ಕೊಡಿ, ಪ್ಲೀಸ್ ಎಂದು ಬೇಡುತ್ತೇನೆ!

ಏನೇ ಬರಲಿ ಯಾರಿಗೂ ಎಂದು
ತಲೆಯ ಬಾಗದು
ಎಂದಿಗೂ ನಾನು ಹೀಗೆ ಇರುವೆ ಎಂದು
ನಗುವುದು,
ಹೀಗೆ ನಗುತಲಿರುವುದು...

ಕಿನ್ನಾಳ ಕಲೆಯಲ್ಲಿ ಹಂಸ

ಕಿನ್ನಾಳ ಕಲೆಗಳ ರಚನೆಯಲ್ಲಿ ತೊಡಗಿರುವ ಆಂಜನೇಯ ಚಿತ್ರಗಾರ

ಚಿತ್ರಗಳು: ಭರತ್ ಕಂದಕೂರ

ಸಹಸ್ರ ಜನರಿಗೆ ಧ್ವನಿ ಪೆಟ್ಟಿಗೆ

ಬೆಂಗಳೂರಿನ ಖ್ಯಾತ ವೈದ್ಯ ಡಾ.ವಿಶಾಲ್ ರಾವ್ ನನ್ನನ್ನು ಹುಡುಕಿಕೊಂಡು ಚನ್ನಪಟ್ಟಣಕ್ಕೆ ಬಂದದ್ದೇ ಒಂದು ಸೋಜಿಗದ ಸಂಗತಿ. ಕ್ಯಾನ್ಸರ್‌ನಿಂದ ಬಳಲುವವರು ಮಾತು ಕಳೆದುಕೊಳ್ಳುವುದು ಸಹಜ. ಅವರ ಗಂಟಲಲ್ಲಿ ಕೃತಕ ಧ್ವನಿ ಪೆಟ್ಟಿಗೆ ಅಳವಡಿಸುವ ಮೂಲಕ ಅವರಿಗೆ ಧ್ವನಿ ಕರುಣಿಸುವುದು ವೈದ್ಯಕೀಯ ಆವಿಷ್ಕಾರ.

ದುಬಾರಿಯಾದ ಧ್ವನಿ ಪೆಟ್ಟಿಗೆ ಬಡವರಿಗೆ ಸಿಗಲು ಸಾಧ್ಯವೇ? ಡಾ.ವಿಶಾಲ್ ರಾವ್ ಅವರ ಹುಡುಕಾಟ ಮನೋಭಾವ, ನನ್ನೂರಿನ ಕುಶಲಕರ್ಮಿ ಕೌಸರ್ ಪಾಷಾ ಅವರ ಪ್ರಯತ್ನದ ಫಲವಾಗಿ ಆಲೆಮರದ ಧ್ವನಿಪೆಟ್ಟಿಗೆ ಬಡ ಕ್ಯಾನ್ಸರ್ ರೋಗಿಗಳ ಗಂಟಲಿಗೆ ಮಾತು ಕರುಣಿಸಿದೆ. ಇಲ್ಲಿಯವರೆಗೆ ಕೌಸರ್ ಪಾಷಾ ಎರಡು ಸಾವಿರಕ್ಕೂ ಹೆಚ್ಚು ಧ್ವನಿ ಪೆಟ್ಟಿಗೆ ತಯಾರಿಸಿದ್ದಾರೆ. ವೈದ್ಯಕೀಯ ಧ್ವನಿ ಪೆಟ್ಟಿಗೆಯ ಬೆಲೆ ₹ 30- 45 ಸಾವಿರ. ಆದರೆ ಕೌಸರ್ ಪಾಷಾ ತಯಾರಿಸಿರುವ ಧ್ವನಿ ಪೆಟ್ಟಿಗೆ ಬೆಲೆ ಕೇವಲ ₹ 50!

ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿರುವ ಪಾಷಾ ಮಧುಮೇಹಿಗಳ ಪಾದಕ್ಕೆ ವೈದ್ಯಕೀಯ ಪಾದರಕ್ಷೆ ತಯಾರಿಸಿದ್ದಾರೆ. ಅಪಘಾತದಿಂದ ಗಾಯಗೊಂಡು ನರರೋಗ ಸಮಸ್ಯೆಯಿಂದ ಬಳಲುವ ರೋಗಿಗಳ ಕೈಗಳಿಗೆ ಕೈರಕ್ಷೆ ತಯಾರಿಸಿದ್ದಾರೆ. ಸಿ.ಪಿ ಕುರ್ಚಿ, ಆಕ್ಯುಪ್ರೆಷರ್ ಮ್ಯಾಟ್‌ಗಳನ್ನೂ ತಯಾರಿಸಿದ್ದಾರೆ. ನನ್ನ ಬಗ್ಗೆ ನಾನೇ ಹೇಳಿಕೊಳ್ಳಬಾರದು ನಿಜ. ಆದರೆ, ತಮ್ಮ ತಮಟೆಯನ್ನು ತಾವೇ ಬಾರಿಸಿಕೊಳ್ಳುವ ಕಾಲವಿದು. ನನ್ನ ಪರೋಪಕಾರ ಧರ್ಮದ ಕುರಿತು ನೀವೆಲ್ಲ ಒಮ್ಮೆ ಕಣ್ತೆರೆದು ನೋಡಿ.

ವಿಜ್ಞಾನದ 'ಕರ್ನಾಟಕ ವಿಶ್ವಕೋಶ'

ಎಸ್. ಸೂರ್ಯಪ್ರಕಾಶ ಪಂಡಿತ್

'ವಿಜ್ಞಾನ' ಎಂಬ ಜ್ಞಾನವೃಕ್ಷವು ಮಾನವನ ಇತಿಹಾಸದಲ್ಲಿ ತುಂಬ ಮಹತ್ವದ ಭೂಮಿಕೆಯನ್ನು ನಿರ್ವಹಿಸುತ್ತಿದೆ. ಅದರ ಶಾಖೆಗಳೂ ಹತ್ತುಹಲವು; ಅದರ ಹೂವು-ಹಣ್ಣುಗಳೂ ಸಾವಿರಾರು. ವಿಜ್ಞಾನಕ್ಕೂ ನಮ್ಮ ಪ್ರಗತಿಗೂ ನೇರ ಸಂಬಂಧವಿರುವುದು ಸುಳ್ಳಲ್ಲ.

ದೇಶಾತೀತ ತತ್ತ್ವಗಳ ಅನುಸಂಧಾನವೇ ವಿಜ್ಞಾನ – ಎಂಬ ಮಾತು ದಿಟವೇ. ಆದರೆ ದೇಶವೊಂದರ ವಿಕಾಸಕ್ಕೂ ವಿಜ್ಞಾನದ ವಿಕಾಸಕ್ಕೂ ನಂಟಿದೆಯಷ್ಟೆ. ನಮ್ಮ ದೇಶದಲ್ಲೂ ವಿಜ್ಞಾನದ ಸಿದ್ಧಿ-ಸಾಧನೆಗಳು ಪ್ರಾಚೀನ ಕಾಲದಿಂದಲೂ ಗಣನೀಯವಾಗಿವೆ. ನಮ್ಮ ರಾಜ್ಯವೂ ವಿಜ್ಞಾನದ ಬೆಳವಣಿಗೆಗೆ ನೀಡಿರುವ ಕೊಡುಗೆ ಗಮನೀಯವಾಗಿದೆ. ಹೀಗೆ ನಮ್ಮ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ನೀಡಿರುವ ಕೊಡುಗೆಗಳನ್ನು ದಾಖಲೆ ಮಾಡುವ ಪ್ರಯತ್ನವೇ 'ಕರ್ನಾಟಕ ವಿಜ್ಞಾನ ತಂತ್ರಜ್ಞಾನ ದರ್ಶನ'ದ ಸಂಪುಟಗಳು.

ಎಂ. ಎಸ್. ಸುರೇಶ್ ಅವರ ಪ್ರಧಾನ ಸಂಪಾದಕತ್ವದಲ್ಲಿ ವೈ. ಸಿ. ಕಮಲ ಮತ್ತು ಸುಮಂಗಲಾ ಮುಮ್ಮಿಗಟ್ಟಿ ಸಂಪಾದಕರಾಗಿ ಪ್ರಕಟಿಸಿರುವ ಈ ಕೃತಿಯ ಪ್ರಕಾಶಕರು 'ಉದಯಭಾನು ಕಲಾಸಂಘ'; ಈಗಾಗಲೇ 'ಬೆಂಗಳೂರು ದರ್ಶನ'ದಂಥ ಹಲವು ಆಕರಗ್ರಂಥವನ್ನು ಪ್ರಕಟಿಸಿ ಪ್ರಶಂಸೆಗೆ ಪಾತ್ರವಾಗಿದೆ; ಪ್ರಸ್ತುತ ಕೃತಿಯ ಪ್ರಕಾಶನಕ್ಕಾಗಿಯೂ ಸಂಸ್ಥೆಗೆ ಅಭಿನಂದನೆಗಳು ಸಲ್ಲುತ್ತವೆ. ಈ ಗ್ರಂಥದ ಮುಖಪುಟದ ಬಗ್ಗೆ ಸಂಪಾದಕರ ಮಾತುಗಳು ಹೀಗಿವೆ:

'ನಮ್ಮ ಮುಖ್ಯ ಉದ್ದೇಶ ಕರ್ನಾಟಕದ ಕೊಡುಗೆಯನ್ನು ದಾಖಲಿಸುವುದು, ಚರಿತ್ರೆ ಮತ್ತು ಪ್ರಸ್ತುತ ಸ್ಥಿತಿಯನ್ನು ಕುರಿತು. ಈ ನೆಲೆಯಲ್ಲಿ ನೀಲಿಬಣ್ಣ ಆಗಸದ ಅಗಾಧತೆಯನ್ನೂ ವಿಶ್ವದ ಅನಂತತೆಯನ್ನೂ ಸೂಚಿಸುತ್ತದೆ. ಇದರಲ್ಲಿ ಕಾಣುವ ತರಂಗಗಳು ಆಕಾಶಕಾಯಗಳು ಉಂಟುಮಾಡುವ ಗುರುತ್ವ ತರಂಗಗಳು. ಈ ಗುರುತ್ವ ತರಂಗಗಳ ಸಂಶೋಧನೆ ಬೆಂಗಳೂರನ್ನು ತಟ್ಟುತ್ತದೆ; ಭೂಮಿಯಲ್ಲಿ ಭಾರತದ ಕೊಡುಗೆಯನ್ನು ಪ್ರಕಾಶಮಾನ ಭಾರತವಾಗಿ ತೋರಿಸಿದೆ. ಭಾರತದಿಂದ ಹೊರಹೊಮ್ಮುವ ಕರ್ನಾಟಕದ ಕೊಡುಗೆ ಈ ಗ್ರಂಥದ ಉದ್ದೇಶ. ಈ ಗ್ರಂಥದಲ್ಲಿ ಒಳಗೊಂಡಿರುವ ಭೌತವಿಜ್ಞಾನ, ರಸಾಯನವಿಜ್ಞಾನ, ಜೀವವಿಜ್ಞಾನ, ವೈಮಾಂತರಿಕ್ಷ ತಂತ್ರಜ್ಞಾನ, ಭೂವಿಜ್ಞಾನ ಮತ್ತು ವಿಶ್ವವಿಜ್ಞಾನಗಳನ್ನು ಬಿಂಬಿಸುವ ಚಿತ್ರಗಳನ್ನು ಸೇರಿಸಲಾಗಿದೆ. ಚಂದ್ರನ ಹಿನ್ನೆಲೆಯಲ್ಲಿ ಚಂದ್ರಯಾನ ನೌಕೆ ಬಾಹ್ಯಕಾಶ ತಂತ್ರಜ್ಞಾನವನ್ನೂ, ತೇಜಸ್ ವಿಮಾನ ವೈಮಾನಿಕ ತಂತ್ರಜ್ಞಾನದ ಸಾಧನೆಯನ್ನೂ ಬಿಂಬಿಸುತ್ತವೆ. ರಸಾಯನವಿಜ್ಞಾನ ಮತ್ತು ಹಲವು ಇತರ ಕ್ಷೇತ್ರಗಳಲ್ಲಿ ಮುಖ್ಯವಾದ ಇಂಗಾಲದ ನ್ಯಾನೋ ಕೊಳವೆಗಳು, ಜೈವಿಕವಿಜ್ಞಾನದ ವಂಶಾವಳಿ ತಂತು/ಡಿಎನ್‌ಎ ಹಾಗೂ ಕರ್ನಾಟಕದ ಕಾಡುಪ್ರಾಣಿ ಸಂಕುಲದ ಹುಲಿ – ಇವುಗಳನ್ನು ಸಾಂಕೇತಿಕವಾಗಿ ತೋರಿಸಲಾಗಿದೆ.'

ಗ್ರಂಥದ ಮುಖಪುಟ ಇಷ್ಟೊಂದು 'ವಾಚ್ಯ' ವಾಗುವುದು ಕಲಾತ್ಮಕತೆ ಎನಿಸಿಕೊಳ್ಳುವುದೋ ಇಲ್ಲವೋ ಎಂಬ ಚರ್ಚೆ ಬೇರೆಯ ವಿಷಯ. ಆದರೆ ಮುಖಪುಟವನ್ನು ಕುರಿತ ಈ ಮಾತುಗಳು ಈ ಗ್ರಂಥದ ಉದ್ದೇಶ ಮತ್ತು ವಿಷಯವ್ಯಾಪ್ತಿಯನ್ನು ಸೂಚಿಸುತ್ತವೆ.

ಎರಡು ಸಂಪುಟಗಳಲ್ಲಿ, ಸುಮಾರು ಒಂದೂವರೆ ಸಾವಿರ ಪುಟಗಳಲ್ಲಿ ಹರಡಿಕೊಂಡಿರುವ ಈ ಗ್ರಂಥದಲ್ಲಿ ಹನ್ನೊಂದು ಅಧ್ಯಾಯಗಳಿವೆ. ಇವು ವಿಜ್ಞಾನದ ಮುಖ್ಯ ಶಾಖೆಗಳಲ್ಲಿ ಕರ್ನಾಟಕದ ಸಾಧನೆಯನ್ನು ಗುರುತಿಸುತ್ತವೆ; ಮಾತ್ರವಲ್ಲ, 'ಕರ್ನಾಟಕದ ಪದ್ಮಪುರಸ್ಕೃತ ವಿಜ್ಞಾನಿಗಳು ಮತ್ತು ತಂತ್ರಜ್ಞರು', 'ಕರ್ನಾಟಕದ ಪ್ರಮುಖ ವೈಜ್ಞಾನಿಕ ಮತ್ತು ತಾಂತ್ರಿಕ ಸಂಸ್ಥೆ'ಗಳ ಬಗ್ಗೆಯೂ ಅಧ್ಯಾಯಗಳಿವೆ. ಒಂದೊಂದು ಅಧ್ಯಾಯಕ್ಕೂ ವಿಷಯತಜ್ಞರೊಬ್ಬರು ವಿಭಾಗ ಸಂಪಾದಕರಾಗಿರುವುದು ಔಚಿತ್ಯಪೂರ್ಣವಾಗಿದೆ. ಹೆಚ್ಚು ಕಡಿಮೆ ಪ್ರತಿಯೊಂದು ಅಧ್ಯಾಯವೂ ಆಯಾ ವಿಜ್ಞಾನಶಾಖೆಯ ಬಗ್ಗೆ ಜಾಗತಿಕ ನೆಲೆಯ ಸಂಕ್ಷಿಪ್ತ ಇತಿಹಾಸ, ಭಾರತದಲ್ಲಿ ಅದರ ಹುಟ್ಟು-ಬೆಳವಣಿಗೆ ಮತ್ತು ಕರ್ನಾಟಕದ ಹಿನ್ನೆಲೆಯಲ್ಲಿ ಆ ವಿಷಯದ ನೆಲೆ-ಹಿನ್ನೆಲೆ-ಸಾಧನೆಗಳ ಬಗ್ಗೆ ಮಾಹಿತಿಯನ್ನು ಒದಗಿಸುತ್ತವೆ; ಪೂರಕವಾದ ಚಿತ್ರಗಳೂ ಸಾಕಷ್ಟಿವೆ. ಹಲವರು ವಿಷಯತಜ್ಞರು ಅಧ್ಯಾಯಗಳಲ್ಲಿಯ ಪ್ರಬಂಧಗಳನ್ನು ಒದಗಿಸಿದ್ದಾರೆ. ಇಂಥ ಸಂಪುಟಗಳು ಹಲವರ ಪರಿಶ್ರಮದಿಂದ ಮಾತ್ರವೇ ಸಿದ್ಧವಾಗುವಂಥವು.

ಪ್ರತಿಯೊಂದು ಕೃತಿಗೂ ಗುಣಗಳೂ ಇರುತ್ತವೆ; ಅಂತೆಯೇ ಮಿತಿಗಳೂ ಇರುತ್ತವೆ. ಈ ಸಂಪುಟಗಳೂ ಇವಕ್ಕೆ ಹೊರತಾಗಿಲ್ಲ. ಇಂಥದೊಂದು ಕೃತಿಯ ಅನಿವಾರ್ಯತೆಯನ್ನು ಈ ಗ್ರಂಥ ಒದಗಿಸಿದೆ. ಇದೇ ಇದರ ಮೊತ್ತಮೊದಲ ದೊಡ್ಡಗುಣ. ಕನ್ನಡದಲ್ಲಿ ವಿಜ್ಞಾನದ ಬಗ್ಗೆ ಬರೆಯುವವರು ಸಾಕಷ್ಟಿದ್ದಾರೆಂಬ ಸಂಗತಿಯೇ ಸಂತೋಷದಾಯಕ. ವಿಷಯತಜ್ಞರೇ ಇಲ್ಲಿಯ ಪ್ರಬಂಧಗಳನ್ನು ಬರೆದಿದ್ದಾರೆ ಎಂಬುದು ಪ್ರಶಂಸಾರ್ಹವೇ. ವಿಶ್ವವಿದ್ಯಾಲಯಗಳು ಮಾಡಬೇಕಾದ ಇಂಥ ಯೋಜನೆಯನ್ನು ಸಾಂಸ್ಕೃತಿಕ ಸಂಸ್ಥೆಯೊಂದು ನಿರ್ವಹಿಸಿರುವುದೂ ಅನುಕರಣೀಯ.

ಆದರೆ, ಈ ಸಂಪುಟಗಳಲ್ಲಿ ಏಕರೂಪತೆಯಿಲ್ಲದಿರುವುದೊಂದು ದೊಡ್ಡಕೊರತೆಯಾಗಿದೆ. ಮಾತ್ರವಲ್ಲ, ಇಂಥ ವಿಶ್ವಕೋಶಗಳಲ್ಲಿ ಇರಬೇಕಾದ ಸಂಪಾದನೆಯ ಶಿಸ್ತು ಇಲ್ಲವಾಗಿದೆ; ಕೊನೆಯ ಪಕ್ಷ, ವಿಷಯ ಸೂಚಿಯನ್ನಾದರೂ ಒದಗಿಸಲೇ ಬೇಕಿತ್ತು; ಲೇಖಕರು ಆಕರಗ್ರಂಥಗಳ ಪಟ್ಟಿಯನ್ನೂ ನೀಡಬೇಕಿತ್ತು. ಹಲವು ಪ್ರಬಂಧಗಳ ಭಾಷೆಯಲ್ಲೂ ಭಾವದಲ್ಲೂ ಅಲ್ಲಲ್ಲಿ ತೊಡಕುಗಳು ಕಾಣಿಸಿಕೊಂಡಿವೆ. ಉದಾಹರಣೆಗೆ ನೋಡಿ: 'ಆ ದಿನಗಳಲ್ಲಿ ಬಾಬರ್ (1494) ಅನ್ವೇಷಣಾರ್ಥವಾಗಿ ದೇಶವನ್ನಾಳುತ್ತಿದ್ದನು' (ಸಂ. 1, ಪು. 26). ಇಲ್ಲಿ 'ಅನ್ವೇಷಣಾರ್ಥ' ದೇಶವನ್ನಾಳುವುದು ಎಂದರೆ ಏನು? 'ಮಠಗಳಲ್ಲೂ ಮದರಸಾಗಳಲ್ಲೂ ವೇದಗಣಿತ-ಖಗೋಳವಿಜ್ಞಾನಗಳ ಬೋಧನೆ ನಡೆಯುತ್ತಿತ್ತು' ಎಂಬ ಮಾಹಿತಿ ಇಲ್ಲಿದೆ (ಸಂ.1. ಪು, 27). ಇಂಥ ವಿವರಗಳಿಗೆ ಪೂರಕಸಾಕ್ಷ್ಯವನ್ನು ಇಂಥ ಕೃತಿಗಳಲ್ಲಿ ಒದಗಿಸಬೇಕಲ್ಲವೆ? 'ಆಯುರ್ವೇದ ಮೂಲ ತಾಂತ್ರಿಕರು' ಎಂದು ಹೇಳಿ, ಮುಂದಿನ ಪ್ಯಾರಾದಲ್ಲಿ 'ಆಯುರ್ವೇದದ ಮೂಲ ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ ಮುಂತಾದ ದರ್ಶನಗಳು' ಎಂಬ ಮಾಹಿತಿಯಿದೆ (ಸಂ.1, ಪು. 641); ಇದರಲ್ಲಿ ಓದುಗರು ಯಾವುದನ್ನು ಸ್ವೀಕರಿಸುವುದು? ವಿಶ್ವಕೋಶಗಳಲ್ಲಿ ಲೇಖಕರ ವೈಯಕ್ತಿಕ ಭಾವನೆಗಳಿಗಿಂತಲೂ ವಿಷಯನಿಷ್ಠೆಯೇ ಪ್ರಧಾನಗುಣವಾಗಿರಬೇಕು; ಈ ಗುಣವೂ ಈ ಸಂಪುಟಗಳ ಬರಹಗಳಲ್ಲಿ ಹಲವೆಡೆ ಸಡಿಲವಾಗಿರುವುದು ಸ್ಪಷ್ಟ.

ವಿಜ್ಞಾನದ ದಾರಿ ನಮ್ಮ ಜೀವನಕ್ಕೆ ಅರಿವನ್ನೂ ನಲಿವನ್ನೂ ಕೊಡುವಂಥದ್ದು. ವಿಜ್ಞಾನದ ಹೃದಯವೇ ಕಾರ್ಯ-ಕಾರಣಭಾವಗಳ ಅನುಸಂಧಾನ; ಅದರಿಂದ ಉದ್ದೀಪನವಾಗುವ ಅರಿವಿನ ಬೆಳಕು. ಆಧುನಿಕ ಸಮಾಜವು ತಾನು ವಿಜ್ಞಾನದಲ್ಲಿ ಸಾಕಷ್ಟು ಸಾಧನೆಯನ್ನು ಮಾಡಿದೆ ಎಂದು ಹೆಮ್ಮೆ ಪಡುತ್ತಿದೆ. ಆದರೆ ವಿಜ್ಞಾನದ ಬಗ್ಗೆ ನಮ್ಮ ತಿಳಿವಳಿಕೆಯ ಮಿತಿ ಮತ್ತು ಅದರ ಬಳಕೆಯಲ್ಲೂ ನಮಗಿರುವ ಅಸಡ್ಡೆ – ಇಂಥ ವಾಸ್ತವಗಳನ್ನು 'ಕೋವಿಡ್‌ಕಾಲ' ಬಯಲು ಮಾಡಿದೆ. ಹೀಗಾಗಿ ನಮ್ಮ ಸಮಾಜದ ಅಜ್ಞಾನಗಳನ್ನು ನಿವಾರಿಸುವಲ್ಲಿ ಇಂಥ ಕೃತಿಗಳು ನೆರವಾಗಲಿ ಎಂದು ಆಶಿಸೋಣ.

ಪು: 1560 ₹2500

ಕರ್ನಾಟಕ ವಿಜ್ಞಾನ ತಂತ್ರಜ್ಞಾನ ದರ್ಶನ
(ಎರಡು ಸಂಪುಟಗಳು)
ಪ್ರ. ಸಂಪಾದಕರು: ಎಂ.ಎಸ್. ಸುರೇಶ್
ಸಂಪಾದಕರು: ವೈ. ಸಿ. ಕಮಲ ಹಾಗೂ ಸುಮಂಗಲಾ ಎಸ್. ಮುಮ್ಮಿಗಟ್ಟಿ
ಪ್ರ: ಉದಯಭಾನು ಕಲಾಸಂಘ
ಸಂ: 080-26609343

ವಿಮರ್ಶೆ

ಕನ್ನಡದ ಮಣ್ಣು, ಭಾರತದ ಕನಸು

ದಿವಾಕರ ಹೆಗಡೆ

ಶತಾವಧಾನಿ ಡಾ. ಆರ್. ಗಣೇಶ್ ಅವರು ಬರೆದ 'ಮಣ್ಣಿನ ಕನಸು' ಕಾದಂಬರಿ ಸಂಸ್ಕೃತದ ಪ್ರಸಿದ್ಧ ನಾಟಕಗಳಾದ ಮೃಚ್ಛಕಟಿಕ ಮತ್ತು ಸ್ವಪ್ನ ವಾಸವದತ್ತ ಇವೆರಡರ ರಸಾರ್ದ್ರವಾದ ಸಂಯೋಜನೆ. ಎರಡೂವರೆ ಸಾವಿರ ವರ್ಷಗಳ ಹಿಂದಿನ ಭಾರತದ ಬದುಕಿನ ಚಿತ್ರಣ ಅಲ್ಲಿದೆ.

ಗಂಗಾ, ಯಮುನಾ, ಕ್ಷಿಪ್ರಾ, ವೇತ್ರವತಿ ನದಿಗಳ ತಪ್ಪಲಿನ ವತ್ಸದೇಶ, ಅವಂತಿ, ಮಗಧ, ಕೋಸಲ, ವೈಶಾಲಿ ಮುಂತಾದ ಪ್ರಾಂತಗಳ ರಾಜಕೀಯ, ಸಾಮಾಜಿಕ, ಧಾರ್ಮಿಕ ಬದುಕಿನ ಆಪ್ತ ಚಿತ್ರಣ, ಆಳವಾದ ವಿಶ್ಲೇಷಣೆ ಇಲ್ಲಿದೆ. ಆರುನೂರೈವತ್ತೆಂಟು ಪುಟಗಳ ಬೃಹತ್ ಕಾದಂಬರಿ, ಕನ್ನಡಕ್ಕೆ ವಿಶಿಷ್ಟವಾದ ಕೃತಿ.

ಭಾರತದ ಸಾಮ್ರಾಜ್ಯಗಳ, ಗಣತಂತ್ರಗಳ ಬದುಕು ಬವಣೆಗಳನ್ನು ಶಾಸ್ತ್ರದೃಷ್ಟಿಯಿಂದಲೂ, ಸಂಪ್ರದಾಯದ ಮುಖದಿಂದಲೂ, ಜಾನಪದ ಮೂಲದಿಂದಲೂ ಪರಿಚಯಿಸುವ ತಂತ್ರವೇ ವಿಶಿಷ್ಟವಾಗಿದೆ. ಸಂಸ್ಕೃತ ಪ್ರಾಕೃತಗಳ ನೆಲೆಯಲ್ಲಿದ್ದ ಕಥೆಯನ್ನು ಮಹಾಕಾವ್ಯವಾಗಿ ಬರೆದ ಕಾದಂಬರಿಯ ಭಾಷೆ ಸಂದರ್ಭದ ಅಗತ್ಯದಂತೆ ಪ್ರೌಢವಾಗಿ, ಸರಳವಾಗಿ ಒದಗಿದೆ. ಆ ಕಾಲದಲ್ಲಿ ಬಳಕೆಯಲ್ಲಿದ್ದ ಅನೇಕ ಶಬ್ದಗಳನ್ನು ನೆನಪಿಸುವ ಕಾದಂಬರಿ ಕನ್ನಡದ ಶಬ್ದಸಂಪತ್ತನ್ನು ಬೆಳೆಸಿದೆ. ಭಾರತೀಯ ಇತಿಹಾಸವನ್ನು ಅವಲಂಬಿಸಿ ಹೊಸದನ್ನು ಬರೆಯಬೇಕೆಂಬ ಹಂಬಲದ ಲೇಖಕರಿಗೆ ನೂರು ಹಾದಿಯನ್ನು ತೋರುವ, ಸಾವಿರ ಹೊಳಹು ನೀಡುವ ಕೃತಿ.

ಮೇಲ್ನೋಟಕ್ಕೆ ಇದು ಅರಸರ ಕಥೆ, ಅರಮನೆಯವರ ಪ್ರೇಮ ಕಥೆ ಎನ್ನಿಸುತ್ತದೆ. ರಾಜನಿಂದ ರಂಕನವರೆಗೆ, ಗರತಿಯಿಂದ ರತಿಯವರೆಗೆ, ಯೋಧನಿಂದ ಕಲಾವಿದನವರೆಗೆ ಎಲ್ಲ ರೀತಿಯ ಜನರೊಡನೆ ವ್ಯವಹರಿಸುತ್ತದೆ. ನಾಡು, ಕಾಡು, ನದಿ, ಬೆಟ್ಟ, ಅರಮನೆ, ಗುಡಿಸಲು, ಅಂತಃಪುರ, ವೇಶ್ಯಾವಾಟಿಕೆ, ಹೆಂಡದ ಅಂಗಡಿ, ಜೂಜು ಕಟ್ಟೆ ಹೀಗೆ ಎಲ್ಲ ರೀತಿಯ ಸನ್ನಿವೇಶಗಳಲ್ಲಿ ಕಥೆ ಬಿಚ್ಚಿಕೊಳ್ಳುತ್ತದೆ. ಈ ಎಲ್ಲ ಸನ್ನಿವೇಶಗಳ ವಿವರ ಅದೆಷ್ಟು ಸುಂದರವಾಗಿ ಮೂಡಿಬಂದಿದೆ ಎಂದರೆ ನಾವು ಆ ಕಾಲಕ್ಕೇ ಹೋಗಿಬಂದಂತೆ.

ಶತಾವಧಾನಿಯವರ ಬಹುಶ್ರುತ ಪಾಂಡಿತ್ಯ ಕಾದಂಬರಿಯುದ್ದಕ್ಕೂ ದುಡಿದಿದೆ. ರಾಜನೀತಿ, ಯುದ್ಧನೀತಿ, ಅರ್ಥಶಾಸ್ತ್ರ, ಧರ್ಮಶಾಸ್ತ್ರಗಳು ಒದಗಿಬಂದಂತೆ, ಪಾಕಶಾಸ್ತ್ರ, ನಾಟ್ಯಶಾಸ್ತ್ರ, ಸಂಗೀತಶಾಸ್ತ್ರ, ಗಜಶಾಸ್ತ್ರ ಹೀಗೆ ಹಲವು ಶಾಸ್ತ್ರಗಳ ಮಾತು ಆಯಾ ಸಂದರ್ಭದ ಔಚಿತ್ಯಕನುಗುಣವಾಗಿ ಸಾವಯವವಾಗಿ ಮೂಡಿಬಂದಿವೆ. ಕಲಾವಿದ, ಸಾಹಿತಿ, ಸಹೃದಯಿ, ರಾಜಕಾರಣಿ, ವಿದ್ಯಾರ್ಥಿ, ವಿರಹಿ ಹೀಗೆ ಎಲ್ಲ ರೀತಿಯ ಓದುಗರಿಗೂ ಈ ಕಾದಂಬರಿಯಲ್ಲಿ 'ನಮ್ಮ ಹೊಟ್ಟೆಯ ಮಾತುಗಳನ್ನು ಹೇಳಿದ್ದಾರಲ್ಲ' ಎಂಬ ಅಚ್ಚರಿ ಕಾಡುತ್ತದೆ. ಪ್ರತಿ ಸಂದರ್ಭದ ವರ್ಣನೆಯಲ್ಲೂ ಬರುವ ಉಪಮೆ, ರೂಪಕಗಳು ಪಾತ್ರದ ಸ್ವಭಾವ, ಸನ್ನಿವೇಶದ ಸಂವೇದನೆಗಳಿಗೆ ಪೂರಕವಾಗಿ ದುಡಿಯುವುದು ಓದಿನ ರುಚಿಯನ್ನು ಹೆಚ್ಚಿಸುತ್ತವೆ.

ಕಥೆಯಲ್ಲಿ ಬರುವ ಯೌಗಂಧರಾಯಣ, ಶಾಲಂಕಾಯನ, ವರ್ಷಕಾರ, ವಿಶಾಖ ಮುಂತಾದ ಪಾತ್ರಗಳ ಮೂಲಕ ತೆರೆದುಕೊಳ್ಳುವ ಶಾಸ್ತ್ರ ಭಾರತದ ಸಾಮಾನ್ಯ ಓದುಗನಿಗೂ ಅದರ ಆಳದ ದರ್ಶನ ಮಾಡಿಸುತ್ತದೆ. ಉದಯನ, ವಾಸವದತ್ತೆ, ಆಮ್ರಪಾಲಿ, ವಸಂತಸೇನೆ, ಚಾರುದತ್ತ ಮುಂತಾದವರ ಅಭಿವ್ಯಕ್ತಿಯಲ್ಲಿ ಮೂಡಿಬರುವ ಭಾವಭಾರತ ಮಾನವ ಸಂವೇದನೆಯ ಎಲ್ಲ ಸೂಕ್ಷ್ಮಗಳನ್ನೂ ಅನುಭವಕ್ಕೆ ತರುತ್ತವೆ. ಸಮಾಜದ ಎಲ್ಲ ವರ್ಣ ವರ್ಗಗಳಿಂದ ಬರುವ ಪಾತ್ರಗಳೆಲ್ಲ ಜೀವಭಾರತದ ಮಾತುಗಳನ್ನಾಡುತ್ತವೆ. 'ನಡಾಗಿರಿ' ಎನ್ನುವ ಹೆಸರಿನ ಆನೆಯೂ ಒಂದು ಪಾತ್ರವಾಗಿ ಕಥೆಯ ವಿಸ್ಮಯವನ್ನು ಹೆಚ್ಚಿಸುತ್ತದೆ.

ಮನುಷ್ಯನ ಭಾವ, ರಸದ ಎತ್ತರಕ್ಕೆ ಏರುವಲ್ಲಿ ನೃತ್ಯ-ಸಂಗೀತಗಳು ಹೇಗೆ ದುಡಿಯುತ್ತವೆ ಎನ್ನುವುದನ್ನು ವಿವರಿಸುತ್ತ, ಆನಂದಾನುಭವಕ್ಕೆ ಸಾಧನವಾದ ಕಲೆ ಅಧ್ಯಾತ್ಮದಿಂದ ಮೌಲ್ಯವರ್ಧನೆಗೊಳ್ಳುವ ಅನನ್ಯ ಚಿತ್ರಣ ಇಲ್ಲಿದೆ. ಬದುಕಿನ ಆಕರ್ಷಣೆ ಶೃಂಗಾರವಾಗಿ ಬೆಳೆದರೂ ಅದಕ್ಕೆ ಅಧ್ಯಾತ್ಮದ ಸ್ಪರ್ಶವಿಲ್ಲದಿದ್ದರೆ ರುಚಿಯಾದೀತು ರಸವಾಗಲಾರದು ಎನ್ನುವ ವಿಶ್ಲೇಷಣೆ ಅತ್ಯಂತ ಹೃದ್ಯವಾಗಿ ಮೂಡಿದೆ. ಭಾರತದಲ್ಲಿ ಆ ಕಾಲದಲ್ಲಿಯೇ ಬಂದ ಧಾರ್ಮಿಕ ಸಿದ್ಧಾಂತಗಳು, ಅದರ ನೆರಳಲ್ಲಿ ಬದಲಾದ ಸಾಮ್ರಾಜ್ಯಗಳ ನಿಲುವುಗಳು ನಮ್ಮನ್ನು ಚಿಂತನೆಗೆ ತೊಡಗಿಸುತ್ತವೆ. ರಾಜಕೀಯದ ತಂತ್ರ-ಪ್ರತಿತಂತ್ರಗಳಂತೂ ಒಮ್ಮೆ ಅಚ್ಚರಿಯಾಗಿ, ಒಮ್ಮೆ ಭಯವಾಗಿ ಕಾಡುತ್ತವೆ.

ಸಮಾಜದ ಬದುಕನ್ನು ರಾಜಕಾರಣವೇ ನಡೆಸುತ್ತದೆ ಎಂದೊಮ್ಮೆ ಅನಿಸಿದರೆ, ಇನ್ನೊಮ್ಮೆ ಹೆಣ್ಣುಗಂಡಿನ ಮೋಹವೇ ಎಲ್ಲರ ಬದುಕನ್ನೂ ಹಿಡಿದುಕೊಂಡಿದೆ ಎನಿಸುತ್ತದೆ. ಈ ಬದುಕು ವಿಧಿಯ ಲೀಲೆ ಎಂದನಿಸುತ್ತಿರುವಾಗಲೇ ಪುರುಷ ಪ್ರಯತ್ನದಿಂದ ಬದುಕನ್ನು ಬದಲಿಸಬಹುದು ಎನ್ನುವ ವಿಶ್ವಾಸವೂ ಮೂಡುತ್ತದೆ. ಸರಳವಾದ ಪಾತ್ರಗಳೂ ಸಂಕೀರ್ಣ ಸನ್ನಿವೇಶದಿಂದ ಬದಲಾಗುವ ಪರಿಯಂತೂ ಓದಿಯೇ ತಣಿಯಬೇಕಾದ ಸಂಗತಿ. ಓದುಗನ ಅರ್ಹತೆಗೆ ಹೊಂದಿ ತೆರೆದುಕೊಳ್ಳುವ ಮಹಾಕಾವ್ಯ 'ಮಣ್ಣಿನ ಕನಸು'. ಪ್ರಕಟವಾದ ಮೂರೇ ತಿಂಗಳಲ್ಲಿ ಮೂರನೆಯ ಆವೃತ್ತಿಯನ್ನು ಕಂಡ ಈ ಬೃಹತ್ ಕಾದಂಬರಿ ಕನ್ನಡಕ್ಕೆ ಒಂದು ಉಡುಗೊರೆ. ಇತಿಹಾಸದ ಕನ್ನಡಿಯಲ್ಲಿ ಭಾರತವನ್ನು ನೋಡಿಕೊಳ್ಳುವ ಅವಕಾಶವನ್ನು ನೀಡುವ ಈ ಕಾದಂಬರಿ ವರ್ತಮಾನದ ಅನೇಕ ಗೊಂದಲಗಳಿಗೆ ಪ್ರಾಚೀನ ವಿವೇಕದ ಮಾರ್ಗಗಳನ್ನು ಸೂಚಿಸುತ್ತದೆ.

ಒಳನೋಟ



ಪು: 658 ₹600

ಮಣ್ಣಿನ ಕನಸು
ಲೇ: ಶತಾವಧಾನಿ ಡಾ.ಆರ್. ಗಣೇಶ್
ಪ್ರ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
ಸಂ: 9448110034

ಚಿತ್ರಕ ಭಾಷೆಯಲ್ಲಿ ಮೂಡಿದ ಸಶಕ್ತ ಕಥೆಗಳು

ಪದ್ಮನಾಭ ಭಟ್

'ಫೀಫೋ' ಸಂಕಲನದ ಮೊದಲನೇ ಕಥೆಯ ಹೆಸರು 'ಒಂದು ಅ-ಸಹ್ಯ ಕತೆ'. 'ಅಸಹ್ಯ' ಎಂಬ ಶಬ್ದವನ್ನು ಒಡೆದು ಸಹ್ಯವೂ ಅಸಹ್ಯವೂ ಎರಡೂ ಆಗಿ ಕಾಣುವ ಹಾಗೆ ಮಾಡಿದ ಚಮತ್ಕಾರ ಇಲ್ಲಿದೆ. ಶೀರ್ಷಿಕೆಯ ಅರ್ಥಸಾಧ್ಯತೆಗಳ ಆಚೆಗೆ, ಶೀರ್ಷಿಕೆಯಲ್ಲಿನ ಈ ಚಮತ್ಕಾರವೂ ಇಡೀ ಕಥೆಗೆ ಹೊಂದುವಂತಿದೆ. ಯಾಕೆಂದರೆ ಈ ಇಡೀ ಕಥೆಯಲ್ಲಿಯೂ ಕತೆಗಾರನ ಬೌದ್ಧಿಕ ಚಮತ್ಕಾರವೇ ಮುನ್ನೆಲೆಯಲ್ಲಿದೆ.

ಈ ಸಂಕಲನಕ್ಕೆ 'ಹೊಸ ರೀತಿಯ ಕಥೆಗಳ ಗುಚ್ಛ' ಎಂಬ ಅಡಿಟಿಪ್ಪಣಿಯೂ ಇದೆ. ಆದರೆ, ಕನ್ನಡಕ್ಕೆ ಈ ಕಥೆಗಳು ಹೊಸ ರೀತಿಯವೇನೂ ಅಲ್ಲ. ಹೊಸ ರೀತಿಯ ಕಟ್ಟೋಣವೇ ಕಥೆಯ ಯಶಸ್ಸಿನ ಸೂಚನೆಯೂ ಅಲ್ಲ. ಇದಕ್ಕೆ ಉದಾಹರಣೆಯಾಗಿ 'ಫೀಫೋ' ಸಂಕಲನದ ಕಥೆಗಳನ್ನೇ ಗಮನಿಸಬಹುದು. ಇಲ್ಲಿನ ಮೊದಲ ಆರು ಕಥೆಗಳಲ್ಲಿ ತೀರಾ ಹೊಸ ಬಗೆ ಕಾಣಿಸದಿದ್ದರೂ, ಹಳೆಯದನ್ನು, ರೂಢಿಯಲ್ಲಿರುವುದನ್ನು ಮುರಿಯುವ ಹಂಬಲವಂತೂ ಕಾಣಿಸುತ್ತದೆ. ಆ ಹಂಬಲದಲ್ಲಿ ಕತೆಗಾರ ವಾಸ್ತವದಿಂದ ಚಂಗನೆ ಅತಿವಾಸ್ತವ, ಫ್ಯಾಂಟಸಿಗಳಿಗೆ ಜಿಗಿಯುವುದೂ ಇದೆ. ಆದರೆ ಹೀಗೆ ಇಲ್ಲಿಂದ ಅಲ್ಲಿಗೆ ಜಿಗಿದ ಕಥೆಗಳು ಫ್ಲೈ ಓವರ್ ವೃತ್ತಗಳಲ್ಲಿ ಹೊರಬೀಳುವ ದಾರಿ ಸಿಗದೆ ಸುತ್ತಿ ಸುತ್ತಿ ಕಂಗಾಲಾಗಿ ಗಾಡಿ ಸೈಡಿಗೆ ಹಾಕಿ ನಿಂತುಬಿಟ್ಟ ಹುಡುಗನ ಹಾಗೆ ನಿಂತುಬಿಡುತ್ತವೆ. ಇವುಗಳನ್ನು ಓಪನ್ ಎಂಡಿಂಗ್ ಎಂದು ಒಪ್ಪಿಕೊಳ್ಳುವುದೂ ಕಷ್ಟ. ಇವು ಬುದ್ಧಿಯ ಕಸರತ್ತಿನ ಹಂತ ಮೀರಿ ಹೃದಯಕ್ಕೆ ಇಳಿಯುವುದು ವಿರಳ.

ಮಧುಸೂದನ ಅವರ ನಿಜವಾದ ಕಥನಶಕ್ತಿ ಉಜ್ವಲವಾಗಿ ಬೆಳಗಿರುವುದು 'ಕಣ್ಮಣಿಯ ಅಭಿಲಾಷೆ' ಎಂಬ ಕಥೆಯಲ್ಲಿ. ಇದು ಈ ಸಂಕಲನದ ಅತಿ ಹೆಚ್ಚು ಯಶಸ್ವಿ ಕಥೆ. ಹೋಟ್ಲಿನ ಚಂದ್ರು ಮತ್ತು ಅಪ್ಪ ಅಮ್ಮನೊಂದಿಗೆ ಸಂತೆಗೆ ಬಂದಿರುವ ಕಣ್ಮಣಿ – ಈ ಇಬ್ಬರು ಪುಟಾಣಿಗಳು ಕಥನದ ಕೇಂದ್ರದಲ್ಲಿದ್ದಾರೆ. ಮಕ್ಕಳ ಮುಗ್ಧತೆ, ಅಪ್ಪ ಅಮ್ಮನ ಅಸಹಾಯಕತೆ, ಆ ಅಸಹಾಯಕತೆ ಹುಟ್ಟಿಸುವ ಸಣ್ಣತನಗಳು ಎಲ್ಲವೂ ಈ ಕಥೆಯಲ್ಲಿ ತುಂಬ ಸಹಜವಾಗಿ ಬಂದಿವೆ. ಭಾಷೆಯಲ್ಲಿನ ನವಿರುತನದಿಂದ ಒಂದು ಹಗುರವಾದ ವಾತಾವರಣ ನಿರ್ಮಾಣಗೊಂಡಿದೆ. ನಾವೂ ಆ ವಾತಾವರಣದ ಭಾಗವಾಗಿಯೇ ಚಂದ್ರು ನೋಡುವ ಮಾಲಾಶ್ರೀ ಪೋಸ್ಟರುಗಳನ್ನೂ, ಕಣ್ಮಣಿ ತಿನ್ನುವ ಮಸಾಲೆ ದೋಸೆಯನ್ನೂ ಆಸ್ವಾದಿಸುತ್ತೇವೆ. ಈ ಚಿತ್ರಕಶಕ್ತಿಯು ಸಾರ್ಥಕಗೊಳ್ಳುವುದು ಕೊನೆಯಲ್ಲಿ ಚಂದ್ರು-ಕಣ್ಮಣಿ ಸೇರಿಕೊಂಡು ದೊಡ್ಡವರ ಜಗಳಕ್ಕೆ ಪೂರ್ಣವಿರಾಮ ಹಾಕಲು ಕಂಡುಕೊಳ್ಳುವ ದಾರಿಯಲ್ಲಿ. ನಮ್ಮ ಹೃದಯವನ್ನು ಇನ್ನಷ್ಟು ಮೆತ್ತಗಾಗಿಸುವ, ಮಾನವೀಯಗೊಳಿಸುವ ಈ ಕಥನದ ಶಿಲ್ಪವೂ ಅಷ್ಟೇ ಗಟ್ಟಿಯಾಗಿದೆ. ಶಿಲ್ಪ ಮತ್ತು ಅದು ಹುಟ್ಟಿಸುವ ದರ್ಶನದ ದೃಷ್ಟಿಯಿಂದಲಷ್ಟೇ ಅಲ್ಲ, ಮಧುಸೂದನ ಅವರ ಕಥನಶಕ್ತಿಯು ಯಾವ ದಾರಿಯಲ್ಲಿ ಹೆಚ್ಚು ಬೆಳಗುತ್ತದೆ ಎಂಬುದನ್ನು ಅರಿತುಕೊಳ್ಳುವ ದೃಷ್ಟಿಯಿಂದಲೂ ಇದು ಮುಖ್ಯವಾದ ಕಥೆಯಾಗಿದೆ.

'ಭವ್ಯ' ಈ ಸಂಕಲನದ ಇನ್ನೊಂದು ಗಮನಾರ್ಹ ಕಥೆ. ನಿರೂಪಕನ 'ಮಾಮ' ಈ ಕಥೆಯ ಕೇಂದ್ರದಲ್ಲಿದ್ದಾನೆ. ನಾಗರಿಕ ಜಗತ್ತಿನ ಮಾನದಂಡಗಳ ಪ್ರಕಾರ ಅವನು ದಡ್ಡ, ವ್ಯವಹಾರಜ್ಞಾನ ಇಲ್ಲದವ. ಆದರೆ ಅವನದೇ ದಾರಿಯಲ್ಲಿ ತೀವ್ರವಾಗಿ ಬದುಕುತ್ತಿರುವವ. ಈ ಎರಡರ ನಡುವಿನ ಘರ್ಷಣೆಯಿಂದ ಕುಟುಂಬದಲ್ಲಿ ಉಂಟಾಗುವ ತಲ್ಲಣಗಳನ್ನು ನಿರೂಪಕ ತನ್ನ ನೆನಪಿನ ಮೂಲಕ ಚಿತ್ರಿಸುತ್ತ ಹೋಗುತ್ತಾನೆ. ಆದರೆ ಇದು ಕಥೆಗಿಂತ ಲಲಿತಪ್ರಬಂಧದ ಪ್ರಕಾರಕ್ಕೆ ಹೆಚ್ಚು ಹತ್ತಿರವಾಗಿರುವಂತಿದೆ. ಹಾಗಾಗಿಯೇ ಮಾವನ ಬದುಕಿನ ಮೂಲಕ ಒಂದು ಮನೆತನದ ಕಥೆಯನ್ನು ಹೇಳುವುದರಲ್ಲಿಯೇ ಮುಗಿದುಬಿಡುತ್ತದೆ. ನಮ್ಮ ಮನಸ್ಸಿಗೆ ತಾಕುವ ಕಥನವಾತಾವರಣ ರೂಪುಗೊಂಡಿದ್ದರೂ, ಅದರಾಚೆಗೆ ಇನ್ನೇನೋ ಆಗಬೇಕಿತ್ತು ಎಂಬ ಅತೃಪ್ತಿಯೊಂದನ್ನು ಉಳಿಸಿಬಿಡುತ್ತದೆ.

'ಪಾದಗಳು' ಕೂಡ ಒಂದು ನಿರ್ದಿಷ್ಟವಾದ ಕೇಂದ್ರವಿಲ್ಲದೆಯೇ ಸಡಿಲವಾಗಿ ಕಾಣಿಸುವ ಕಥೆ. ಕುಟುಂಬದೊಳಗಿನ ಒಂದು ಸಾವು ಹುಟ್ಟಿಸುವ ಪ್ರಶ್ನೆಗಳ ಮೂಲಕ ಈ ಕಥೆ ಬೆಳೆಯುತ್ತದೆ. ಆದರೆ ಆ ಸಾವು, ಅದು ಹುಟ್ಟಿಸುವ ಪ್ರಶ್ನೆಗಳು ಎಲ್ಲವೂ ಸಂಭಾಷಣೆಯ ಮೂಲಕವೇ ದಾಟುತ್ತ ಹೋಗುವುದರಿಂದ ಕೊನೆಗೂ ಅದೊಂದು 'ಮಾತಿನ ಆಟ'ವಾಗಿ ಉಳಿದುಬಿಡುತ್ತದೆಯೇ ಹೊರತು ಅನುಭವವಾಗಿ ಮುಟ್ಟುವುದಿಲ್ಲ.

'ಮುಸ್ಸಂಜೆಗಳಲ್ಲಿ ಜರುಗುವುದೆಲ್ಲ ಮಧುರ ಕತೆಗಳಲ್ಲ' ಎಂಬ ಹೆಸರಿನ ಕಥೆ ತನ್ನ ಚಿತ್ರಕಶಕ್ತಿಯಿಂದ ಗಮನಸೆಳೆಯುತ್ತದೆ. ರಾತ್ರಿ ಹೊತ್ತಲ್ಲಿ ಬೀದಿಯಲ್ಲಿ ಕಾಣಿಸಿಕೊಳ್ಳುವ ಹಾವೊಂದರ ಸುತ್ತ ಈ ಕಥೆ ಬೆಳೆಯುತ್ತದೆ. ಯಾವ ದುರುದ್ದೇಶವೂ ಇಲ್ಲದ ಒಳ್ಳೆಯ ವ್ಯಕ್ತಿಗಳೇ ಒಂದು ಸಮೂಹವಾದಾಗ ಅದರಿಂದ ಹುಟ್ಟಿಕೊಳ್ಳುವ ಕ್ರೌರ್ಯವನ್ನು ಈ ಕಥೆ ಪರಿಣಾಮಕಾರಿಯಾಗಿ ಕಟ್ಟಿಕೊಟ್ಟಿದೆ. ಕಣಿವೆಯಲ್ಲೊಂದು ಸಂಜೆ ಮತ್ತು ಬೆಳ್ಳಿಗೆರೆ ಇವು ಪ್ರಹಸನರೂಪದ ಬರಹಗಳು. ಲಘುವಾದ ಭಾಷೆಯಲ್ಲಿ ನಕ್ಕು ಹಗುರವಾಗುವಂಥ ಪ್ರಸಂಗಗಳನ್ನು ಕಟ್ಟಿಕೊಡುವ ಇವು ಇಡೀ ಸಂಕಲನದ ಕೊನೆಯಲ್ಲಿ ಓದುಗನ ಮುಖದಲ್ಲೊಂದು ನಗುಮೂಡಿಸಲಿಕ್ಕಾಗಿಯೇ ಪವಡಿಸಿದಂತಿವೆ.

ಬೌದ್ಧಿಕ ಚಾತುರ್ಯ, ಭಾವುಕ ಪ್ರಪಂಚ ಎರಡೂ ಈ ಕತೆಗಾರರಲ್ಲಿ ತೀವ್ರವಾಗಿಯೇ ಇವೆ. ಆದರೆ ಅನುಭವವು ಕಲೆಯಾಗಿ ಅಭಿವ್ಯಕ್ತಿಗೊಳ್ಳುವುದು FIFO ಅಥವಾ LIFO ಮಾದರಿಯಲ್ಲಿ ನಡೆಯುವುದಲ್ಲ, ಅದು ಅಂಥ ಎಲ್ಲ ಮಾದರಿಗಳನ್ನೂ ಮೀರಿದ ಅನೂಹ್ಯ ಸಂಯೋಗದಲ್ಲಿ ಘಟಿಸುವಂಥದ್ದು. ಈ ಮಾತಿಗೆ ಪುಷ್ಟಿಯೊದಗಿಸುವ ಕಥೆಗಳೂ ಈ ಸಂಕಲನದಲ್ಲಿಯೇ ಇರುವುದು, ಮಧುಸೂದನ ಅವರ ಮುಂದಿನ ರಚನೆಗಳತ್ತ ನಿರೀಕ್ಷೆ ಹುಟ್ಟಿಸುವಂತೆ ಮಾಡುತ್ತವೆ.



ಪು: 168 ₹200

ಫೀಫೋ
ಲೇ: ಮಧುಸೂದನ ವೈ. ಎನ್.
ಪ್ರ: ಬಹುರೂಪಿ
ಸಂ: 7019182729

ವಿಮರ್ಶೆ

ಕಥೆ

ತಾಜ್‌ಮಹಲ್ಲಿನ ಖೈದಿಗಳು

ಮಲಯಾಳಂ ಮೂಲ: **ಶಿಹಾಬುದ್ದೀನ್ ಪೊಯ್ತುಂಕಡವು**
ಕನ್ನಡಕ್ಕೆ: **ಸುನೈಫ್**

ಬೆಳದಿಂಗಳಿಗೆ ಹಿಂದಿನ ಸೌಂದರ್ಯವಿಲ್ಲ. ಒಂಥರಾ ಬಿಳುಚಿಕೊಂಡ ಹಾಗೆ ಬೆಳ್ಳಗಿನ ಬೆಳಕು. ಮುಂತಾಜಳನ್ನು ನೋಡುತ್ತಿರುವಾಗ ಷಾಜಹಾನ್‌ನಿಗೆ ಪಶ್ಚಾತ್ತಾಪ ಇನ್ನಿಲ್ಲದಂತೆ ಕಾಡಿತು. 'ಪಾಪ ಅವಳು. ಎಲ್ಲವನ್ನು ಬಿಟ್ಟು ನನ್ನೊಂದಿಗೆ ಬಂದವಳು.' ನಿದ್ದೆಯಲ್ಲೂ ಅವಳಿಗೆ ಅದೇ ಮುಖಭಾವ.



ಪೂರ್ಣ ಕಥೆ ಓದಲು ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/short-story

ಮೊದಲ ಓದು

ಭೀಮಣ್ಣನ ಜೀವನ ದರ್ಶನ

ಹಿಂದೂಸ್ತಾನಿ ಸಂಗೀತದ ದಿಗ್ಗಜ ಪಂಡಿತ್ ಭೀಮಸೇನ ಜೋಶಿ ಅವರ ಬಗ್ಗೆ ಕನ್ನಡದಲ್ಲಿ ಈಗಾಗಲೇ ಕೆಲವು ಕೃತಿಗಳು ಹೊರಬಂದಿವೆ. ಸಂಗೀತಾಸಕ್ತರಾಗಿದ್ದು, ಈ ಕ್ಷೇತ್ರದ ಮೇರು ಗಾಯಕರಾದ ಕುಮಾರ ಗಂಧರ್ವ, ರಾಮಭಾವು ವಿಜಾಪುರೆ, ಬಸವರಾಜ ರಾಜಗುರು ಅವರ ಜೀವನಚರಿತ್ರೆಗಳನ್ನು ಬರೆದಿರುವ ಶಿರೀಷ್ ಜೋಶಿ ಅವರು 'ಭಾರತ ರತ್ನ ಭೀಮಣ್ಣ' ಕೃತಿಯಲ್ಲಿ ಭೀಮಸೇನ ಜೋಶಿ ಅವರ ಸಂಗೀತ ರಸಯಾನದ ಮೈಲುಗಲ್ಲುಗಳನ್ನು ಕಟ್ಟಿಕೊಟ್ಟಿದ್ದಾರೆ.

ಸಂಗೀತ ಕಲಿಕೆಯ ಬೆನ್ನುಹತ್ತಿದ ಜೋಶಿ ಅವರು ಆರಂಭಿಕ ದಿನಗಳಲ್ಲಿ ಪಟ್ಟ ಪಾಡು, ಅವರ ಯಶಸ್ಸಿನ ದಿನಗಳು, ವೈಯಕ್ತಿಕ ಬದುಕು, ಅವರ ಬಗ್ಗೆ ಇತರ ದಿಗ್ಗಜರ ಅನಿಸಿಕೆಗಳನ್ನು 9 ಅಧ್ಯಾಯಗಳಲ್ಲಿ ಸರಳವಾಗಿ ಕಟ್ಟಿಕೊಟ್ಟಿದ್ದಾರೆ. ಜೋಶಿ ಬಗ್ಗೆ ಬರೆದ ಇತರ ಲೇಖಕರ ಕೃತಿಗಳ ಉಲ್ಲೇಖಗಳನ್ನೂ ಸಾಂದರ್ಭಿಕವಾಗಿ ದಾಖಲಿಸಿದ್ದಾರೆ. ಜೋಶಿ ಅವರಿಗೆ ನೆರವಾದ ಆ ಕಾಲದ ಇತರ ಸಂಗೀತಗಾರರ ಬಗ್ಗೆಯೂ ವಿವರಗಳನ್ನು ನೀಡಿದ್ದಾರೆ.

ಜೊತೆಗೆ ವಿವಿಧೆಡೆ, ಕಿರಾನಾ ಘರಾಣೆಯ ಹಿನ್ನೆಲೆ, ಕಯಾಲ್ ಸೇರಿದಂತೆ ಸಂಗೀತದ ಕೆಲವು ಪಾರಿಭಾಷಿಕ ಪದಗಳ ಬಗ್ಗೆ ವಿವರಣೆಯನ್ನೂ ನೀಡಿದ್ದಾರೆ. ಸಂಗೀತ ಕಲಿಯುವ ವಿದ್ಯಾರ್ಥಿಗಳಿಗೆ ಕಿವಿಮಾತುಗಳೂ ಇವೆ. ಈ ಕಾರಣಗಳಿಂದ ಇದು, ಪಂ.ಗಣಪತಿ ಭಟ್ ಹಾಸಣಗಿ ಅವರು ಮುನ್ನುಡಿಯಲ್ಲಿ ಬರೆದಿರುವಂತೆ ಸಂಗೀತಾಸಕ್ತ ವಿದ್ಯಾರ್ಥಿಗಳು ಓದಲೇಬೇಕಾದ ಕೃತಿ.

ಕೃತಿಯ ಕೆಲವು ಕಡೆ ಪುನರಾವರ್ತನೆಯಿದೆ ಎಂಬ ಭಾವನೆ ಮೂಡುತ್ತದೆ. ಆದರೆ ಕುತೂಹಲಕರ ಮಾಹಿತಿಯಿಂದಾಗಿ ಓದಿಸಿಕೊಂಡು ಹೋಗುತ್ತದೆ.



ಪು:238 ₹260

ಭಾರತರತ್ನ ಭೀಮಣ್ಣ
ಲೇ: ಶಿರೀಷ್ ಜೋಶಿ
ಪ್ರ:ಯಾಜಿ ಪ್ರಕಾಶನ
ಸಂ: 7019637741

ಚಾಣಾಕ್ಷ ಸಂಸ್ಥೆಯ ಒಳನೋಟ

ನಮ್ಮಲ್ಲಿಂದ ಬೇರ್ಪಟ್ಟ ದೇಶವೊಂದು ತಲೆನೋವಾಗಿ ಪರಿಣಮಿಸಿದಾಗ ನಮ್ಮ ಭದ್ರತೆಗೆ ಬೇಕಾದ ಚಾಣಾಕ್ಷ ತಂತ್ರಗಾರಿಕೆಗಾಗಿ ಬಂದ 'ರಾ' ಸಂಸ್ಥೆ ಆರಂಭವಾದ ಬಗೆ ಮತ್ತು ಅದರ ಸಾಧನೆಗಳನ್ನು ಕನ್ನಡದಲ್ಲಿ ಮೊದಲ ಬಾರಿಗೆ ತೆರೆದಿಟ್ಟಿದೆ ಈ ಕೃತಿ.

ದೇಶದ ಆಂತರಿಕ ಮತ್ತು ಬಾಹ್ಯ ಸುರಕ್ಷತೆ, ನೀತಿ ನಿರೂಪಣೆ ಎಲ್ಲದಕ್ಕೂ ಪೂರಕವಾಗುವಂತೆ ವಿನ್ಯಾಸಗೊಂಡ ಅದ್ಭುತ ಗೂಢಚಾರ ದಳವಿದು. 'ರಾ' ನೀಡುವ ಅತ್ಯಮೂಲ್ಯ ಮಾಹಿತಿಗಳು ರಾಜಕೀಯ ನಿರ್ಧಾರಗಳಿಗೆ ಕಾರಣವಾದದ್ದು, ಶತ್ರುಗಳಿಂದಲೇ ಯುದ್ಧ ಮಾಡಿಸಿ ಅವರನ್ನು ನಿರ್ನಾಮ ಮಾಡಿದ್ದು, ನೆರೆ ದೇಶಗಳಲ್ಲಿಯೂ ಆಡಳಿತಾತ್ಮಕ ಮತ್ತು ರಾಜಕೀಯ ನಿರ್ಣಾಯಕ ಶಕ್ತಿಯಾಗಿ ತೆರೆಮರೆಯಲ್ಲೇ ಕೆಲಸ ಮಾಡಿದ್ದು, 'ರಾ' ಮತ್ತು ಸೇನೆಯ ಸಂಯೋಜನೆ ಮತ್ತು ಅಪರೂಪದಲ್ಲಿ ಅಲ್ಲಲ್ಲಿ ಕಾಣುವ ವೈರುಧ್ಯ ಹಾಗೂ ಅತಿ ಕಡಿಮೆಯಲ್ಲಿ ತಾನು ಅಗಾಧ ಸಾಮರ್ಥ್ಯ ಬೆಳೆಸಿಕೊಂಡು ವಿಸ್ತರಿಸಿದ್ದು... ಹೀಗೆ ಎಲ್ಲ ಆಯಾಮಗಳನ್ನು ಲೇಖಕರು ತೆರೆದಿಟ್ಟಿದ್ದಾರೆ. ಕೃತಿಯು ಭಾರತ–ಪಾಕಿಸ್ತಾನದ ಯುದ್ಧ, ಅದು ಮುಂದೆ ಬಾಂಗ್ಲಾ ವಿಮೋಚನೆಗೆ ಕಾರಣವಾದದ್ದನ್ನು ಕಥನ ರೂಪದಲ್ಲಿ ವಿವರಿಸಿಕೊಂಡು ಹೋಗಿದೆ. ವಿವಿಧ ದೇಶಗಳಲ್ಲಿ 'ರಾ' ಕಾರ್ಯಾಚರಣೆ, ಇಲ್ಲಿ ಸೇವೆ ಸಲ್ಲಿಸಿದ ಚಾಣಾಕ್ಷ ಅಧಿಕಾರಿಗಳು ಅವರ ತ್ಯಾಗ ಇಲ್ಲಿ ದಾಖಲಾಗಿವೆ. ಒಟ್ಟಿನಲ್ಲಿ ಒಂದೇ ಗುಕ್ಕಿನಲ್ಲಿ ಓದಿಸಿಕೊಂಡು ಹೋಗುವ ಕೃತಿ ಇದು.



ಪು: 223 ₹200

ಏಟಿಗೆ ಎದಿರೇಟು
ಲೇ: ಡಾ.ಡಿ.ವಿ.ಗುರುಪ್ರಸಾದ್
ಪ್ರ: ಸಪ್ನ ಬುಕ್ ಹೌಸ್ ಬೆಂಗಳೂರು
ಸಂ: 080 – 40114455

ಪಶುವೈದ್ಯನ ಅನುಭವದ ಬುತ್ತಿ

ಮೂಕಜೀವಿಗಳೂ ಕಥೆ ಹೇಳುತ್ತವೆ. ಸಂತಸ, ನೋವು ಹಂಚಿಕೊಳ್ಳುತ್ತವೆ. ಇವುಗಳನ್ನು ಅರಿಯುವ ಮನಸ್ಸು, ಅನುಭವಿಸುವ ಆಸಕ್ತಿ ಇರಬೇಕು. ಇಂತಹ ಅನುಭಾವದ ಲೋಕವನ್ನು ಅಕ್ಷರ ಹಾಗೂ ಚಿತ್ರಗಳ ರೂಪದಲ್ಲಿ ಓದುಗರ ಮುಂದೆ ತೆರದಿಟ್ಟವರು ಪಶುವೈದ್ಯ ಬಿ.ಕೆ.ರಮೇಶ್ (ಬೊಪ್ಪಸಮುದ್ರ).

ಲೇಖಕರು ಬೆಳೆದ ಪರಿಸರ, ಅನುಭವಿಸಿದ ಬದುಕು ಮತ್ತು ವೃತ್ತಿ ಬದುಕಿನಲ್ಲಿ ಕಂಡ ಕಥೆಗಳ ಬುತ್ತಿ ಈ ಕೃತಿ. ಅನುಭವಗಳನ್ನು ಕಥನ ರೂಪದಲ್ಲಿ ಲೇಖಕರು ಹೇಳುತ್ತಾ ಹೋಗಿದ್ದಾರೆ. ಹೀಗಾಗಿ ಲೇಖಕರ ಜೊತೆಯಲ್ಲೇ ನಿಂತು ಈ ಘಟನೆಗಳನ್ನು ಓದುಗರೂ ಅನುಭವಿಸುವಂತೆ ಬರವಣಿಗೆಯಿದೆ. ಪಶುವೈದ್ಯ 'ಕರೆಂಟ್ ಡಾಕ್ಟ್ರು' ಆಗಿದ್ದು ಹೇಗೆ?, ಹೀಟ್‌ಗೆ ಬಂದ 'ನಾಚಿಕೆ ಎಮ್ಮೆ'ಯ ಪುರಾಣ... ಹೀಗೆ 17 ಅಧ್ಯಾಯಗಳಲ್ಲಿ ಕಥೆಯ ರೀತಿ ಅನುಭವಗಳಿವೆ. ಚಾಮರಾಜನಗರ ಜಿಲ್ಲೆಯ ಹಳ್ಳಿ ಮೂಲೆಗಳ ಜನರೂ ಜಾನುವಾರುಗಳೂ ಆನೆಗಳೂ ಜಾನುವಾರು ಜಾತ್ರೆಗಳೂ ಅಲ್ಲಿ ಸುಳಿಯುವ ರಾಜಕೀಯವೂ (ಈಗಲೂ ಅಲ್ಲಲ್ಲಿ ಕಾಣುವುದು) ಇಲ್ಲಿ ಚಿತ್ರಿತವಾಗಿವೆ. ಪಶುವೈದ್ಯನೊಬ್ಬನಿಗೆ ಜನಜೀವನವನ್ನು ಹತ್ತಿರದಲ್ಲೇ ನೋಡುವ, ಅಂತಃಕರಣದ ಕಣ್ಣನ್ನು ತೆರೆದು ನೋಡುವ ಅಗಾಧ ಅವಕಾಶ ಇಲ್ಲಿದೆ ಎಂಬುದನ್ನು ಲೇಖಕರು ತೋರಿಸಿಕೊಟ್ಟಿದ್ದಾರೆ.

'ನೀನು ಎಮ್ಮೆಗಳ ನೋವಿಗೆ ಮದ್ದು ಕೊಡೋ ಡಾಕ್ಟ್ರು. ಅವುಗಳಿಗೆ ಮೋಸ ಮಾಡ್ಬೇಡಪ್ಪಾ...' ಅನ್ನುವುದು ಲೇಖಕರ ತಾಯಿ ಹೇಳಿದ ಮಾತು. ಇದು ಎಲ್ಲ ಕ್ಷೇತ್ರಗಳ ವೃತ್ತಿಪರರಿಗೂ ಅನ್ವಯಿಸುವ ಮಾತು. ಅದನ್ನು ಪಾಲಿಸಿಕೊಂಡೇ ವೃತ್ತಿ ಬದುಕನ್ನು ನಡೆಸಿದೆ ಎನ್ನುವ ಲೇಖಕರ ಅನುಭವದ 'ಮೆಲುಕು' ಕೃತಿಯಲ್ಲಿದೆ.



ಪು: 104 ₹100

ಮೆಲುಕು
ಲೇ: ಡಾ.ಬಿ.ಕೆ.ರಮೇಶ್
ಪ್ರ: ನಗು ನೆಲೆ ಪ್ರಕಾಶನ, ಬೆಂಗಳೂರು
ಸಂ: 9448407118

ಡಿಜಿಟಲ್ ಯುಗದ 'ಇ' ಕಥೆಗಳು

'ಸಮ್ಮಿಲನ್ 2.0 ಮತ್ತು ಇತರ 'ಇ' ಕಾಲದ ಕಥೆಗಳು', ವೃತ್ತಿಯಲ್ಲಿ ಪತ್ರಕರ್ತರಾಗಿರುವ ಚರಣ್ ಸಿ.ಎಸ್. ಅವರ ಎರಡನೇ ಕಥಾಸಂಕಲನ. ಕೃತಿಯ ಶೀರ್ಷಿಕೆಯೇ ಉಲ್ಲೇಖಿಸುವಂತೆ ಇವುಗಳು 'ಇಂಟರ್‌ನೆಟ್' ಕಾಲಕ್ಕೆ ಬಹು ಹತ್ತಿರದವು. ಒಟ್ಟು 10 ಕಥೆಗಳ ಗುಚ್ಛವಿದು.

ಕೋವಿಡ್ ತಂದೊಡ್ಡಿದ ಲಾಕ್‌ಡೌನ್ ಪರಿಸ್ಥಿತಿ ಜನರನ್ನು ಡಿಜಿಟಲ್ ಲೋಕದತ್ತ ಮತ್ತಷ್ಟು ಸೆಳೆದಿತ್ತು. 'ವರ್ಕ್‌ಫ್ರಂ ಹೋಂ', 'ಗೂಗಲ್‌ಮೀಟ್', 'ಆನ್‌ಲೈನ್ ಕ್ಲಾಸ್' ಹೀಗೆ ಹೊಸ ಪದಗಳು ಜನ್ಮತಾಳಿ ಸಾಮಾನ್ಯ ಜನರ 'ಜೀವನ'ಕೋಶ ಸೇರ್ಪಡೆಯಾದವು. ಎಲ್ಲರೂ ಅನುಭವಿಸಿದ ಈ 'ಕಟ್ಟು'ಪಾಡಿನೊಳಗೇ ಲೇಖಕರು ತಮ್ಮೊಳಗಿದ್ದ ಕಥಾ ಎಳೆಗಳಿಗೆ ಅಕ್ಷರರೂಪ ಕೊಟ್ಟಿದ್ದಾರೆ. ಹೀಗಾಗಿ ಇಲ್ಲಿರುವ ಬಹುತೇಕ ಕಥೆಗಳಿಗೆ ಡಿಜಿಟಲ್ ನೆಂಟಸ್ತಿಕೆ ಇದೆ. ಇವುಗಳ ಪೈಕಿ ಕೆಲ ಕಥೆಗಳು ಕನ್ನಡ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಕೃತಿಯ ಶೀರ್ಷಿಕೆ ಹೊತ್ತಿರುವ ಕಥೆ 'ಸಮ್ಮಿಲನ್ 2.0'ನಲ್ಲಿ ಸ್ಟಾರ್ಟ್‌ಅಪ್ ಕಂಪನಿಗೆ ಜನ್ಮವಿತ್ತ ಯುವಕನೊಬ್ಬನ ಸರಳವಾದ ಕಥೆಯಿದೆ. ಮೊದಲೇ ಹೇಳಿದಂತೆ ಇಲ್ಲಿರುವ ಕಥೆಗಳೆಲ್ಲವೂ 'ಇ' ಕಾಲದ ಕಥೆಯಾಗಿರುವ ಕಾರಣ ಆಡುಮಾತಿನಲ್ಲಿ ಬಳಸುವ ಆಂಗ್ಲಪದಗಳ ಗೊಂಚಲುಗಳೇ ಇಲ್ಲಿನ ಎಲ್ಲ ಕಥೆಗಳಲ್ಲೂ ಇವೆ. ಜೊತೆಗೆ ವಾಟ್ಸ್‌ಆ್ಯಪ್‌ನಲ್ಲಿ ಸಿಗುವ ಇಮೋಜಿಗಳೂ ಅಲ್ಲಿಲ್ಲಿ ಇಣುಕುತ್ತವೆ. ಕೊನೆಯ ಅಧ್ಯಾಯ 'ಗುಚ್ಛ'ದಲ್ಲಿ ನ್ಯಾನೊ ಕಥೆಗಳೂ ಇವೆ, 'ಸ್ಕ್ರ್ಯಾಚ್ ಕಾರ್ಡ್'ನಂತಹ ಕೆಲ ಮೈಕ್ರೊ ಕಥೆಗಳೂ ಇವೆ. ಆ ನಿಟ್ಟಿನಲ್ಲಿ ಕಥೆಯ ಜಾಡಿನಲ್ಲಿ ಹೊಸ ಹೆಜ್ಜೆ ಗುರುತು ಮೂಡಿಸುವ ಉತ್ಸಾಹವನ್ನೂ ಈ ಸಂಕಲನ ಹೊಂದಿದೆ.

ಪು: 164 ₹150

ಸಮ್ಮಿಲನ್ 2.0 ಮತ್ತು ಇತರ 'ಇ' ಕಾಲದ ಕಥೆಗಳು
ಲೇ: ಚರಣ್ ಸಿ.ಎಸ್
ಪ್ರ: ಟೋಟಲ್ ಕನ್ನಡ, ಬೆಂಗಳೂರು
ಸಂ: 9686152902

ಕವನ

ಅಕ್ಷತಾ ಕೃಷ್ಣಮೂರ್ತಿ ಅವರ

ನಿನ್ನನ್ನು ಸಮುದ್ರ ಎನ್ನಲಾರೆ

https://www.prajavani.net/poetry

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಲಯ ಆಸ್ವಾದಕ್ಕೊಂದು ವೆಬ್ ಸರಣಿ

ಕಟ್ಟೆ ಗುರುರಾಜ್

ಲಯ ಅಂದರೆ ಕಾಲ; ಸಮಯ. ಪ್ರತಿ ಮನುಷ್ಯನ ದೇಹದೊಳಗೂ ಅಂತರ್ಗತವಾದ ಕಾಲಮಾಪನವಿರುತ್ತದೆ. ಇದೂ ಲಯವೇ. ಹಗಲು-ಇರುಳಿನ ಬದಲಾವಣೆಯನ್ನು ಆಧರಿಸಿರುತ್ತದೆ. ನಮ್ಮ ದೈನಿಕ ಕಾಲಚಕ್ರಕ್ಕೂ, ಸೂರ್ಯಾಸ್ತ, ಸೂರ್ಯೋದಯದಂತಹ ಪ್ರಾಕೃತಿಕ ಚಲನೆಗೂ ನಂಟಿದೆ. ನಮ್ಮ ಹೃದಯ ಬಡಿತಕ್ಕೂ ಲಯವಿದೆ.

ಸಂಗೀತದಲ್ಲಿ ಕಾಲ ಅನ್ನುವುದೇ ಒಂದು ಜಗತ್ತು. ಸಾಮಾನ್ಯವಾಗಿ ಗಾಯಕರು ಹಾಡುತ್ತಾ ತೊಡೆಯ ಮೇಲೆ ಹಾಕುವ ತಾಳವೇ ಲಯ ಅಂದುಕೊಂಡವರಿದ್ದಾರೆ.

ತಪ್ಪು ತಪ್ಪು.

ತಾಳ ಲಯವಲ್ಲ. ಆದರೆ, ಲಯದ ತಕ್ಕಡಿ ತಾಳ. ಲಯವನ್ನು ತೋರಿಸುವ ಉಪಕರಣ ತಾಳ. ಹಾಗಾದರೆ ಕಾಲ, ಲಯ ಎಂದರೇನು ಅಂತೀರಾ... ಸಂಗೀತದಲ್ಲಿ ಲಯ ಅನ್ನುವುದು ಅನುಭೂತಿ; ಅಮೂರ್ತ; ಕಣ್ಣಿಗೆ ಕಾಣುವುದಿಲ್ಲ. ಹಾಗಾಗಿ, ಕಾಲವು ನಾವೇ ದಕ್ಕಿಸಿಕೊಳ್ಳಬೇಕಾದ ಅನುಭವ. ಕಾಲಾಯ ತಸ್ಮೈ ನಮಃ- ಎಂದುಕೊಂಡು ಕಾಲಮಂಟಪವನ್ನು ಹೊಕ್ಕಾಗ ಮಾತ್ರ ಲಯದ ಮಹಿಮೆಯನ್ನೂ, ಅದು ನಮಗೆ ನೀಡುವ ರಸಸ್ವಾದವನ್ನೂ ಅನುಭವಿಸಬಹುದು.

ಸಂಗೀತ ಸುಖದಲ್ಲಿ ಪರಾಕಾಷ್ಠೆ ತಲುಪಲು ನಮ್ಮ ದೇಹದೊಳಗಿನ ಅಂತರ್ಗತ ಲಯ, ಸಂಗೀತದ ಲಯ ಎರಡೂ ಕೈಕುಲುಕಿದಾಗ ಮಾತ್ರ 'ವಾಹ್' ಎನ್ನುವ ಪದ ಹೊರಬೀಳುವುದು. ಲಯ ಅಥವಾ ಕಾಲವನ್ನು ಅರ್ಥೈಸಿಕೊಂಡಾಗ ಸಂಗೀತದ ಆಸ್ವಾದನೆಯ ರೀತಿಯೂ ಬದಲಾಗುತ್ತದೆ. ಆಸ್ವಾದನೆ ಹೆಚ್ಚಾದಂತೆ ನಮ್ಮ ಮೆದುಳಿನಲ್ಲಿ ಡೋಪಮಿನ್, ಸೆರೋಟೋನಿನ್‌ನಂಥ ಹಾರ್ಮೋನ್‌ಗಳು ಉತ್ಪಾದನೆಯಾಗುತ್ತವೆ. ನಮ್ಮಲ್ಲಿ ಪಾಸಿಟಿವ್ ಮೂಡ್ ಸೃಷ್ಟಿಯಾಗುವುದು ಈ ಹಾರ್ಮೋನ್‌ಗಳಿಂದ.

ಶ್ರುತಿರ್ಮಾತಾ ಲಯ ಪಿತಃ

ಸಂಗೀತದಲ್ಲಿ ಶ್ರುತಿ ತಾಯಿಯಾದರೆ, ಲಯ ತಂದೆಯಂತೆ. ಈ ತಂದೆಯ ಬಗ್ಗೆ ಸಂಶೋಧನೆಗೆ ಇಳಿದು ಅಪರೂಪದ ದಾಖಲೆ ನಿರ್ಮಿಸಿದ್ದಾರೆ ಕರ್ನಾಟಕದ, ಬೆಂಗಳೂರಿನ ವಿದ್ವಾನ್ ಖಂಜರ ಗುರುಪ್ರಸನ್ನ.

ಸ್ವರ ಪ್ರಸ್ತಾರದಲ್ಲಿ ಲಯ ಹೇಗೆಲ್ಲಾ ಅಡಕವಾಗಿರುತ್ತದೆ, ಕಂಪೋಸಿಷನ್ ಅಂತ ನೋಡಿದಾಗ ಅದರ ಆದಿತಾಳದಲ್ಲಿ ಯಾವ ರೀತಿ ಲಯ ಇರುತ್ತದೆ, ತಾಳ ವೇಗ ಪಡೆದುಕೊಂಡಂತೆ ಲಯದ ಕಲರ್ ಹೇಗೆ ಬದಲಾಗುತ್ತದೆ, ಲಯ ವಿನ್ಯಾಸದ- ಚತುಸ್ರ, ಖಂಡ, ನಡೆಗಳಲ್ಲಿ ಲಯ ಹೇಗಿರುತ್ತದೆ, ಹೇಗೆಲ್ಲ ಬದಲಾಗುತ್ತದೆ, ಹೀಗೆ ಕರ್ನಾಟಕ ಸಂಗೀತದಲ್ಲಿ ಲಯ ಎಲ್ಲೆಲ್ಲಿ ಹರಿಯುತ್ತದೆಯೋ ಅದರ ಮಾರ್ಗವನ್ನು ಗುರುತಿಸುವ ಕೆಲಸವನ್ನು ಈ ಗುರುಪ್ರಸನ್ನ ಮಾಡಿದ್ದಾರೆ.

ಗುರುಪ್ರಸನ್ನ ಅವರು ಈ ಮಾರ್ಗವನ್ನು ಗುರುತಿಸಿ, ಕೇವಲ ತಾವು ಸಂತೋಷಪಟ್ಟು, ತಮ್ಮವರನ್ನು ಖುಷಿಪಡಿಸಲಿಲ್ಲ. ವಿದ್ವತ್ತನ್ನು ಜ್ಞಾನದ ಪೆಟ್ಟಿಗೆಯಲ್ಲಿ ಹಾಕಿ ಮುಚ್ಚಿಡಲಿಲ್ಲ. ಬದಲಿಗೆ ತಮ್ಮ ಕನಸಿನ ಕೂಸು ಸಮತ್ವ ಸಂಗೀತ ಸಂಸ್ಥೆಯ ಮೂಲಕ, ಕರ್ನಾಟಕ ಶಾಸ್ತ್ರೀಯ ಸಂಗೀತದ 40 ಮೇರು ಕಲಾವಿದರಿಗೆ, ಲಯದ ಒಂದೊಂದು ಆಯಾಮಗಳನ್ನು ನೀಡಿ, ಅವರ ಅಗಾಧ ಅನುಭವವನ್ನು 21 ಎಪಿಸೋಡ್‌ಗಳಲ್ಲಿ ರೆಕಾರ್ಡ್ ಮಾಡಿ, ಅವುಗಳನ್ನು ಫೇಸ್‌ಬುಕ್, ಯೂಟ್ಯೂಬ್ ಮೂಲಕ ಪ್ರಸಾರ ಮಾಡಿದ್ದಾರೆ.



ವಿದ್ವಾನ್ ಡಾ.ಪತ್ರಿ ಸತೀಶ್ ಕುಮಾರ್ ಅವರ ಗಾಯನ ಕಛೇರಿ

> ಲಯ ಅಂದರೆ ಕಾಲ. ನಮ್ಮ ಹೃದಯದ ಬಡಿತಕ್ಕೂ ಒಂದು ಲಯವಿದೆ. ಕಾರಣ, ನಮ್ಮ ದೇಹದಲ್ಲಿ ಅಂತರ್ಗತವಾಗಿರುವ ಕಾಲಮಾಪನ. ಅದಕ್ಕೂ ನಾವು ಕೇಳುವ ಸಂಗೀತಕ್ಕೂ ಸಂಬಂಧವಿದೆ. ಇಂಥ ಲಯದ ಬಗ್ಗೆ ಪ್ರಖಾಂಡವಾಗಿ ಕೆಲಸ ಮಾಡಿರುವ ವಿದ್ವಾನ್ ಖಂಜರ ಗುರುಪ್ರಸನ್ನ ಲಯಗಳ ನಾನಾ ಸ್ವರೂಪಗಳನ್ನು ತೆರೆದಿಡುವ 21 ವಿಡಿಯೊಗಳನ್ನು ಮಾಡಿ, ಯೂಟ್ಯೂಬ್‌ಗೆ ಅಪ್ ಲೋಡ್ ಮಾಡಿದ್ದಾರೆ.

ಜಗತ್ತಿನ ಸಾವಿರಾರು ಸಂಗೀತಗಾರರು, ಸಂಗೀತ ಪ್ರೇಮಿಗಳು ಈ 'ರಿದಮ್ಮಿನ ಟೇಸ್ಟ್' ಸವಿದಿದ್ದಾರೆ. ಆಸ್ಟ್ರೇಲಿಯಾ, ಯೂರೋಪ್, ಅಮೆರಿಕ ಮುಂತಾದ ಕಡೆಗಳಲ್ಲಿರುವ ಸಂಗೀತಗಾರರು, ಸಂಗೀತಾರ್ಥಿಗಳು ಗುರುಪ್ರಸನ್ನ ಅವರಿಗೆ ದೊಡ್ಡ ಚಪ್ಪಾಳೆ ಕೊಟ್ಟಿದ್ದಾರೆ. 'ನಾವು ಸಂಗೀತ ಕೇಳುವುದಕ್ಕೂ, ಲಯ ಗೊತ್ತಿಲ್ಲದೇ ಇರುವವರು ಸಂಗೀತ ಕೇಳುವುದಕ್ಕೂ ಬಹಳ ವ್ಯತ್ಯಾಸ ಇದೆ. ಅದನ್ನು ತಿಳಿದುಕೊಂಡರೆ ಸಂಗೀತದ ಸ್ವಾದ ಜಾಸ್ತಿಯಾಗುತ್ತದೆ. ಇಂಥ ಜ್ಞಾನವನ್ನು ನಾವೇ ಇಟ್ಟುಕೊಂಡರೆ ಸರಿಯಲ್ಲ. ಇದು ಮುಂದಿನ ಪೀಳಿಗೆಗೂ ಮುಟ್ಟಬೇಕು ಅನ್ನುವುದು ನಮ್ಮ ಗುರಿ' ಎನ್ನುತ್ತಾರೆ ಖಂಜರ ಗುರುಪ್ರಸನ್ನ.

ಗುರುಪ್ರಸನ್ನ

ವಿದ್ವಾನ್ ನಂಜಿಲ್ ಎ.ಆರ್.ಅರುಲ್ ಮತ್ತು ವಿದುಷಿ ವೈಕಾಮ್ ಪದ್ಮಾ ಕೃಷ್ಣನ್ ಸಂಗೀತ ವೈವಿಧ್ಯ

ಆದರೆ, ಸಂಗೀತ ಮಾರಾಟದ ಸರಕಾಗಿರುವ ಈ ಕಾಲದಲ್ಲಿ ಇಂಥ ನಿಸ್ವಾರ್ಥ ಯೋಚನೆ ಮೊಳೆತದ್ದು ಹೇಗೆ ಅಂದಾಗ ಅವರು ಕೊಟ್ಟ ಉತ್ತರ ಹೀಗಿದೆ: 'ನಾನು ಒಂದು ಸಲ ವಿದ್ವಾನ್ ಕಾರೈಕುಡಿ ಮಣಿ ಅವರ ಜೊತೆ ಆಸ್ಟ್ರೇಲಿಯಾ ಪ್ರವಾಸಕ್ಕೆ ಹೋಗಿದ್ದೆ. ಅಲ್ಲಿ ಅವರು ಲಯದ ಅಸ್ತಿತ್ವ, ಸ್ವರೂಪಗಳ ಬಗ್ಗೆ ಅದ್ಭುತವಾಗಿ ಚರ್ಚಿಸಿದರು. ಆನಂತರ, ಕಾರ್ಯಕ್ರಮದಲ್ಲಿ ಕಂಪೋಸಿಷನ್ ನುಡಿಸಿದೆ. ಆಗ ಲಯದ ಅಭೂತಪೂರ್ವ ಅನುಭವ ನನಗಾಯಿತು. ಇದು ನನಗಷ್ಟೇ ಸೀಮಿತವಾಗಬಾರದೆನ್ನುವ ಯೋಚನೆ ಬಂತು. ಲಾಕ್‌ಡೌನ್ ವೇಳೆ ಕಛೇರಿಗಳು ಇರಲಿಲ್ಲ. ಈ ಸಂದರ್ಭವನ್ನು ಬಳಸಿಕೊಂಡು ಲಯದ ಆಲಯಕ್ಕೆ ಹೊಕ್ಕೆ. ಅದು ಈಗ ನಿಮ್ಮ ಮುಂದೆ ಇದೆ. ಲಯದ ಬಗ್ಗೆ ಅಧ್ಯಯನ ಮಾಡುವವರಿಗೆ ಇದು ದಾರಿದೀಪವಾಗಲಿದೆ ಅನ್ನೋದು ನನ್ನ ಹೆಮ್ಮೆ' ಎನ್ನುತ್ತಾರೆ ಗುರು.

ಗುರುಪ್ರಸನ್ನ, ಆಗಸ್ಟ್ 13ರಂದು ಬೆಂಗಳೂರು ಎನ್. ಆರ್. ಕಾಲೊನಿಯ ಪತ್ತಿ ಸಭಾಂಗಣದಲ್ಲಿ ಲಯಸ್ವಾದ ಸಮಾರೋಪ ಇಟ್ಟುಕೊಂಡಿದ್ದಾರೆ. ದಿಗ್ಗಜರು ಪ್ರಸ್ತುತಪಡಿಸುವ ಲಯದ ನಾನಾ ಸ್ವರೂಪಗಳನ್ನು ಕಣ್ತುಂಬಿಕೊಳ್ಳಬಹುದು, ಕಿವಿ ತುಂಬಿಕೊಳ್ಳಬಹುದು. ಅವಿಸ್ಮರಣೀಯ ಘಳಿಗೆಗೆ ಸಂಗೀತಾಸಕ್ತರು ಸಾಕ್ಷಿಯಾಗಬಹುದು. ❖

ಚದುರಂಗ ಚತುರರು

10ನೇ ಪುಟದಿಂದ...

ಮಕ್ಕಳೂ ಬೇಗ ಗ್ರಹಿಸಿಕೊಳ್ಳುತ್ತಾರೆ. ಅನುಭವ ಮಾಗಿದಂತೆ ಬೆಳವಣಿಗೆ ಅಗಾಧವಾಗುತ್ತದೆ' ಎಂದು ಅಂತರರಾಷ್ಟ್ರೀಯ ಆರ್ಬಿಟರ್ ವಸಂತ್ ವಿಶ್ಲೇಷಿಸುತ್ತಾರೆ.

ತಮಿಳುನಾಡು, ಆಂಧ್ರಪ್ರದೇಶ ಮತ್ತು ಕೇರಳದಿಂದಲೇ ಹೆಚ್ಚು ಆಟಗಾರರು ಪ್ರವರ್ಧಮಾನಕ್ಕೆ ಬರಲು ಇದೂ ಒಂದು ಕಾರಣ. ಈ ಭಾಗದ ಕೌಟುಂಬಿಕ ವ್ಯವಸ್ಥೆಯಲ್ಲಿ ಮಕ್ಕಳಿಗೆ ವಿದ್ಯಾಭ್ಯಾಸ ನೀಡುವುದೇ ಪ್ರಥಮ ಆದ್ಯತೆ. ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳೇನಿದ್ದರೂ ಎರಡನೇ ಆದ್ಯತೆ. ಅದೂ ಚೆನ್ನೈನಂತಹ ನಗರದಲ್ಲಿ ಕ್ರಿಕೆಟ್‌ಗೇ ಪ್ರಥಮ ಮಣೆ. ಆದರೆ ಚೆಸ್ ಬುದ್ಧಿಮತ್ತೆ ಹೆಚ್ಚಿಸಿ ಓದಿಗೂ ನೆರವಾಗುತ್ತದೆ. ಅಲ್ಲದೇ ದೈಹಿಕವಾಗಿ ಗಾಯಗೊಳ್ಳುವ ಸಾಧ್ಯತೆಗಳಿಲ್ಲ ಎಂಬ ಕಾರಣಗಳಿವೆ.

ಸಾಂಪ್ರದಾಯಿಕ ಕಲಿಕೆಯೂ ಮುಖ್ಯ

ತಂತ್ರಜ್ಞಾನ ಎಷ್ಟೇ ಬೆಳೆದರೂ ತರಬೇತುದಾರರು ಬೇಕೆ ಬೇಕು ಎಂದು ಪ್ರಜ್ಞಾನಂದನ ತರಬೇತುದಾರ ಆರ್.ಬಿ. ರಮೇಶ್ ಪ್ರತಿಪಾದನೆ. 'ಚೆಸ್ ಆಡುವುದು ಕಣ್ಣುಗಳಿಂದಲ್ಲ. ಒಳಗಣ್ಣುಗಳಿಂದ. ಒಬ್ಬ ಆಟಗಾರ ಕಣ್ಣು ಮುಚ್ಚಿಕೊಂಡರೂ ತನ್ನ ಮುಂದಿರುವ ಬೋರ್ಡ್ ಮೇಲಿನ ಪಾನ್‌ಗಳನ್ನು ನಡೆಸುವುದು ಮನೋಗತವಾಗಿರಬೇಕು' ಎಂದು ಹೇಳುತ್ತಾರೆ. ಅದಕ್ಕಾಗಿಯೇ ಅವರು ತಮ್ಮ ವಿದ್ಯಾರ್ಥಿಗಳ ಕಣ್ಣುಗಳಿಗೆ ಕಪ್ಪುಬಟ್ಟೆ ಕಟ್ಟಿ ಅಭ್ಯಾಸಕ್ಕಿಳಿಸುತ್ತಾರೆ.

'ಮಹಡಿಗಳನ್ನು ಹತ್ತುವಾಗ ಲಿಫ್ಟ್ ಬಳಸುವುದರಿಂದ ಸಮಯ ಉಳಿಸಬಹುದು ಮತ್ತು ಸುಸ್ತಾಗುವುದನ್ನೂ ತಪ್ಪಿಸಬಹುದು. ಆದರೆ ದೀರ್ಘಕಾಲದ ಲಾಭ ಬೇಕಾದರೆ ಮೆಟ್ಟಿಲುಗಳ ಬಳಕೆ ಸೂಕ್ತ. ಆರೋಗ್ಯಕ್ಕೂ ಒಳ್ಳೆಯದು. ಹಾಗೆಯೇ ತಂತ್ರಜ್ಞಾನ ಲಿಫ್ಟ್ ಇದ್ದಂತೆ, ಕೋಚ್ ಮಾರ್ಗದರ್ಶನದಲ್ಲಿ ಕಲಿಯುವುದು ಮೆಟ್ಟಿಲು ಬಳಕೆ ಇದ್ದಂತೆ. ಕಾಲಾನುಸಾರ ಎರಡನ್ನೂ ಬಳಸುವ ಜಾಣ್ಮೆ ರೂಢಿಸಿಕೊಳ್ಳುವವರು ಬಹಳಷ್ಟು ಮೇಲಕ್ಕೇರಬಹುದು ಎಂಬುದು ರಮೇಶ್ ತತ್ವ' ಎಂದು ವಸಂತ ಹೇಳುತ್ತಾರೆ.

ನೂತನ ತಂತ್ರಜ್ಞಾನದಿಂದ ಆನ್‌ಲೈನ್ ಚೆಸ್ ಮತ್ತು ಟೂರ್ನಿಗಳಲ್ಲಿ ಮೋಸದಾಟಗಳಿಗೆ ಕಡಿವಾಣ ಬಿದ್ದಿದೆ. ಸ್ಕೋರಿಂಗ್ ಮತ್ತು ಫಲಿತಾಂಶ ನಿರ್ಧಾರದಲ್ಲಿ ಬಹಳಷ್ಟು ನಿಖರತೆಯೂ ಬಂದಿದೆ. ಜೊತೆಗೆ ಸಮಯ, ಮಾನವ ಸಂಪನ್ಮೂಲದ ಉಳಿತಾಯವೂ ಆಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ಭಾರತವು ಚೆಸ್‌ನಲ್ಲಿ ಸೂಪರ್ ಪವರ್ ಆಗಿ ಬೆಳೆಯುವ ಹಾದಿಯಲ್ಲಿದೆ. ಕಳೆದ ಹನ್ನೆರಡು ವರ್ಷಗಳಲ್ಲಿ ಆಗಿರುವ ಕ್ರಾಂತಿ ಸಣ್ಣದಲ್ಲ. 2010ರಲ್ಲಿ ಭಾರತದಲ್ಲಿ 23 ಗ್ರ್ಯಾಂಡ್‌ಮಾಸ್ಟರ್‌ಗಳಿದ್ದರು. ಈಗ ಅವರ ಸಂಖ್ಯೆ 74ಕ್ಕೇರಿದೆ. 33 ಸಾವಿರಕ್ಕೂ ಹೆಚ್ಚು ರೇಟೆಡ್ ಆಟಗಾರರು ಇದ್ದಾರೆ. ಫಿಡೆ ರೇಟಿಂಗ್‌ನಲ್ಲಿ ಭಾರತವು ನಾಲ್ಕನೇ ಸ್ಥಾನದಲ್ಲಿದೆ.

ಭಾರತದ ಚೆಸ್ ರಂಗಕ್ಕೆ ಹೊಸದಿಕ್ಕು ತೋರಿದ ಗ್ರ್ಯಾಂಡ್‌ಮಾಸ್ಟರ್ ವಿಶ್ವನಾಥನ್ ಆನಂದ್ ಅವರು ಒಂದೊಮ್ಮೆ ನಿವೃತ್ತಿಯಾದರೆ ಆ ಸ್ಥಾನ ತುಂಬಲು ದೊಡ್ಡ ಜೂನಿಯರ್ ಪಡೆಯೇ ಇರುವುದು ಇದಕ್ಕೆ ಕಾರಣ. ನಾರ್ವೆಯ ಮ್ಯಾಗ್ನಸ್ ಕಾರ್ಲಸನ್ ಅವರನ್ನೇ ಸೋಲಿಸಿರುವ ಪ್ರಜ್ಞಾನಂದ ಅವರಂತಹ ಪ್ರತಿಭೆಗಳು ಈಗ ಹಲವರಿರುವುದೇ ವಿಶ್ವಾಸ ಬೆಳೆಯಲು ಕಾರಣ. ಒಟ್ಟಿನಲ್ಲಿ ರಾಜ, ಮಹಾರಾಜರ ಅರಮನೆಯ ಪ್ರತಿಷ್ಠೆಯ ಚದುರಂಗವು ಈಗ ಜನಸಾಮಾನ್ಯರ ಪಡಸಾಲೆಗೂ ಬಂದಿದೆ. ಆ ಚದುರಂಗದಲ್ಲಿ ಯುದ್ಧೋನ್ಮಾದವಿರುತ್ತಿತ್ತು. ಆದರೆ ಇಲ್ಲಿ ಕ್ರೀಡೆಯ ಮನೋಲ್ಲಾಸವಿದೆ.

ಭಾರತಕ್ಕೆ ಒಲಿಂಪಿಯಾಡ್ ಲಾಭ

ಕ್ರಿಕೆಟ್, ಟೆನಿಸ್ ಮತ್ತಿತರ ಆಟಗಳನ್ನು ನೇರವಾಗಿ ಮೈದಾನದಲ್ಲಿ ಕುಳಿತು ವೀಕ್ಷಿಸಲು ನೂರಾರು ಜನರು ಸೇರುತ್ತಾರೆ. ಆದರೆ ಚೆಸ್ ವೀಕ್ಷಣೆಗೆ ಇಂತಹ ಅವಕಾಶವಿಲ್ಲ. ಮೂಲವಾಗಿ ಈ ಪಂದ್ಯಗಳನ್ನು ವೀಕ್ಷಿಸಲು ಜನರೇ ಹತ್ತಿರ ಬರುವುದಿಲ್ಲ. ಇದಕ್ಕೆ ಕಾರಣಗಳು ಹಲವಾರಿವೆ. ಕ್ಲಾಸಿಕಲ್ ಚೆಸ್ ದೀರ್ಘ ಸಮಯ ತೆಗೆದುಕೊಳ್ಳುತ್ತದೆ. ಆಟದ ಜಾಗದಲ್ಲಿ ಶಾಂತ ವಾತಾವರಣ ಕಾಪಾಡಲು ಜನರನ್ನು ನಿರ್ಬಂಧಿಸಲಾಗಿರುತ್ತದೆ.

ಆದರೆ ಈಗ ಕಾಲ ಬದಲಾಗುತ್ತಿದೆ. ಚೆಸ್ ವೀಕ್ಷಣೆಗೆ ಜನರು ಬರಲಾರಂಭಿಸಿದ್ದಾರೆ. ಭಾರತದಲ್ಲಿ ಇದೇ ಮೊದಲ ಬಾರಿಗೆ ನಡೆಯುತ್ತಿರುವ ಚೆಸ್ ಒಲಿಂಪಿಯಾಡ್‌ನಲ್ಲಿಯೂ ಇಂತಹದೊಂದು ಕೌತುಕವಿದೆ.

'ಮಹಾಬಲಿಪುರಂನಲ್ಲಿ ಚೆಸ್ ಒಲಿಂಪಿಯಾಡ್ ನಡೆಯುತ್ತಿರುವ ಸ್ಥಳವನ್ನು ವೀಕ್ಷಿಸಲು ಮಧ್ಯಾಹ್ನದ ಹೊತ್ತಿನಲ್ಲಿ ಸಾರ್ವಜನಿಕರಿಗೆ ಅವಕಾಶ ನೀಡಲಾಗುತ್ತಿದೆ. ಸ್ಪರ್ಧೆ ನಡೆಯುವ ತಾಣವನ್ನು ವೀಕ್ಷಿಸಲು ತಲಾ ಮೂರು ಸಾವಿರ ರೂಪಾಯಿ ಶುಲ್ಕ ಕೊಟ್ಟು ನೂರಾರು ಜನರು ಬರುತ್ತಿದ್ದಾರೆ. ಈ ಒಲಿಂಪಿಯಾಡ್‌ನಿಂದಾಗಿ ಭಾರತದ ಚೆಸ್ ರಂಗ ಮತ್ತಷ್ಟು ದೊಡ್ಡದಾಗಿ ಬೆಳೆಯುವ ನಿರೀಕ್ಷೆ ಇದೆ. ಟಾರ್ಚ್ ರಿಲೇಯು 75 ನಗರಗಳಲ್ಲಿ ಸಂಚರಿಸಿ ಪ್ರಚಾರ ಸಿಕ್ಕಿದೆ. ಪ್ರಧಾನಿಯವರಿಂದ ಉದ್ಘಾಟನೆಯಾಗಿದ್ದು ಕೂಡ ಮಹತ್ವದ್ದು. ಇದು ಮಕ್ಕಳು ಮತ್ತು ಪಾಲಕರಲ್ಲಿ ಹೊಸ ಉತ್ತೇಜನಕ್ಕೆ ಕಾರಣವಾಗಲಿದೆ' ಎಂದು ಒಲಿಂಪಿಯಾಡ್‌ನಲ್ಲಿ ಅಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕದ ಆರ್ಬಿಟರ್ ವಸಂತ್ ಹೇಳುತ್ತಾರೆ. ಅವರ ತಂಡದಲ್ಲಿರುವ ಮಂಜುನಾಥ್, ಸಲೀಂ ಬೇಗ್ ಮತ್ತು ಪ್ರಮೋದ್ ಮೋರೆ ಕೂಡ ದನಿಗೂಡಿಸುತ್ತಾರೆ.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಟ್ವೆಂಟಿ – 20 ಮ್ಯಾಚ್

ಇಲ್ಲಿರುವ ಪದಾಕ್ಷರಗಳನ್ನು ಹೊಂದಿಸಿ

1	ಅರಿ	A	ತ
2	ವಾಸ	B	ರು
3	ಅಪ್ಪ	C	ತಾ
4	ಹರಿ	D	ಣಿ
5	ಕರ	E	ತಿ
6	ಬರ	F	ಳು
7	ವರ	G	ಣಿ
8	ಸಂತ	H	ವು
9	ಮರ	I	ಳ
10	ಕರು	J	ನೆ
11	ಸರ	K	ಗ
12	ಹಸಿ	L	ವ
13	ಗುರು	M	ಣೆ
14	ಜಗ	N	ದಿ
15	ಗಡಿ	O	ಹ
16	ಹಣ	P	ತೆ
17	ಮಾನ	Q	ತು
18	ಗರ	R	ತಿ
19	ಮಾವು	S	ಗೆ
20	ಸರಿ	T	ಸ

ಸಿನಿಸ್ವಾರಸ್ಯ

A ಸರಿಗಮ 'ಪದ ಆಟ'

ಇಲ್ಲಿ ಕೊಟ್ಟಿರುವ ಕೆಲವು ಅಕ್ಷರಗಳಿಗೆ ಹೊಂದುವಂತೆ ಡಾ.ರಾಜ್‌ಕುಮಾರ್ ನಟಿಸಿರುವ ಕೆಲವು ಸಿನಿಮಾ ಹೆಸರು ಪತ್ತೆಹಚ್ಚಿ

1 – ಸ– – –
2 –ರಿ– –
3 – ಗ– – – – –
4 –ಮ– – –

B ಹೇಳಿ ನೋಡೋಣ

ಇಲ್ಲಿ ಸಂಖ್ಯಾಧಾರಿತ ಸಿನಿಮಾ ಹೆಸರುಗಳನ್ನು ಕೊಡಲಾಗಿದೆ. ನೀವೂ ಒಂದು ಹೇಳಿ ನೋಡೋಣ

1 ಮುತ್ತಿನ ಕಥೆ
2 ಕನಸು
3 ___?

C ಚಿಕ್ಕ ಲೆಕ್ಕ

ಸಂಖ್ಯೆ ಯಾವುದು? ನಿಮ್ಮ ತರ್ಕದಿಂದ ಕಂಡುಹಿಡಿಯಿರಿ

ಎಡ	ಬಲ	ಕೆಳಗೆ	ಒಳಗೆ
8	7	12	72
14	19	2	53
17	21	9	?

ಗಣಿತದಲ್ಲಿ ಗರ್ದಿಗಮ್ಮತ್ತು

ಅಂಕಿ 2ರ ಮೋಜು

– ಹಾಲಿನೊಂದಿಗೆ ನೀರು ಕೂಡಿದರೆ ನೀರೂ ಹಾಲೇ ಆಗುವಂತೆ ಇಲ್ಲಿರುವ ಸಂಖ್ಯೆಗಳಿಗೆ 2 ಕೂಡಿದರೆ ತನ್ನಂತೆ ಎಲ್ಲ ಸಂಖ್ಯೆಗಳನ್ನು 2ರ ಮೊತ್ತವಾಗಿಸುತ್ತದೆ. 2 ಕೂಡಿಸಿ ನೋಡಿ.

1 2 3 4 5 6 7 8 9
9 8 7 6 5 4 3 2 1
1 2 3 4 5 6 7 8 9
9 8 7 6 5 4 3 2 1
2

B

ಹೊಂದಿಸು ಆನಂದಿಸು

ಬ್ರೇನ್‌ವಿಟಾ ಆಟ

ಇಲ್ಲಿ TEN, ONE, TWO 3 ಸಂಖ್ಯೆಗಳ ಒಟ್ಟು 9 ಅಕ್ಷರಗಳಿವೆ. ಕೆಳಗೆ ಚಕ್ಕಡಿಯ ಗಾಲಿಯಂತಿರುವ ಈ ಚಿತ್ರದಲ್ಲಿ 5 ಭಾಗಗಳು ಮಾತ್ರ ಇವೆ. ಮೇಲಿನ 9 ಅಕ್ಷರಗಳು ಮೂರು ಸಂಖ್ಯೆಗಳಾಗಿ ಓದುವಂತೆ 5 ಭಾಗಗಳಲ್ಲಿ ಹೇಗೆ ಬರೆಯುವುದು ಯೋಚಿಸಿ.

(ಸೂಚನೆ: ಒಂದು ಭಾಗದಲ್ಲಿ ಒಂದು ಅಕ್ಷರ ಮಾತ್ರ ಬರಬೇಕು)



ಮೈಲಾರ ಮಹದೇವಪ್ಪ

• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ

ಮೈಲಾರ ಮಹದೇವಪ್ಪ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ನಮ್ಮ ನಾಡಿನ ಮರೆಯಲಾಗದ ಚೇತನ. ಅವರ ನೆನಪಿನಲ್ಲಿ 2018ರಲ್ಲಿ ಅಂಚೆ ಇಲಾಖೆಯು ಅವರ ಚಿತ್ರವುಳ್ಳ ಅಂಚೆ ಚೀಟಿಯನ್ನು ಹೊರ ತಂದಿದೆ. ಯಾರಿವರು? ತಿಳಿಯೋಣ ಬನ್ನಿ



ಮೈಲಾರ ಮಹದೇವಪ್ಪ ಅವರು 1911ರಲ್ಲಿ ಹಾವೇರಿ ಜಿಲ್ಲೆಯ ಮೋಟೆಬೆನ್ನೂರಿನಲ್ಲಿ ಜನಿಸಿದರು. ಅವರ ತಾಯಿ ಬಸಮ್ಮ, ತಂದೆ ಮಾರ್ತಾಂಡಪ್ಪ. ಹೈಸ್ಕೂಲಿನಲ್ಲಿ ಓದುತ್ತಿರುವಾಗ ಹರ್ಡೇಕರ್ ಮಂಜಪ್ಪ ಅವರಿಂದ ರಾಷ್ಟ್ರೀಯ ಭಾವನೆಗೆ ಪ್ರೇರಣೆ ಸಿಕ್ಕಿತು. ಹಾಗಾಗಿ ಹೋರಾಟದ ಹಾದಿ ಹಿಡಿದರು.

ಮಹಾತ್ಮ ಗಾಂಧೀಜಿಯವರು 1930ರಲ್ಲಿ ಉಪ್ಪಿನ ಸತ್ಯಾಗ್ರಹ ಪ್ರಾರಂಭಿಸಿ ದಾಂಡಿ ಯಾತ್ರೆ ಕೈಗೊಂಡಾಗ ಅದರಲ್ಲಿ ಭಾಗವಹಿಸಿದ ಅತಿ ಕಿರಿಯ ಚಳವಳಿಗಾರರಾಗಿದ್ದರು. ಮಹಾದೇವಪ್ಪನವರು ಕರ್ನಾಟಕದಿಂದ ದಂಡಿ ಸತ್ಯಾಗ್ರಹದಲ್ಲಿ ಪಾಲ್ಗೊಂಡ ಏಕೈಕ ವ್ಯಕ್ತಿ

ಬ್ರಿಟಿಷರ ವಿರುದ್ಧ ಹೋರಾಡಲು ಅವರು ಯುವಕರನ್ನು ಸಂಘಟಿಸಿದರು. 1943 ಮಾರ್ಚ್ 31ರಂದು ಹೊಸರಿತ್ತಿಯ ಕಂದಾಯ ಕಚೇರಿ ಮೇಲೆ ದಾಳಿ ಮಾಡಿದಾಗ, ಪೋಲೀಸರ ಗುಂಡಿಗೆ ಬಲಿಯಾದರು. ಇವರ ಜತೆ ಹಿರೇಮಠ ವೀರಯ್ಯ ಹಾಗೂ ಮಡಿವಾಳ ತಿರಕಪ್ಪ ಎಂಬ ಹೋರಾಟಗಾರರೂ ಹುತಾತ್ಮರಾದರು

ಅದಲು ಬದಲು ಕಂಚಿ ಕದಲು

1 ನೀಲಿಕಡಲು = ...
2 ಯಾರಪದ = ...
3 ಮನೆ ಸಾಲರಿ! = ...
4 ಪ್ರಥಮ = ...

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಮೂಲಾಕ್ಷರಗಳನ್ನು ಬಳಸಿ, ಪಕ್ಕದಲ್ಲಿ ಕೊಟ್ಟಿರುವ ಸುಳಿವು ಆಧರಿಸಿ ಎರಡು ಅಕ್ಷರಗಳ ಹೊಸ ಪದ ರಚಿಸಿ

	ಬ	ರ	ಸುಳಿವು
1			ಲೇಖಿಸು
2			ಒಂದು ಹಣ್ಣು
3			ಅರಳು
4			ಗಿಡದ ಮೂಲ
5			ಕೂಡು



ಕಳೆದ ಸಂಚಿಕೆಯ ಸರಿ ಉತ್ತರಗಳು

ಟ್ವೆಂಟಿ- 20 ಮ್ಯಾಚ್: 1-P 2-K 3-E 4- D 5- I 6-H 7-B 8-M 9-O 10-R 11-Q 12-S 13-J 14-T 15-G 16-A 17-N 18-L 19-C 20-E

ಜಾಣಪದ ಆಟ: 1 ಶಿಲೆ 2 ಶೂಲೆ 3 ಶಾಲೆ 4 ಶೋಲೆ 5 ಶೈಲಿ

ಅದಲು ಬದಲು ಕಂಚಿ ಕದಲು : 1 ವಿರಾಜಮಾನ 2 ಕರಿದಬಾಳೆ 3 ಜನಮಾಯ 4 ನದಿಮುಂಭಾಗ

ಪಕ್ಷಿ ಪತ್ತೆ ಮಾಡಿ: A 1- ಗಿಳಿ 2 ಕಾಗೆ 3 ಗೂಗೆ 4 ಕೋಳಿ 5 ಬಕ
B 1 ಹದ್ದು 2 ಉಷ್ಟ್ರ 3 ಬುರ್ಲಿ 4 ಗುಬ್ಬಿ 5 ಮೈನಾ

ಮಜ ಮಜ ಮಜಕೂರದ ಕಳೆದ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು

ಪ್ರಣತಿ ಆರ್, ಬೆಂಗಳೂರು

ಸಮರ್ಥಗೌಡ ಪೊಲೀಸ್‌ಪಾಟೀಲ, ಕುದರಿಮೋತಿ (ಕೊಪ್ಪಳ)

ನಂದಿತಾ ಎಸ್.ಎಂ., ಬೆಂಗಳೂರು

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಆರ್‌ಎಸ್‌ಎಸ್ ಮುಖಂಡನಿಗೆ ಚಾಕುವಿನಿಂದ ಹಲ್ಲೆ

ಒಂದನೇ ಪುಟದಿಂದ...

'ಇಬ್ಬರು ಯುವಕರು ಬೈಕ್ ನಿಲುಗಡೆ ವಿಚಾರವಾಗಿ ಜಗಳವಾಡುತ್ತಿದ್ದರು. ರವಿಕುಮಾರ್, ಜಗಳವಾಡದಂತೆ ಬುದ್ಧಿವಾದ ಹೇಳಿದ್ದಾರೆ. ಆಗ ಸೈಯದ್ ವಾಸೀಂ ಎಂಬಾತ ಕೀ ಬಂಚ್‌ನಲ್ಲಿರುವ ಸಣ್ಣ ಚಾಕುವಿನಿಂದ ಹಲ್ಲೆ ನಡೆಸಿದ್ದಾನೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಿ. ದೇವರಾಜ್ 'ಪ್ರಜಾವಾಣಿ'ಗೆ ತಿಳಿಸಿದರು.

'ಆತ ಮಾಂಸದ ಅಂಗಡಿಯಲ್ಲಿ ಕೆಲಸ ಮಾಡುತ್ತಿರುವ ಬಗ್ಗೆ ಮಾಹಿತಿ ಇದ್ದು, ಆತನಿಗೂ ಸಣ್ಣಪುಟ್ಟ ಗಾಯಗಳಾಗಿವೆ. ಆತನ ಪೂರ್ವಪರ ಪರಿಶೀಲಿಸಲಾಗುತ್ತಿದೆ. ರವಿಯ ಹಿನ್ನೆಲೆ ಬಗ್ಗೆಯೂ ಮಾಹಿತಿ ಕಲೆ ಹಾಕುತ್ತಿದ್ದೇವೆ' ಎಂದು ಹೇಳಿದರು.

'ಮೇಲ್ನೋಟಕ್ಕೆ ಉದ್ವೇಗದಲ್ಲಿ ನಡೆದ ಘಟನೆ ಇದಾಗಿದೆ ಎಂದು ತಿಳಿದು ಬಂದಿದೆ. ಹಲ್ಲೆಗೆ ಬೇರೆ ಏನಾದರೂ ಕಾರಣ ಇದೆಯೋ ಎಂಬುದರ ಬಗ್ಗೆ ಎಲ್ಲಾ ಆಯಾಮಗಳಲ್ಲಿ ತನಿಖೆ ನಡೆಸುತ್ತಿದ್ದೇವೆ. ಆರೋಪಿ ಗಾಂಜಾ ಸೇವನೆ, ಮದ್ಯಪಾನ ಮಾಡಿದ್ದನೇ ಎಂಬ ಬಗ್ಗೆ ರಕ್ತದ ಮಾದರಿ ಪರೀಕ್ಷೆ ಮಾಡಿಸಲಾಗುವುದು' ಎಂದರು.

ಘಟನೆ ಹಿನ್ನೆಲೆಯಲ್ಲಿ ನಗರದಲ್ಲಿ ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಗಿತ್ತು. ಪುರಸಭೆಯ ಇಬ್ಬರು ಬಿಜೆಪಿ ಸದಸ್ಯರು, ಪಕ್ಷದ ಕಾರ್ಯಕರ್ತರು ಪಟ್ಟಣದ ಮಾರಿಕಾಂಬಾ ವೃತ್ತದಲ್ಲಿ ವಾಹನ ತಡೆದು ಪ್ರತಿಭಟನೆ ನಡೆಸಿದರು.

ಕೋಲಾರ ಪೊಲೀಸ್ ವರಿಷ್ಠಾಧಿಕಾರಿ ಡಿ. ದೇವರಾಜ್ ಸ್ಥಳಕ್ಕೆ ಧಾವಿಸಿ ಪ್ರತಿಭಟನಕಾರರನ್ನು ಚದುರಿಸಿದರು. ಸದ್ಯ ಪರಿಸ್ಥಿತಿ ನಿಯಂತ್ರಣದಲ್ಲಿದೆ.

ಗಡಿದಾಟಿದ ಚೀನಾದ ವಿಮಾನ, ನೌಕೆಗಳು; ಪ್ರತಿರೋಧಕ್ಕೆ ಸಜ್ಜು

ಆಕ್ರಮಣಕ್ಕೆ ತಾಲೀಮು: ತೈವಾನ್ ಆರೋಪ

ಬೀಜಿಂಗ್ (ಎಪಿ/ಎಎಫ್‌ಪಿ/ರಾಯಿಟರ್ಸ್): ಚೀನಾ ಕೈಗೊಂಡಿರುವ ವಿವಿಧ ರೀತಿಯ ಸೇನಾ ಕಸರತ್ತು, ಆಕ್ರಮಣಕ್ಕಾಗಿ ತಾಲೀಮು ನಡೆಸುತ್ತಿರುವ ರೀತಿಯಲ್ಲಿ ಕಾಣಿಸುತ್ತಿದೆ ಎಂದು ತೈವಾನ್ ಶನಿವಾರ ಆರೋಪಿಸಿದೆ.

ಚೀನಾದ ಹಲವು ಯುದ್ಧವಾಹಕ ನೌಕೆಗಳು, ಯುದ್ಧವಿಮಾನಗಳು ತೈವಾನ್ ಕೊಲ್ಲಿಯ ಗಡಿಯನ್ನು ದಾಟಿರುವ ಬೆಳವಣಿಗೆಗಳು ತೈವಾನ್‌ನ ಆತಂಕವನ್ನು ಹೆಚ್ಚಿಸಿದೆ.

ಈ ಬೆಳವಣಿಗೆಯಿಂದ ಜಾಗೃತವಾಗಿರುವ ತೈವಾನ್, ಅಪಾಯವನ್ನು ಗ್ರಹಿಸಿದೆ. ಹೀಗಾಗಿ ದ್ವೀಪರಾಷ್ಟ್ರದ ಸುತ್ತಲೂ ತನ್ನ ವಾಯು ಹಾಗೂ ನೌಕಾ ಗಸ್ತು ವಾಹನಗಳನ್ನು ಶನಿವಾರ ನಿಯೋಜಿಸಿದೆ. ನೆಲದಿಂದ ಉಡ್ಡಯನ ಮಾಡಬಲ್ಲ ಸಾಮರ್ಥ್ಯದ ಕ್ಷಿಪಣಿಗಳನ್ನು ಸಕ್ರಿಯ ಸ್ಥಿತಿಯಲ್ಲಿ ಇರಿಸಲಾಗಿದೆ ಎಂದು ತೈವಾನ್ ರಕ್ಷಣಾ ಸಚಿವಾಲಯ ತಿಳಿಸಿದೆ.

ಚೀನಾಕ್ಕೆ ಸೇರಿದ 20 ವಿಮಾನಗಳು ಹಾಗೂ 14 ನೌಕೆಗಳು ದ್ವೀಪರಾಷ್ಟ್ರವನ್ನು ಸುತ್ತುವರಿದಿವೆ. ಈ ಪೈಕಿ ಕನಿಷ್ಠ 14 ನೌಕೆಗಳು ಮತ್ತು ವಿಮಾನಗಳು ಗಡಿ ರೇಖೆಯನ್ನು ದಾಟಿವೆ ಎಂದು ತೈವಾನ್ ಆರೋಪಿಸಿದೆ.

ಶುಕ್ರವಾರ ತಡರಾತ್ರಿ ಕಿನ್‌ಮನ್ ಕೌಂಟಿ ಸಮೀಪದಲ್ಲಿ ಚೀನಾದ್ದು ಎಂದು ನಂಬಲಾದ ನಾಲ್ಕು ಡ್ರೋನ್‌ಗಳ ಹಾರಾಟವನ್ನು ಗುರುತಿಸಿದ್ದಾಗಿ ತೈವಾನ್ ಹೇಳಿದೆ. ಇದಕ್ಕೆ ಪ್ರತಿಯಾಗಿ ಬೆಂಕಿಯ ಕಿಡಿಗಳನ್ನು ಹಾರಿಸಿ ಎಚ್ಚರಿಕೆ ನೀಡಿದೆ. ದ್ವೀಪಗಳ ಸಮೂಹವಾಗಿರುವ ಕಿನ್‌ಮನ್, ಚೀನಾದ ಪೂರ್ವ ಕರಾವಳಿಯ ನಗರ ಕ್ಸಿಯಾಮನ್‌ನಿಂದ ಕೇವಲ 10 ಕಿಲೋಮೀಟರ್ ದೂರದಲ್ಲಿದೆ.

ಚೀನಾದ ಯುದ್ಧ ವಿಮಾನವೊಂದು ತೈವಾನ್ ಸನಿಹದ ಪಿಂಗ್‌ಟನ್ ದ್ವೀಪದ ಮೇಲೆ ಶನಿವಾರ ಹಾರಾಟ ನಡೆಸಿತು —ಎಎಫ್‌ಪಿ ಚಿತ್ರ

ಅಮೆರಿಕ ಸಂಸತ್‌ನ ಸ್ಪೀಕರ್ ನ್ಯಾನ್ಸಿ ಪೆಲೋಸಿ ಅವರು ತೈವಾನ್‌ಗೆ ಇತ್ತೀಚೆಗೆ ಭೇಟಿ ನೀಡಿದ್ದಕ್ಕೆ ತೀವ್ರ ಆಕ್ರೋಶ ವ್ಯಕ್ತಪಡಿಸಿರುವ ಚೀನಾ, ಸೇನಾ ಕಸರತ್ತು ಹಮ್ಮಿಕೊಂಡಿದೆ.

'ಒಂದು ಚೀನಾ' ನೀತಿಯನ್ನು ಅಮೆರಿಕ ಉಲ್ಲಂಘಿಸಿದೆ ಎಂದು ಆರೋಪಿಸಿರುವ ಚೀನಾ, ತೈವಾನ್ ದ್ವೀಪವು ತನ್ನದೇ ಭಾಗವಾಗಿದ್ದು, ಅಗತ್ಯಬಿದ್ದರೆ, ಬಲ ಪ್ರಯೋಗಿಸಿ ವಶಕ್ಕೆ ತೆಗೆದುಕೊಳ್ಳುವ ಮನಸ್ಥಿತಿಯಲ್ಲಿದೆ ಎನ್ನಲಾಗಿದೆ.

> ನಮ್ಮ ಸರ್ಕಾರ ಹಾಗೂ ಸೇನೆಯು ಚೀನಾದ ಸೇನಾ ಕಸರತ್ತು ಹಾಗೂ ಯುದ್ಧ ತಯಾರಿಯ ಮೇಲೆ ನಿಗಾ ವಹಿಸಿದೆ. ಅಗತ್ಯಬಿದ್ದರೆ ಪ್ರತಿರೋಧಕ್ಕೆ ಸಿದ್ಧ
>
> **ಸಾಯ್ ಇಂಗ್ ವೆನ್,** ತೈವಾನ್ ಅಧ್ಯಕ್ಷೆ

ಚೀನಾದಿಂದ ಎದುರಾಗಬಹುದಾದ ಇಂತಹ ಯಾವುದೇ ಅಪಾಯಕ್ಕೆ ಪ್ರತಿರೋಧ ಒಡ್ಡಲು ತೈವಾನ್ ತಯಾರಿ ನಡೆಸಿದೆ. ಪ್ರಾದೇಶಿಕ ಅಭದ್ರತೆಯ ಸ್ಥಿತಿ ಉಂಟಾದಲ್ಲಿ, ದೇಶದ ರಕ್ಷಣೆಗೆ ಅಂತರರಾಷ್ಟ್ರೀಯ ಸಮುದಾಯದ ಸಹಕಾರ ಬೇಕು ಎಂದು ತೈವಾನ್ ಅಧ್ಯಕ್ಷೆ ಸಾಯ್ ಇಂಗ್ ವೆನ್ ಅವರು ಹೇಳಿದ್ದಾರೆ.

ಚೀನಾದ ಸೇನಾ ಕಸರತ್ತು ಗುರುವಾರ ಆರಂಭವಾಗಿದ್ದು, ಭಾನುವಾರ ಕೊನೆಗೊಳ್ಳುವ ನಿರೀಕ್ಷೆಯಿದೆ. ತೈವಾನ್ ಸಹ ಸೇನಾ ಕಸರತ್ತು ನಡೆಸುತ್ತಿದೆ.

ಈ ವಲಯದಲ್ಲಿ ಹಲವು ನೌಕೆಗಳನ್ನು ಅಮೆರಿಕ ನಿಯೋಜಿಸಿದೆ.

ತೈವಾನ್ ಕ್ಷಿಪಣಿ ಅಧಿಕಾರಿ ಸಾವು

ತೈವಾನ್ ಕ್ಷಿಪಣಿ ತಯಾರಿಕೆಯಲ್ಲಿ ಭಾಗಿಯಾಗಿದ್ದ ಅಧಿಕಾರಿ ಓಯಾಂಗ್ ಲಿ–ಸಿಂಗ್ ಎಂಬುವರು ಶನಿವಾರ ಹೃದಯ ಸಂಬಂಧಿ ಸಮಸ್ಯೆಯಿಂದ ಶನಿವಾರ ಮೃತಪಟ್ಟಿದ್ದಾರೆ. ತೈವಾನ್ ರಾಷ್ಟ್ರೀಯ ಚುಂಗ್–ಶಾನ್ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಯ ಉಪಾಧ್ಯಕ್ಷರಾಗಿ ಅವರು ಕೆಲಸ ಮಾಡುತ್ತಿದ್ದರು. ವಿವಿಧ ಕ್ಷಿಪಣಿಗಳ ತಯಾರಿಕೆಯ ಮೇಲ್ವಿಚಾರಣೆ ಜವಾಬ್ದಾರಿಯನ್ನು ಕಳೆದ ವರ್ಷ ಇವರಿಗೆ ವಹಿಸಲಾಗಿತ್ತು.

ಅವರು ದ್ವೀಪರಾಷ್ಟ್ರದ ದಕ್ಷಿಣ ಭಾಗದ ಪಿಂಗ್‌ಟುಂಗ್ ಕೌಂಟಿಗೆ ಕಾರ್ಯನಿಮಿತ್ತ ತೆರಳಿದ್ದಾಗ ಹೋಟೆಲ್‌ನಲ್ಲಿ ಪ್ರಜ್ಞಾಹೀನರಾದರು ಎಂದು ತೈವಾನ್ ಸೆಂಟ್ರಲ್ ನ್ಯೂಸ್ ಏಜೆನ್ಸಿ ವರದಿ ಮಾಡಿದೆ. ತೈವಾನ್ ಸುತ್ತಲೂ ಚೀನಾ ಸೇನಾ ಕಸರತ್ತು ನಡೆಸುತ್ತಿರುವ ಈ ಸಮಯದಲ್ಲಿ ಹಿರಿಯ ಅಧಿಕಾರಿ ಮೃತಪಟ್ಟಿದ್ದಾರೆ. ಚೀನಾದಿಂದ ಬೆದರಿಕೆ ಹೆಚ್ಚುತ್ತಿರುವ ಕಾರಣ, ತನ್ನದೇ ಸ್ವಂತ ಕ್ಷಿಪಣಿ ತಯಾರಿಕೆ ಪ್ರಕ್ರಿಯೆಯನ್ನು ತೈವಾನ್ ಚುರುಕುಗೊಳಿಸಿತ್ತು.

'ಸಂವಹನ ಕಡಿತ ಹೊಣೆಗೇಡಿತನ'

ಅಮೆರಿಕದ ಜೊತೆ ಸಂಪರ್ಕ ಕಡಿದುಕೊಳ್ಳಲು ನಿರ್ಧರಿಸಿರುವ ಚೀನಾದ ನಿರ್ಧಾರ ಬೇಜವಾಬ್ದಾರಿತನದ್ದು ಎಂದು ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಹೇಳಿದ್ದಾರೆ. ತಪ್ಪು ಗ್ರಹಿಕೆಯನ್ನು ತಡೆಯುವುದಕ್ಕಾಗಿ ಚೀನಾ ಜೊತೆಗಿನ ಎಲ್ಲ ಸಂವಹನ ಮಾರ್ಗಗಳನ್ನು ಅಮೆರಿಕ ಮುಕ್ತವಾಗಿ ಇರಿಸಿದೆ ಎಂದು ಅವರು ಹೇಳಿದ್ದಾರೆ.

'ನಮ್ಮ ನಡುವಣ ಭಿನ್ನಾಭಿಪ್ರಾಯದಿಂದಾಗಿ ಜಾಗತಿಕ ಕಳಕಳಿಯ ವಿಷಯಗಳಲ್ಲಿ ಚೀನಾ ತನ್ನ ಹೊಣೆಗಾರಿಕೆಯಿಂದ ವಿಮುಖವಾಗಬಾರದು. ಜನರ ಜೀವ ಹಾಗೂ ಬದುಕಿಗೆ ಸಂಬಂಧಿಸಿದ ಮಹತ್ವದ ವಿಚಾರಗಳಲ್ಲಿ ಎರಡೂ ದೇಶಗಳು ಒಟ್ಟಾಗಿ ಕೆಲಸ ಮಾಡಬೇಕು ಎಂದು ಹಲವು ದೇಶಗಳು ಬಯಸುವುದು ಸರಿಯಾಗಿಯೇ ಇದೆ' ಎಂದು ಮನವರಿಕೆ ಮಾಡಿಕೊಡಲು ಬ್ಲಿಂಕನ್ ಯತ್ನಿಸಿದ್ದಾರೆ.

9 ಗಂಟೆ ಇ.ಡಿ ವಿಚಾರಣೆ ಎದುರಿಸಿದ ವರ್ಷಾ

ಮುಂಬೈ (ಪಿಟಿಐ): ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಹಣ ಅಕ್ರಮ ವರ್ಗಾವಣೆ ಸಂಬಂಧ ಶಿವಸೇನಾ ನಾಯಕ ಸಂಜಯ್ ರಾವುತ್ ಪತ್ನಿ ವರ್ಷಾ ರಾವುತ್ ಅವರನ್ನು ಶನಿವಾರ 9 ಗಂಟೆಗೂ ಅಧಿಕ ಕಾಲ ವಿಚಾರಣೆ ನಡೆಸಿದ್ದಾರೆ.

ವರ್ಷಾ ಅವರ ಬ್ಯಾಂಕ್ ಖಾತೆಗಳಿಂದ ಹಣದ ವಹಿವಾಟು ನಡೆದಿರುವ ಬಗ್ಗೆ ಮಾಹಿತಿ ಲಭ್ಯವಾಗಿದ್ದರಿಂದ ಅವರಿಗೆ ಸಮನ್ಸ್ ನೀಡಲಾಗಿತ್ತು.

ವಿಚಾರಣೆ ವೇಳೆ ಅಧಿಕಾರಿಗಳು ಪತ್ರಾ ಚಾಲ್ ಭೂ ಹಗರಣದಲ್ಲಿ ನಡೆದಿದೆ ಎನ್ನಲಾಗಿರುವ ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿದಂತೆ ವರ್ಷಾ ಹೇಳಿಕೆಗಳನ್ನು ದಾಖಲಿಸಿಕೊಂಡಿ ದ್ದಾರೆ. 'ಇ.ಡಿ ಅಧಿಕಾರಿಗಳು ಕೇಳಿದ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿದ್ದೇನೆ. ಮತ್ತೆ ವಿಚಾರಣೆಗೆ ಹಾಜರಾಗುವಂತೆ ಸದ್ಯಕ್ಕೇನೂ ಸೂಚಿಸಿಲ್ಲ' ಎಂದು ವರ್ಷಾ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದ್ದಾರೆ.

'ಶಿವಸೇನಾ ತೊರೆಯುವ ಪ್ರಶ್ನೆಯೇ ಇಲ್ಲ. ಎಂತಹದ್ದೇ ಪರಿಸ್ಥಿತಿ ಎದುರಾದರೂ ನಾವು ಶಿವಸೇನಾ ಮುಖ್ಯಸ್ಥ ಉದ್ಧವ್ ಠಾಕ್ರೆ ಅವರ ಬೆಂಬಲಕ್ಕೆ ನಿಲ್ಲುತ್ತೇವೆ' ಎಂದಿದ್ದಾರೆ.

ಪ್ರಕರಣ ಸಂಬಂಧ ಬಂಧನಕ್ಕೊಳಗಾಗಿರುವ ಸಂಜಯ್ ರಾವುತ್ ಅವರನ್ನು ಆಗಸ್ಟ್ 8ರ ವರೆಗೆ ಇ.ಡಿ ವಶಕ್ಕೆ ಒಪ್ಪಿಸಲಾಗಿದೆ.

ಮುಂಬೈನ ವಸತಿ ನಿರ್ಮಾಣ ಯೋಜನೆಯಲ್ಲಿ ನಡೆದಿರುವ ಅವ್ಯವಹಾರದಿಂದ ಸಂಜಯ್ ಹಾಗೂ ಅವರ ಕುಟುಂಬಕ್ಕೆ ₹1 ಕೋಟಿಗೂ ಅಧಿಕ ಮೊತ್ತ ಸಂದಾಯವಾಗಿದೆ ಎಂದು ಆರೋಪಿಸಿತ್ತು.

ಸಭೆಗೆ ಹೋಗದಿರಲು ನಿತೀಶ್, ಕೆಸಿಆರ್ ನಿರ್ಧಾರ

ನವದೆಹಲಿ: ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ನೀತಿ ಆಯೋಗದ ಆಡಳಿತ ಮಂಡಳಿಯ ಸಭೆಯಲ್ಲಿ ಈ ಬಾರಿಯೂ ಪಾಲ್ಗೊಳ್ಳುತ್ತಿಲ್ಲ. ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ್ ರಾವ್ (ಕೆಸಿಆರ್) ಅವರು ಕೂಡಾ ಸಭೆಯನ್ನು ಬಹಿಷ್ಕರಿಸುವುದಾಗಿ ಶನಿವಾರ ಘೋಷಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನೀತಿ ಆಯೋಗದ ಆಡಳಿತ ಮಂಡಳಿಯ ಏಳನೇ ಸಭೆಯು ಭಾನುವಾರ ನಡೆಯಲಿದೆ.

ನಿತೀಶ್ ಅವರು ಈಗಷ್ಟೇ ಕೋವಿಡ್‌ನಿಂದ ಚೇತರಿಸಿಕೊಳ್ಳುತ್ತಿದ್ದಾರೆ. ಹಾಗಾಗಿ ಅವರು ಸಭೆಗೆ ಹಾಜರಾಗುತ್ತಿಲ್ಲ. ಮುಖ್ಯಮಂತ್ರಿಗಳು ಮಾತ್ರ ಈ ಸಭೆಯಲ್ಲಿ ಭಾಗವಹಿಸಲು ಅವಕಾಶ ಇರುವ ಕಾರಣ ಬಿಹಾರದ ಜೆಡಿಯು–ಬಿಜೆಪಿ ಮೈತ್ರಿ ಸರ್ಕಾರದ ಪ್ರತಿನಿಧಿಯಾಗಿ ಯಾರೂ ಈ ಸಭೆಯಲ್ಲಿ ಪಾಲ್ಗೊಳ್ಳುತ್ತಿಲ್ಲ ಎಂದು ಮೂಲಗಳು ತಿಳಿಸಿವೆ. ಕಳೆದ ವರ್ಷದ ಸಭೆಯಲ್ಲೂ ನಿತೀಶ್ ಅವರು ಭಾಗಿಯಾಗಿರಲಿಲ್ಲ.

ಸಭೆ ಬಹಿಷ್ಕರಿಸಿದ ಕೆಸಿಆರ್: ಕೇಂದ್ರ ಸರ್ಕಾರದ ಕೆಲ ಧೋರಣೆಗಳ ವಿರುದ್ಧ ಪ್ರತಿಭಟನಾ ಸೂಚಕವಾಗಿ ಸಭೆಯನ್ನು ಬಹಿಷ್ಕರಿಸುವುದಾಗಿ ಚಂದ್ರಶೇಖರ್ ರಾವ್ ಅವರು ತಿಳಿಸಿದ್ದಾರೆ. ಈ ಕುರಿತು ಅವರು ಮೋದಿ ಅವರಿಗೆ ನಾಲ್ಕು ಪುಟಗಳ ಪತ್ರ ಬರೆದಿದ್ದಾರೆ.

ರಾಜ್ಯಗಳ ವಿಚಾರದಲ್ಲಿ ಕೇಂದ್ರ ಸರ್ಕಾರವು ತಾರತಮ್ಯ ನೀತಿ ಅನುಸರಿಸುತ್ತಿದೆ ಎಂದು ರಾವ್ ಹೇಳಿದ್ದಾರೆ.

ಬಹು ಮಾಧ್ಯಮ ಪ್ರಜಾವಾಣಿ www.prajavani.net LIVE

Prajavani.net Prajavani Prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಪ್ರಜಾವಾಣಿ ಕನ್ನಡ ಧ್ವನಿ

ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9

ಸಂಪಾದಕೀಯ: ಬೆಳಿಗ್ಗೆ 9.30

ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ನಾಳೆ

ಸಿದ್ದರಾಮಯ್ಯ ಜನ್ಮದಿನೋತ್ಸವ ರಾಜಕಾರಣದ ಮೇಲೆ ಪರಿಣಾಮ

ಸಂವಾದ ಮಧ್ಯಾಹ್ನ 12 ರಿಂದ 1

ಭಾಗವಹಿಸುವವರು:

ರಮೇಶ ಬಾಬು, ಕಾಂಗ್ರೆಸ್ ವಕ್ತಾರ

ಪ್ರಕಾಶ್ ಶೇಷರಾಘವಾಚಾರ್, ಬಿಜೆಪಿ ಮುಖಂಡ

ನಜ್ಮಾ ನಝೀರ್ ಚಿಕ್ಕನೇರಳೆ, ಜೆಡಿಎಸ್ ವಕ್ತಾರೆ

ಗಾಜಾದಲ್ಲಿ ವೈಮಾನಿಕ ದಾಳಿ

ಗಾಜಾ (ಎಪಿ): ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ ಮೃತಪಟ್ಟವರ ಸಂಖ್ಯೆ 12ಕ್ಕೆ ಏರಿಕೆಯಾಗಿದೆ.

ಉಗ್ರಗಾಮಿಗಳನ್ನು ಗುರಿಯಾಗಿಸಿಕೊಂಡು ಇಸ್ರೇಲ್ ಜೆಟ್‌ಗಳು ಶನಿವಾರ ಗಾಜಾದಲ್ಲಿ ದಾಳಿ ನಡೆಸಿದರೆ, ದಕ್ಷಿಣ ಇಸ್ರೇಲ್ ಮೇಲೆ ರಾಕೆಟ್ ದಾಳಿ ಮುಂದುವರಿದಿದೆ.

ವಿಶ್ವ ಅಥ್ಲೆಟಿಕ್ಸ್‌ನಲ್ಲಿ ಭಾರತಕ್ಕೆ ಮತ್ತೊಂದು ಪದಕ

ಸೆಲ್ವ ತಿರುಮಾರನ್‌ಗೆ ಬೆಳ್ಳಿ

ಸೆಲ್ವ ತಿರುಮಾರನ್ –ಟ್ವಿಟರ್ ಚಿತ್ರ

ಕ್ಯಾಲಿ, ಕೊಲಂಬಿಯಾ (ಪಿಟಿಐ): ಭಾರತದ ಸೆಲ್ವ ಪಿ ತಿರುಮಾರನ್ ಇಲ್ಲಿ ನಡೆಯುತ್ತಿರುವ 20 ವರ್ಷದೊಳಗಿನವರ ವಿಶ್ವ ಅಥ್ಲೆಟಿಕ್ ಕೂಟದ ಪುರುಷರ ಟ್ರಿಪಲ್ ಜಂಪ್‌ನಲ್ಲಿ ಬೆಳ್ಳಿ ಪದಕ ಗಳಿಸಿದರು.

17 ವರ್ಷದ ಸೆಲ್ವ 16.15 ಮೀಟರ್ಸ್ ದೂರ ಜಿಗಿದು ದ್ವಿತೀಯ ಸ್ಥಾನ ಪಡೆದರು. ಎಸ್ಟೊನಿಯಾದ ವಿಕ್ಟರ್ ಮೊರೊಜೊವ್ ಅವರಿಗಿಂತ ಎರಡು ಸೆಂಟಿಮೀಟರ್ ಹೆಚ್ಚು ದೂರ ಜಿಗಿದ ಸೆಲ್ವ ಈ ಸಾಧನೆ ಮಾಡಿದರು.

ಜಮೈಕಾದ ಜೇಡನ್ ಹಿಬರ್ಟ್ 17.27 ಮೀಟರ್ ಜಿಗಿದು ನೂತನ ದಾಖಲೆ ಬರೆದರು. ಚಿನ್ನದ ಪದಕವನ್ನೂ ಕೊರಳಿಗೇರಿಸಿಕೊಂಡರು.

ಇದೇ ಕೂಟದಲ್ಲಿ ಮಹಿಳೆಯರ 4X400 ಮೀಟರ್ಸ್ ರಿಲೆಯಲ್ಲಿ ಭಾರತ ತಂಡವು ಫೈನಲ್‌ಗೆ ಅರ್ಹತೆ ಗಿಟ್ಟಿಸಿತು. ಬೆಂಗಳೂರಿನ ಪ್ರಿಯಾ ಮೋಹನ್, ಸಮಿ, ರಜಿತಾ ಕುಂಜ್ ಮತ್ತು ರೂಪಲ್ ಚೌಧರಿ ಅವರ ತಂಡವು ಮೂರನೇ ಹೀಟ್ಸ್‌ನಲ್ಲಿ 3ನಿಮಿಷ, 34.18ಸೆಕೆಂಡುಗಳಲ್ಲಿ ಗುರಿ ತಲುಪಿತು.

ಕೂಟದಲ್ಲಿ ಇದುವರೆಗೆ ಭಾರತ ತಂಡವು ಒಟ್ಟು ಮೂರು ಪದಕಗಳನ್ನು ಗೆದ್ದಿದೆ. ಮಿಶ್ರ ರಿಲೆ ತಂಡವು ಕಂಚು, ಮಹಿಳೆಯರ 400 ಮೀ ಓಟದಲ್ಲಿ ರೂಪಲ್ ಬೆಳ್ಳಿ ಹಾಗೂ ಸೆಲ್ವ ಬೆಳ್ಳಿ ಪದಕ ಗಳಿಸಿದ್ದಾರೆ.

2021ರಲ್ಲಿ ನೈರೋಬಿಯಲ್ಲಿ ನಡೆದಿದ್ದ ಕೂಟದಲ್ಲಿ ಭಾರತ ತಂಡವು ಎರಡು ಬೆಳ್ಳಿ ಹಾಗೂ 1 ಕಂಚು ಗೆದ್ದಿತ್ತು.

ಅಥ್ಲೀಟ್‌ಗಳ ಹಾದಿಗೆ ಶುಲ್ಕದ ‘ಹರ್ಡಲ್’

ರಾಜ್ಯ ಕೂಟದಲ್ಲಿ ಪಾಲ್ಗೊಳ್ಳಲು ಹಣ ಕೊಡಬೇಕೆಂಬ ಆದೇಶ; ಆಕ್ರೋಶ

• ವಿಕ್ರಂ ಕಾಂತಿಕೆರೆ

ಮಂಗಳೂರು: ರಾಜ್ಯ ಅಥ್ಲೆಟಿಕ್ ಕೂಟದಲ್ಲಿ ಪಾಲ್ಗೊಳ್ಳುವ ಕ್ರೀಡಾಪಟುಗಳು ಪ್ರವೇಶ ಶುಲ್ಕ ಭರಿಸುವಂತೆ ರಾಜ್ಯ ಅಥ್ಲೆಟಿಕ್ ಸಂಸ್ಥೆ (ಕೆಎಎ) ಸೂಚಿಸಿರುವುದರಿಂದ ಅಥ್ಲೀಟ್‌ಗಳು ಸಂಕಷ್ಟಕ್ಕೆ ಸಿಲುಕಿದ್ದಾರೆ. ಕೆಲವು ಜಿಲ್ಲಾ ಸಂಸ್ಥೆಗಳು ಕ್ರೀಡಾಕೂಟವನ್ನೇ ಬಹಿಷ್ಕರಿಸುವ ಎಚ್ಚರಿಕೆ ನೀಡಿವೆ.

ಬೆಂಗಳೂರು ಗ್ರಾಮಾಂತರ ಜಿಲ್ಲಾ ಅಥ್ಲೆಟಿಕ್ ಸಂಸ್ಥೆಯ ಸಹಯೋಗದಲ್ಲಿ ಕೆಎಎ ಆಯೋಜಿಸಿರುವ ಜೂನಿಯರ್ ಮತ್ತು ಸೀನಿಯರ್ ಅಥ್ಲೆಟಿಕ್ ಚಾಂಪಿಯನ್‌ಷಿಪ್ ಇದೇ 26ರಿಂದ 28ರ ವರೆಗೆ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿದೆ. ಮುಂಬರುವ ದಕ್ಷಿಣ ವಲಯ ಚಾಂಪಿಯನ್‌ಷಿಪ್, ಯೂತ್ ಚಾಂಪಿಯನ್‌ಷಿಪ್, 23 ವರ್ಷದೊಳಗಿನವರ ರಾಷ್ಟ್ರೀಯ ಚಾಂಪಿಯನ್‌ಷಿಪ್ ಮತ್ತು ಸೀನಿಯರ್ ವಿಭಾಗದ ಮುಕ್ತ ಚಾಂಪಿಯನ್‌ಷಿಪ್‌ಗಳಿಗೆ ಆಯ್ಕೆಯೂ ಈ ಕೂಟದಲ್ಲಿ ನಡೆಯಲಿದೆ.

ಇದರಿಂದಾಗಿ ಅಥ್ಲೀಟ್‌ಗಳು ಹುಮ್ಮಸ್ಸಿನಲ್ಲಿದ್ದಾರೆ. ಆದರೆ ಕೆಎಎ ಕಳುಹಿಸಿರುವ ಆದೇಶ ಪ್ರತಿಯಲ್ಲಿ ಜೂನಿಯರ್ ವಿಭಾಗಕ್ಕೆ ₹ 200 ಮತ್ತು ಸೀನಿಯರ್ ವಿಭಾಗಕ್ಕೆ ₹ 600 ಪ್ರವೇಶ ಶುಲ್ಕ ನಿಗದಿ ಮಾಡಿರುವುದು ಅಥ್ಲೀಟ್‌ಗಳಿಗೂ, ಜಿಲ್ಲಾ ಸಂಸ್ಥೆಗಳಿಗೂ ನೊಂದಾಯಿತ ಕ್ಲಬ್‌ಗಳಿಗೂ ಆಘಾತ ನೀಡಿದೆ.


ಕಂಠೀರವ ಕ್ರೀಡಾಂಗಣ

ಏಜೆನ್ಸಿಗಾಗಿ ಕ್ರೀಡಾಪಟುಗಳಿಗೆ ಬರೆ?

ಮೇ 28 ಮತ್ತು 29ರಂದು ಚಂಡೀಗಢದಲ್ಲಿ ನಡೆದ ಭಾರತ ಅಥ್ಲೆಟಿಕ್ ಫೆಡರೇಷನ್‌ನ (ಎಎಫ್‌ಐ) ಸಾಮಾನ್ಯ ಸಭೆಯಲ್ಲಿ ಫೆಡರೇಷನ್ ಅನ್ನು ಡಿಜಿಟಲೀಕರಣ ಮಾಡುವ ಕಾರ್ಯವನ್ನು ಸ್ಪೋರ್ಟಿಂಗ್ ಇಂಡಿಯಾ ಕಂಪನಿಗೆ ಗುತ್ತಿಗೆ ನೀಡಲು ಮತ್ತು ಇದಕ್ಕೆ ತಗಲುವ ವೆಚ್ಚವನ್ನು ರಾಜ್ಯ ಸಂಸ್ಥೆಗಳಿಂದ ಬರುವ ಹಣದಲ್ಲಿ ಭರಿಸಲು ತೀರ್ಮಾನಿಸಲಾಗಿತ್ತು. ಕ್ರೀಡಾಕೂಟಗಳಲ್ಲಿ ಸಂಗ್ರಹವಾಗುವ ಪ್ರವೇಶ ಶುಲ್ಕದ ಪೈಕಿ ಶೇಕಡಾ 6ರಷ್ಟನ್ನು ಏಜೆನ್ಸಿಗೆ ನೀಡಲು ಸಭೆಯಲ್ಲಿ ನಿರ್ಧರಿಸಲಾಗಿತ್ತು. ತಮಿಳುನಾಡು, ಮಹಾರಾಷ್ಟ್ರ ಸೇರಿದಂತೆ ಕೆಲವು ರಾಜ್ಯಗಳಲ್ಲಿ ಶುಲ್ಕ ಪಡೆಯದೇ ಅಥ್ಲೆಟಿಕ್ಸ್ ಆಯೋಜಿಸಲು ನಿರ್ಧರಿಸಿವೆ.

‘ಎಎಫ್‌ಐ ಸೂಚನೆಯಂತೆ ಶುಲ್ಕ ಪಡೆಯುತ್ತಿದ್ದೇವೆ. ಕ್ರೀಡಾಕೂಟ ಆಯೋಜಿಸಲು ಸರ್ಕಾರದಿಂದ ಹೆಚ್ಚು ಅನುದಾನವೇನೂ ಸಿಗುವುದಿಲ್ಲ. ಕೊಡುವ ಒಂದಿಷ್ಟು ಹಣ ಬಿಡುಗಡೆಯಾಗಬೇಕಾದರೆ ಅನೇಕ ಅಡೆತಡೆಗಳಿವೆ. ಹೀಗಿರುವಾಗ ಪ್ರವೇಶ ಶುಲ್ಕ ಪಡೆಯದೇ ಕ್ರೀಡಾಕೂಟ ಆಯೋಜಿಸುವುದು ಕಷ್ಟ’ ಎಂದು ಕೆಎಎ ಕಾರ್ಯದರ್ಶಿ ಎ. ರಾಜವೇಲು ‘ಪ್ರಜಾವಾಣಿ’ಗೆ ತಿಳಿಸಿದರು.

‘ಪ್ರತಿ ಸ್ಪರ್ಧೆಗೂ ಹಣ ಸಂದಾಯ ಮಾಡಬೇಕು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವುದರಿಂದ ಹಣ ಪಾವತಿಸದೆ ಪ್ರವೇಶಪತ್ರ ಸಿಗುವುದಿಲ್ಲ. ಕಡುಬಡವರ ಮಕ್ಕಳೂ ನಮ್ಮಲ್ಲಿ ಅಥ್ಲೆಟಿಕ್ಸ್ ಅಭ್ಯಾಸ ಮಾಡುತ್ತಿದ್ದಾರೆ. ಅವರು ಶುಲ್ಕ ಕೊಟ್ಟು ಬೆಂಗಳೂರಿನಲ್ಲಿ ವಸತಿ–ಊಟದ ವ್ಯವಸ್ಥೆ ಮಾಡಿಕೊಂಡು ಕೂಟದಲ್ಲಿ ಪಾಲ್ಗೊಳ್ಳಲು ಸಾಧ್ಯವಿಲ್ಲ’ ಎಂದು ಹಾವೇರಿ ಜಿಲ್ಲಾ ಘಟಕದ ಕಾರ್ಯದರ್ಶಿ ಬಸವರಾಜ ಹಾಲಪ್ಪನವರ ಹೇಳಿದರು.

‘ಉತ್ತರ ಕರ್ನಾಟಕದಿಂದ ಬೆಂಗಳೂರಿಗೆ ಹೋಗಿ ಬರುವುದಕ್ಕೇ ಬಹಳ ವೆಚ್ಚ ಆಗುತ್ತದೆ. ಇನ್ನು, ಶುಲ್ಕ ಕೊಟ್ಟು ಊಟ ವಸತಿಗೂ ವ್ಯವಸ್ಥೆ ಮಾಡಿಕೊಂಡು ಸ್ಪರ್ಧೆಯಲ್ಲಿ ಭಾಗವಹಿಸುವುದುಂಟೇ’ ಎಂದು ಬಾಗಲಕೋಟೆ ಜಿಲ್ಲಾ ಘಟಕದ ಕಾರ್ಯದರ್ಶಿ ಲಕ್ಷ್ಮಣ ಯಲಗಣ್ಣವರ ಪ್ರಶ್ನಿಸಿದರು.

> **ಕೆಲವು ಜಿಲ್ಲೆಗಳಿಂದ ವಿರೋಧ ಬಂದಿದೆ. ಅಥ್ಲೀಟ್‌ಗಳಿಗೆ ತೊಂದರೆಯಾಗುತ್ತಿರುವುದರಿಂದ ಪ್ರವೇಶ ಶುಲ್ಕ ಪಡೆಯಬಾರದು ಎಂದು ಕೋರಿದ್ದಾರೆ. ಈ ಕುರಿತು ಚರ್ಚಿಸಲಾಗುವುದು. ಎ.ರಾಜವೇಲು**
> ಕೆಎಎ ಗೌರವ ಕಾರ್ಯದರ್ಶಿ

> **ಕ್ರೀಡಾಕೂಟಕ್ಕಾಗಿ ಅಥ್ಲೀಟ್‌ಗಳಿಂದ ಹಣ ಪಡೆಯುವುದು ಬೇಸರದ ವಿಷಯ. ಹಣ ಕೊಟ್ಟು ಬಡ ಮಕ್ಕಳು ಕ್ರೀಡಾಕೂಟದಲ್ಲಿ ಪಾಲ್ಗೊಳ್ಳಲು ಸಾಧ್ಯವೇ? ಮೋಹನ ಆಳ್ವ,**
> ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ

> **ಇದು ಬಹುಮಾನ ಮೊತ್ತ ಇರುವ ಕೂಟವೇನೂ ಅಲ್ಲ. ಆದ್ದರಿಂದ ಪ್ರವೇಶ ಶುಲ್ಕ ಕೊಟ್ಟು ಹೋಗಲು ಸಾಧ್ಯವಿಲ್ಲ. ಬಡ ಅಥ್ಲೀಟ್‌ಗಳಿಗೆ ಇದು ದೊಡ್ಡ ಹೊರೆ. ಪ್ರಭುಗೌಡ ಪಾಟೀಲ,** ಗದಗ ಜಿಲ್ಲಾ ಅಥ್ಲೆಟಿಕ್ ಸಂಸ್ಥೆ ಕಾರ್ಯದರ್ಶಿ

ಟಿ20: ಭಾರತಕ್ಕೆ ಮಣಿದ ವೆಸ್ಟ್ ಇಂಡೀಸ್

ಫ್ಲಾರಿಡಾ (ಪಿಟಿಐ): ರಿಷಭ್ ಪಂತ್ ಅವರ ಉತ್ತಮ ಆಟ ಮತ್ತು ಎಲ್ಲ ಬೌಲರ್‌ಗಳ ಚುರುಕಿನ ದಾಳಿಯ ನೆರವಿನಿಂದ ಭಾರತ ತಂಡ, ವೆಸ್ಟ್ ಇಂಡೀಸ್ ಎದುರಿನ ನಾಲ್ಕನೇ ಟಿ20 ಕ್ರಿಕೆಟ್ ಪಂದ್ಯದಲ್ಲಿ 59 ರನ್‌ಗಳ ಜಯ ಸಾಧಿಸಿತು.

ಶನಿವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ರೋಹಿತ್ ಬಳಗ 20 ಓವರ್‌ಗಳಲ್ಲಿ 5 ವಿಕೆಟ್‌ಗೆ 191 ರನ್ ಪೇರಿಸಿದರೆ, ವಿಂಡೀಸ್ 19.1 ಓವರ್‌ಗಳಲ್ಲಿ 132 ರನ್‌ಗಳಿಗೆ ಆಲೌಟಾಯಿತು.

ಅರ್ಶದೀಪ್ ಸಿಂಗ್ (12ಕ್ಕೆ 3) ಮೂರು ವಿಕೆಟ್ ಪಡೆದರೆ ಆವೇಶ್ ಖಾನ್, ಅಕ್ಷರ್ ಪಟೇಲ್, ರವಿ ಬಿಷ್ಣೋಯ್ ಮತ್ತು ತಲಾ ಎರಡು ವಿಕೆಟ್ ಗಳಿಸಿದರು. ಈ ಜಯದೊಂದಿಗೆ ಐದು ಪಂದ್ಯಗಳ ಸರಣಿಯನ್ನು ಭಾರತ 3-1 ರಲ್ಲಿ ಗೆದ್ದುಕೊಂಡಿತು. ಕೊನೆಯ ಪಂದ್ಯ ಭಾನುವಾರ ನಡೆಯಲಿದೆ.

ರೋಹಿತ್, ರಿಷಭ್ ಆಸರೆ: ಟಾಸ್ ಗೆದ್ದ ವೆಸ್ಟ್ ಇಂಡೀಸ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ರೋಹಿತ್ (33; 16ಎಸೆತ, 4X2, 6X3) ಮತ್ತು ಸೂರ್ಯಕುಮಾರ್ (24; 14ಎ, 4X1, 6X2) ಮೊದಲ ವಿಕೆಟ್‌ಗೆ 53 ರನ್ ಸೇರಿಸಿದರು.

ಮಧ್ಯಮ ಕ್ರಮಾಂಕದಲ್ಲಿ ದೀಪಕ್ ಹೂಡಾ (21) ಮತ್ತು ರಿಷಭ್ ಪಂತ್ (44; 31ಎ) ಮಹತ್ವದ ಕಾಣಿಕೆ ನೀಡಿದರು. ರಿಷಭ್ 6 ಬೌಂಡರಿ ಹೊಡೆದರು. ಕೊನೆಯ ಓವರ್‌ಗಳಲ್ಲಿ ಸಂಜು ಸ್ಯಾಮ್ಸನ್ (ಔಟಾಗದೆ 30, 23 ಎ.) ಹಾಗೂ ಅಕ್ಷರ್ ಪಟೇಲ್ (ಔಟಾಗದೆ 20, 8 ಎ.) ಅವರ ಬೀಸಾಟದಿಂದ ತಂಡದ ಮೊತ್ತ 190ರ ಗಡಿ ದಾಟಿತು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 5ಕ್ಕೆ 191 (ರೋಹಿತ್ ಶರ್ಮಾ 33, ಸೂರ್ಯಕುಮಾರ್ ಯಾದವ್ 24, ದೀಪಕ್ ಹೂಡಾ 21, ರಿಷಭ್ ಪಂತ್ 44, ಸಂಜು ಸ್ಯಾಮ್ಸನ್ ಔಟಾಗದೆ 30, ಅಲ್ಜರಿ ಜೋಸೆಫ್ 29ಕ್ಕೆ2, ಒಬೆದ್ ಮೆಕಾಯ್ 66ಕ್ಕೆ 2)

ವೆಸ್ಟ್ ಇಂಡೀಸ್: 19.1 ಓವರ್‌ಗಳಲ್ಲಿ 132 (ನಿಕೊಲಸ್ ಪೂರನ್ 24, ರೊವ್ಮನ್ ಪೊವೆಲ್ 24, ಶಿಮ್ರೊನ್ ಹೆಟ್ಮೆಯರ್ 19, ಆವೇಶ್ ಖಾನ್ 17ಕ್ಕೆ 2, ಅಕ್ಷರ್ ಪಟೇಲ್ 48ಕ್ಕೆ 2, ರವಿ ಬಿಷ್ಣೋಯ್ 27ಕ್ಕೆ 2, ಅರ್ಶದೀಪ್ ಸಿಂಗ್ 12ಕ್ಕೆ 3) ಫಲಿತಾಂಶ: ಭಾರತಕ್ಕೆ 59 ರನ್ ಗೆಲುವು, ಸರಣಿಯಲ್ಲಿ 3–1 ಮುನ್ನಡೆ

ರೋಹಿತ್ ಶರ್ಮಾ –ಎಎಫ್‌ಪಿ ಚಿತ್ರ

ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಕ್ರಿಕೆಟ್ ಟೂರ್ನಿ

ಹುಬ್ಬಳ್ಳಿಗೆ ಮಂಗಳೂರು ಸವಾಲು

ಪ್ರಜಾವಾಣಿ ವಾರ್ತೆ

ಮೈಸೂರು: ಮಳೆಯಲ್ಲಿ ಮಿಂದೇಳುತ್ತಿರುವ ಅರಮನೆ ನಗರಿಯಲ್ಲಿ ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಕ್ರಿಕೆಟ್ ಟೂರ್ನಿ ಆರಂಭಕ್ಕೆ ವೇದಿಕೆ ಸಜ್ಜುಗೊಂಡಿದೆ.

ಭಾನುವಾರದಿಂದ ಮಾನಸಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಆರಂಭವಾಗಲಿರುವ ಟೂರ್ನಿಯ ಮೊದಲ ಪಂದ್ಯದಲ್ಲಿ ಹುಬ್ಬಳ್ಳಿ ಟೈಗರ್ಸ್ ಮತ್ತು ಮಂಗಳೂರು ಯುನೈಟೆಡ್ ಮುಖಾಮುಖಿಯಾಗಲಿವೆ. ಎರಡನೇ ಪಂದ್ಯದಲ್ಲಿ ಮೈಸೂರು ವಾರಿಯರ್ಸ್ ತಂಡವು ಶಿವಮೊಗ್ಗ ಸ್ಟ್ರೈಕರ್ಸ್ ಎದುರು ಹಣಾಹಣಿ ನಡೆಸಲಿದೆ.

ಮೂರು ವರ್ಷಗಳ ಹಿಂದೆ ಸ್ಥಗಿತವಾಗಿದ್ದ ಕರ್ನಾಟಕ ಪ್ರೀಮಿಯರ್ ಲೀಗ್ ಟೂರ್ನಿಯ ಹೊಸ ಅವತರಣಿಕೆಯಾಗಿ ಮಹಾರಾಜ ಟ್ರೋಫಿ ಆರಂಭವಾಗುತ್ತಿದೆ.

‘ಪ್ರೇಕ್ಷಕರಿಗಾಗಿ ಆಸನಗಳ ವ್ಯವಸ್ಥೆ ಮಾಡಲಾಗಿದೆ. ಮೈದಾನದಲ್ಲಿ ಎರಡು ಎಲ್‌ಇಡಿ ಪರದೆಗಳನ್ನು ಅಳವಡಿಸಲಾಗಿದೆ’ ಎಂದು ಕೆಎಸ್‌ಸಿಎ ಮೈಸೂರು ವಲಯದ ಸಂಚಾಲಕ ಸುಧಾಕರ್ ರೈ ಮಾಹಿತಿ ನೀಡಿದರು.

ತಂಡಗಳು ಮೈಸೂರಿಗೆ ಆಗಮಿಸಿವೆ. ಮೈಸೂರು, ಮಂಗಳೂರು, ಶಿವಮೊಗ್ಗ ಹಾಗೂ ಹುಬ್ಬಳ್ಳಿ ತಂಡಗಳ ಆಟಗಾರರು ಶನಿವಾರ ಅಭ್ಯಾಸ ನಡೆಸಿದರು.

ನಗರದಲ್ಲಿ ಇನ್ನೂ 2–3 ದಿನ ಮಳೆಯಾಗುವ ಮುನ್ಸೂಚನೆ ಇದ್ದು, ಪಂದ್ಯಕ್ಕೆ ಅಡ್ಡಿಯಾಗುವ ಸಾಧ್ಯತೆ ಇದೆ.

ಉದ್ಘಾಟನೆ: ಮಧ್ಯಾಹ್ನ 2ಗಂಟೆಗೆ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರು ಟೂರ್ನಿಗೆ ಚಾಲನೆ ನೀಡುವರು. ಕೆಎಸ್‌ಸಿಎ ಅಧ್ಯಕ್ಷ ರೋಜರ್ ಬಿನ್ನಿ ಹಾಜರಿರುವರು.

ಮೊದಲ ಪಂದ್ಯ: ಮಧ್ಯಾಹ್ನ 3ರಿಂದ
ಎರಡನೇ ಪಂದ್ಯ: ರಾತ್ರಿ 7ರಿಂದ
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಮೈಸೂರಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ‘ಮೈಸೂರು ವಾರಿಯರ್ಸ್’ ತಂಡದವರು ಶನಿವಾರ ಅಭ್ಯಾಸ ನಡೆಸಿದರು

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

30ನೇ ವರ್ಷದ ಚಿರಸ್ಮರಣೆ

ಪಿ.ಎಲ್. ಕುಮಾರಸ್ವಾಮಿ
ನಿವೃತ್ತ ಜಿಲ್ಲಾ ನ್ಯಾಯಾಧೀಶರು
ನಿಮ್ಮ ಆದರ್ಶಗಳೇ ನಮಗೆ ದಾರಿದೀಪ. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ಕೊಡಲೆಂದು ಸದಾಸ್ಮರಿಸುವ.
ಪತ್ನಿ: ಕಮಲಮ್ಮ, ಮಕ್ಕಳು, ಮೊಮ್ಮಕ್ಕಳು

17ನೇ ವರ್ಷದ ಚಿರಸ್ಮರಣೆ

ಎನ್. ತಿಮ್ಮರಾಜು
(ಮಾ. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ಶಾಂತಿನಗರ)
ನಿಧನ: 07-08-2005
ಸದಾ ನಿಮ್ಮ ನೆನಪಿನಲ್ಲಿರುವ..
ಪತ್ನಿ–ಶ್ರೀಮತಿ ಮಂಜುಳ ತಿಮ್ಮರಾಜು ಮಕ್ಕಳು ಹಾಗೂ ಕುಟುಂಬವರ್ಗದವರು.

ನಾದಾಂಜಲಿ
ಆಸ್ಥಾನ ಸಂಗೀತ ವಿದ್ವಾನ್ ಗಾನಕಲಾಭೂಷಣ

ಸ್ವರಮೂರ್ತಿ ವಿ.ಎನ್.ರಾವ್
ವೀಣೆ ಶೇಷಣ್ಣನವರ ಮೊಮ್ಮಗ
1916 - 07.08.1980
ನಾದಾಂಜಲಿ :
ಪ್ರೊ.ಮೈಸೂರು ವಿ.ಸುಬ್ರಹ್ಮಣ್ಯ
ವೀಣೆ ಶೇಷಣ್ಣನವರ ಮರಿಮಗ
98450 54659

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ	
ಬೆಂಗಳೂರು	
100 ಮೊಟ್ಟೆಗೆ	₹407
12 ಮೊಟ್ಟೆಗೆ	₹57
ಮೈಸೂರು	
100 ಮೊಟ್ಟೆಗೆ	₹405

ತೆಂಗು ಧಾರಣೆ (ಸಾವಿರಕ್ಕೆ)
ಮಂಗಳೂರು
1ನೇ ದರ್ಜೆ
₹16000-20000
2ನೇ ದರ್ಜೆ
₹12000-15000

ರಾಮನಗರ ರೇಷ್ಮೆಗೂಡು ಧಾರಣೆ
ಮಿಶ್ರತಳಿ (ಸಿ.ಬಿ)
₹208-595
ದ್ವಿತಳಿ (ಬಿ.ವಿ)
₹222-855

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹166
ಆರ್‌ಎಸ್‌ಎಸ್-5	₹155.50
ಗುಡ್ ಲಾಟ್	₹148

ನಿರೀಕ್ಷಿತ ಮಟ್ಟದಲ್ಲಿ ಕಾರ್ಪೊರೇಟ್ ಫಲಿತಾಂಶ • ರೂಪಾಯಿ ಚೇತರಿಕೆ

ಎಫ್‌ಐಐ: ₹6,992 ಕೋಟಿ ಹೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ದೇಶದ ಷೇರುಪೇಟೆಗಳಲ್ಲಿ ಮತ್ತೆ ಹೂಡಿಕೆ ಚಟುವಟಿಕೆ ಆರಂಭಿಸಿದ್ದಾರೆ. ಶುಕ್ರವಾರ ಕೊನೆಗೊಂಡ ವಾರದ ವಹಿವಾಟಿನ ಐದು ದಿನಗಳಲ್ಲಿಯೂ ಷೇರುಗಳನ್ನು ಖರೀದಿಸಲು ಗಮನ ಹರಿಸಿದ್ದಾರೆ.

ಆಗಸ್ಟ್ 1 ರಿಂದ 5ರವರೆಗೆ ನಡೆದ ವಹಿವಾಟಿನಲ್ಲಿ ₹6,992 ಕೋಟಿ ಮೌಲ್ಯದ ಷೇರುಗಳನ್ನು ಖರೀದಿ ಮಾಡಿದ್ದಾರೆ.

ವಿದೇಶಿ ಬಂಡವಾಳ ಒಳಹರಿವಿಗೆ ಹಲವು ಅಂಶಗಳು ಕಾರಣವಾಗಿವೆ. ಜಾಗತಿಕವಾಗಿ, ಅಮೆರಿಕದ ಫೆಡರಲ್ ರಿಸರ್ವ್ ಸೇರಿದಂತೆ ಪ್ರಮುಖ ಕೇಂದ್ರೀಯ ಬ್ಯಾಂಕ್‌ಗಳು ವೇಗವಾಗಿ ಬಡ್ಡಿದರ ಹೆಚ್ಚಳ ಮಾಡದೇ ಇರಲು ಮುಂದಾಗಿವೆ. ಅಲ್ಲದೆ, ಅಮೆರಿಕದಲ್ಲಿ ಸದ್ಯ ಆರ್ಥಿಕ ಹಿಂಜರಿತದ ಸ್ಥಿತಿ ಇಲ್ಲ ಎಂದು ಫೆಡರಲ್ ರಿಸರ್ವ್ ಅಧ್ಯಕ್ಷ ಜೆರೋಮ್ ಪೊವೆಲ್ ಹೇಳಿಕೆ ನೀಡಿರುವುದು ಸಹ ವಿದೇಶಿ ಹೂಡಿಕೆದಾರರಲ್ಲಿ ಸಕಾರಾತ್ಮಕ ಭಾವನೆ ಮೂಡಲು ಕಾರಣವಾಗಿವೆ.

ದೇಶದಲ್ಲಿ, ಕಾರ್ಪೊರೇಟ್ ವಲಯದ ಮೊದಲ ತ್ರೈಮಾಸಿಕ ಫಲಿತಾಂಶವು ಬಹುತೇಕವಾಗಿ ಮಾರುಕಟ್ಟೆಯ ನಿರೀಕ್ಷೆಯಂತೆಯೇ ಇದೆ. ಇನ್ನು ಅಮೆರಿಕದ ಡಾಲರ್ ಎದುರು ₹80ಕ್ಕಿಂತ ಹೆಚ್ಚಿನ ಕುಸಿತ ಕಂಡಿದ್ದ ರೂಪಾಯಿ ಮತ್ತೆ ಚೇತರಿಕೆ ಹಾದಿಗೆ ಮರಳಿದೆ. ಈ ಬೆಳವಣಿಗೆಗಳು ಸಹ ವಿದೇಶಿ ಹೂಡಿಕೆಗೆ ಉತ್ತೇಜನ ನೀಡುತ್ತಿವೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.



> **ಷೇರುಪೇಟೆ ಸಂಪತ್ತು ವೃದ್ಧಿ**
>
> ಮುಂಬೈ ಷೇರುಪೇಟೆಯಲ್ಲಿ ನಡೆಯುತ್ತಿರುವ ಸಕಾರಾತ್ಮಕ ವಹಿವಾಟಿನಿಂದಾಗಿ ಹೂಡಿಕೆದಾರರ ಸಂಪತ್ತು ಮೌಲ್ಯವು ವಾರದ ವಹಿವಾಟಿನಲ್ಲಿ ₹ 4.72 ಲಕ್ಷ ಕೋಟಿಗಳಷ್ಟು ಹೆಚ್ಚಾಗಿದೆ. ಇದರಿಂದ ಷೇರುಪೇಟೆಯ ಒಟ್ಟಾರೆ ಬಂಡವಾಳ ಮೌಲ್ಯ ₹271.30 ಲಕ್ಷ ಕೋಟಿಗೆ ಏರಿಕೆಯಾಗಿದೆ.
>
> ವಾರದ ವಹಿವಾಟಿನಲ್ಲಿ ಬಿಎಸ್‌ಇ ಸೆನ್ಸೆಕ್ಸ್ 818 ಅಂಶ ಮತ್ತು ಎನ್‌ಎಸ್‌ಇ ನಿಫ್ಟಿ 239 ಅಂಶ ಏರಿಕೆ ಕಂಡಿದೆ.

ಬಾಸ್ಮತಿ ಅಕ್ಕಿ ರಫ್ತು ಶೇ 26ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಬಾಸ್ಮತಿ ಅಕ್ಕಿ ರಫ್ತು 2022-23ರ ಏಪ್ರಿಲ್–ಜೂನ್ ಅವಧಿಯಲ್ಲಿ ಶೇ 25.54ರಷ್ಟು ಹೆಚ್ಚಾಗಿದ್ದು, ಮೌಲ್ಯದ ಲೆಕ್ಕದಲ್ಲಿ ₹9,112 ಕೋಟಿಗೆ ತಲುಪಿದೆ ಎಂದು ವಾಣಿಜ್ಯ ಸಚಿವಾಲಯ ಶನಿವಾರ ತಿಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹7,302 ಕೋಟಿ ಮೌಲ್ಯದ ಬಾಸ್ಮತಿ ಅಕ್ಕಿ ರಫ್ತಾಗಿತ್ತು.

ಕೃಷಿ ಮತ್ತು ಸಂಸ್ಕರಿಸಿದ ಆಹಾರ ಉತ್ಪನ್ನಗಳ ರಫ್ತು ಶೇ 31ರಷ್ಟು ಹೆಚ್ಚಾಗಿದ್ದು ₹58,637 ಕೋಟಿಗೆ ತಲುಪಿದೆ. ಮಾಂಸ, ಡೈರಿ ಉತ್ಪನ್ನ ಮತ್ತು ಕೋಳಿ ಉತ್ಪನ್ನಗಳ ರಫ್ತು ಶೇ 9.5ರಷ್ಟು ಹೆಚ್ಚಾಗಿದೆ.

ಎಸ್‌ಬಿಐ ನಿವ್ವಳ ಲಾಭ ಶೇ 6.7ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ಶೇ 6.7ರಷ್ಟು ಇಳಿಕೆ ಕಂಡಿದ್ದು, ₹ 6,068 ಕೋಟಿಗೆ ತಲುಪಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್‌ನ ನಿವ್ವಳ ಲಾಭ ₹ 6,504 ಕೋಟಿ ಇತ್ತು. ವರಮಾನ ಇಳಿಕೆ ಕಂಡಿರುವುದೇ ಲಾಭ ಕಡಿಮೆ ಆಗಲು ಕಾರಣ ಎಂದು ಹೇಳಿದೆ. ವರಮಾನವು ₹ 77,347 ಕೋಟಿಯಿಂದ ₹ 74,998 ಕೋಟಿಗೆ ಇಳಿಕೆ ಆಗಿದೆ ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ.

ಬ್ಯಾಂಕ್‌ನ ವಸೂಲಾಗದ ಸಾಲದ (ಎನ್‌ಪಿಎ) ಸರಾಸರಿ ಪ್ರಮಾಣವು ಶೇ5.32 ರಿಂದ ಶೇ 3.91ಕ್ಕೆ ಇಳಿಕೆ ಆಗಿದೆ. ನಿವ್ವಳ ಎನ್‌ಪಿಎ ಶೇ 1.7 ರಿಂದ ಶೇ 1.02ಕ್ಕೆ ಇಳಿಕೆ ಕಂಡಿದೆ ಎಂದು ಅದು ತಿಳಿಸಿದೆ.

‘ಷೇರು, ಬಾಂಡ್, ಮ್ಯೂಚುವಲ್ ಫಂಡ್ ತರಹದ ಹಣಕಾಸು ಸ್ವತ್ತುಗಳ ಈಗಿನ ಮಾರುಕಟ್ಟೆ ಮೌಲ್ಯವು ಅವುಗಳನ್ನು ಖರೀದಿಸಿದ ಸಂದರ್ಭದಲ್ಲಿ ಇದ್ದಿದ್ದಕ್ಕಿಂತಲೂ ಕಡಿಮೆ ಆಗಿದೆ. ಇದರಿಂದಾಗಿ ತ್ರೈಮಾಸಿಕದಲ್ಲಿ ನಿವ್ವಳ ಲಾಭ ಮತ್ತು ಕಾರ್ಯಾಚರಣಾ ಲಾಭದ ಮೇಲೆ ಪರಿಣಾಮ ಉಂಟಾಗಿದೆ’ ಎಂದು ಬ್ಯಾಂಕ್‌ನ ಅಧ್ಯಕ್ಷ ದಿನೇಶ್ ಖಾರಾ ತಿಳಿಸಿದ್ದಾರೆ.

ಎಚ್‌ಪಿಸಿಎಲ್‌ಗೆ ₹ 10,196 ಕೋಟಿ ನಷ್ಟ

ನವದೆಹಲಿ (ಪಿಟಿಐ): ಹಿಂದುಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಎಚ್‌ಪಿಸಿಎಲ್) ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ₹ 10,196 ಕೋಟಿ ನಿವ್ವಳ ನಷ್ಟ ಕಂಡಿದೆ.

ಪೆಟ್ರೋಲ್ ಮತ್ತು ಡೀಸೆಲ್ ದರ ಹೆಚ್ಚಳವನ್ನು ತಡೆಹಿಡಿದ ಕಾರಣಕ್ಕಾಗಿ ನಷ್ಟ ಆಗಿದೆ ಎಂದು ಕಂಪನಿಯು ಹೇಳಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹1,795 ಕೋಟಿ ನಿವ್ವಳ ಲಾಭ ಆಗಿತ್ತು ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಕಂಪನಿಯು ಇದೇ ಮೊದಲ ಬಾರಿಗೆ ತ್ರೈಮಾಸಿಕವೊಂದರಲ್ಲಿ ಈ ಪ್ರಮಾಣದ ನಷ್ಟ ಅನುಭವಿಸಿದೆ. ಉತ್ಪನ್ನಗಳ ಮಾರಾಟದಿಂದ ಬರುವ ವರಮಾನವು ₹ 1.21 ಲಕ್ಷ ಕೋಟಿಗೆ ತಲುಪಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ₹ 77,308 ಕೋಟಿ ಇತ್ತು.

ಮುಂಬೈ ಧಾರಣೆ

ಶೇಂಗಾ 6-8-2022	
ಜಾವಾ 70/80(ಹೊಸ)	11250-11300
ಜಾವಾ 80/90(ಹೊಸ)	10650-10700
ದಪ್ಪ ಮಧ್ಯಪ್ರದೇಶ(ಹೊಸ)	9950-10000
ದಪ್ಪ ಗುಜರಾತ್(ಹೊಸ)	10650-10700
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1630 (1630)
ಒಂದು ವಾರದ ಡೆಲಿವರಿ	1625 (1625)
ಸೋಯಾ ಕಚ್ಚಾ	1180 (1180)
ಪಾಮ್ ವಾರದ ಡೆಲಿವರಿ	1223 (1213)
ಸೂರ್ಯಕಾಂತಿ ಎಣ್ಣೆ ಕಚ್ಚಾ	1500 (1500)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10ಗ್ರಾಂ	51,775 (51,600)
ಬೆಳ್ಳಿ ಕೆ.ಜಿ	57,000 (57,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-600
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	485
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಚಿತ್ರದುರ್ಗ	
ಆಪಿ	50449-50829
ಬೆಟ್ಟೆ	40119-40589
ಕೆಂಪುಗೋಟು	30709-31110
ರಾಶಿ	49939-50369
ಪುತ್ತೂರು	
ಹೊಸತು	32000-45000
ಶಿರಸಿ	
ಬೆಟ್ಟೆ	40919-48690
ಬಿಳಿಗೋಟು	26399-33899
ಚಾಲಿ	36010-41212
ರಾಶಿ	48699-50899

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15900	15500	15850	209.90 ಸೆಂಟ್ಸ್
ಎಸಿ	8820	8400	8800	
ಆರ್‌ಪಿ	9500	9500	9700	ಲಂಡನ್
ಆರ್‌ಸಿ	4550	4500	4550	2027 ಡಾಲರ್ಸ್

ಚಿನ್ನ, ಬೆಳ್ಳಿ (ಬೆಂಗಳೂರು)	
ಸ್ಟಾಂಡರ್ಡ್ ಚಿನ್ನ (10 ಗ್ರಾಂ)	₹53,600
ಆಭರಣ ಚಿನ್ನ (1 ಗ್ರಾಂ)	₹4,932
ಬೆಳ್ಳಿ (ಕೆ.ಜಿಗೆ)	₹58,800

ಖಾದ್ಯ ತೈಲ ಮುಂಬೈ (10 ಕೆಜಿಗೆ)	
ಶೇಂಗಾ (ರಿಫೈನ್ಡ್)	₹1620 (1620)
ಸೋಯಾ (ರಿಫೈನ್ಡ್)	₹1245 (1240)
ಸೂರ್ಯಕಾಂತಿ (ರಿಫೈನ್ಡ್)	₹1600(1600)
ಪಾಮೋಲಿನ್	₹1225 (1215)

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ರಿಯಲ್ ಎಸ್ಟೇಟ್ ಸೆಲ್ಲಿಂಗ್

Agricultural Land

Nelamangala

NELAMANGALA TALUK, Jakkasandra Village Sy.No. 8/2, measuring 04.14½ acre and Thyamagondlu Hobli, 5½ km from Dabaspet NH230 Doddaballapur Road. Suitable for Commercial Purpose. Brokers Excuse. Genuine Buyers only. Contact: N.Srinivas- 9844046475

House

Banashankari

BANASHANKARI 2ND STAGE, Building (GF, FF) for Sale 30'x45' S/F opposite to Umamaheshwara Park 9341890909.

Sites

Mysore

2000 SFT Muda Approved Corner Site In Paradise Enclave Hanchya For Sale 63 Lakhs Contact 9341950024

Bannerghatta Road

BANNERGHATTA ROAD GOTTIGERE Sites Sale 'A' khatha. W/F 1) 38'x38' 2) 37'x38' 3) 33x130. 9341890909.

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಚಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರೆಂಟಲ್ ಪ್ರಾಪರ್ಟೀಸ್

Accommodation Available

Commercial

RENT MAGADI Main Road Anjanagar Commercial 3Floors Lift 1650SQFT ShoowRoom Bank Restaurant ph 9845035837

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ: ಮಾರ್ಕೆಟಿಂಗ್‌ಅಲ್ಲ, ನೇರನೇಮಕಾತಿ ಕಂಪನಿಗಳಿಗೆ, ಆಫೀಸ್ಗಳಿಗೆ ವಿದ್ಯಾರ್ಹತೆಯಿರುವ, ವಿದ್ಯಾರ್ಹತೆಯಿಲ್ಲದವರಿಗೂ, ಯುವಕ, ಯುವತಿಯರಿಗೆವಸತಿ ಊಟದೊಂದಿಗೆ 16,500- 54,600/-. 9980462311, 9620228807

Marketing & Sales

WANTED SALES Executive with Bike & Smart Phone Must Contact 7619317794, 9986781877

ವ್ಯಾಪಾರ

Business Offers

Finance

STARTUP IT Company with market presence and qualified pipeline seeks urgent equity investment 2.50 crores with good ROI. Interested please DM me on 9448246179 or email sd@gilttech.in

ಭವಿಷ್ಯ

Astrology

ಕೇರಳ ಬಂಗಾಳಿ ವಶೀಕರಣ ಮೋಡಿ ಸಿದ್ಧಿಯನ್ನು ವಶದಲ್ಲಿರಿಸಿಕೊಂಡಿರುವ, ಸ್ತ್ರೀ ಪುರುಷ ವಶೀಕರಣ ಸಂತಾನ, ಮರಣ ಭಯ, ಪ್ರೇಮ ವಿಚಾರ. 9632075984

DH ಪ್ರಜಾವಾಣಿ
Classifieds EDUCATION SPECIAL
SPECIAL RATES FOR • Admission Notice, Education Success • Congratulation Ads
For More Details Contact:
Jerry Louis : 9731810277 | Ravichandra : 9901641752
Vishal GM : 9845114560 | Tanveer : 9886213331
Email : dhclassifieds@deccanherald.co.in

EDUCATION CORNER

IAS/KAS 2023 & PSI/PC
FREE Coaching batch Starts On August 16
Dr Kalam IAS Academy Bangalore
9535215127 / 28
Dr Kalam is a Private Institute

★॥ಶ್ರೀಕೇದಾರನಾಥ॥★ ಆರಾಧನೆಯಿಂದ ಪ್ರೀತಿಪ್ರೇಮ, ಸ್ತ್ರೀಪುರುಷ ವಶೀಕರಣ, ದಾಂಪತ್ಯ, ಜನವಶೀಕರಣ, ಧನವಶೀಕರಣ, ಕೋರ್ಟ್‌ಕಛೇರಿ ಸಾಲಬಾಧೆ ಯಾವುದೇ ಸಮಸ್ಯೆಯಿದ್ದರೂ. 100% ಶಾಶ್ವತ ಪರಿಹಾರ. 9148773459

"ಕೆಲವೇ ದಿನದಲ್ಲಿ 3000ಕ್ಕೂಹೆಚ್ಚು ವಶೀಕರಣ ಸಮಸ್ಯೆಗಳನ್ನು ಪರಿಹಾರಕೊಟ್ಟ ಏಕೈಕ ಜ್ಯೋತಿಷಿ ನಿಮ್ಮಯಾವುದೇ ಗುಪ್ತಸಮಸ್ಯೆಗಳಿಗೆ ಹಾಗೂ ವಶೀಕರಣ ಪ್ರಯೋಗ ಕೇವಲ 1ಗಂಟೆಗಳಲ್ಲಿ ಶಾಶ್ವತ ಪರಿಹಾರ 9880021234"

★ಸಿಗಂಧೂರುಚೌಡೇಶ್ವರಿ ಜ್ಯೋತಿಷ್ಯ★ ಸ್ತ್ರೀಪುರುಷ ವಶೀಕರಣ, ದಾಂಪತ್ಯ ಕಲಹ, ಉದ್ಯೋಗ, ಹಣಕಾಸು ಇನ್ಯಾವುದೇ ಸಮಸ್ಯೆಗಳಿಗೆ 100%ಪರಿಹಾರ. ಪಂಡಿತ್ ಲಕ್ಷ್ಮಣ್ ಆಚಾರ್ಯ 7019622190

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

★॥ಆದಿಶಕ್ತಿಹುಲಿಗೆಮ್ಮ ದೇವಿ ಜ್ಯೋತಿಷ್ಯರು॥★ ಸ್ತ್ರೀಪುರುಷ ವಶೀಕರಣ, ಸಂಭೋಗ ವಶೀಕರಣ ಇನ್ನೂಯಾವುದೇ ಸಮಸ್ಯೆಗಳಿಗೆ 24ಗಂಟೆಗಳಲ್ಲಿ ಶಾಶ್ವತ ಪರಿಹಾರ. ಪಂಡಿತ್.ಮಂಜುನಾಥ್‌ಭಟ್. 9900222591

ಪ್ರವಾಸ

Travel

ನೇಪಾಳ-ಕಠ್ಮಂಡು 10 ದಿನದ ವಿದೇಶ ಪ್ರವಾಸ. ಕುವೆಂಪು ಕಲಾನಿಕೇತನ ಸಂಸ್ಥೆಯ ವತಿಯಿಂದ ಅಂತರಾಷ್ಟ್ರೀಯ ವಿಶ್ವಮಾನವ ಕುವೆಂಪು ಕಲಾ ಉತ್ಸವ-2022. ದಿನಾಂಕ:12-09-2022 ರಿಂದ ನೇಪಾಳಕಠ್ಮಂಡು ಪೋಕ್ರಾ ಗೋರಕಪುರ ಲುಂಬಿನಿ ಮುಕ್ತಿನಾಥ ಚಿತವಾನ್ ಮನೋಕಾಮನ ಜನಕಪುರಿ. ಸಂಪರ್ಕಿಸಿ: 09880988298/ 09448025130.

09.09.2022 ರಿಂದ 12 ದಿನಗಳು ದೆಹಲಿ, ಹರಿದ್ವಾರ್, ಗಂಗೋತ್ರಿ ಯಮುನೋತ್ರಿ, ಕೇದಾರನಾಥ್, ಬದ್ರಿನಾಥ್. ಸಂಪರ್ಕಿಸಿ: ಶ್ರೀಗಂಗಾ ಟೂರಿಸ್ಟ್, 9480253807

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ರವಿಕುಮಾರ್, ನವೀನ್, ವಿನೇಶಾ ಫೋಗಟ್‌ಗೆ ಚಿನ್ನ; ಪೂಜಾಗೆ ಕಂಚು

ಕುಸ್ತಿ ಅಂಗಣದಲ್ಲಿ ಪದಕ ಭರಾಟೆ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಕಾಮನ್‌ವೆಲ್ತ್ ಕ್ರೀಡಾಕೂಟದ ಕುಸ್ತಿ ಅಖಾಡದಲ್ಲಿ ಭಾರತದ ಪದಕ ಬೇಟೆ ಮುಂದುವರಿದಿದ್ದು, ರವಿ ಕುಮಾರ್, ನವೀನ್ ಮತ್ತು ವಿನೇಶಾ ಫೋಗಟ್ ಚಿನ್ನ ಗೆದ್ದರೆ, ಪೂಜಾ ಗೆಹಲೋತ್ ಹಾಗೂ ಪೂಜಾ ಸಿಹಾಗ್ ಕಂಚು ತಮ್ಮದಾಗಿಸಿಕೊಂಡರು.

ಶನಿವಾರ ನಡೆದ ಪುರುಷರ 57 ಕೆ.ಜಿ. ವಿಭಾಗದ ಫೈನಲ್‌ನಲ್ಲಿ ರವಿ 10–0 ರಲ್ಲಿ ನೈಜೀರಿಯದ ಎಬಿಕ್ವೆನಿಮೊ ವೆಲ್ಸನ್ ವಿರುದ್ಧ ಜಯಿಸಿದರು. ಅದ್ಭುತ ಚಾಕಚಕ್ಯತೆ ತೋರಿದ ಅವರು ಕೇವಲ 2.16 ನಿಮಿಷಗಳಲ್ಲಿ ಗೆದ್ದರು.

ಕ್ವಾರ್ಟರ್ ಫೈನಲ್‌ನಲ್ಲಿ ನ್ಯೂಜಿಲೆಂಡ್‌ನ ಸೂರಜ್ ಸಿಂಗ್ ಅವರನ್ನು ಮಣಿಸಿದ್ದ ರವಿ, ಸೆಮಿಫೈನಲ್‌ನಲ್ಲಿ 14–4 ರಲ್ಲಿ ಪಾಕಿಸ್ತಾನದ ಅಲಿ ಅಸಾದ್ ವಿರುದ್ಧ ಗೆದ್ದಿದ್ದರು.

ನವೀನ್ ಅವರು ಪುರುಷರ 74 ಕೆ.ಜಿ. ವಿಭಾಗದ ಫೈನಲ್‌ನಲ್ಲಿ ಪಾಕಿಸ್ತಾನದ ಮುಹಮ್ಮದ್ ಶರೀಫ್ ತಾಹಿರ್ ಅವರನ್ನು 9–0 ರಲ್ಲಿ ಸೋಲಿಸಿ ಚಿನ್ನದ ಪದಕಕ್ಕೆ ಮುತ್ತಿಟ್ಟರು. ನವೀನ್ ಎರಡು ಸುತ್ತುಗಳಲ್ಲೂ ಎದುರಾಳಿಗೆ ಯಾವುದೇ ಪಾಯಿಂಟ್ ಬಿಟ್ಟುಕೊಡಲಿಲ್ಲ.

ವಿನೇಶಾಗೆ ಹ್ಯಾಟ್ರಿಕ್ ಚಿನ್ನ: ವಿನೇಶಾ ಮಹಿಳೆಯರ 53 ಕೆ.ಜಿ. ವಿಭಾಗದಲ್ಲಿ ಚಿನ್ನದ ನಗು ಬೀರಿದರು. ಈ ವಿಭಾಗದಲ್ಲಿ ನಾಲ್ವರು ಮಾತ್ರ ಕಣದಲ್ಲಿದ್ದರು. ಇತರ ಮೂವರನ್ನು ಮಣಿಸಿದ ಅವರು ಅಗ್ರಸ್ಥಾನ ಪಡೆದರು.

ವಿನೇಶಾ ಅವರು ಮೊದಲ ಸುತ್ತಿನಲ್ಲಿ ಕೆನಡಾದ ಸಮಂತಾ ಸ್ಟಿವರ್ಟ್ ಅವರನ್ನು ಕೇವಲ 36 ಸೆಕೆಂಡುಗಳಲ್ಲಿ ನೆಲಕ್ಕೆ ಕೆಡವಿ ಶುಭಾರಂಭ ಮಾಡಿದರು. ಆ ಬಳಿಕ ನೈಜೀರಿಯದ ಮರ್ಸಿ ಅಡೆಕುರೊಯೆ ಎದುರು 6–0 ಅಂತರದಿಂದ ಜಯಿಸಿದರು.

ಕೊನೆಯ ಕುಸ್ತಿಯಲ್ಲಿ ಅವರು ಶ್ರೀಲಂಕಾದ ಚಮೋದ್ಯ ಕೇಶನಿ ಮದುರವಲಗೆ ಅವರನ್ನು ನೆಲಕ್ಕುರುಳಿಸಿ ಅಜೇಯ ಸಾಧನೆ ಮಾಡಿದರು.

ಕಾಮನ್‌ವೆಲ್ತ್ ಕೂಟದಲ್ಲಿ ಅವರಿಗೆ ದೊರೆತ ಸತತ ಮೂರನೇ ಚಿನ್ನ ಇದು. ಈ ಸಾಧನೆ ಮಾಡಿದ ಭಾರತದ ಮೊದಲ ಮಹಿಳಾ ಕುಸ್ತಿಪಟು ಎಂಬ ಗೌರವವನ್ನು ಅವರು ತಮ್ಮದಾಗಿಸಿಕೊಂಡರು.

ಕಳೆದ ಕೆಲ ಸಮಯಗಳಿಂದ ಫಿಟ್‌ನೆಸ್ ಸಮಸ್ಯೆಯಿಂದ ಬಳಲಿದ್ದ ಅವರು ಮಾನಸಿಕವಾಗಿಯೂ ಕುಗ್ಗಿದ್ದರು. ಇದೀಗ ಚಿನ್ನ ಜಯಿಸಿ ಪುಟಿದೆದ್ದು ನಿಂತಿದ್ದಾರೆ.

ಪೂಜಾ ಗೆಹಲೋತ್ ಅವರು ಮಹಿಳೆಯರ 50 ಕೆ.ಜಿ ವಿಭಾಗದಲ್ಲಿ ಕಂಚಿನ ಪದಕ ಗೆದ್ದರು. ಮೂರನೇ ಸ್ಥಾನವನ್ನು ನಿರ್ಣಯಿಸಲು ಶನಿವಾರ ನಡೆದ ಸ್ಪರ್ಧೆಯಲ್ಲಿ ಅವರು 12–2 ರಲ್ಲಿ ಕ್ರಿಸ್ಟೆಲ್ ಲೆಮೊಫಾಕ್ ವಿರುದ್ಧ ಜಯಿಸಿದರು. ಪೂಜಾ ಸೆಮಿಫೈನಲ್‌ನಲ್ಲಿ 6–9 ರಲ್ಲಿ ಕೆನಡಾದ ಮ್ಯಾಡಿಸನ್ ಪಾರ್ಕ್ಸ್ ಎದುರು ಪರಾಭಗೊಂಡಿದ್ದರು.

ಪೂಜಾ ಸಿಹಾಗ್ ಅವರು ಮಹಿಳೆಯರ 76 ಕೆ.ಜಿ. ವಿಭಾಗದಲ್ಲಿ ಕಂಚಿನ ಸಾಧನೆ ಮಾಡಿದರು. ಅವರು 11–0 ರಲ್ಲಿ ಆಸ್ಟ್ರೇಲಿಯಾದ ನವೊಮಿ ಡಿ ಬ್ರೂನ್ ಎದುರು ಗೆದ್ದರು.

ಭಾರತದ ಇನ್ನೊಬ್ಬ ಕುಸ್ತಿಪಟು ದೀಪಕ್ ನೆಹ್ರಾ ಅವರು ಪುರುಷರ 97 ಕೆ.ಜಿ. ವಿಭಾಗದ ಸೆಮಿಫೈನಲ್‌ನಲ್ಲಿ ಸೋಲು ಅನುಭವಿಸಿದ್ದು, ಕಂಚಿನ ಪದಕಕ್ಕಾಗಿ ಪೈಪೋಟಿ ನಡೆಸಲಿದ್ದಾರೆ.



1.ಚಿನ್ನದ ಪದಕ ಗೆದ್ದ ನವೀನ್ ಕುಮಾರ್ ಸಂಭ್ರಮ . 2. ರವಿಕುಮಾರ್ ದಹಿಯಾ– ಪಿಟಿಐ ಚಿತ್ರಗಳು

ಪದಕ ಪಟ್ಟಿ

ಸ್ಥಾನ	ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
1	ಆಸ್ಟ್ರೇಲಿಯಾ	58	46	49	153
2	ಇಂಗ್ಲೆಂಡ್	50	50	45	145
3	ಕೆನಡಾ	22	29	33	84
4	ನ್ಯೂಜಿಲೆಂಡ್	17	12	14	43
5	ಭಾರತ	12	11	15	38
6	ನೈಜೀರಿಯಾ	9	6	11	26

ವಿನೇಶಾ ಫೋಗಟ್

ಲಾನ್ ಬಾಲ್ಸ್: ಭಾರತ ತಂಡಕ್ಕೆ ಬೆಳ್ಳಿ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತ ಪುರುಷರ ತಂಡದವರು ಲಾನ್ ಬಾಲ್ಸ್ ಸ್ಪರ್ಧೆಯ ಫೋರ್ಸ್ ವಿಭಾಗದಲ್ಲಿ ಬೆಳ್ಳಿ ಗೆದ್ದರು.

ಶನಿವಾರ ನಡೆದ ಫೈನಲ್‌ನಲ್ಲಿ ಭಾರತ 5–18ರಲ್ಲಿ ನಾರ್ದರ್ನ್ ಐರ್ಲೆಂಡ್ ಎದುರು ಪರಾಭವಗೊಂಡಿತು. ಲಾನ್ ಬಾಲ್ಸ್‌ನಲ್ಲಿ ಭಾರತಕ್ಕೆ ದೊರೆತ ಎರಡನೇ ಪದಕ ಇದು. ಮಹಿಳಾ ತಂಡದವರು ಫೋರ್ಸ್ ವಿಭಾಗದಲ್ಲಿ ಚಿನ್ನ ಜಯಿಸಿದ್ದರು. ಆದರೆ ಪುರುಷರ ತಂಡ ಚಿನ್ನದ ಸಾಧನೆ ಮಾಡಲು ವಿಫಲವಾಯಿತು.

ಸುನಿಲ್ ಬಹಾದೂರ್, ನವನೀತ್ ಸಿಂಗ್, ಚಂದನ್ ಕುಮಾರ್ ಸಿಂಗ್ ಮತ್ತು ದಿನೇಶ್ ಕುಮಾರ್ ಅವರನ್ನೊಳಗೊಂಡ ಭಾರತ ತಂಡ ಸೆಮಿಫೈನಲ್‌ನಲ್ಲಿ 13–12 ರಲ್ಲಿ ಇಂಗ್ಲೆಂಡ್ ತಂಡವನ್ನು ಮಣಿಸಿತ್ತು.

ಫೈನಲ್‌ನಲ್ಲಿ ಭಾರತ ತಂಡ ನಿಖರ ಪ್ರದರ್ಶನ ನೀಡುವಲ್ಲಿ ಎಡವಿತು. ಮೊದಲ ನಾಲ್ಕು ಸುತ್ತುಗಳ ಬಳಿಕ ಬಳಿಕ ಐರ್ಲೆಂಡ್ 7–0 ರಲ್ಲಿ ಮುನ್ನಡೆ ಪಡೆಯಿತು. ಭಾರತಕ್ಕೆ ಖಾತೆ ತೆರೆಯಲು ಆಗಲಿಲ್ಲ.

ಐದು ಸುತ್ತುಗಳ ಬಳಿಕ ಭಾರತಕ್ಕೆ ಮೊದಲ ಪಾಯಿಂಟ್ ಲಭಿಸಿತು. 10 ಸುತ್ತುಗಳು ಕೊನೆಗೊಂಡಾಗ ಐರ್ಲೆಂಡ್ 12–5 ರಲ್ಲಿ ಮೇಲುಗೈ ಸಾಧಿಸಿತು. ನಿಖರ ಪ್ರದರ್ಶನ ಮುಂದುವರಿಸಿದ ಸಾಮ್ ಬರ್ಕ್ಲೆ, ಆ್ಯಡಮ್ ಮೆಕೋವನ್, ಇಯಾನ್ ಮೆಕ್‌ಲೂರ್ ಮತ್ತು ಮಾರ್ಟಿನ್ ಮೆಕ್‌ಹ್ಯೂ ಅವರು ಮತ್ತೆ ಆರು ಪಾಯಿಂಟ್ ಕಲೆಹಾಕಿ ಚಿನ್ನ ತಮ್ಮದಾಗಿಸಿಕೊಂಡರು.

ನಾರ್ದರ್ನ್ ಐರ್ಲೆಂಡ್ ಲಾನ್ ಬಾಲ್ಸ್‌ನಲ್ಲಿ 1998ರ ಬಳಿಕ ಇದೇ ಮೊದಲ ಬಾರಿ ಚಿನ್ನ ಗೆದ್ದ ಸಾಧನೆ ಮಾಡಿತು.

ಬೆಳ್ಳಿ ಗೆದ್ದ ನವನೀತ್ ಸಿಂಗ್, ದಿನೇಶ್ ಕುಮಾರ್, ಸುನಿಲ್ ಮತ್ತು ಚಂದನ್ –ಸಾಯ್ ಟ್ವಿಟರ್ ಚಿತ್ರ

ಅಥ್ಲೆಟಿಕ್ಸ್: ಪ್ರಿಯಾಂಕಾ, ಸಬ್ಲೆಗೆ ಬೆಳ್ಳಿ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಪ್ರಿಯಾಂಕಾ ಗೋಸ್ವಾಮಿ ಮತ್ತು ಅವಿನಾಶ್ ಸಬ್ಲೆ ಅವರು ಅಥ್ಲೆಟಿಕ್ಸ್‌ನಲ್ಲಿ ಕ್ರಮವಾಗಿ ಮಹಿಳೆಯರ 20 ಕಿ.ಮೀ. ನಡಿಗೆ ಹಾಗೂ ಪುರುಷರ 3,000 ಮೀ. ಸ್ಟೀಪಲ್ ಚೇಸ್ ಸ್ಪರ್ಧೆಯಲ್ಲಿ ಬೆಳ್ಳಿ ಗೆದ್ದರು.

ಶನಿವಾರ ನಡೆದ ನಡಿಗೆ ಸ್ಪರ್ಧೆಯಲ್ಲಿ ಪ್ರಿಯಾಂಕಾ 43 ನಿ. 38.83 ಸೆ.ಗಳಲ್ಲಿ ಗುರಿ ತಲುಪಿ ಎರಡನೇ ಸ್ಥಾನ ಪಡೆದುಕೊಂಡರು. ಈ ಹಾದಿಯಲ್ಲಿ ಅವರು ತಮ್ಮ ವೈಯಕ್ತಿಕ ಶ್ರೇಷ್ಠ ಸಮಯವನ್ನೂ ದಾಖಲಿಸಿದರು.

ಆಸ್ಟ್ರೇಲಿಯಾದ ಜೆಮಿಮಾ ಮಾಂಟಗ್ (42 ನಿ. 34.30 ಸೆ.) ಚಿನ್ನ ಗೆದ್ದರೆ, ಕೆನ್ಯಾದ ಎಮಿಲಿ ವಾಮುಸಿ (43 ನಿ. 50.86 ಸೆ.) ಕಂಚು ಪಡೆದರು. ಕಣದಲ್ಲಿದ್ದ ಭಾರತದ ಇನ್ನೊಬ್ಬರು ಸ್ಪರ್ಧಿ ಭಾವನಾ ಎಂಟನೇ ಸ್ಥಾನ ಪಡೆದರು. ಕಾಮನ್‌ವೆಲ್ತ್ ಕೂಟದ ನಡಿಗೆ ಸ್ಪರ್ಧೆಯಲ್ಲಿ ಪದಕ ಗೆದ್ದ ಭಾರತದ ಮೊದಲ ಮಹಿಳಾ ಅಥ್ಲೀಟ್ ಎಂಬ ಗೌರವ ಪ್ರಿಯಾಂಕಾ ಅವರಿಗೆ ಒಲಿಯಿತು. ಹರ್ಮಿಂದರ್ ಸಿಂಗ್ ಅವರು 2010ರ ನವದೆಹಲಿ ಕಾಮನ್‌ವೆಲ್ತ್ ಕೂಟದ ಪುರುಷರ ನಡಿಗೆ ಸ್ಪರ್ಧೆಯಲ್ಲಿ ಕಂಚು ಗೆದ್ದಿದ್ದರು. ಆದರೆ ಮಹಿಳೆಯರ ವಿಭಾಗದಲ್ಲಿ ಯಾರೂ ಇದುವರೆಗೆ ಪದಕ ಗೆದ್ದಿರಲಿಲ್ಲ.

ಸಬ್ಲೆ ರಾಷ್ಟ್ರೀಯ ದಾಖಲೆ: ಅವಿನಾಶ್ ಸಬ್ಲೆ ಅವರು ಸ್ಟೀಪಲ್ ಚೇಸ್‌ನಲ್ಲಿ 8 ನಿ. 11.20 ಸೆ.ಗಳಲ್ಲಿ ಗುರಿ ತಲುಪಿ ಎರಡನೇ ಸ್ಥಾನ ಪಡೆದರು. ತಮ್ಮದೇ ಹೆಸರಿನಲ್ಲಿದ್ದ ರಾಷ್ಟ್ರೀಯ ದಾಖಲೆಯನ್ನು (8 ನಿ. 12.48ಸೆ.) ಉತ್ತಮಪಡಿಸಿಕೊಂಡರು.

ಕೆನ್ಯಾದ ಅಬ್ರಹಾಂ ಕಿಬಿವೊಟ್ (8 ನಿ. 11.15 ಸೆ.) ಚಿನ್ನ ಗೆದ್ದರೆ, ಅದೇ ದೇಶದ ಅಮೋಸ್ ಸೆರೆಮ್ (8 ನಿ. 16.83 ಸೆ.) ಕಂಚು ಪಡೆದುಕೊಂಡರು.

ಕಳೆದ ತಿಂಗಳು ಯೂಜಿನ್‌ನಲ್ಲಿ ನಡೆದಿದ್ದ ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಕಿಬಿವೊಟ್ ಐದನೇ ಸ್ಥಾನ ಪಡೆದುಕೊಂಡಿದ್ದರೆ, ಸಬ್ಲೆ 11ನೇ ಸ್ಥಾನ ಗಳಿಸಿದ್ದರು. ಅಲ್ಲಿ ಉಂಟಾಗಿದ್ದ ನಿರಾಸೆಯನ್ನು ಮರೆಸುವಲ್ಲಿ ಸಬ್ಲೆ ಯಶಸ್ವಿಯಾದರು.

ಹಿಮಾಗೆ ನಿರಾಸೆ: ಹಿಮಾ ದಾಸ್ ಮಹಿಳೆಯರ 200 ಮೀ. ಓಟದಲ್ಲಿ ಫೈನಲ್ ಪ್ರವೇಶಿಸಲು ವಿಫಲರಾದರು.

ಶುಕ್ರವಾರ ನಡೆದ ಎರಡನೇ ಸೆಮಿಫೈನಲ್ ಹೀಟ್‌ನಲ್ಲಿ ಸ್ಪರ್ಧಿಸಿದ ಅವರು 23.42 ಸೆ.ಗಳಲ್ಲಿ ಗುರಿ ತಲುಪಿದರು. ಮೊದಲ ಎರಡು ಸ್ಥಾನಗಳನ್ನು ಪಡೆದ ನಮೀಬಿಯದ ಕ್ರಿಸ್ಟಿನಾ ಎಂಬೊಮ (22.93 ಸೆ.) ಹಾಗೂ ಆಸ್ಟ್ರೇಲಿಯಾದ ಎಲಾ ಕಾನೊಲಿ (23.41 ಸೆ.) ಫೈನಲ್ ಪ್ರವೇಶಿಸಿದರು.



ಸ್ಟೀಪಲ್‌ಚೇಸ್‌ನಲ್ಲಿ ಭಾಗವಹಿಸಿದ್ದ ಅವಿನಾಶ್ ಸಬ್ಲೆ (ಎಡ)– ಪಿಟಿಐ ಚಿತ್ರ

ಪ್ರಿಯಾಂಕಾ ಸಂಭ್ರಮ –ಎಎಫ್‌ಪಿ ಚಿತ್ರ

ಮಹಿಳಾ ಹಾಕಿ: ಆಸ್ಟ್ರೇಲಿಯಾ ಎದುರು ಸೋಲು

ಸೆಮಿಯಲ್ಲಿ ಎಡವಿದ ಭಾರತ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತ ಮಹಿಳಾ ಹಾಕಿ ತಂಡದವರು ಕಾಮನ್‌ವೆಲ್ತ್ ಕೂಟದ ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯಾ ಎದುರು ವೀರೋಚಿತ ಸೋಲು ಅನುಭವಿಸಿದರು.

ಶುಕ್ರವಾರ ರಾತ್ರಿ ನಡೆದ ರೋಚಕ ಪಂದ್ಯದಲ್ಲಿ ಸವಿತಾ ಪೂನಿಯಾ ಬಳಗ ಪೆನಾಲ್ಟಿ ಶೂಟೌಟ್‌ನಲ್ಲಿ 0–3 ರಲ್ಲಿ ಪರಾಭವಗೊಂಡಿತು. ಕಂಚಿನ ಪದಕಕ್ಕಾಗಿ ಭಾನುವಾರ ನಡೆಯುವ ಪಂದ್ಯದಲ್ಲಿ ಭಾರತ ತಂಡ, ನ್ಯೂಜಿಲೆಂಡ್‌ನ ಸವಾಲು ಎದುರಿಸಲಿದೆ.

ಫೈನಲ್ ಮೇಲೆ ಕಣ್ಣಿಟ್ಟಿದ್ದ ಎರಡೂ ತಂಡಗಳು ಆಕ್ರಮಣಕಾರಿ ಆಟವಾಡಿದವು. 10ನೇ ನಿಮಿಷದಲ್ಲಿ ರೆಬೆಕಾ ಗ್ರೈನೆರ್ ಅವರು ಗೋಲು ಗಳಿಸಿ ಆಸ್ಟ್ರೇಲಿಯಾಕ್ಕೆ ಮುನ್ನಡೆ ತಂದಿತ್ತರು. ಅಂಬ್ರೋಸಿಯಾ ಮಲೋನ್ ಅವರ ಪಾಸ್‌ನಿಂದ ಚೆಂಡನ್ನು ನಿಯಂತ್ರಣಕ್ಕೆ ಪಡೆದುಕೊಂಡ ರೆಬೆಕಾ ಗುರಿ ಸೇರಿಸಿದರು. 49ನೇ ನಿಮಿಷದಲ್ಲಿ ವಂದನಾ ಕಟಾ ರಿಯಾ ತಂದಿತ್ತ ಗೋಲಿನ ನೆರವಿನಿಂದ ಭಾರತ ಸಮಬಲ ಮಾಡಿ ಕೊಂಡಿತು. ಸುಶೀಲಾ ಚಾನು ಅವರು ನೀಡಿದ ಪಾಸ್‌ನಿಂದ ಈ ಗೋಲು ಬಂತು.

ಉಭಯ ತಂಡಗಳಿಗೆ ಸಾಕಷ್ಟು ಪೆನಾಲ್ಟಿ ಕಾರ್ನರ್ ಅವಕಾಶಗಳು ಲಭಿಸಿದರೂ, ಅವನ್ನು ಗೋಲಾಗಿ ಪರಿವರ್ತಿಸಲು ಆಗಲಿಲ್ಲ. ನಿಗದಿತ ಅವಧಿಯ ಆಟ 1–1 ರಲ್ಲಿ ಸಮಬಲದಲ್ಲಿ ಕೊನೆಗೊಂಡ ಕಾರಣ ವಿಜೇತರನ್ನು ನಿರ್ಣಯಿಸಲು ಪೆನಾಲ್ಟಿ ಶೂಟೌಟ್ ಮೊರೆ ಹೋಗಲಾಯಿತು.

ಪೆನಾಲ್ಟಿ ಶೂಟೌಟ್‌ನಲ್ಲಿ ಭಾರತಕ್ಕೆ ಅದೃಷ್ಟ ಕೈಕೊಟ್ಟಿತು. ಲಾಲ್ ರೆಮ್ಸಿಯಾಮಿ, ನೇಹಾ ಗೋಯಲ್ ಮತ್ತು ನವನೀತ್ ಕೌರ್ ಅವರು ಮೊದಲ ಮೂರು ಪ್ರಯತ್ನಗಳಲ್ಲಿ ಗೋಲು ಗಳಿಸಲು ವಿಫಲರಾದರು.

ಆಸ್ಟ್ರೇಲಿಯಾದ ಮೊದಲ ಮೂರೂ ಅವಕಾಶಗಳನ್ನು ರೋಸಿ ಮಲೋನ್, ಕೈಟ್ಲಿನ್ ನಾಬ್ಸ್ ಮತ್ತು ಆಮಿ ಲಾಟನ್ ಗೋಲಾಗಿ ಪರಿವರ್ತಿಸಿದರು. ಮಲೋನ್ ಆರಂಭದಲ್ಲಿ ಗೋಲು ಗಳಿಸಲು ವಿಫಲರಾಗಿದ್ದರು. ಆದರೆ ಅವರು ಪೆನಾಲ್ಟಿ ತೆಗೆದುಕೊಳ್ಳುವಾಗ ಟೈಮರ್‌ನಲ್ಲಿ ಎಂಟು ಸೆಕೆಂಡುಗಳ ಕೌಂಟ್‌ಡೌನ್ ಆರಂಭವಾಗಿಲ್ಲ ಎಂದು ರೆಫರಿ ಮತ್ತೊಂದು ಅವಕಾಶ ನೀಡಿದರು.

ಮಹಿಳೆಯರ ವಿಭಾಗದ ಇನ್ನೊಂದು ಸೆಮಿಯಲ್ಲಿ ಇಂಗ್ಲೆಂಡ್ ತಂಡ ಪೆನಾಲ್ಟಿ ಶೂಟೌಟ್‌ನಲ್ಲಿ 2–0 ಗೋಲುಗಳಿಂದ ನ್ಯೂಜಿಲೆಂಡ್ ಎದುರು ಜಯಿಸಿತು.

ಗೋಲು ಗಳಿಸಿದ ವಂದನಾ ಕಟಾರಿಯಾ ಸಂಭ್ರಮಿಸಿದರು –ಪಿಟಿಐ ಚಿತ್ರ

ಟೈಮರ್ ವಿವಾದ: ಎಫ್‌ಐಎಚ್ ಕ್ಷಮೆ

ಸೆಮಿ ಪಂದ್ಯದ ವೇಳೆ ಟೈಮರ್‌ಗೆ ಸಂಬಂಧಿಸಿದಂತೆ ಉಂಟಾದ ವಿವಾದಕ್ಕೆ ಅಂತರರಾಷ್ಟ್ರೀಯ ಹಾಕಿ ಫೆಡರೇಷನ್ (ಎಫ್‌ಐಎಚ್) ಕ್ಷಮೆಯಾಚಿಸಿದೆ.

ಪೆನಾಲ್ಟಿ ಶೂಟೌಟ್‌ನಲ್ಲಿ ಆಸ್ಟ್ರೇಲಿಯಾದ ರೋಸಿ ಮಲೋನ್ ಅವರು ಮೊದಲ ಪ್ರಯತ್ನದಲ್ಲಿ ಗೋಲು ಗಳಿಸಲು ವಿಫಲರಾಗಿದ್ದರು. ನಂತರ ಭಾರತದ ಲಾಲ್‌ರೆಮ್ಸಿಯಾಮಿ ಪೆನಾಲ್ಟಿ ಶೂಟೌಟ್‌ಗೆ ಮುಂದಾದರು.

ಈ ವೇಳೆ ಮಧ್ಯ ಪ್ರವೇಶಿಸಿದ ರೆಫರಿ, ಮಲೋನ್ ಶೂಟೌಟ್ ವೇಳೆ ಕ್ಲಾಕ್‌ನಲ್ಲಿ (ಟೈಮರ್) ಕೌಂಟ್‌ಡೌನ್ ಆರಂಭವಾಗಿರಲಿಲ್ಲ ಎಂದು ಮತ್ತೊಂದು ಅವಕಾಶ ನೀಡಿದರು. ಆ ಅವಕಾಶದಲ್ಲಿ ಮಲೋನ್ ಗೋಲು ಗಳಿಸಿದರು.

‘ಕಾಮನ್‌ವೆಲ್ತ್ ಕೂಟದಲ್ಲಿ ಭಾರತ– ಆಸ್ಟ್ರೇಲಿಯಾ ಸೆಮಿಫೈನಲ್ ಪಂದ್ಯದ ವೇಳೆ ಟೈಮರ್‌ನಲ್ಲಿ ಕೌಂಟ್‌ಡೌನ್ ಆರಂಭವಾಗುವುದಕ್ಕೆ ಮುನ್ನವೇ ಪೆನಾಲ್ಟಿ ಶೂಟೌಟ್ ತೆಗೆದುಕೊಳ್ಳಲಾಗಿತ್ತು. ಈ ತಪ್ಪಿಗೆ ಕ್ಷಮೆಯಾಚಿಸುತ್ತೇವೆ. ಮುಂದೆ ಇಂತಹ ಪ್ರಮಾದ ಅಗದಂತೆ ಎಚ್ಚರವಹಿಸಲಾಗುವುದು’ ಎಂದು ಎಫ್‌ಐಎಚ್ ಪ್ರಕಟಣೆ ತಿಳಿಸಿದೆ.

ಫೈನಲ್‌ಗೆ ಪುರುಷರ ತಂಡ

ಬರ್ಮಿಂಗ್‌ಹ್ಯಾಮ್: ಭಾರತ ಪುರುಷರ ಹಾಕಿ ತಂಡವು ದಕ್ಷಿಣ ಆಫ್ರಿಕಾ ತಂಡವನ್ನು ಸೋಲಿಸಿ ಫೈನಲ್‌ಗೆ ಲಗ್ಗೆಯಿಟ್ಟಿತು. ಶನಿವಾರ ರಾತ್ರಿ ನಡೆದ ಪಂದ್ಯದಲ್ಲಿ ಮನ್‌ಪ್ರೀತ್ ಸಿಂಗ್ ನಾಯಕತ್ವದ ಭಾರತ 3–2ರಿಂದ ಗೆದ್ದಿತು.

ಸಂಕ್ಷಿಪ್ತ ಸುದ್ದಿ

ಎಐಎಫ್‌ಎಫ್‌ಗೆ ನಿಷೇಧ; ಫಿಫಾ ಬೆದರಿಕೆ

ನವದೆಹಲಿ (ಪಿಟಿಐ): ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಕಾರ್ಯಚಟುವಟಿಕೆಯಲ್ಲಿ ಮೂರನೇ ವ್ಯಕ್ತಿಯ ‘ಪ್ರಭಾವ‘ದ ಹಿನ್ನೆಲೆಯಲ್ಲಿ ಮಂಡಳಿಯ ಮೇಲೆ ನಿಷೇಧ ಹೇರುವುದಾಗಿ ಅಂತರರಾಷ್ಟ್ರೀಯ ಫುಟ್‌ಬಾಲ್ ಫೆಡರೇಷನ್ (ಫಿಫಾ) ಬೆದರಿಕೆ ಹಾಕಿದೆ. ಅಲ್ಲದೆ 17 ವರ್ಷದೊಳಗಿನ ಮಹಿಳೆಯರ ವಿಶ್ವಕಪ್ ಟೂರ್ನಿ ಆತಿಥ್ಯದ ಹಕ್ಕನ್ನೂ ಕಸಿದುಕೊಳ್ಳುವುದಾಗಿ ಅದು ಎಚ್ಚರಿಸಿದೆ.

ಎಐಎಫ್‌ಎಫ್ ವ್ಯವಹಾರಗಳನ್ನು ಸದ್ಯ ಮೂವರು ಸದಸ್ಯರ ಆಡಳಿತ ಸಮಿತಿಯು(ಸಿಒಎ) ನೋಡಿಕೊಳ್ಳುತ್ತಿದೆ. ಅದು ಪ್ರಸ್ತಾಪಿಸಿದ ವೇಳಾಪಟ್ಟಿಯ ಪ್ರಕಾರ ತ್ವರಿತವಾಗಿ ಚುನಾವಣೆ ನಡೆಸುವಂತೆ ಅಖಿಲ ಮಂಡಳಿಯ ಕಾರ್ಯಕಾರಿ ಸಮಿತಿಗೆ ಸುಪ್ರೀಂ ಕೋರ್ಟ್ ಬುಧವಾರ ನಿರ್ದೇಶನ ನೀಡಿತ್ತು. ಈ ಹಿನ್ನೆಲೆಯಲ್ಲಿ ಫಿಫಾದ ಎಚ್ಚರಿಕೆಯ ಸಂದೇಶ ಬಂದಿದೆ.

ಅಕ್ಟೋಬರ್ 11ರಿಂದ 17 ವರ್ಷದೊಳಗಿನವರ ವಿಶ್ವಕಪ್ ಭಾರತದಲ್ಲಿ ನಡೆಯಬೇಕಿದೆ.

ಆಗಸ್ಟ್ 13ರಿಂದ ಚುನಾವಣೆ ಪ್ರಕ್ರಿಯೆ ಆರಂಭಗೊಂಡು 28ಕ್ಕೆ ಮತದಾನ ನಡೆಯಬೇಕೆಂದು ಸಿಒಎ ವೇಳಾಪಟ್ಟಿಯನ್ನು ಸಿದ್ಧಪಡಿಸಿದೆ. ಇದಕ್ಕೆ ಸುಪ್ರೀಂ ಕೋರ್ಟ್ ಅನುಮೋದನೆ ನೀಡಿದೆ.

ಡಿ.17ರಿಂದ ಪಿಬಿಎಲ್ ಟೂರ್ನಿ

ನವದೆಹಲಿ (ಪಿಟಿಐ): ಆರನೇ ಆವೃತ್ತಿಯ ಪ್ರೀಮಿಯರ್ ಬ್ಯಾಡ್ಮಿಂಟನ್ ಲೀಗ್ (ಪಿಬಿಎಲ್) ಡಿಸೆಂಬರ್ 17ರಿಂದ ಮುಂದಿನ ವರ್ಷ ಜನವರಿ 14ರವರೆಗೆ ನಡೆಯಲಿದೆ.

ಕೋವಿಡ್–19ರ ಹಿನ್ನೆಲೆಯಲ್ಲಿ ಎರಡು ವರ್ಷಗಳ ಕಾಲ ಸ್ಥಗಿತಗೊಂಡಿದ್ದ ಟೂರ್ನಿಯನ್ನು ಮತ್ತೆ ಆಯೋಜಿಸಲಾಗುತ್ತಿದೆ.

‘ಪಿಬಿಎಲ್ ಮರಳುತ್ತಿರುವುದು ಸಂತಸದ ಸಂಗತಿ. ದೇಶದಲ್ಲಿ ಬ್ಯಾಡ್ಮಿಂಟನ್ ಬೆಳವಣಿಗೆಗೆ ಕೊಡುಗೆ ನೀಡಿರುವ ಲೀಗ್ ಇದು‘ ಎಂದು ಭಾರತ ಬ್ಯಾಡ್ಮಿಂಟನ್ ಸಂಸ್ಥೆಯ (ಬಿಎಐ) ಅಧ್ಯಕ್ಷ ಹಿಮಂತ್ ಬಿಸ್ವಾ ಶರ್ಮಾ ಹೇಳಿದ್ದಾರೆ.

ಕ್ರಿಕೆಟ್: ಭಾರತಕ್ಕೆ ರೋಚಕ ಜಯ; ಫೈನಲ್‌ಗೆ ಲಗ್ಗೆ

ಚಿನ್ನದತ್ತ ಹರ್ಮನ್‌ಪ್ರೀತ್ ಕೌರ್ ಬಳಗ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತ ಕ್ರಿಕೆಟ್ ತಂಡ ಕಾಮನ್‌ವೆಲ್ತ್ ಕ್ರೀಡಾಕೂಟದ ಮಹಿಳಾ ಟಿ20 ಕ್ರಿಕೆಟ್ ಫೈನಲ್‌ಗೆ ಲಗ್ಗೆ ಇಟ್ಟಿದೆ. ಕೂಟದಲ್ಲಿ ಇದೇ ಮೊದಲ ಬಾರಿಗೆ ಕ್ರಿಕೆಟ್ ಸೇರ್ಪಡೆಯಾಗಿದೆ.

ಶನಿವಾರ ನಡೆದ ಸೆಮಿಫೈನಲ್‌ನಲ್ಲಿ ಸ್ಮೃತಿ ಮಂದಾನ (61; 32ಎ, 4X8, 6X3) ಅವರ ಬ್ಯಾಟಿಂಗ್, ಅಮೋಘ ಬೌಲಿಂಗ್ ಹಾಗೂ ಫೀಲ್ಡಿಂಗ್ ಮಾಡಿದ ಸ್ನೇಹ ರಾಣಾ (28ಕ್ಕೆ2) ನೆರವಿನಿಂದ ಭಾರತ ತಂಡವು ಇಂಗ್ಲೆಂಡ್ ಎದುರು 4 ರನ್‌ಗಳ ರೋಚಕ ಜಯ ಸಾಧಿಸಿತು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಭಾರತ ತಂಡಕ್ಕೆ ಸ್ಮೃತಿ ಮತ್ತು ಶಫಾಲಿ (15; 17ಎ) ಉತ್ತಮ ಆರಂಭ ನೀಡಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ ಅವರು ಹಾಕಿದ 76 ರನ್‌ಗಳ ಅಡಿಪಾಯದ ಮೇಲೆ ಭಾರತ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 164 ರನ್ ಗಳಿಸಿತು. ಮಧ್ಯಮ ಕ್ರಮಾಂಕದಲ್ಲಿ ಜೆಮಿಮಾ ರಾಡ್ರಿಗಸ್ (ಔಟಾಗದೆ 44; 31ಎ, 4X7) ಮಹತ್ವದ ಕಾಣಿಕೆ ನೀಡಿದ್ದರಿಂದ ಸವಾಲಿನ ಮೊತ್ತ ಪೇರಿಸಲು ಸಾಧ್ಯವಾಯಿತು.

ಗುರಿ ಬೆನ್ನಟ್ಟಿದ ಇಂಗ್ಲೆಂಡ್ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 160 ರನ್ ಗಳಿಸಿ ಸೋತಿತು. ಡೇನಿಯಲ್ ವೈಟ್ (35; 27ಎ), ನಥಾಲಿ ಶಿವರ್ (41; 43ಎ) ಮತ್ತು ಎಮಿ ಜೋನ್ಸ್ (31; 24ಎ) ಅವರ ಪ್ರಯತ್ನಕ್ಕೆ ಫಲ ಸಿಗಲಿಲ್ಲ. ಸ್ನೇಹಾ ರಾಣಾ ಡೇನಿಯಲ್ ಮತ್ತು ಕ್ಯಾಥರಿನ್ ಬ್ರಂಟ್ ವಿಕೆಟ್ ಗಳಿಸಿದರು. ಅಲ್ಲದೇ ಅಲೈಸ್ ಕ್ಯಾಪ್ಸೆ ಹಾಗೂ ಎಮಿ ಜೋನ್ಸ್ ಅವರನ್ನು ರನೌಟ್ ಮಾಡುವಲ್ಲಿ ಯಶಸ್ವಿಯಾದರು. ಇದರಿಂದಾಗಿ ಇಂಗ್ಲೆಂಡ್ ತಂಡವು ಗೆಲುವಿನ ಹೊಸ್ತಿಲಲ್ಲಿ ಎಡವಿತು.

ಇನ್ನೊಂದು ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್ ಮುಖಾಮುಖಿಯಾಗಲಿವೆ. ಗೆದ್ದ ತಂಡವು ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ಭಾರತದ ಎದುರು ಆಡಲಿದೆ.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 5ಕ್ಕೆ164 (ಸ್ಮೃತಿ ಮಂದಾನ 61, ಶಫಾಲಿ ವರ್ಮಾ 15, ಜೆಮಿಮಾ ರಾಡ್ರಿಗಸ್ ಔಟಾಗದೆ 44, ಹರ್ಮನ್‌ಪ್ರೀತ್ ಸಿಂಗ್ 20, ದೀಪ್ತಿ ಶರ್ಮಾ 22, ಫ್ರೇಯಾ ಕೆಂಪ್ 22ಕ್ಕೆ2) ಇಂಗ್ಲೆಂಡ್: 20 ಓವರ್‌ಗಳಲ್ಲಿ 6ಕ್ಕೆ160 (ಸೋಫಿಯಾ ಡಂಕ್ಲಿ 19, ಡೇನಿಯಲ್ ವೈಟ್ 35, ನಥಾಲಿ ಸಿವರ್ 41, ಅಮಿ ಜೋನ್ಸ್ 31, ಸ್ನೇಹಾ ರಾಣಾ 28ಕ್ಕೆ2) ಫಲಿತಾಂಶ: ಭಾರತ ತಂಡಕ್ಕೆ 4 ರನ್‌ಗಳ ಜಯ. ಫೈನಲ್‌ಗೆ ಅರ್ಹತೆ.

(ಫೈನಲ್ ಇಂದು: ರಾತ್ರಿ 9.30ರಿಂದ. ನೇರಪ್ರಸಾರ: ಸೋನಿ ನೆಟ್‌ವರ್ಕ್)

ಸ್ಮೃತಿ ಮಂದಾನ ಅರ್ಧಶತಕದ ಸಂಭ್ರಮ –ಎಎಫ್‌ಪಿ ಚಿತ್ರ

ಜಾಸ್ಮಿನ್ ಲಂಬೋರಿಯ

ಜಾಸ್ಮಿನ್‌ಗೆ ಕಂಚು

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ಜಾಸ್ಮಿನ್ ಲಂಬೋರಿಯ ಅವರು ಬಾಕ್ಸಿಂಗ್‌ನಲ್ಲಿ ಮಹಿಳೆಯರ 60 ಕೆ.ಜಿ. ವಿಭಾಗದಲ್ಲಿ ಕಂಚು ಗೆದ್ದರು.

ಶನಿವಾರ ನಡೆದ ಸೆಮಿಫೈನಲ್‌ನಲ್ಲಿ ಅವರು ಇಂಗ್ಲೆಂಡ್‌ನ ಎಮ್ಮಾ ರಿಚರ್ಡ್ಸನ್ ಎದುರು ಸೋತರು.

ಅಮಿತ್ ಪಂಘಾಲ್ ಹಾಗೂ ನೀತು ಗಂಗಾಸ್ ಫೈನಲ್‌ಗೆ ತಲುಪಿದರು. ಪುರುಷರ 51 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿರುವ ಅಮಿತ್ ನಾಲ್ಕರ ಘಟ್ಟದ ಬೌಟ್‌ನಲ್ಲಿ 5–0ಯಿಂದ ಜಾಂಬಿಯಾದ ಪ್ಯಾಟ್ರಿಕ್ ಚಿನೆಂಬಾ ವಿರುದ್ಧ, ನೀತು ಅವರು ಮಹಿಳೆಯರ 48 ಕೆಜಿ ವಿಭಾಗದ ಹಣಾಹಣಿಯಲ್ಲಿ ಕೆನಡಾದ ಪ್ರಿಯಾಂಕಾ ದಿಲ್ಲೋನ್ ಎದುರು ಗೆದ್ದರು.

ನಾಲ್ಕರಘಟ್ಟದ ಇನ್ನೊಂದು ಬೌಟ್‌ನಲ್ಲಿ ನಿಖತ್ ಜರೀನ್ (48 ಕೆಜಿ ವಿಭಾಗ) 5–0ಯಿಂದ ಇಂಗ್ಲೆಂಡ್‌ನ ಸ್ಟಬ್ಲಿ ಅಲ್ಫಿಯಾ ಸವನ್ನಾ ಎದುರು ಗೆದ್ದರು.

ಸೆಮಿಗೆ ಸಿಂಧು

ಬರ್ಮಿಂಗ್‌ಹ್ಯಾಮ್ (ಪಿಟಿಐ): ಸಿಂಗಲ್ಸ್ ವಿಭಾಗದಲ್ಲಿ ಚೊಚ್ಚಲ ಚಿನ್ನದ ಪದಕದ ನಿರೀಕ್ಷೆಯಲ್ಲಿರುವ ಭಾರತದ ಪಿ.ವಿ. ಸಿಂಧು ಕಾಮನ್‌ವೆಲ್ತ್ ಕ್ರೀಡಾಕೂಟದ ಬ್ಯಾಡ್ಮಿಂಟನ್ ಸ್ಪರ್ಧೆಯ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ.

ಶನಿವಾರ ನಡೆದ ಕ್ವಾರ್ಟರ್ ಫೈನಲ್ ಸೆಣಸಾಟದಲ್ಲಿ ಅವರು 19-21, 21-14, 21-18ರಿಂದ ಮಲೇಷ್ಯಾದ ಗೊಹ್ ವೇ ಜಿನ್ ಅವರನ್ನು ಮಣಿಸಿದರು. ಆಕರ್ಷಿ ಕಶ್ಯಪ್ ಎಂಟರ ಘಟ್ಟದ ಪಂದ್ಯದಲ್ಲಿ ಅವರು 10-21, 7-21ರಿಂದ ಸ್ಕಾಟ್ಲೆಂಡ್‌ನ ಕ್ರಿಸ್ಟಿ ಗಿಲ್ಮರ್ ಎದುರು ಪರಾಭವಗೊಂಡರು.

ಟಿಟಿ: ‘ಡಬಲ್ಸ್’ ಫೈನಲ್‌ಗೆ ಶರತ್

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ಟೇಬಲ್ ಟೆನಿಸ್ ಆಟಗಾರ ಅಚಂತ ಶರತ್ ಕಮಲ್ ಅವರು ಪುರುಷರ ಮತ್ತು ಮಿಶ್ರ ಡಬಲ್ಸ್ ವಿಭಾಗಗಳಲ್ಲಿ ಫೈನಲ್ ತಲುಪಿದ್ದು ಪದಕ ಖಚಿತಪಡಿಸಿದ್ದಾರೆ.

ಶನಿವಾರ ಪುರುಷರ ಡಬಲ್ಸ್‌ನಲ್ಲಿ ಜಿ.ಸತ್ಯನ್ ಜೊತೆಗೂಡಿ ಕಣಕ್ಕಿಳಿದಿದ್ದ ಶರತ್ ಸೆಮಿಫೈನಲ್‌ನಲ್ಲಿ 8–11, 11–9, 10–12, 11–1, 11–8ರಿಂದ ಆಸ್ಟ್ರೇಲಿಯಾದ ಲೂಮ್ ನಿಕೋಲಸ್–ಲೂ ಫಿನ್ ಎದುರು ಗೆದ್ದರು.

ಮಿಶ್ರ ಡಬಲ್ಸ್ ವಿಭಾಗದ ನಾಲ್ಕರ ಘಟ್ಟದ ಪಂದ್ಯದಲ್ಲಿ ಶರತ್ ಹಾಗೂ ಶ್ರೀಜಾ ಅಕುಲಾ 11–9, 11–8, 9–11, 12–14, 11–7ರಿಂದ ಆಸ್ಟ್ರೇಲಿಯಾದ ಲೂಮ್ ಮತ್ತು ಜಿ ಮಿನ್‌ಯುಂಗ್ ಎದುರು ಗೆದ್ದರು.

ಶರತ್ ಮತ್ತು ಸತ್ಯನ್, ಪುರುಷರ ಸಿಂಗಲ್ಸ್ ವಿಭಾಗದಲ್ಲಿ ನಾಲ್ಕರ ಘಟ್ಟಕ್ಕೂ ತಲುಪಿದರು. ಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ ಶರತ್ 11-6, 11-7, 11-4, 11-7ರಿಂದ ಸಿಂಗಪುರದ ಇಸಾಕ್ ಕ್ವೆಕ್ ಎದುರು ಗೆದ್ದರೆ, ಸತ್ಯನ್ 11-5, 11-7, 11-5, 8-11, 10-12, 11-9ರಿಂದ ಇಂಗ್ಲೆಂಡ್‌ನ ಸ್ಯಾಮ್ ವಾಕರ್ ಎದುರು ಜಯ ಸಾಧಿಸಿದರು.

ಚೆಸ್ ಒಲಿಂಪಿಯಾಡ್: ಗುಕೇಶ್‌ಗೆ ಸತತ 8ನೇ ಜಯ

ಅಮೆರಿಕ ಮಣಿಸಿದ ಭಾರತ ‘ಬಿ’

ಮಹಾಬಲಿಪುರಂ (ಪಿಟಿಐ): ಡಿ.ಗುಕೇಶ್ ಮತ್ತು ರೌನಕ್ ಸಾಧ್ವಾನಿ ಅವರ ಚುರುಕಿನ ಆಟದ ನೆರವಿನಿಂದ ಭಾರತ ‘ಬಿ’ ತಂಡ 44ನೇ ಚೆಸ್ ಒಲಿಂಪಿಯಾಡ್‌ನಲ್ಲಿ ಅಮೆರಿಕ ತಂಡಕ್ಕೆ ಆಘಾತ ನೀಡಿತು.

ಯುವ ಆಟಗಾರರನ್ನು ಒಳಗೊಂಡ ಭಾರತ ‘ಬಿ’ ತಂಡ ಶನಿವಾರ ನಡೆದ ಎಂಟನೇ ಸುತ್ತಿನ ಪಂದ್ಯವನ್ನು 3–1 ಪಾಯಿಂಟ್‌ಗಳಿಂದ ಗೆದ್ದಿತು.

ಚಾಣಾಕ್ಷ ಆಟ ತೋರಿದ ಯುವ ಪ್ರತಿಭೆ ಗುಕೇಶ್, ವಿಶ್ವದ ಐದನೇ ರ‍್ಯಾಂಕ್‌ನ ಆಟಗಾರ ಫ್ಯಾಬಿಯಾನೊ ಕರುವಾನ ಅವರಿಗೆ ಸೋಲುಣಿಸಿದರು. ಭಾರತದ ಆಟಗಾರನಿಗೆ ಟೂರ್ನಿಯಲ್ಲಿ ದೊರೆತ ಸತತ ಎಂಟನೇ ಜಯ ಇದು.

ಸಾಧ್ವಾನಿ ಅವರು ರ‍್ಯಾಂಕಿಂಗ್‌ನಲ್ಲಿ ತನಗಿಂತ ಮೇಲಿನ ಸ್ಥಾನದಲ್ಲಿರುವ ಲಿನಿಯೆರ್ ಡೊಮಿನಿಗ್ವೆಸ್ ಪೆರೆಜ್ ಅವರನ್ನು ಸೋಲಿಸಿದರು. ನಿಹಾಲ್ ಸರಿನ್ ಮತ್ತು ಆರ್.ಪ್ರಗ್ನಾನಂದ ಅವರು ಕ್ರಮವಾಗಿ ಲೆವೊನ್ ಅರೋನಿಯನ್ ಹಾಗೂ ವೆಸ್ಲಿ ಸೊ ಜತೆ ಡ್ರಾ ಮಾಡಿಕೊಂಡರು. ಭಾರತ ‘ಎ’ ತಂಡ ಅರ್ಮೇನಿಯ ಎದುರು 1.5–2.5 ಪಾಯಿಂಟ್‌ಗಳಿಂದ ಮಣಿಯಿತು. ಪಿ.ಹರಿಕೃಷ್ಣ ಅವರು ಗ್ಯಾಬ್ರಿಯೆಲ್ ಸರ್ಗಿಸಿಯನ್ ಎದುರು ಸೋತರು. ವಿದಿತ್ ಸಂತೋಷ್ ಗುಜರಾತಿ, ಅರ್ಜುನ್ ಎರಿಗೈಸಿ ಮತ್ತು ಎಸ್.ಎಲ್.ನಾರಾಯಣನ್ ಅವರು ತಮ್ಮ ಎದುರಾಳಿಗಳ ಜತೆ ಡ್ರಾ ಸಾಧಿಸಿದರು.

ಭಾರತ ‘ಸಿ’ ತಂಡ ಪೆರು ಎದುರು 1–3 ಪಾಯಿಂಟ್‌ಗಳಿಂದ ಸೋತಿತು. ಸೂರ್ಯಶೇಖರ್ ಗಂಗೂಲಿ ಮತ್ತು ಅಭಿಜಿತ್ ಗುಪ್ತಾ ಪರಾಭವಗೊಂಡರೆ, ಎಸ್.ಪಿ.ಸೇತುರಾಮನ್ ಮತ್ತು ಕಾರ್ತಿಕೇಯನ್ ಮುರಳಿ ಡ್ರಾ ಸಾಧಿಸಿದರು.

ಮಹಿಳೆಯರ ವಿಭಾಗದಲ್ಲಿ ಭಾರತ ‘ಎ’ ತಂಡ ಉಕ್ರೇನ್ ಜತೆ 2–2 ರಲ್ಲಿ ಡ್ರಾ ಮಾಡಿಕೊಂಡಿತು. ಕೊನೇರು ಹಂಪಿ, ಡಿ.ಹರಿಕಾ, ಆರ್.ವೈಶಾಲಿ ಮತ್ತು ತಾನಿಯಾ ಸಚ್‌ದೇವ್ ಅವರು ಎದುರಾಳಿಗಳ ಜತೆ ಪಾಯಿಂಟ್ ಹಂಚಿಕೊಂಡರು. ಭಾರತ ‘ಬಿ’ ತಂಡ 3.5–1.5 ರಲ್ಲಿ ಕ್ರೊವೇಷ್ಯ ಎದುರು ಗೆದ್ದರೆ, ‘ಸಿ’ ತಂಡ 1–3 ರಲ್ಲಿ ಪೋಲೆಂಡ್ ಎದುರು ಪರಾಭವಗೊಂಡಿತು.

ಡಿ.ಹರಿಕಾ –ಪಿಟಿಐ ಚಿತ್ರ